UNIVERSAL LIBRARY
OU_198196
UNIVERSAL LIBRARY

# ಸಣ್ಣ ಕತೆಗಳು

ಅಶ್ವತ್ಥ

ಜೀವನ ಕಾರ್ಯಾಲಯ
ಬಸವನಗುಡಿ
ಬೆಂಗಳೂರು

ಮೊದಲನೆಯ ಮುದ್ರಣ ೧೯೪೭

ಬೆಲೆ: ರೂ. ೨-೮-೦

ಎಲ್ಲ ಅಧಿಕಾರವನ್ನೂ ಕಾದಿದೆ

ಬೆಂಗಳೂರು ಪ್ರೆಸ್
ಮೈಸೂರು ರೋಡು, ಬೆಂಗಳೂರು ಸಿಟಿ
೧೯೪೭

# ಪ್ರಕಾಶಕರ ಮಾತು

ಜೀವನ ಕಾರ್ಯಾಲಯದ ಮೊದಲನೆಯ ಪ್ರಕಟನೆಯಾಗಿ ಶ್ರೀ ಕೂದವಳ್ಳಿ ಅಶ್ವತ್ಥನಾರಾಯಣರಾಯರ ಕಥಾಸಂಗ್ರಹ ವೊಂದನ್ನು ಹೊರತಂದಿದ್ದೇವೆ ರಾಯರ ಕತೆಗಳು ಈಗಾಗಲೆ 'ಜೀವನ' ಮತ್ತು ಇತರ ಪತ್ರಿಕೆಗಳಲ್ಲಿ ಪ್ರಕಟವಾಗಿ ಕನ್ನಡಿಗರ ಮೆಚ್ಚಿಕೆಯನ್ನು ಸಂಪಾದಿಸಿವೆ. ಸಮಾಜದಲ್ಲಿ ತೋರುವ ಸಣ್ಣ ಸಣ್ಣ ಸನ್ನಿವೇಶಗಳನ್ನು ಆರಿಸಿಕೊಂಡು ಅವನ್ನು ಉಚಿತವಾಗಿಯೂ ಹಗುರವಾಗಿಯೂ ಚಿತ್ರಿಸುವ ಕಲೆ ಇವರಿಗೆ ಸಾಧಿಸಿದೆ. ನಮ್ಮ ಜನ ಈ ಪುಸ್ತಕಕ್ಕೆ ತಮ್ಮ ಮೆಚ್ಚುಗೆಯನ್ನು ತೋರಿಸಿ ಅದನ್ನು ಆದರ ದಿಂದ ಬರಮಾಡಿಕೊಳ್ಳಲೆಂದು ನಾವು ಬಯಸುತ್ತೇವೆ.

ಬೆಂಗಳೂರು
ಸರ್ವಜಿತು
ಬಲಿಪಾಡ್ಯಮಿ
13—11—47

ಜೀವನ ಕಾರ್ಯಾಲಯ

# ಒಳಗೆ


| | | |
|---|---|---|
| | | ಪುಟ |
| ೧. | ಸೊಸೆಗೊಂದು ಉಡುಗೊರೆ | ೧ |
| ೨. | ಧರ್ಮಕೊಂಡದ ಕತೆ | ೨೧ |
| ೩. | ಯೋಗಾಭ್ಯಾಸ | ೪೬ |
| ೪. | ಆಗಮನ | ೫೯ |
| ೫. | ಹವಾಲ್ದಾರ | ೭೬ |
| ೬. | ಭಯ್ಯಾನ ಗಣಪತಿ | ೯೪ |
| ೭. | ವ್ಯಭಿಚಾರ | ೧೦೩ |
| ೮. | ದೇವಿಯವರು | ೧೨೪ |
| ೯. | ನಾಚಿಕೆಗೇಡು ! | ೧೪೧ |
| ೧೦. | "ಋಷಿ ಮಹಮ್ಮದ" | ೧೫೭ |

# ಸೊಸೆಗೊಂದು ಉಡುಗೊರೆ

ನಮ್ಮ ತಂದೆಯವರಿಂದ ಕಾಗದ ಬಂದಿತು. "ನೀವು ಇರುವ ಬೊಂಬಾಯಿ ದೂರದೇಶ. ಮೇಲಾಗಿ ನೀವು ಇನ್ನೂ ಚಿಕ್ಕವರು. ಹೊಸಬರು. ಇನ್ನೂ ಅನುಭವ ಸಾಲದು. ಆದರೆ ನಿಮ್ಮ ಸುದೈವ ದಿಂದ ನಮ್ಮ ಗತಿಸಿದ ಅಣ್ಣನ ಮಗಳು ನಾಗಮ್ಮನೂ ಮಾತುಂಗದಲ್ಲಿಯೇ ಇದ್ದಾಳಂತೆ. ಬಹು ದಿನದಿಂದ ಅವಳ ಪತ್ತೆಯೇ ನಮಗೆ ತಿಳಿದಿರಲಿಲ್ಲ. ಮೊನ್ನೆ ಅವಳು ಅಕಸ್ಮಾತ್ತಾಗಿ ಇಲ್ಲಿಗೆ ಬಂದಾಗ ಎಲ್ಲವೂ ತಿಳಿಯಿತು. ಅವಳ ಅಳಿಯಂದಿರು ಅಲ್ಲಿ ಪತ್ರಿಕಾಪ್ರತಿನಿಧಿಯಂತೆ. ಅವಳಿಗೆ ಹೇಳಿ ಕಳುಹಿಸಿದ್ದೇನೆ. ಸದ್ಯದಲ್ಲಿಯೇ ನಿಮ್ಮಲ್ಲಿಗೆ ಬಂದಾಳು. ಆಗಾಗ್ಗೆ ನಿಮ್ಮ ಯೋಗಕ್ಷೇಮಗಳನ್ನು ವಿಚಾರಿಸಿಕೊಳ್ಳುತ್ತಿರುತ್ತಾಳೆ. ನಾಗಮ್ಮ ನಿಂದ ಅಷ್ಟು ಅನುಭವದ ಸಹಾಯ ಪಡೆಯಬಹುದು . ."

ಭಲೆ! ಈ ಮಹಾಪಟ್ಟಣದಲ್ಲಿ ನಮ್ಮ ಬಂಧುವರ್ಗದವರು, ನಮ್ಮ ಹಿತಾಭಿಲಾಷಿಗಳು, ಅಷ್ಟು ಜನ ಇದ್ದಂತಾಯಿತಲ್ಲ. ನಮಗೆ ತುಂಬ ಸಂತೋಷವಾಯಿತು. ನನ್ನ ಅಕ್ಕನ ಆಗಮನವನ್ನು ಆತುರ ಕುತೂಹಲ ಗಳಿಂದ ನಿರೀಕ್ಷಿಸಲು ಮೊದಲುಮಾಡಿದೆವು.

ಈ ಕುತೂಹಲಕ್ಕೆ ಮತ್ತೊಂದು ಕಾರಣವಿತ್ತು. ನನ್ನ ಬಾಲ್ಯಾವಸ್ಥೆ ಯಲ್ಲಿಯೇ ಊರನ್ನು ಬಿಡಬೇಕಾದ ಪ್ರಸಂಗವು ನನಗೆ ಬಂದಿದ್ದು. ನಮ್ಮ ತಾಯಿಯ ಕಡೆಯವರಲ್ಲೇ ನಾನು ಬೆಳೆದಿದ್ದುದರಿಂದ ತಂದೆಯ ಬಳಗದ ಪರಿಚಯ ಬಹಳ ಕಡಿಮೆಯಾಗಿದ್ದಿತು. ಆದುದರಿಂದ ಆ ಕಡೆಯವ ರೆಂದರೇ ಕೊಂಚ ಕುತೂಹಲ ಜಾಸ್ತಿ. ಇದಲ್ಲದೆ ನಾಗಮ್ಮನ ವಿಷಯ ಇನ್ನೂ ವಿಶೇಷ. ನಮ್ಮ ತಂದೆಯವರು ಯಾವಾಗಲೋ ಒಂದು ಬಾರಿ ಇವಳ ವಿಚಾರವನ್ನು ಹೇಳಿದರು ನಾಗಮ್ಮನು ನಮ್ಮ ದೊಡ್ಡಪ್ಪನಿಗೆ ಒಬ್ಬಳೇ ಮಗಳು. ಆತ ಕೊಂಚ 'ಖಯಾಲಿ' ಮನುಷ್ಯನಾದುದರಿಂದ ಮಗಳನ್ನು ಹತ್ತಿರದ ಅಥವ ತಿಳಿದ ಸಂಬಂಧಕ್ಕೆ ಕೊಡದೆ, ಕಣಿವೆಯ ಕೆಳಗಿನ ಒಬ್ಬಾತನಿಗೆ ಕೊಟ್ಟು ಮದುವೆಮಾಡಿದ್ದನು. ಈ ಕಾರಣದಿಂದ ನಾಗಮ್ಮನು ನಮ್ಮ ಊರು ಮತ್ತು ಬಂಧುವರ್ಗದಿಂದ ದಿನೇ ದಿನೇ

ದೂರವಾಗಿದ್ದಳು. ಅವಳ ತಂದೆಯು ಸತ್ತಮೇಲಂತೂ ಅವಳ ವಿಚಾರ ವನ್ನು ಯಾರೂ ತಲೆಗೇ ಹತ್ತಿಸಿಕೊಂಡಿರಲಿಲ್ಲ. ಹೀಗಿದ್ದು ಈಗ ಅವಳೇ ಅಲ್ಲ, ಅವಳ ಮಗಳು, ಅಳಿಯ ಇತ್ಯಾದಿ ಎಲ್ಲರ ಗೊತ್ತೂ ಸಿಕ್ಕಿದುದು ಒಂದು 'ಡಿಸ್ಕವರಿ' ಅಲ್ಲವೆ? ಇರಲಿ.

ಕಾಗದ ಬಂದಮೇಲೆ ನಾವು ಅವಳನ್ನು ನಿತ್ಯವೂ ನಿರೀಕ್ಷಿಸು ತ್ತಿದ್ದೆವು. ಅವಳ ಮೆಚ್ಚಿಕೆಗಾಗಿ ಮನೆಯನ್ನೆಲ್ಲ ಅಚ್ಚುಕಟ್ಟುಮಾಡಿ ದೆವು ಸುದ್ದಿಬಂದು ಒಂದು, ಎರಡು, ಮೂರು ವಾರಗಳು ಕಳೆದುವು. ತಿಂಗಳೂ ಆಯಿತು. ಅಕ್ಕ ಏಕೋ ಬರಲೇ ಇಲ್ಲ. ಒಂದೊಂದು ವೇಳೆ ನಾನೇ ಹೋಗಿ ನೋಡೋಣವೆಂದರೆ ನಮಗೆ ಅವಳ ವಿಳಾಸ ಸರಿಯಾಗಿ ತಿಳಿಯದೆ ಹೋಯಿತು. ಅವಳು ಇನ್ನೂ ಈ ಊರಿಗೆ ಬಂದಿರದೇ ಇರಬಹುದೆ? ಇಲ್ಲವೆ ಖಾಯಿಲೆ ಕನಾಲೆಯಿಂದ ಮಲಗಿರಬಹುದೆ? ವಾಪಸು ಗಂಡನ ಸ್ಥಳಕ್ಕೇ ಹೊರಟುಹೋಗಿರಬಹುದೆ? ನಮ್ಮ ವಿಳಾಸ ವೇನಾದರೂ ಸಿಕ್ಕದೇ....! ಹಾಗೆಂದರೇನು, ಬೊಂಬಾಯಿನಲ್ಲಿ ಪಳಗಿದವರಿಗೆ ಅದು ಕಷ್ಟವೆ? ಇಲ್ಲ. ಅಂದಮೇಲೆ ಏನು ಕಾರಣದಿಂದ ಬರಲಿಲ್ಲ? ಯಾರಿಗೆ ಗೊತ್ತು? ಹೀಗೆಯೇ ಇನ್ನೊಂದು ತಿಂಗಳೂ ಅಕ್ಕನ ದರ್ಶನವಾಗಲಿಲ್ಲ. ಅವಳನ್ನು ಭೇಟಿಯಾಗುವ ಆಸೆಯನ್ನೇ ಬಿಡಲು ನಾವು ಮೊದಲುಮಾಡಿದೆವು. ಈ ಭೇಟಿಯು ಮರೆಯುತ್ತಲೂ ಬಂದಿತು.

ಆ ದಿನ ಭಾನುವಾರ. ಮಧ್ಯಾಹ್ನ! ಮೂರು ಗಂಟೆ. ಊಟ, ನಿದ್ರೆ, ಎರಡನೆಯ 'ಡೋಸು' ಕಾಫಿ ಎಲ್ಲವೂ ಮುಗಿದಿತ್ತು. ಹೊರಗೆ ಹಜಾರದಲ್ಲಿ ನಾನು 'ಭಾರತ ಜ್ಯೋತಿ'ಯನ್ನು ಮತ್ತೆ ಮತ್ತೆ ತಿರುವಿ ಹಾಕುತ್ತ, ಸುತ್ತಿದ ಹಾಸಿಗೆಗೆ ತಲೆಕೊಟ್ಟು, ಜಮಖಾನೆಯ ಮೇಲೆ ಬಿದ್ದುಕೊಂಡಿದ್ದೆ. ಒಳಗೆ ನಮ್ಮವಳು ಏನನ್ನೋ ಕರಿಯುತ್ತಿದ್ದಳು— ಮೂರು ದಿನದಲ್ಲೇ ಬರಲಿದ್ದ ದಿವಾವಳಿಯ ಸಂಭ್ರಮವಿರಬಹುದು. ಘಮ ಘಮ ವಾಸನೆಯು ಮೂಗಿನ ಸೆಲೆಯನ್ನೊಡೆಯುತ್ತಿದ್ದಿತು. ಇದೇ ಸಮಯವೆಂದು ನಮ್ಮ ನಾಲ್ಕು ವರ್ಷದ ಮೂರ್ತಿಯು ಪಕ್ಕದ ಕೋಣೆಯನ್ನೆಲ್ಲ ತಲೆಕೆಳಗು ಮಾಡುತ್ತಿದ್ದಿರಬೇಕು. ಘಳಿಗೆ ಘಳಿಗೆಗೆ 'ಧಡಾರ್, ಭಡಾರ್, ಧಸ್-ಧುವ್, ಘಂ-ಘುಂ, ಪರ್-ಗಿರ್' ಎಂಬ

ಶಬ್ದಗಳು ಅವನ ಕಾರ್ಯಕ್ರಮವನ್ನು ಸೂಚಿಸುತ್ತಿದ್ದುವು, ಮತ್ತು ತಾಯಿ ಮಗನ ದೂರದ ಪ್ರಶ್ನೆ—ಉತ್ತರ, ಪ್ರತ್ಯುತ್ತರಗಳು ಈ ಊಹೆಯನ್ನು ದೃಢಪಡಿಸುತ್ತಿದ್ದುವು.

ಇಂತಹ ಶುಭ ಮುಹೂರ್ತದಲ್ಲಿ ಯಾರೋ ಮುಂದಿನ ಬಾಗಿಲನ್ನು ತಟ್ಟಿದ ಶಬ್ದವಾಯಿತು. ಅಗಸನೋ, ಹಾಲಿನವನೋ, ಹಣ್ಣಿನವನೋ, ತರಕಾರಿಯವನೋ, ಯಾರೋ ನಮ್ಮವಳ ಇಲಾಖೆಯವರು ಇರಬೇಕೆಂದು ನಾನು ಅಲುಗಲು ಇಷ್ಟಪಡಲಿಲ್ಲ. ಅಲ್ಲ, ವಾರಕ್ಕೊಂದು ದಿನ ಬರುವ ಭಾನುವಾರ ಮಧ್ಯಾಹ್ನ ನೌಕರನೆನಿಸಿಕೊಂಡ ಗಂಡಸು ಯಾವನು ತಾನೆ ಇದರಿಂದ ಬಾಧಿತನಾಗಲು ಸಿದ್ಧವಾಗಿರುತ್ತಾನೆ? ಹೇಗಿದ್ದರೂ ಈ ಮಹಾವ್ಯಕ್ತಿಗಳು ಹಿತ್ತಲ ಕಡೆಯಿಂದ ಬಂದೇಬರುತ್ತಾರೆಂಬ ಭರವಸೆ ಮೇಲೆ ಅವಳೂ ಸುಮ್ಮನಿದ್ದಿರಬೇಕು. ಹಾವಿನ ಕಿವಿಯು ಮೂರ್ತಿಗೆಂದರೆ, ಅವನ ಆಸ್ಫೋಟನಗಳಲ್ಲಿ ಈ ಶಬ್ದವು ಮುಳುಗಿ ಹೋಗಿ ಕೇಳಿಸದಿರಬಹುದು. ಅಂತೂ ಯಾರೂ ಬಾಗಿಲಿಗೆ ಹೋಗಲಿಲ್ಲ. ಹತ್ತು ನಿಕೆಂಡುಗಳಾದಮೇಲೆ ಬಾಗಿಲು ಮತ್ತಷ್ಟು ಜೋರಾಗಿ ತಟ್ಟಲ್ಪಟ್ಟಿತು. ಇದು ಏನೋ ವಿಪರೀತವೆಂದು ಗೊಣಗಿಕೊಂಡು ಹುಬ್ಬುಗಂಟಿಕ್ಕಿಕೊಂಡು ನಾನು ಎದ್ದು ಮೈಮುರಿದು ಆಕಳಿಸಿ, ನನ್ನ ಬನಿಯನ್ನಿನ ಮೇಲೆ ಟವಲನ್ನು ಹಾಕಿಕೊಂಡು ಎದ್ದು ಬಾಗಿಲನ್ನು ತೆಗೆದೆ. ಆಗ ನೋಡಿದೊಡನೆ ನನ್ನ ಮುಂದೆ ಯಾರು ಕಾಣಬೇಕು! ನಮ್ಮ ಅಕ್ಕ! ಒಮ್ಮೆಯೇ ನನ್ನ ಮನಸ್ಸು ಈಗಾಗಲೇ ಮರೆತುಹೋಗಿದ್ದ ಅವಳನ್ನು ಜ್ಞಾಪಕಕ್ಕೆ ತಂದಿತು. ಹುಂ. ನಿಜ. ಅವಳು ನಮ್ಮ ಅಕ್ಕನೇ ಇರಬೇಕು.

ಬಾಗಿಲನ್ನು ತೆಗೆದೊಡನೆಯೇ ನಾನು ಹಿಂದೆ ಸರಿದು ದಾರಿಬಿಟ್ಟೆ. ಅವಳು ಒಳಕ್ಕೆ ಹೆಜ್ಜೆ ಇಟ್ಟವಳೆ ನಸು ನಗುತ್ತ "ನಾನು ಯಾರು ಗೊತ್ತೆ?" ಎಂದು ಕೇಳಿದಳು. ನಾನು ಅರ್ಧ ಅನುಮಾನವಿದ್ದರೂ ಅದನ್ನು ತೋರ್ಪಡಿಸಲು ಇಷ್ಟಪಡದೆ "ನಾಗಮ್ಮನವರಲ್ಲವೆ?" ಅಂದೆ. ಇದನ್ನು ಕೇಳಿ ಅವಳು ನಕ್ಕು "ಹೂ, ಕಣೋ, ನಾನೇ ನಾಗಮ್ಮ. ನಿಮ್ಮಕ್ಕ, ನಿನ್ನ ಎಲ್ಲೋ ಹುಡುಗನಲ್ಲಿ ನೋಡಿದ್ದು" ಅಂದಳು.

ಈ ಪರಿಚಯವಾದೊಡನೆ ನಾವು ಬಹು ದಿನದಿಂದ ಬಳಕೆಯಾದವರಂತೆ ಸಲಿಗೆಯಾದೆವು.

ನಾಗಮ್ಮನಿಗೆ ಮಧ್ಯವಯಸ್ಸು ಮೀರಿದ್ದಿತು. ದುಂಡು ದುಂಡಾದ ಹೆಂಗಸು. ಲಕ್ಷಣವಾದ ರೂಪ, ಬಣ್ಣ. ಒಳ್ಳೆಯ ಗುಲಾಬಿ ಬಣ್ಣದ ರೇಷ್ಮೆ ಜರತಾರಿ ಅಂಚಿನ ಸೀರೆಯನ್ನುಟ್ಟಿದ್ದಳು. ಹಸಿರು ಕಣದ ರವಿಕೆಯನ್ನು ತೊಟ್ಟಿದ್ದಳು. ಕಿವಿಯಲ್ಲಿ ವಜ್ರದ ಓಲೆಗಳು. ಹಾಗೆಯೇ ಮೂಗುಬಟ್ಟು. ಕತ್ತಿನಲ್ಲಿ ಮೂರು ಬಗೆಯ ಚಿನ್ನದ ಸರಗಳು. ಅದರಲ್ಲಿ ಮುಖ್ಯವಾಗಿ ಒಂದಂತೂ ಬಹು ಎದ್ದು ಕಾಣುತ್ತಿದ್ದಿತು. ಅದರಿಂದ ಅಲ್ಲಲ್ಲೆ ಮಾವಿನೆಲೆಯ ಆಕಾರದ ಚಿನ್ನದ ಪದಕಗಳು ತೂಗಾಡುತ್ತಿದ್ದುವು. ಪ್ರತಿಯೊಂದು ಪದಕದಲ್ಲಿಯೂ ವಜ್ರ, ಕೆಂಪುಗಳು ಹಲವು ಧಳಧಳಿಸುತ್ತಿದ್ದುವು. ಎಡಗೈಯಲ್ಲಿದ್ದ ಸ್ವಚ್ಛ ಬಿಳಿಯ ಕೈ ಚೌಕದಿಂದ ಅಕ್ಕನು ತನ್ನ ಒದ್ದೆಯಾದ ಹಣೆಯನ್ನು ಒರೆಸಿಕೊಂಡಾಗ ಕೈಯ ನಾಲ್ಕಾರು ಚಿನ್ನದ ಬಳೆಗಳು 'ಝುಣ ಝುಣ' ಅಂದುವು. ಬೆರಳಿನ ಉಂಗುರಗಳು ಹೊಳೆದುವು. ಒಳಗೆ ಕಾಲಿಡುವಾಗ ಅವಳು ತನ್ನ ಹೊಸ ನಾಜೂಕಾದ ಎಕ್ಕಡಗಳನ್ನು ಹೊರಗೇ ಬಿಟ್ಟಳು. ಕಂಕುಳಿನಲ್ಲಿದ್ದ ಬಣ್ಣದ ಛತ್ರಿಯನ್ನು ನನ್ನ ಕಡೆಗೆ ನೀಡಿದಾಗ ನಾನು ತೆಗೆದುಕೊಂಡೆ. ಇಷ್ಟು ಆಕರ್ಷಣೀಯವಾದ ಹೆಂಗಸು ಒಮ್ಮೆಯೇ ದೃಷ್ಟಿಪಥಕ್ಕೆ ಬಿದ್ದು ನಿಮ್ಮ ಅಕ್ಕನಾದರೆ ನಿಮಗೆ ಹೆಮ್ಮೆಯಾಗುವುದಿಲ್ಲವೆ? ನನಗೂ ಹಾಗೆಯೇ ಆಯಿತು.

ಆಶ್ಚರ್ಯದಿಂದ ಎಚ್ಚೆತ್ತೊಡನೆ ನಾನು "ಬನ್ನಿ, ಬನ್ನಿ ಕುಳಿತು ಕೊಳ್ಳಿ" ಅಂದೆ. ಮೂರ್ತಿಯು ರೈಲಿನಾಟಕ್ಕೆ ಬಳಸಿಕೊಂಡು, ಅನಂತರ ಯುದ್ಧದ ರಥವನ್ನಾಗಿ ಮಾಡಿಕೊಂಡು ಅಲ್ಲಲ್ಲಿ ಉರುಳಿಸಿದ್ದ ಬೆತ್ತದ ದುಂಡು ಕುರ್ಚಿಗಳನ್ನೆಳೆದು ಸರಿಯಾಗಿಟ್ಟೆ. ಅಕ್ಕನು ಕುಳಿತುಕೊಂಡಳು. ಅವಳ ಸಂಗಡ ಒಬ್ಬ ಆಳು ಬಂದಿದ್ದನು. ಅವನು ಎತ್ತಿ ತಂದಿದ್ದ ಮಗುವನ್ನು ಅಕ್ಕನು ಕರೆದುಕೊಂಡಳು. ಮಗುವನ್ನು ತೋರಿಸುತ್ತ "ಇದು ನನ್ನ ಮೊಮ್ಮಗು. ನೋಡು ಹೇಗಿದ್ದಾಳೆ! ಮಹಾಸೂಕ್ಷ್ಮ, ಮಹಾ ನಾಜೂಕು, ಬಲು ದೊಡ್ಡಸ್ತಿಕೆ" ಎಂದು ಅದಕ್ಕೊಂದು ಮುತ್ತು

ಕೊಟ್ಟಳು. ನಿಜ. ಮಗುವು ಮುದ್ದಾಗಿದ್ದಿತು ಅಜ್ಜಿಯಂತೆಯೇ ಹಿರಿಮೆಯ ಬಟ್ಟೆ ಒಡವೆಗಳನ್ನು ಹಾಕಿದ್ದಿತು. ಅದರ ಕೊರಳಿನಲ್ಲಿಯೂ ಒಂದು ಚಿನ್ನದ ಹಾರ ಮತ್ತು ಪದಕ ಕಾಲಿಗೆ ರುಳಿ, ಗೆಜ್ಜೆ ಮತ್ತು 'ಷೂ'. ಇನ್ನು ಅದರ ಗುಣದ ವಿಷಯವನ್ನು ಇನ್ನೂ ತಿಳಿಯಬೇಕಾಗಿದ್ದಿತು. ಅಕ್ಕನ ಮಾತಿಗೆ ಉತ್ತರವಾಗಿ "ಹೌದು ಮುದ್ದಾಗಿದೆ. ಗಂಭೀರವಾಗಿಯೂ ಇದ್ದಾಳೆ. ಏನು ಹೆಸರನ್ನು ಇಟ್ಟದ್ದೀರಿ?" ಎಂದು ಕೇಳಿದೆ. "ಹೆಸರೇ? ಹೇಮಲತ ಅವಳ ತಂದೆ ತಾಯಿಗಳು ನೂರಾರು ಹೆಸರುಗಳಿಂದ ಇದನ್ನ ಆರಿಸಿಕೊಂಡಿದ್ದಾರೆ. ಆದರಲ್ಲೆಲ್ಲ ಅವರು ಬಹಳ 'ಅಪ್-ಟು-ಡೇಟ್' ಅಂದಹಾಗೆ. ಅಲ್ಲವೇನೆ ಹೇಮು?" ಎಂದು ಮಗುವನ್ನು ಸಂಬೋಧಿಸಿ ಅದರ ಕೆನ್ನೆಗೆ ತನ್ನದನ್ನು ಒತ್ತಿದಳು. "ಹೆಸರೂ ನೊಗಸಾಗಿದೆ" ಅಂದೆ ನಾನು.

"ಹೂಂ, ಅವಳೂ ನೊಗಸುಗಾರ್ತಿ. ಹಾಗೆ ಹೀಗೆ ಆಗುವುದಿಲ್ಲ ಚಾಚೂ ತಪ್ಪಕೂಡದು. ನೋಡು, ಹಾಲು ಸ್ವಲ್ಪ ತಣ್ಣಗಾದರೆ ಅವಳು ಕುಡಿದಾಳೇ? ಅಬ್ಬಬ್ಬ, ಯಾಕಾಗಬಾರದು? ತಿನ್ನುವುದು ಒಂದು ತುತ್ತು ಅನ್ನವಾದರೂ ಸಣ್ಣಕ್ಕಿಯದೇ ಆಗಬೇಕು ತುಪ್ಪವೋ, ಮೊಸರೋ ಅಂಥಾದ್ದು ಇಂಥಾದ್ದು ಅಂದರೆ ಉಹು. ಬಟ್ಟೆಗಿಟ್ಟೇಲೂ ಹಾಗೆಯೇ. ಎತ್ತುವರೂ ಆಡಿಸುವರೂ ರೀಕ್ ರಾಕಾಗಿರಬೇಕು. ಇಲ್ಲದೆ ತಲೆಗಿಲೆ ಕೆದರಿಕೊಂಡಿದ್ದರೆ, ಶುಚಿಯಾಗಿಲ್ಲದಿದ್ದರೆ ಕಿರಿಚಿಕೊಂಡೇ ಬಿಡುತ್ತಾಳೆ. ಅಲ್ಲವೇನೆ ಹೇಮು?" ಎಂದು ಅಕ್ಕ ಕೂಸನ್ನು ತಬ್ಬಿಕೊಂಡಳು.

ಹೇಮಲತೆಯನ್ನು ಎತ್ತಿಕೊಳ್ಳಬೇಕೆಂದು ನೀಡಿದ್ದ ನನ್ನ ಕೈ ಹಾಗೆಯೇ ನನ್ನ ತಲೆಗೆ ಹೋಯಿತು. ಭಾನುವಾರ. ಬಾಚಿಕೊಂಡಿರಲಿಲ್ಲ. ಆದುದರಿಂದ ನಾನು ಆ ಸಾಹಸಕ್ಕೆ ಯತ್ನಿಸಲಿಲ್ಲ.

ಅಕ್ಕನು ಹಜಾರದ ಸುತ್ತ ನೋಡಿದಳು. ಅವಳ ಕಣ್ಣನ್ನೇ ನಾನೂ ಹಿಂಬಾಲಿಸಿದೆ. ಒಂದು ಕಡೆ ನನ್ನ ಜಮಖಾನೆ ಮತ್ತು ಹಾಸಿಗೆಯ ಸುರುಳಿ. ಬಳಿಯಲ್ಲಿಯೇ ಕಾಫಿ ಕುಡಿದ ಬಟ್ಟಲು, ಒಂದು ಮೂಲೆಯಲ್ಲಿ ನಮ್ಮ 'ಷೂ' ಮತ್ತು ಎಕ್ಕಡಗಳ ಗುಂಪು. ಅವಳ ಹಿಂಭಾಗದಲ್ಲೇ ಗೂಟದಮೇಲೆ 'ಹ್ಯಾಂಗರ್' ಇಲ್ಲದೆ ತಗಲುಹಾಕಿದ್ದ ಕೋಟು,

ಷರಟು ಷರಾಯಿಗಳು ಜೋಲಾಡುತ್ತಿದ್ದುವು. ಅಲ್ಲೇ ಒಂದರ ಮೇಲೊಂದು ಹಳೆಯ ಪೆಟ್ಟಿಗೆಗಳು, ಕಿಟಕಿಯ ಗೂಡಿನಲ್ಲೇ ಶಾಯಿ ಕುಡಿಕೆ, ಲೇಖನಿ ಮತ್ತು ಮೂರ್ತಿಯು ಆರಿಸಿ ತಂದಿಟ್ಟ ಕಲ್ಲು, ಬಳೆಯ ಚೂರು ಇತ್ಯಾದಿ. ಗೋಡೆಗಳಮೇಲೆ ನೊಳ್ಳೆಪರದೆಯ ದಾರ ನೇತಾಡು ತ್ತಿದ್ದುವು. ಇಲ್ಲಿ ಪರದೆ ಇಲ್ಲದೆ ಮಲಗಲಾಗುವುದಿಲ್ಲ ಈ ದೃಶ್ಯವನ್ನು ಕಂಡು ನನಗೆ ಹೀನಾಯವಾಯಿತೆಂದು ಹೇಳಬೇಕೆ? ಬಟ್ಟೆ, 'ಷೂ'ಗಳಿ ಗಾಗಿ ನಾನೇಕೆ 'ಸ್ಟ್ಯಾಂಡು' ಒಂದನ್ನು ತರಲಿಲ್ಲವೆಂಬ ಪ್ರಶ್ನೆಯು ಮನಸ್ಸಿನಲ್ಲಿದ್ದಿತು. ಹಿಂದೆ ಅಕ್ಕನ ಆಗಮನವನ್ನು ನಿರೀಕ್ಷಿಸಿದ್ದಾಗ ನನಗೂ ನನ್ನವಳಿಗೂ ಒಪ್ಪಂದವಾಗಿ ಪೆಟ್ಟಿಗೆಗಳೆಲ್ಲವೂ ಒಳಗಿನ ಕೋಣೆ ಯಲ್ಲಿ ಕೆಲವುಕಾಲ ಇಟ್ಟಿದ್ದುವು. ಆದರೆ ಆ ಸಂದರ್ಭವು ದೂರ ವಾದಮೇಲೆ ಅವುಗಳೆಲ್ಲವೂ ಮತ್ತೆ ಹಜಾರಕ್ಕೇ ಬಂದಿದ್ದವು. ಈಗಾಗಲೇ ತುಂಬಿಹೋಗಿದ್ದ ಅವಳ ಕೋಣೆಗೆ ಇವನ್ನು ಖಾಯಂ ಆಗಿ ನೇರಿಸಲು ಮನಸ್ಸು ಬಾರದೆಯೋ ಅಥವ ಆ ಸಲಹೆಯು ಮಾಡುವುದರ ಪರಿಣಾಮ ವನ್ನು ಊಹಿಸಿ ಬೆದರಿಯೋ ನಾನು ಸುಮ್ಮನಾಗಿ ಈ ಏರ್ಪಾಡಿಗೆ ಒಪ್ಪಿ ಕೊಂಡಿದ್ದೆ. ಕಿಟಕಿಯಲ್ಲಿದ್ದ ದೌತಿ, ಲೇಖನಿ, ಅದರಲ್ಲೂ ಮೂರ್ತಿಯ 'ಕಸ'ವನ್ನು ತೆಗೆಯದಿದ್ದುದಕ್ಕಾಗಿ ಸೇವಕನಮೇಲೆ ಮಹಾಕೋಪ ಬಂದಿತು. ಇಷ್ಟು ಸಾಲದೆ ನೆಲವೂ ಕೂಡ ನಾಕಾದಷ್ಟು ಚೊಕ್ಕಟ ವಾಗಿಲ್ಲದಿದ್ದಂತೆಯೇ ನನಗೆ ತೋರಿತು. ಇದಕ್ಕಾಗಿ ಅವನಿಗೆ ಜುಲ್ಮಾನೆ ಹಾಕಬೇಕೆಂಬ ಮನಸ್ಸಾಗಿ ಸಿಡ್ಗರಕ್ಕೂ ಬಂದುಬಿಟ್ಟೆ. ಈ ಕಾಲದಲ್ಲಿ ಸೇವಕರೇ ಧಣಿಗಳೆಂಬ ಅರಿವು ಸಹ ನನಗೆ ಅಡ್ಡಿಮಾಡಲಿಲ್ಲ. ಇರಲಿ. ಈ ಹಜಾರದ ಹಣೆಯಬರಹವೇ ಹೀಗಾದಮೇಲೆ ಆ ಮೂರ್ತಿಯ ಕಾರುಬಾರಿನ ಕೋಣೆ, ಈ ಹೊಸ ಗರತಿಯ ಅಡಿಗೆಯ ಮನೆಗಳು ಹೇಗಿರುವುವೆಂಬುದನ್ನು ನೆನೆಸಿಕೊಂಡು ನಾನು ತಲ್ಲಣಿಸಿದೆನೆಂದೇ ಹೇಳ ಬೇಕು. ಈ ಹೊಸ ಚಿತ್ರಗಳು ನನ್ನ ಹಜಾರದ ಚಿತ್ರವನ್ನೂ ಕೂಡ ಮರೆಯಿಸಿದವು. ಅಕ್ಕನು ಬಂದ ಸುಳಿವನ್ನು ತಿಳಿದು ನನ್ನವಳು ಕೊಂಚ ವಲ್ಲಪನ್ನೂ ಅಣಿಮಾಡುತ್ತಿರಲೆಂದು ನಾನು ದೇವರಲ್ಲಿ ಮೊರೆಯಿಟ್ಟು ಕೊಂಡೆ.

ಅಕ್ಕನು ಹೇಳಿದಳು, "ಹಾಲೇನೋ ದೊಡ್ಡದಾಗಿದೆ. ಆದರೆ ನಿನಗೆ ಒಂದು 'ಸೋಫದ ಸೆಟ್ಟು' ಬೇಕು." ಅಗೋ, ಮೊದಲನೆಯ ಬಾಂಬು! 'ಸೋಫದ ಸೆಟ್ಟು' ನನ್ನ ಸ್ನೇಹಿತರೆಲ್ಲರ ಮನೆಯಲ್ಲಿರುವುದನ್ನೂ ನಾನು ಕಂಡಿದ್ದೆ. ಆದರೆ, ಏನೋ ಧೋರಣೆಯಮೇಲೆ ಅದನ್ನು ತಂದಿರಲಿಲ್ಲ. ಈಗ ಅದು ತಪ್ಪಾಯಿತೆಂದುಕೊಂಡೆ ಅಕ್ಕನು ಮುಂದುವರಿಸಿದಳು. "ಹಾಗೇ ಇನ್ನೂ ಕೆಲವು ಕುರ್ಚಿ ಮೇಜುಗಳೂ ಬೇಕು." ಅಯ್ಯೋ ದೇವರೆ! ಇದನ್ನ ನಾನು ಎಷ್ಟು ಬಾರಿ ಯೋಚಿಸಿಕೊಂಡು ಮುಂದೆ ಹಾಕಿದ್ದೆ! ಅಕ್ಕನು ಪುನಃ ಹೇಳಿದಳು "ಚಿಕ್ಕಪ್ಪ ಹೇಳಿದ, ನಿನಗೆ ದೊಡ್ಡ ಹುದ್ದೆ ಇದೆ ಅಂತ. ಕೈತುಂಬ ಸಂಬಳ ತರುತ್ತೀಯಂತೆ. ಅದಕ್ಕೆ ತಕ್ಕಂತೆ ಖರ್ಚೂ ಮಾಡಬೇಕು." ಓಹೋ, ಇದು ನಿಜವಾದ ಅಕ್ಕನ ಉಪದೇಶ. ನಾನು ಪೆಚ್ಚಾದೆ. ಆ ಕೃಪಣತನದ ನಿಂದೆಯಿಂದ ತಪ್ಪಿಸಿಕೊಳ್ಳಲು "ಏನೋ ತರಲಿಲ್ಲ. ನಮ್ಮದು ಕಂಪನಿಯ ಕೆಲಸ. ಇವತ್ತು ಇಲ್ಲಿ, ನಾಳೆ ಅಲ್ಲಿ—'ಜಿಪ್ಸಿ'ಗಳ ಹಾಗೆ ಈಗಾಗಲೇ ಚಿಕ್ಕಮಗಳೂರಿನಲ್ಲಿ, ದಾವಣಗೆರೆಯಲ್ಲಿ, ಸಿಮ್ಲದಲ್ಲಿ, ಕಲ್ಕತ್ತದಲ್ಲಿ ಕೊಂಡಿದ್ದೆಲ್ಲವನ್ನೂ ಅಲ್ಲಲ್ಲಿಯೇ...." ನನ್ನನ್ನು ಮುಂದುವರಿಯಲು ಬಿಡದೆ, ಅಕ್ಕನು ನಡುವೆಬಾಯಿಹಾಕಿ "ಹಾಗಲ್ಲ, ಹಾಗಲ್ಲ. ನೀನು ಹೀಗೆಲ್ಲಮಾಡಿ ಹಣ ಕೂಡಿಹಾಕುತ್ತ ಇದ್ದೀಯೆ ಅಂತ ಹೇಳು" ಅಂದು ನಕ್ಕಳು. ನಾನು ಕೆಟ್ಟ ನಗೆಯಿಂದ "ಓ, ಅದೂ ಅಷ್ಟರಲ್ಲೇ ಇದೆ. ಈ ಯುದ್ಧಕಾಲದಲ್ಲಿ ಎಷ್ಟು ಬಂದರೂ ಸಾಲದು" ಅಂದೆ. ಅದಕ್ಕೆ ಅವಳು ಯುದ್ಧ, ಯುದ್ಧ ಅಂತ ವರ್ಷಗಟ್ಟಲೆ ಏನೇನನ್ನು ಬಿಡುವುದಕ್ಕೆ ಸಾಧ್ಯ? ಎಲ್ಲವೂ ಬೇಕೇಬೇಕು" ಅಂದಳು. ಇನ್ನು ವಾದಿಸಿ ನನ್ನ ಸಣ್ಣ ಅಭಿರುಚಿಯನ್ನು ತೋರ್ಪಡಿಸಿಕೊಳ್ಳಲು ಇಷ್ಟಪಡದೆ "ಹೌದು. ಅಷ್ಟು ಸೋಫ, ಕುರ್ಚಿ, ಎಲ್ಲವನ್ನೂ ತರಬೇಕು" ಎಂದು ಸೋಲನ್ನು ಒಪ್ಪಿಕೊಂಡೆ

ಅಕ್ಕನು ತಕ್ಷಣವೇ ಏನನ್ನೋ ಮರೆತಿದ್ದವಳಂತೆ "ನಿನ್ನ ಹೆಂಡತಿ ಎಲ್ಲೋ, ನೋಡಲೇ ಇಲ್ಲವಲ್ಲೋ" ಅಂದಳು. ನಿಜ. ಇದೇನು? ನನ್ನವಳಿಗೆ ಇಷ್ಟು ಗೊತ್ತಾಗಬಾರದೆ? ಒಳಗೇ ಹೊಕ್ಕಿಕೊಂಡು ಏನನ್ನು

ಮಾಡತ್ತಿದ್ದಾಳೆ—ಕಡಿದು ಕಟ್ಟೆಯನ್ನು ಹಾಕುತ್ತಿದ್ದಾಳೆ—ಮಹಾ ಕೆಲಸ. ಬರಿಯ ಮುಸುಂಡಿತನ. ನನಗೆ ಅರ್ಧ ಸಿಟ್ಟೇ ಬಂದಿತು ಅನ್ನಿ. ಆದರೆ ಅವಳು ಅಲ್ಲಿ ಇಲ್ಲಿ ಅಣಿಮಾಡುತ್ತಿರಬಹುದೆಂಬುದು ನೆನಪಿಗೆ ಬಂದು ಕೊಂಚ ಶಾಂತನಾದೆ. ಅಕ್ಕನಿಗೆ ಉತ್ತರವಾಗಿ "ಏನೋ ಹಬ್ಬದ ಕೆಲಸ ಅಂತ ಕಾಣುತ್ತದೆ. ಆದರೂ ಅದೇನು ಕಾಯಬಹುದು" ಎಂದು ಮೆತ್ತಗೆ ಅಡಿಗೆಯ ಮನೆಯ ಬಾಗಿಲನ್ನು ತೆಗೆದು ಇಣಕಿ ನೋಡಿದೆ. ಅವಳು ಅಲ್ಲಿರಲಿಲ್ಲ. ಆದರೆ ಅವಸರದಲ್ಲಿ ಸಾಮಾನು ಗಳನ್ನು ಅಣಿಮಾಡಲು ಯತ್ನಿಸದ ಸೂಚನೆಗಳು ಕಂಡುಬಂದುವು. ಇದೇ ಹೊತ್ತಿಗೆ ಪಕ್ಕದ ಕೋಣೆಯಿಂದ "ಅಮ್ಮಾ! ನಾನು ಅರಮನೆ ಕಟ್ಟಿದೀನಿ—ಕೆಡಿಸಬೇಡ" ಎಂಬ ಮೂರ್ತಿಯ ಮಾತು ಕೇಳಿಸಿತು. ಇದಕ್ಕೆ ಉತ್ತರವಾಗಿ ಅವರಮ್ಮ ಏನನ್ನೋ ಮೆಲುನುಡಿಯಲ್ಲಿ ಹೇಳು ತ್ತಿದ್ದಳು. ನಾನು ಆ ಬಾಗಿಲನ್ನು ತೆಗೆದೆ. ಒಳಗಿನ ಶೋಚನೀಯ ವಾದ ಪರಿಸ್ಥಿತಿಯನ್ನು ಕಂಡು ನನ್ನ ಎದೆ—ಅಕ್ಕನು ಅಲ್ಲಿದ್ದುದರಿಂದ— ಜಗ್ಗಿಂದಿತು. ಮೂರ್ತಿಯು ತನ್ನ ಅರಮನೆಯನ್ನು ಕಟ್ಟುವುದಕ್ಕಾಗಿ ನಮ್ಮ ಕಿರುಮನೆಯನ್ನೆಲ್ಲವನ್ನೂ ಕಿತ್ತು ಗೂರಾಡಿ, ನಮ್ಮ ಏರ್ಪಾಡನ್ನೆಲ್ಲ ನೆಲಸಮಮಾಡಿ, ತನ್ನ ಕಾರ್ಯದಕ್ಷತೆ, ವಿಚಕ್ಷಣೆಗಳ ಈ ಪರಿಣಾಮ ಫಲವನ್ನು ಕಂಡು ಸುಪ್ರೀತನಾಗಿ ಹಿಗ್ಗುತ್ತಿದ್ದನು. ಎತ್ತರದ ಮಾಡು ಸಿಕ್ಕುವುದಕ್ಕಾಗಿ ಹಾಸಿಗೆಯ ಸುರಳಿಗಳಮೇಲೆ ಹತ್ತಿ ಅವೆಲ್ಲವನ್ನೂ ಉರುಳಿಸಿ ಅಲ್ಲೆಲ್ಲ ಬಿಚ್ಚಿದ್ದನು. ಮಾಡಿನ ಪುಸ್ತಕಗಳು ಹಲವು ಕೆಳಕ್ಕೆ ಬಂದು ಅವನ ಅರಮನೆಯ ಗೋಡೆ ತಾರಸಿಗಳಾಗಿದ್ದುವು. ಎಣ್ಣೆಯ ಸೀಸೆಯೊಂದು ಅರಮನೆಯ ಕಳಸವಾಗಿದ್ದಿತು ಅಲ್ಲಿದ್ದ ಡಬ್ಬಗಳೆಲ್ಲವೂ ಅರಮನೆಯ ಬೇಲಿಗೆ ಸೇರಿಬಿಟ್ಟಿದ್ದುವು. ಆ ಅರಮನೆಯ ರಾಜನ ಅವಸ್ಥೆ ಯಂತೂ ಹೇಳತೀರದು. ಅರಸಿನ ಪೋಷಾಕಿನಮೇಲೆ ರಕ್ತವರ್ಣದ ಕುಂಕುಮವು ಚೆಲ್ಲಿದ್ದಿತು. ಅವನ ಕೈಯಲ್ಲಿ ಮಡಿಯ ಕೋಲಿನ ಆಯುಧ. ಒಟ್ಟಿನಲ್ಲಿ ಯುದ್ಧಾಭಿಮುಖನಾದ ಯೋಧ.

ಅವನ ಅಮ್ಮನು ಅಳುವುದೊಂದು ಬಾಕಿ. ವಾಯುವೇಗದಿಂದ ಅಲ್ಲಲ್ಲಿ ಹಾರಾಡುತ್ತ ಸ್ಥಳಪಲ್ಲಟವಾದ ಸಾಮಾನುಗಳನ್ನು ಯಥಾ

ಸ್ಥಾನಕ್ಕೆ ಸೇರಿಸುತ್ತಿದ್ದಳು. ಮಗನು "ಅದನ್ನು ಮುಟ್ಟಬೇಡ, ಇದನ್ನು ತುಳಿಯಬೇಡ" ಎನ್ನುವ ಎಚ್ಚರಿಕೆಗಳು ಅವಳ ಕಿವಿಯಮೇಲೇ ಬೀಳುತ್ತಿರಲಿಲ್ಲ. ನಾನು ಆ ಬಾಗಿಲನ್ನು ತೆಗೆದಾಗ "ನೋಡಿ, ಇವನ ಆರ್ಭಟ. ಇದನ್ನೆಲ್ಲ ನಾನು ಯಾವಾಗ ಸರಿಪಡಿಸುವುದು? ಅವರು ಬೇರೆ ಬಂದಿದ್ದಾರೆ" ಅಂದಳು ನಾನು "ಇರಲಿ. ಅದೆಲ್ಲ ಒಂದು ಕಡೆ ಗುಡ್ಡೆಹಾಕು. ಅರಮನೆಯನ್ನು ಮುಟ್ಟಬೇಡ ರಾಮಾಯಣವೇ ಪ್ರಾರಂಭವಾದೀತು. ಸದ್ಯ ಈ ರಾವಣಾಸುರನನ್ನು ನರನನ್ನಾಗಿ ಬೇಗ ಮಾಡು. ಹೊರಗೆ ಬಾ. ಅಕ್ಕ ಕರೆಯುತ್ತಿದ್ದಾಳೆ" ಅಂದೆ "ಕರೆಯಲಿ. ಏನುಮಾಡುವುದು. ಇಂಥ ಮಕ್ಕಳು ಇದ್ದರೆ ನಡೆವಳಿಕೆಗಳೆಲ್ಲ ನುಚ್ಚು ನೂರಾದಂತೆಯೆ. ನಾನು ಇದನ್ನೆಲ್ಲ ಹೇಗಾದರೂ ಬೇಗ ಇಡುತ್ತೇನೆ. ಸದ್ಯ ನೀವೇ ಇವನ ಬಟ್ಟೆಯನ್ನು ಬದಲಾಯಿಸಿ ಬಿಡಿ ನೋಡೋ ಹಾಗೆ ಆಗಲಿ" ಎಂದಳು.

ನಾನು ಮೂರ್ತಿಗೆ "ಹೊರಗೆ ನಿಮ್ಮ ಅತ್ತೆ ಬಂದಿದ್ದಾಳೆ, ಒಂದು ಪಾಪ ಬಂದಿದೆ. ಬೇಗ ಬೇರೆ ಬಟ್ಟೆ ಹಾಕಿಕೋ. ನೋಡೋಣ" ಅಂದು ನನ್ನ ಭಾಗದ ಕಾರ್ಯಕ್ರಮವನ್ನು ಮೊದಲುಮಾಡಿದೆ. ಆದರೆ ಮೂರ್ತಿಯು ನನ್ನ ಮಾತಿನ ಉತ್ತರಾರ್ಧವನ್ನು ಗಮನಕ್ಕೆ ತಂದುಕೊಳ್ಳದೆ "ಎಲ್ಲಿ ಪಾಪ?" ಎಂದು ಓಡಲು ಪ್ರಾರಂಭಿಸಿದ. ಅವನನ್ನು ಹಿಡಿದು, ಏನೋ ಪುಸಲಾಯಿಸಿ, ಅವನ ಆಯುಧವು ಅವನಿಂದ ಬೇರೆಯಾಗದಂತೆ ನೋಡಿಕೊಂಡು ಅವನಿಗೆ ಬೇರೆ ಬಟ್ಟೆಯನ್ನು ಹಾಕುವ ಹೊತ್ತಿಗೆ ನನಗೆ ಸಾಕುಸಾಕಾಗಿ ಹೋಯಿತು ಅಷ್ಟುಹೊತ್ತಿಗೆ ಅವನಮ್ಮನ ಕೆಲಸವೂ ಹೇಗೋ ಕೊನೆಗೊಂಡಿತು. ಮೂವರೂ ರಂಗಭೂಮಿಯಮೇಲೆ ಬರುವ ನಟನಟಿಯರಂತೆ ಹಜಾರವನ್ನು ಪ್ರವೇಶಿಸಿದೆವು.

ನನ್ನವಳನ್ನು ನೋಡಿದೊಡನೆ ಅಕ್ಕನು "ನಿನ್ನ ಹೆಂಡತಿ ಲಕ್ಷಣವಾಗಿದ್ದಾಳೆ. ಪರವಾಯಿಲ್ಲ" ಎಂದಳು. ಇದು ನಮ್ಮಿಬ್ಬರಿಗೂ ತಿಳಿದ ವಿಷಯವೇ ಆಗಿದ್ದರೂ ಅಕ್ಕನು ಪ್ರಶಂಸಿಸಿದಾಗ, ನಮ್ಮಲ್ಲಿ ಯಾರು ಹೆಚ್ಚಾಗಿ ಹಿಗ್ಗಿದೆವೋ ತಿಳಿಯದು. ಅಕ್ಕನು "ನಿನ್ನ ಹೆಸರು ಗುಂಡಮ್ಮ ಅಲ್ಲವೇ?" ಎಂದು ಪ್ರಶ್ನಿಸಿದಳು. ಗುಂಡಮ್ಮನು 'ಹೌದು' ಅಂದಳು.

ಗುಂಡಮ್ಮ ಎನ್ನುವ ಹೆಸರು ಕಲಾಮಯವಾದುದಲ್ಲವೆಂದು ನನಗೆ ಗೊತ್ತಿದ್ದಿತು. ಗಂಡನ ಅಧಿಕಾರವನ್ನು ವಹಿಸಿ ಅದನ್ನು 'ಮಂಜುಳಾ, ಕಮಲಾ, ಲಲಿತಾ, ಸ್ವರ್ಣಲತಾ' ಮೊದಲಾದ ಹೆಸರುಗಳಲ್ಲಿ ಒಂದಕ್ಕೆ ಬದಲಾಯಿಸಬೇಕು ಅಂದುಕೊಂಡು ಇದ್ದೆ. ಆದರೆ ನಮ್ಮ ಮಾವನವರಿಗೆ ಅನೇಕ ಮಕ್ಕಳಾಗಿ ಎಲ್ಲವೂ ಸತ್ತು ಸತ್ತು ಇವಳೊಬ್ಬಳು ಉಳಿಯುವಂತೆ ಕಂಡುದುದರಿಂದ ಇವಳಾದರೂ ಕಲ್ಲುಗುಂಡಿನಂತೆ ಗಟ್ಟಿಯಾಗಿ ಬಾಳಲಿ ಎಂದು ಆ ಹೆಸರನ್ನಿಟ್ಟಿದ್ದರಂತೆ. ಆದುದರಿಂದ ಅವರ ಮನಸ್ಸನ್ನು ನೋಯಿಸಲಾರದೆ ಆ ಹೆಸರನ್ನು ಹಾಗೆಯೇ ಉಳಿಸಿ ಸಮಾಧಾನ ತಂದು ಕೊಂಡಿದ್ದೆ. ಆದರೆ ಈಗ ಆ ಹೆಸರಿನ ಉಚ್ಚಾರಣೆಯನ್ನು ಅಕ್ಕನ ಬಾಯಿಂದ ಕೇಳಿದಾಗ ನನ್ನ ನಿಶ್ಚಯವನ್ನು ಪೂರ್ತಿಮಾಡಿಕೊಳ್ಳದಿದ್ದುದು ತಪ್ಪಾಯಿತೆಂದೆನಿಸಿತು. ಆದರೆ 'ಚೆಲ್ಲಿದ ಹಾಲಿನ ಮೇಲೇನು ಗೋಳು' ಎಂದುಕೊಂಡು ಸುಮ್ಮನಾದೆ.

ಅಕ್ಕನು "ಏನು ಬಹಳ ಕೆಲಸ ಇದ್ದ ಹಾಗಿತ್ತು-ನಿನಗೆ? ಅಂದು ನನ್ನವಳನ್ನು ಕೇಳಿ "ಮನೆಯಲ್ಲಿ ಅಡಿಗೆಯವರು ಯಾರೂ ಇಲ್ಲವೆ?" ಎಂದು ನನ್ನನ್ನು ಪ್ರಶ್ನಿಸಿದಳು. ನಾನು ಇದ್ದುದನ್ನು ಇದ್ದಂತೆಯೇ ಹೇಳುವವನಾದರೂ ಈಗೇಕೋ ನನ್ನ ಮನಸ್ಸು ಹಿಂಜರಿಯಿತು. "ಇಟ್ಟು ಕೊಂಡಿಲ್ಲ" ಎಂದು ಹೇಳುವುದು ನನಗೇಕೋ ಒಪ್ಪಿಗೆಯಾಗಲಿಲ್ಲ. ಆದುದರಿಂದ "ಅಡಿಗೆಯವನನ್ನು ಹುಡುಕಿ ಹುಡುಕಿ ಸಾಕಾಯಿತು. ಯಾರೂ ಸಿಕ್ಕುವುದೇ ಇಲ್ಲ" ಅಂದೆ. "ಯಾರಾದರೂ ಒಬ್ಬರನ್ನು ಇಟ್ಟುಕೊಳ್ಳಬೇಕು ಇಲ್ಲದೆ ಇಲ್ಲೆಲ್ಲ ಹೇಗಾಗುತ್ತೆ" ಅಂದಳು ಅಕ್ಕ. ನಾನೂ ನನ್ನವಳೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡೆವು. ನಮ್ಮ ದಿನದಿನದ ವಾಗ್ವಾದವು ನೆನಪಿಗೆ ಬಂದಿತು. ಅವಳು ನಸುನಕ್ಕಳು. ನಾನು ಕೊಂಚ ಕೆಂಪಾದೆ.

ಅಕ್ಕ ಮೂರ್ತಿಯನ್ನು ನೋಡಿ "ಇವನು ನನ್ನ ಅಳಿಯನೋ" ಎಂದು ಕೇಳಿದಳು. ಇಲ್ಲಿಯವರೆಗೂ ಅತ್ತಿತ್ತ ನೋಡುತ್ತಿದ್ದ ಮೂರ್ತಿಯು ಈಗ ಅಕ್ಕನನ್ನು ನೋಡಿ ಹುಬ್ಬುಗಂಟಿಕ್ಕಿದ. ಅನಂತರ ಅಮ್ಮನ ಸೀರೆಯ ಮಡಿಕೆಯನ್ನು ಒರಗಿಕೊಂಡು ಮುಖ ತಿರುಗಿಸಿಕೊಂಡ.

ಅಕ್ಕನು "ಹುಡುಗ ಏಕೆ ಬಡವಾಗಿದ್ದ ಹಾಗೆ ಇದ್ದಾನೆ?" ಎಂದು ಕೇಳಿದಳು. ಅದಕ್ಕೆ ಅವನ ಅಮ್ಮ "ಸ್ವಭಾವವೇ ಹಾಗೆ" ಅಂದಳು. ಅಕ್ಕನು "ಹಾಗೆಂದರೇನು! ಅವನಿಗೆ 'ಕಾಡ್ಲಿವರ್ ಆಯಿಲ್' ಕೊಡ ಬೇಕು. ಹಾಲು ತುಪ್ಪ ಧಾರಾಳವಾಗಿ ಉಪಯೋಗಿಸಬೇಕು" ಎಂದು ಮೂರ್ತಿಯನ್ನು ಸಂಬೋಧಿಸುತ್ತ ಹೇಮಲತೆಯನ್ನು ತೋರಿಸಿ "ಇಲ್ಲಿ ಬಾರೋ, ಇವಳನ್ನು ಮದುವೆ ಮಾಡಿಕೊಳ್ಳುತ್ತೀಯೇನೋ" ಎಂದು ಕೇಳಿದಳು. ಸರಿ, ಮೂರ್ತಿಯು ನಾಚಿಕೊಂಡ. ಅಕ್ಕನು ಎದ್ದು ಬಂದು ಮೂರ್ತಿಯ ತಲೆಯನ್ನು ಸವರಿದಳು

ಇದಾದ ಮೇಲೆ ಅಕ್ಕನು "ಎಲ್ಲಿ ಮನೆ ನೋಡೋಣ" ಅಂದಳು. ತೋರಿಸಲು ನಾನೇ ಕರೆದುಕೊಂಡು ಹೋದೆ ನನ್ನವಳು "ಕೊಂಚ ಕಾಫಿ ಕಾಯಿಸುತ್ತೇನೆ" ಎಂದು ನುಣುಚಿಕೊಂಡಳು. ಅಕ್ಕನು ಕೋಣೆ ಯನ್ನು ನೋಡಿದಾಗ "ಕೋಣೆ ಸಣ್ಣದು, ಸಾಮಾನು ಜಾಸ್ತಿ ದೊಡ್ಡ ಮಂಚವನ್ನು ತಂದಿಟ್ಟುಕೊಂಡರೆ, ಈ 'ಹರಪ'ವೆಲ್ಲ ಅದರ ಕೆಳಗೆ ಹೋಗುತ್ತದೆ" ಎಂದು ಮೂರ್ತಿಯ ಅವಾಂತರವನ್ನು ತೋರಿಸಿದಳು. ನಾನು "ಹೂಂ, ತರಬೇಕು" ಅಂತ ನುಂಗಿಕೊಂಡೆ ಅಡಿಗೆಯ ಮನೆಯನ್ನು ಕಷ್ಟದಿಂದ 'ಪಾಸು' ಮಾಡಲಾಯಿತು. ಬಚ್ಚಲಮನೆಯಲ್ಲಿ 'ಬಂಬ'ವು ಬಚ್ಚಲಿಗೆ ಸಮೀಪವಾಗಿದೆ. ನೀರೆಲ್ಲ ಸಿಡಿಯುತ್ತದೆ. ಅದಕ್ಕೆ ಜಗಲಿ ಕಟ್ಟಿಸಬೇಕು" ಎಂದು ಸಲಹೆ ಕೊಟ್ಟಳು ನಾನು ಮನೆಯವರಿಗೆ ಹೇಳಿ ಒತ್ತಾಯ ಮಾಡುವೆನೆಂದು ವಾಗ್ದಾನ ಮಾಡಿದೆ. ಅಕ್ಕನು "ಮನೆಗೆ ಬಾಡಿಗೆ ಎಷ್ಟು?" ಎಂದು ವಿಚಾರಿಸಿದಳು "ನಾನು ಮೂವತ್ತೈದು" ಎಂದೆ. ಅದಕ್ಕೆ ಅವಳು "ಮನೆ ಇನ್ನೂ ಚಿಕ್ಕದೆ. ಅದು ಈ ಊರಿನಲ್ಲೇ ಹಾಗೆ ಅಂತ ಕಾಣುತ್ತೆ ನಮ್ಮ ಅಳಿಯಂದಿರೂ ಎಪ್ಪತ್ತು ಎಂಭತ್ತು ಬೇಕಾದರೂ ಕೊಡುತ್ತೇನೆ ಅನ್ನುತ್ತಾರೆ. ದೊಡ್ಡ ಮನೆ ಬೇರೆ ಸಿಕ್ಕುವುದಿಲ್ಲ" ಅಂದಳು. ಆನಂತರ ವರಾಂಡಕ್ಕೆ ಬಂದಾಗ ನಾನು ಧಾರಾಳವಾಗಿ ಉಸಿರಾಡಲು ಸಾಧ್ಯವಾಯಿತು. ಮುಂದೆ ಕಂಡದ್ದು ಬಾವಿ, ಗಿಡ, ಮರ ಇವುಗಳ ವಿಷಯವಾಗಿ ಏನನ್ನು ಹೇಳಿದರೂ ಹೇಳಲಿ. ಅದು ನಮ್ಮ ಜವಾಬುದಾರಿಯಲ್ಲವಲ್ಲ ಸದ್ಯ ಅಂದುಕೊಂಡೆ.

ಅಂಗಳದಲ್ಲಿ ಹೇಮಲತೆಯೂ ಮೂರ್ತಿಯೂ ನಮ್ಮ ಸಹಾಯದಿಂದ ಕೊಂಚ ಆಟವಾಡಿದರು.

ತಿಂಡಿ ಕಾಫಿ ತಯಾರಾದ ಸಮಾಚಾರ ಮುಟ್ಟಿದೊಡನೆ ಎಲ್ಲರೂ ಒಳಗೆ ಬಂದೆವು. ಹೇಮಲತೆ ತಿಂಡಿಗಾಗಿ ಅತ್ತಳು. ಆದರೆ ಅಕ್ಕನು ಮಾತ್ರ ಅದನ್ನು ಸೋಕಿಸಲಿಲ್ಲ. "ಅಯ್ಯೋ, ಅವಳನ್ನು ನಾವು ಹೇಗೆ ನೋಡಿಕೊಳ್ಳುತ್ತೇವೆ ಅಂತ. ಈ ತಿಂಡಿ ತಿಂದರೆ ಅವಳು ಬದುಕಿಯಾಳೆ? ಅವಳಿಗೆ ಅಷ್ಟು ಹಾಲನ್ನು ಕೊಡು" ಅಂದಳು. ಮಗುವು ಹಾಲನ್ನು ಕುಡಿಯಲಿಲ್ಲ. ಅಕ್ಕನು "ಏನು ಹಾಲು ನೀರು ಗೀರೋ" ಅಂದಳು. ನನ್ನವಳು "ಇಲ್ಲವಲ್ಲ. ಚೆನ್ನಾಗಿದೆ" ಅಂದಳು. "ಹಾಗಾದರೆ ಬಿಸಿ ಸಾಲದೋ ಏನೋ. ಇನ್ನಷ್ಟು ಬಿಸಿ ಮಾಡು" ಅಂದಳು. ಬಿಸಿಮಾಡಿದ ಮೇಲೂ ಹೇಮಲತೆ ಹಾಲು ಕುಡಿಯಲಿಲ್ಲ. ತಿಂಡಿಗಾಗಿಯೇ ಅಳು ತ್ತಿದ್ದಂತೆ ನನಗೆ ತೋರಿತು. ಅದಕ್ಕೆ ಅಕ್ಕನು "ಇವಳ ಶ್ರೇಷ್ಠ ನೋಡು. ಎಲ್ಲ ಅವರ ಮನೆಯಲ್ಲಿ ಆದ ಹಾಗೇ ಆಗಬೇಕೋ ಏನೋ. ಇನ್ನೊಂದು ಕಡೆ ಅವಳಿಗೆ ಸರಿಬೀಳದು" ಅಂದಳು.

ತಿಂಡಿಯ ಹೊತ್ತಿನಲ್ಲಿ ಅಕ್ಕನು ತನ್ನ ಮಗಳು, ಅಳಿಯ, ಮಗು ಇವರ ಪರಿಚಯವನ್ನು ವಿಶದವಾಗಿ ಮಾಡಿಕೊಟ್ಟಳು. ಅವರ ಸಿರಿ, ನಾಗರೀಕತೆ, ನಯ, ನಾಜೋಕು ಇವುಗಳನ್ನು ನಾವು ಮೆಚ್ಚಿದೆವು, ಬೆರಗಾದೆವು. ಅಳಿಯನ ವಿಷಯವಾಗಿ ಮಾತನಾಡುತ್ತ "ಅವರು ಡಬ್ಬಲ್ ಗ್ರಾಜುಯೇಟು. ಪತ್ರಿಕೆಗೆ ಬೇಕಾದಷ್ಟು ಬರೆಯುತ್ತಾರೆ. ಸೂಟು, ಹ್ಯಾಟು, ಎಲ್ಲ ಬಹಳ 'ನೀಟು' ನಿತ್ಯವೂ ಮುಖಕ್ಷೌರ .." ನನ್ನ ಕೈ ಇದ್ದಕಿದ್ದಂತೆಯೇ ನನ್ನ ಗಡ್ಡಕ್ಕೆ ಹೋಯಿತು. ಒಂದು ದಿನದ ಗಡ್ಡ! ನಿತ್ಯವೂ ಕೆರೆದುಕೊಳ್ಳುವುದಂತೂ ತಪ್ಪದು. ಇವತ್ತು ಭಾನು ವಾರ ಹೋಗಲಿ ಅಂತ ಬಿಟ್ಟಿದ್ದೆ. 'ಛೇ, ಬೆಳಗ್ಗೆಯೆಲ್ಲ ಸುಮ್ಮನೆ ಕಾಲು ಚಾಚಿಕೊಂಡು ಕಾಫಿ ಕುಡಿದುಕೊಂಡು, ಪತ್ರಿಕೆ ಓದಿಕೊಂಡು ಕುಳಿತಿದ್ದೆ. ಇದಕ್ಕೆ ಸೋಮಾರಿತನ ಬಂದಿತಲ್ಲ' ಅಂದುಕೊಂಡೆ. ಉಡುಪಿನ ವಿಷಯವೆಂದರೆ ನಾನು ಆಗ ಇದ್ದುದು ದಟ್ಟಿ ಬನಿಯನ್ನಿನಲ್ಲಿ. ನನ್ನ ಹಳೆ ಕೋಟುಗಳನ್ನು ಅಕ್ಕನು ಆಗಲೇ ನೋಡಿದ್ದಳು. ಆ ಗುಂಪಿನಲ್ಲೆಲ್ಲ

ಶಾಸ್ತ್ರಕ್ಕೂ ಒಂದು 'ಟೈ' ಇರಲಿಲ್ಲ. 'ಸಮಯಕ್ಕಾದರೂ ಇಂತಹ ಒಂದೊಂದು ಇರಬೇಡವೆ?' ಎಂಬ ಪ್ರಶ್ನೆ ಆಗ ತಾನೆ ನನ್ನ ಮನಸ್ಸಿನಲ್ಲೆದ್ದಿತು. ಅಳಿಯನ ಮೇಲ್ಮೆಯನ್ನು ತಿಳಿಸಿದಮೇಲೆ ಅಕ್ಕನು ಮಗಳ ಚರಿತ್ರೆಯನ್ನು ಅತಿ ಉತ್ಸಾಹದಿಂದ ಹೇಳಿದಳು "ಅಳಿಯನೇ ಹಾಗೆ ಅಂದರೆ ನನ್ನ ಮಗಳು ಇನ್ನೂ ಒಂದು ಕೈ ಮೇಲೆ. ಅದೆಷ್ಟು ಸೀರೆಯೋ, ಜಾಕೆಟ್ಟೋ, ಷೂಗಳೊ, ದಿನದಿನಕ್ಕೆ ಅವಳಿಗೆ ಹೊಸ ಹೊಸವು ಬೇಕು. ಯಾವಾಗಲೂ 'Latest fashion' ಏನು ಅಂತಲೇ ಹುಡುಕುತ್ತ ಕೊಳ್ಳುತ್ತಿರುತ್ತಾಳೆ. ಅಂಥ ಇಂಥದ್ದು ಏಕೆ, ಎಂಥದನ್ನೂ ಬಡಪೆಟ್ಟಿಗೆ ಒಪ್ಪುವಳಲ್ಲ ಎಷ್ಟೆಷ್ಟು ತರಹ ಬೈತಲೆ ತೆಗೆದುಕೊಂಡರೂ, ಹೇಗೆ ಹೇಗೆ ಜಡೆಯನ್ನು ಹಾಕಿಕೊಂಡರೂ ದಿನದಿನವೂ ಬಳೆಗಳನ್ನು ಬದಲಾಯಿಸಿಕೊಂಡರೂ ಅವಳಿಗೆ ತೃಪ್ತಿಯಿಲ್ಲ. ಅವಳಿಗೆ ಒಡವೆ ವಸ್ತುಗಳನ್ನು ಕೊಟ್ಟು ದಣಿಸುವುದು ಬ್ರಹ್ಮ(!)ನಿಗೆ ಸಾಧ್ಯವಿಲ್ಲ. ಈಗಾಗಲೇ ದೀವಾವಳಿಗೆ ಹೊಸ ನಮೂನೆ ಸೀರೆ ಆಗಬೇಕು ಅಂತ ಪಟ್ಟು ಹಿಡಿದಿದ್ದಾಳೆ. ಮದ್ರಾಸಿನಲ್ಲಿ ಯಜಮಾನರಿಗೆ ಬರೆದಿದ್ದೆ. ಅವರೇನೋ 'ಪಾರ್ಸಲ್' ಕಳುಹಿಸಲು ಯತ್ನಿಸಿದರಂತೆ. ಆದರೆ ಪೋಸ್ಟು ಆಫೀಸಿನವರು ತೆಗೆದುಕೊಳ್ಳಲೇ ಇಲ್ಲವಂತೆ. ಹಾಗೂ ಇದೆಯೆ ನಿರ್ಬಂಧ?'' ಎಂದು ಕೇಳಿದಳು. "ನನಗೆ ತಿಳಿದಮಟ್ಟಿಗೆ ಹಾಗೇನು ಇದ್ದಹಾಗೆ ಇಲ್ಲವಲ್ಲ?'' ಎಂದು ನಾನು ಸೂಚಿಸಿದೆ. ಅದಕ್ಕೆ ಅವಳು "ಇಲ್ಲ ಹಾಗೆ ಅಂತೆ. ಯುದ್ಧಕಾಲ. ಈಗ ಹಣವನ್ನೇ ಕಳುಹಿಸುವ ಹಾಗೆ ಬರೆದಿದ್ದೇನೆ'' ಅಂದು ನನ್ನವಳನ್ನು ಕುರಿತು "ಏನು, ಎಲ್ಲಿ ನಿನ್ನ ಸೀರೆಗಳನ್ನು ತಾ, ನೋಡೋಣ. ಎಂತೆಂತಹದಿವೆ?'' ಎಂದು ಕೇಳಿದಳು. ಅದಕ್ಕೆ ಅವಳು "ನನಗೇನು ಪೆಟ್ಟಿಗೆಯಲ್ಲಿಡುವಂತಹ ಸೀರೆಗಳು ಇಲ್ಲ. ಎಲ್ಲವೂ ನಾನು ಉಟ್ಟಿರುವಂತಹವೆ'' ಎಂದು ಉತ್ತರಕೊಟ್ಟಳು. ಅವಳು ಉಟ್ಟಿದ್ದ ಸಾದಾ ಸೀರೆಯನ್ನು ಕಂಡು ಅಕ್ಕನಿಗೆ ಆಶ್ಚರ್ಯವಾಯಿತು. "ಇದೇನು ಇಷ್ಟೇಯೆ? ನೀವು ಡೆಲ್ಲಿ, ಕಲ್ಕತ್ತ ಎಲ್ಲಾ ಕಡೆಯೂ ಸುತ್ತಿಕೊಂಡು ಬಂದಿದ್ದೀರಿ. ನಿಮ್ಮ ವಿಷಯವನ್ನು ಕೇಳಿ ನಿನ್ನ ಬಟ್ಟೆಬರೆಗಳನ್ನು ನೋಡುವುದಕ್ಕೆ ಬರಬೇಕೆಂದು ನನ್ನ ಮಗಳು ಮನಸ್ಸು ಮಾಡಿದ್ದಳು. ಏನೋ

ನಾನುಕೂಲದಿಂದ ಬರಲಿಲ್ಲ'' ಅಂದಳು. ಇಲ್ಲಿ ನಾನು ಬಾಯಿ ಹಾಕಿ
ನಾವು ಹಾಕಿಕೊಳ್ಳುವದೆಲ್ಲ ಖಾದಿ. ಹೆಚ್ಚಿಗೆ ಮಾದರಿಗಳಿಗೆ ಹೋಗು
ತೆಯೂ ಇಲ್ಲ. ಅವಳಿಗೂ ಅದರಲ್ಲಿ ಅಷ್ಟು ಅಭಿಲಾಷೆಯಿಲ್ಲ''
ದು ಹೇಳಿದೆ. ಅಕ್ಕನು ''ನೀವೇನೋ ಖಾದಿ ಹಾಕಬಲ್ಲಿರಿ. ನನ್ನ
ಗಳು ಇಷ್ಟು ದಪ್ಪ ಬಟ್ಟೆಯನ್ನು ಕಣ್ಣೆತ್ತಿಯೂ ನೋಡುವುದಿಲ್ಲ.
ನಳಿಗೆ ರೇಷ್ಮೆಯೇ ಸಾಕಾದಷ್ಟು ತೆಳುವಾಗಿಲ್ಲ. ಸರಿ, ಹಾಗಾದರೆ
ವೆಲ್ಲ ಖಾದಿಯವರೋ, ಓ, ಮೂರ್ತಿಗೂ ಖಾದಿಯೆ? ಏನಪ್ಪ
ೂರ್ತಿ ನಿನಗೆ ಹೇಮುವನ್ನೇನಾದರೂ ಮದುವೆಮಾಡಿಕೊಟ್ಟರೆ ಅವಳು
ದಿಗೀದಿಗೆ ಒಪ್ಪುವುದಿಲ್ಲ ತಿಳಿಯಿತೆ? ಅವಳೂ ಅವಳ ತಂದೆ ತಾಯಿ
ಂತೆಯೇ. ಇನ್ನೂ ಒಂದು ತೂಕ ಜಾಸ್ತಿ. ಅವಳನ್ನು ತೃಪ್ತಿಪಡಿಸು
ದಕ್ಕೇ ನೀನು ದುಡಿಯಬೇಕು. ನಿನ್ನ ಉಪದೇಶವನ್ನು ಅವಳೇನೂ
ಳುವುದಿಲ್ಲ. ಅವಳು ಹೇಳಿದ ಹಾಗೆ ನಡೆಸದಿದ್ದರೆ ಕೇಳಿದ್ದನ್ನು ತಂದು
ಡದಿದ್ದರೆ ನಿನ್ನನ್ನು ಮಾರಿಬಿಡುತ್ತಾಳೆ. ತಿಳಿಯಿತೋ?'' ಎಂದು
ರ್ೈಸಿದಳು. ಮೂರ್ತಿಗೇನೂ ತಿಳಿಯಲಿಲ್ಲ. ನಾವು ಈ ವಿನೋದವನ್ನು
ರಸ್ಕರಿಸಿ ನಕ್ಕೆವು.

ಇಷ್ಟು ಹೊತ್ತಿಗೆ ಸಂಜೆಯಾಯಿತು. ಅಕ್ಕನನ್ನು ''ಜುಹು''
ರಕ್ಕೆ ಕರದುಕೊಂಡು ಹೋಗಬೇಕೆನ್ನಿಸಿತು. ಅವಳೂ ದಯಮಾಡಿ
ಪ್ಪಿದಳು. ಎಲ್ಲರೂ ''ಬಸ್ಸುಸ್ಟಾಂಡಿ''ನ ಬಳಿಗೆ ಬಂದೆವು. ಅಂದು
ನುವಾರವಾದುದರಿಂದ ವಿಹಾರಿಗಳು ಬಹಳ. ಎಲ್ಲರೂ ''ಕ್ಯೂ''ನಲ್ಲಿ
ತುಕೊಂಡಿದ್ದರು. ನಾವೂ ಸೇರಿಕೊಂಡೆವು. ಆಗ ಅಕ್ಕನು ''ಅದೇನು
ಲಾಗಿ ನಿಂತುಕೊಳ್ಳುವುದು? ಬೇರೆ ದಾರಿ ಇಲ್ಲವೆ?'' ಎಂದು ಕೇಳಿ
ಸು. ನಾನು ''ಹಾಗೇಯೇ ಕಾಣುತ್ತದೆ'' ಎಂದು ಅಂದು ಸುಮ್ಮನಾದೆ
ತ್ತು ನಿಮಿಷ ಕಾಯ್ದೆವು. ಇನ್ನೂ ಬಸ್ಸು ಬರಲಿಲ್ಲ. ''ಇನ್ನೂ ಎಷ್ಟು
ತ್ತು ನಿಂತಿರಬೇಕಪ್ಪ?'' ಎಂದು ಅಕ್ಕನು ಪುನಃ ಕೇಳಿದಳು.
ಈ ಹಾಳು 'ಬಾಂದ್ರ' ಬಸ್ಸು ಸರ್ವಿಸು ಹೇಳುವುದಕ್ಕಿಲ್ಲ'' ಅಂದೆ.
ವಳು ಅಲ್ಲಿ ದೂರದಲ್ಲಿ ಸಾಲಾಗಿ ನಿಂತಿದ್ದ ಮೋಟಾರು ಕಾರುಗಳನ್ನು
ೇರಿಸುತ್ತ ''ಅದೇನು ಬಾಡಿಗೆಗಲ್ಲವೆ? ಬಹಳ ಬಾಡಿಗೆಯೋ?''

ಅಂದಳು. ಓಹೊ, ಇವಳೇ ಸೂಚಿಸಿದಾಗ ಸುಮ್ಮನಿರಲಾಗುತ್ತದೆಯೆ? ನಾನು ಜೇಬನ್ನು ಮುಟ್ಟಿಕೊಂಡೆ. ಹಿಂದಿನ ದಿನವೇ ಸಂಬಳ ಬಂದಿದ್ದಿತು. ಸರಿ, ಧೈರ್ಯಮಾಡಿ "ಏನಿಲ್ಲ. ಅದೇನು ಮಹಾ ಅದರಲ್ಲೇ ಹೋದ ರಾಯಿತು? ಅಂದು ಹೋಗುತ್ತ ಬರುತ್ತ ಹತ್ತು ರೂಪಾಯಿಗೆ 'ಟ್ಯಾಕ್ಸಿ' ಯನ್ನು ಗೊತ್ತುಮಾಡಿದೆ.

ಜುಹುವಿನಲ್ಲಿ ಎಂದಿನಂತೆ ನಡೆಯುವುದಕ್ಕೆ ಅಕ್ಕನ ಒಪ್ಪಿಗೆಯಾಗ ಲಿಲ್ಲ. "ಅಲ್ಲಿ ಇಲ್ಲಿ ಯಾಕೆ ಅಲೆಯಬೇಕು. ಇಲ್ಲೇ ಕುಳಿತುಕೊಳ್ಳೋಣ" ಅಂದಳು. ಹಾಗೆ ಮಾಡಿದೆವು. ಮೂರ್ತಿಯು ಮರಳಿನಲ್ಲಿ ಬಾವಿ ತೋಡುವುದಕ್ಕೆ, 'ಗಂಗಾನದಿ'ಯನ್ನು ಮಾಡುವುದಕ್ಕೆ, ಕೋಟೆಯನ್ನು ಕಟ್ಟುವುದಕ್ಕೆ ಹೊರಟ. ಹೇಮಲತೆಯನ್ನೂ ಜೊತೆಗೆ ಕರೆದ. ಆದರೆ ಅಕ್ಕನು "ಅವಳಿಂದ ನಾವು ಇಲ್ಲಿಯವರೆಗೂ ಮಣ್ಣನ್ನು ಮುಟ್ಟಿಸಿಲ್ಲ. ಕೊಳೆಯೆನ್ನುವುದನ್ನೇ ಅವಳು ಕಾಣಳು" ಎಂದಳು. ನಾವು "ಮರಳೇನು ಕೊಳೆಯಾಗುವುದಿಲ್ಲ, ಬಿಡಬಹುದು" ಎಂದು ಹಲವು ಬಾರಿ ಹೇಳಿದ ಮೇಲೆ ತನ್ನ ತೊಡೆಯಿಂದ ಇಳಿಸಿ ಹತ್ತಿರದಲ್ಲೇ ಮರಳಿನಮೇಲೆ ಕೂರಿಸಿ ದಳು. ಮಗುವು ಮರಳಿಗಾಗಿಯೇ ಹುಟ್ಟಿದ್ದಷ್ಟು ಸಡಗರ ಸಲಿಗೆಯಿಂದ ಆಡಲು ಮೊದಲು ಮಾಡಿತು. ಅಕ್ಕನು "ಅವಳಿಗೆ ಆಶ್ಚರ್ಯವಾಗಿದೆ. ಎಂದೂ ಮಣ್ಣಿಗೆ ಹೋದರೆ ಕೂಗಾಡುವಳು ಇಂದೇನು ಸುಮ್ಮನಿದ್ದಾಳಲ್ಲ ಅಂತ" ಅಂದಳು. ಅಲ್ಲೂ ಅಕ್ಕನ ಮಗಳ ಸಂಸಾರದ ನವೀನತೆಯನ್ನೇ ಕೇಳಿದೆವು. ಮಗುವಿನ ಪ್ರಶಂಸೆಯು ಮಧ್ಯದಲ್ಲಿ ಬೆರೆದಿರುತ್ತಿತ್ತು. "ಹೇಮು, ಅಪ್ಪ ಹೇಗೆ ಯೋಚಿಸುತ್ತಾರೆ, ತೋರಿಸು" ಎಂದರೆ "ಅವರು ಯೋಚಿಸುವ ಹಾಗೆಯೇ ತಾನೂ ತಲೆಗೆ ಬೆರಳನ್ನಿಟ್ಟುಕೊಂಡು ತೋರಿಸುತ್ತಾಳೆ. ಎಲ್ಲವೂ ಮೇಲ್ತರಹದ ಆಟವೆ" ಅಂದಳು. ಹೇಮು ವಿಗೆ ನಾಟಕವಾಡಲು ಮನಸ್ಸು ಬರಲಿಲ್ಲ. ಸ್ವಲ್ಪ ಹೊತ್ತಿನಲ್ಲಿಯೇ ಎಳನೀರಿನವನು ಬಂದ. "ಕೊಳ್ಳೋಣವೆ?" ಎಂದು ಕೇಳಿದೆ. ಎಲ್ಲರೂ ಕುಡಿದೆವು. "ಮಗುವಿಗೆ?" ಎಂದು ನಾನು ಕೇಳಿದೆ. ಅದಕ್ಕೆ ಅವಳು "ಅವಳಿಗೇ? ಏನು ಎಳನೀರೆ? ಗಂಟಲು ಕಟ್ಟಿಕೊಂಡೀತು. ಹೇಮುಗೆ ಸೋಕಿಸುವುದಕ್ಕೆ ಆಗುತ್ತದೆಯೆ?" ಅಂದಳು. ಅನಂತರ ಗಿರಿಗಟ್ಟಿ

ಯುವನು ಬಂದ. ಮೂರ್ತಿಗೆ ಮತ್ತು ಹೇಮುಗೆ ಒಂದೊಂದನ್ನು ಕೊಂಡಿದ್ದಾಯಿತು. ಸಂಜೆ ಬಹಳ ಸುಂದರವೂ ಮನೋಹರವೂ ಆಗಿದ್ದಿತು. ಆದಷ್ಟು ಕಾಲವನ್ನು ಕಳೆಯಬೇಕೆಂದು ನನಗೆ ಅಭಿಲಾಷೆ. ಆದರೆ ಸ್ವಲ್ಪ ಹೊತ್ತಿನಲ್ಲಿಯೇ ಅಕ್ಕನು "ಹೊತ್ತಾಯಿತು ನಮ್ಮ ಮನೆಯಲ್ಲಿ ಹೊತ್ತು ಗೊತ್ತಿನ ಚಿಂತೆ ಬಹಳ. ಇಷ್ಟಕ್ಕೂ ಇಲ್ಲೇನಿದೆ? ನೋಡಿದ್ದು ಆಯಿತಲ್ಲ" ಅಂದಳು. ಹೊರಟೆವು

ಅಕ್ಕನನ್ನು ಊಟಕ್ಕೆಬ್ಬಿಸಲು ಹೆಚ್ಚು ಒತ್ತಾಯವು ಬೇಕಾಗಲಿಲ್ಲ. ಮೊದಲು ಹೇಮುಲತೆಗೆ ಅವಳೇ ಉಣಿಸಿದಳು. ಅನ್ನವನ್ನು ಬಡಿಸಿದಾಗ "ಇಲ್ಲಿ ಇನ್ನೂ ಒಳ್ಳೆಯ ಅಕ್ಕಿ ಸಿಕ್ಕುವುದಿಲ್ಲವೆ? 'ರೇಷನಿಂಗಿ'ನ 'ಫಸ್ಟ್ ಕ್ಲಾಸ'ನ್ನೇ ತರಬೇಕು. ಬಾಕಿಯದೆಲ್ಲ ಒರಟು, ಕಸ. ಇದನ್ನು ಚೆನ್ನಾಗಿ ಕುಟ್ಟಿಸಿದರೆ ಬೆಳ್ಳಗಾಗುತ್ತದೆ. ಮೃದುವಾಗುತ್ತದೆ. ಹೇಮುವಿಗೆ ಕಿವಿಚಿಯೇ ತಿನ್ನಿಸಬೇಕು" ಎಂದಳು. ತುಪ್ಪ ಹಾಕಿದಾಗ "ಇದೇನು ಎಲ್ಲಿಯ ಬೆಣ್ಣೆಯದು?" ಎಂದು ಕೇಳಿದಳು. ನಾನು "ಮೈಸೂರು ಅಂಗಡಿಯದು—ನಮ್ಮ ಕಡೆಯದು" ಅಂದೆ. ಅದಕ್ಕೆ ಅವಳು "ಹಾಗಾದರೆ ಹೊರಗಿನದೋ? ಮನೆ ಬೆಣ್ಣೆಯಲ್ಲ. ಹೇಮುಗೆ ಮನೆಯಲ್ಲಿ ಕಡೆದ ಬೆಣ್ಣೆಯನ್ನಲ್ಲದೆ ಬೇರೆ ಹಾಕುವುದಿಲ್ಲ. ಇರಲಿ ಈ ದಿನಕ್ಕೆ" ಅಂದಳು. ಮೊಸರನ್ನು ಬಡಿಸಿದಾಗ ಕೊಂಚವನ್ನು ತೆಗೆದು ಮೂಸಿ ನೋಡಿ "ಮೊಸರು ನಿನ್ನೆ ಹೆಪ್ಪು ಹಾಕಿದ ಹಾಗಿದೆ. ಸ್ವಲ್ಪ ಹುಳಿ ವಾಸನೆ ಬರುತ್ತಿದೆ. ಹೇಮುಗೆ ನಾವು ಮಧ್ಯಾಹ್ನ ಹೆಪ್ಪು ಹಾಕಿ ರಾತ್ರಿ ಉಪಯೋಗಿಸುತ್ತೇವೆ. ಹೋಗಲಿ. ಕೊಂಚ ಹಾಲನ್ನೇ ಹಾಕಿಬಿಡು" ಅಂದಳು. "ತಣ್ಣೀರನ್ನು ಮುಟ್ಟಿಸಿದರೆ ಅಳುತ್ತಾಳೆ. ಕೊಂಚ ನೀರನ್ನು ಕಾಯಿಸು" ಎಂದು ನೀರು ಕಾಯ್ದ ಮೇಲೆ ಮಗುವಿಗೆ ಕೈತೊಳೆಸಿದಳು. ಅಕ್ಕನ ಊಟವೂ ಮುಗಿಯಿತು. ಅಕ್ಕನು ತನ್ನ ಚಟ್ನಿಪುಡಿಯನ್ನು ಹೊಗಳಿದಳೆಂದು ನನ್ನವಳು ಹಿಗ್ಗಿ ಧಾರಾಳವಾಗಿ ಬಡಿಸಿದಳು.

ಸಾಂಟಾಕ್ರೂಸಿನಲ್ಲಿ ಒಳ್ಳೆಯ ಹೂವು ಸಿಕ್ಕುವುದು ಕಷ್ಟ. ಸಿಕ್ಕಿದರೂ ಬಹಳ ತುಟ್ಟಿ. ಆದರೂ ಅಷ್ಟು ಹೂ ತರಿಸಿದ್ದೆವು. ನಮ್ಮ ಮನೆಗೆ

ತೆಂಗಿನಕಾಯಿಯನ್ನೇ ನಾವು ತರುವುದಿಲ್ಲವಾದರೂ ಅಕ್ಕನಿಗೆ ಇಟ್ಟು ಕೊಡಲು ಒಂದನ್ನು ತರಿಸಿದ್ದೆವು. ಮನೆಯಲ್ಲಿ ತಾಂಬೂಲದ ಪದ್ಧತಿ ಇಲ್ಲವಾದರೂ ಎಲೆ, ಬಣ್ಣಕಟ್ಟಿದ ಅಡಕೆ ಸುಣ್ಣಗಳು ಹಾಜರಿದ್ದುವು.

ಅಕ್ಕನು ಕೋಣೆಯಲ್ಲಿ ತಾಂಬೂಲವನ್ನು ಸವಿದಮೇಲೆ ನಾನು ಹಾಲಿಗೆ ಬಂದೆ. ನಮ್ಮ ಮನೆಯವಳು ತನ್ನ ಅತ್ತಿಗೆಗೆ 'ಕುಂಕುಮ' ವನ್ನು ಕೊಡಲು ಅಣಿಮಾಡುತ್ತಿದ್ದಳು. ನಾನು ಅಕ್ಕನನ್ನು ಸ್ಟೇಷನ್ನಿನ ವರೆಗೆ ಕಳುಹಿಸಲು ಬಟ್ಟೆ ಹಾಕಿಕೊಳ್ಳುತ್ತಿರುವಾಗ ನಮ್ಮವಳು ಬಂದು ಮೆಲುದನಿಯಿಂದ "ಅವರಿಗೆ ಒಂದು ನೂರು ರೂಪಾಯಿ ಬೇಕಂತೆ ಇದ್ದರೆ, ಕಡೆಗೆ ಎಪ್ಪತ್ತಾದರೂ ಅಗತ್ಯವಂತೆ. ಬಹಳ ಸಮಯ ಅಂದರು. ಮಂಗಳವಾರ ಕೊಟ್ಟುಬಿಡುತ್ತಾರಂತೆ" ಎಂದು ಹೇಳಿದಳು. ನನಗೆ ಕೊಂಚ ಆಶ್ಚರ್ಯವಾಯಿತೆಂದು ಹೇಳಬೇಕಾಗಿಲ್ಲ. ಆದರೆ ಮರುಕ್ಷಣ ದಲ್ಲಿಯೇ 'ಎಂತಹವರಿಗಾದರೂ ಒಂದೊಂದು ವೇಳೆ ಬಿಕ್ಕಟ್ಟು ಬರು ತ್ತದೆ' ಅಂದುಕೊಂಡೆ. ನಿನ್ನೆ ಬಂದ ಸಂಬಳ ಇನ್ನೂ ಖರ್ಚಾಗಿರಲಿಲ್ಲ. ಕೊಟ್ಟರೇನು. ಇಷ್ಟಕ್ಕೂ ಮಂಗಳವಾರ ವಾಪಸು ಕೊಡುವುದಿಲ್ಲವೇ? ಮನೆ ಬಾಡಿಗೆ, ಹಾಲಿನ ಖರ್ಚು ಮತ್ತೆ ಒಂದೆರಡು ಬಾಬುಗಳಿಗೆ ಕೊಡು ವುದನ್ನು ಎರಡು ದಿನ ತಡೆದರಾಯಿತು. ಸರಿ, ಎಪ್ಪತ್ತು ಏಕೆ, ನೂರನ್ನೇ ಕೊಟ್ಟುಬಿಡುವುದು'

ಅಕ್ಕನಿಗೆ ನೂರು ರೂಪಾಯನ್ನು ಕೊಟ್ಟೆ. ಅವಳು "ದೀಪಾವಳಿ ಬಂದಿತು. ಮಗಳು ಹೊಸ ಸೀರೆಯನ್ನು ತರಲೇಬೇಕೆಂದು ಹಟ ಹಿಡಿದಿ ದ್ದಾಳೆ. ಉಡುಗೊರೆಯನ್ನು ಕೊಡದಿದ್ದರೆ ಅವಳ ಮನೆಯವರೂ ಏನಾದರೂ ತಿಳಿದುಕೊಳ್ಳುತ್ತಾರೆ. ನನಗೆ ದುಡ್ಡು ಮಂಗಳವಾರ ಬರುತ್ತದೆ. ಕೊಟ್ಟು ಬಿಡುತ್ತೇನೆ" ಅಂದಳು. ನಾನು "ಆಗಬಹುದು. ಹಾಗೇ ಆಗಲಿ, ಅದಕ್ಕೇನು" ಅಂದೆ.

ಅವಳು ಹೊರಡುವಾಗ ನಮ್ಮವಳಿಗೆ "ನೀನು ತಪ್ಪದೆ ಮಂಗಳ ವಾರ—'ಅರೋರ ಟಾಕಿ' ಬಳಿ. ಹೆಸರು 'ದೇವ ಸದನ'— ತಪ್ಪದೆ ಬರಬಹುದು" ಎಂದಳು. ನಾನು "ನನಗೆ ಕೆಲಸವಿರುತ್ತದೆ. ಅವಳು ಬರುತ್ತಾಳೆ" ಎಂದೆ. ಅವಳು "ಹಾಗೇ ಆಗಲಿ" ಎಂದಳು.

ನಾನು ಅಕ್ಕನಿಗೆ 'ಸೆಕೆಂಡ್ ಕ್ಲಾಸು' ಟಿಕೀಟನ್ನು ಕೊಂಡು ಅವಳನ ರೈಲಿನಲ್ಲಿ ಕೂರಿಸಿ ಬಂದೆ.

ನಾನು ಮನೆಗೆ ಬಂದಾಗಲೇ "ನಾನು ನನ್ನ ಮಿತಿಮೀರಿ ನಡೆ ಕೊಳ್ಳಲಿಲ್ಲವೆ?" ಎನ್ನುವ ಪ್ರಶ್ನೆ ಬಾಧಿಸುತ್ತಿತ್ತು. ಆದುದರಿಂದ ನವ ವಳಿಗೆ "ಹೇಗಾದರೂ ಆಗಲಿ. ನೀನು ಮಂಗಳವಾರ ಹೋಗುವುದನ ತಪ್ಪಬೇಡ, ದುಡ್ಡನ್ನು ತೆಗೆದುಕೊಂಡು ಬಾ" ಎಂದೆ. ಅದಕ್ಕೆ ಅವ "ಇದೇನು ನಿಮ್ಮ ಅಕ್ಕನ ವಿಷಯದಲ್ಲಿ ಅನುಮಾನವೇ?" ಎಂದ ಕುಚೋದ್ಯ ಮಾಡಿದಳು. ನಾನು "ಛೀ ಹಾಗಲ್ಲ. ಅವರಿಗೇನು ಕಡವೆ ನೋಡಲಿಲ್ಲವೆ? ಕೊಟ್ಟು ಬಿಡುತ್ತಾರೆ. ಹೇಗಾದರೂ ನೂರು ರೂಪಾಯ ಬಹಳ ಅಲ್ಲವೆ? ಅದಕ್ಕೆ" ಅಂದೆ. ಇಬ್ಬರೂ ನಕ್ಕೆವು.

ಮಂಗಳವಾರ ನಾನು ಮನೆಗೆ ಬಂದಾಗ ನಮ್ಮವಳು ಮಾತುಂಗ ಹೋಗಿದ್ದಳು. ಹೊತ್ತಾದರೂ ಬಂದಿರಲಿಲ್ಲ. ಅವಳ ಬರುವಿಕೆಯನ್ನೆ ಎದುರುನೋಡುತ್ತ ಕುಳಿತಿದ್ದ ನಾನು, ಅವಳು ಒಳಗೆ ಕಾಲಿಟ್ಟೊಡ "ಓಹೊ. ಇದೇನು ಇಷ್ಟು ಹೊತ್ತು? ಅತ್ತಿಗೆಯ ಮನೆಯಲ್ಲಿ ಪಟ್ಟಾ ಉಪಚಾರ ಮಾಡಿಸಿಕೊಳ್ಳುತ್ತ ಕುಳಿತುಬಿಟ್ಟು ನನ್ನನ್ನೂ ಮರೆತುಬಿಟ್ಟೆ ಅಂತ ಕಾಣುತ್ತೆ" ಎಂದೆ. ಅವಳು "ಹುಂ. ಸಂಶಯವೇನು? ಅಂದಳು.

"ಅಲ್ಲಿ ಏನೇನನ್ನು ಹೊಡೆದೆ?

"ಹೋಟೇಲಿನ ಮಸಾಲೆದೋಸೆ, ಜಿಲೇಬಿ. . ."

"ನಿಜವಾಗಿ?"

"ಏಕೆ?"

"ಹೋಟಲಿನ ತಿಂಡಿಯೆ? ಮನೆಯದಲ್ಲವೆ?"

"ಹೂಂ. ಯಾರನ್ನೋ ಕಳಿಸಿ ತರಿಸಿದರು."

"ಛೀ. ಅದು ಎಂತಹುದೋ ಏನೋ. ನೀನು ಯಾತಕ್ಕೆ ತಿಂದೆ?"

"ಎಲ್ಲೋ ಸ್ವಲ್ಪ ಬಾಯಿಗೆ ಹಾಕಿಕೊಂಡೆ—ಸುಮ್ಮನೆ ಅವ ಮನಸ್ಸು ನೋಯದಿರಲಿ ಅಂತ."

"ಅದು ಅವರಿಗೆ ಹೇಗೆ ಒಗ್ಗೀತು!"

"ಒಗ್ಗದೆ ಏನು? ಆ ಸಣ್ಣ ಮಗುವೂ ಸಹಿತ ಬಾರಿಸಿತು"

"ಏನು ಹೇಮಲತೆಯೆ?

"ಹುಂ"

"ಓ... ಮನೆ ಗಿನೆ ಹೇಗಿದೆ, ಹೇಗೆ ಇಟ್ಟುಕೊಂಡಿದ್ದಾರೆ?"

"ಇದೆ ಅಷ್ಟರಲ್ಲೇ. ಎಷ್ಟು ಕಡಿಮೆ ಹೇಳಿದರೆ ಅಷ್ಟು ಒಳ್ಳೆಯದು."

"ನಿಜವಾಗಿ?... ಅಕ್ಕನ ಮಗಳ ವಿಷಯವೇನು?"

"ಆ ಹುಡುಗಿಯೇನೋ ಸ್ವಲ್ಪ ಬೆಡಗುಗಾತಿಯೇ, ದೀಪಾವಳಿಯ ಹೊಸ ಸೀರೆಯನ್ನು ಉಟ್ಟಿದ್ದಳು.—ಜರತಾರಿ ಸೀರೆ."

"ಹಾಗೆ! ಸರಿ ದುಡ್ಡನ್ನು ವಾಪಸು ತಂದೆಯಾ?"

"ಕೊಟ್ಟವರು ಯಾರು?"

"ಹಾಗೆಂದರೆ? ಅಕ್ಕನು ಏನನ್ನೂ ಹೇಳಲಿಲ್ಲವೇ?"

"ಆ ಮಾತೇ ಇಲ್ಲ"

ನಾನು ಮೂಕನಾದೆ. ಕಡೆಗೆ "ಇನ್ನು ಕೊಂಚ ದಿನಕ್ಕೆ ಅವಳಾಗಿಯೇ ಕಳುಹಿಸಬಹುದು" ಎಂದುಕೊಂಡು ಸುಮ್ಮನಾದೆ. ನಮ್ಮವಳೂ "ಅದನ್ನು ಇಟ್ಟುಕೊಳ್ಳುತ್ತಾರೆಯೆ? ಕಳುಹಿಸುತ್ತಾರೆ" ಅಂದಳು.

ಒಂದು ತಿಂಗಳಾಯಿತು. ಎರಡಾಯಿತು. ಮೂರು. ದುಡ್ಡು ಬರಲಿಲ್ಲ. ಅಕ್ಕನೂ ಮತ್ತೆ ಬರಲಿಲ್ಲ. ನನ್ನ ಸಲಹೆಯಂತೆ ನಮ್ಮವಳು ವಿಷಯವನ್ನು ಸೂಚಿಸಿ ಒಂದು ಚೀಟಿಯನ್ನು ಬರೆದು ಕಳುಹಿಸಿದಳು. ಉತ್ತರ.—"ಈ ತಿಂಗಳ ಕಡೆಗೆ ಖಂಡಿತ ಕಳುಹಿಸುತ್ತೇನೆ. ಮನಸ್ಸಿಗೆ ಏನೂ ತಿಳಿದುಕೊಳ್ಳಬೇಡ."

ಮತ್ತೆರಡು ತಿಂಗಳು ಸಂದುವು. ಒಂದು ದಿನ ಅವರ ಮನೆಯ ಆಳು ದಾರಿಯಲ್ಲಿ ಸಿಕ್ಕಿ ಅಕ್ಕನು ಮದರಾಸಿಗೆ ಹೋಗಿರುವಳೆಂದೂ ಪ್ರಾಯಶಃ ಸದ್ಯಕ್ಕೆ ಬರಲಾರಳೆಂದೂ ಹೇಳಿದ. ನಮ್ಮ ಆಳನ್ನು ಮಾತುಂಗಕ್ಕೆ ಕಳುಹಿಸಿ ಮದರಾಸಿನ ವಿಳಾಸವನ್ನು ತಿಳಿದುಕೊಂಡು ಅಲ್ಲಿಗೂ ಬರೆದೆವು. ಉತ್ತರವೇ ಬರಲಿಲ್ಲ.

ಈ ದಿನ ಯಾರೊ ಒಬ್ಬರು ಸಾಲವನ್ನು ಕೇಳಲು ಬಂದಿದ್ದರು. ಅವರಿಗೆ ನಾನು 'ಇಲ್ಲ' ಎಂದೆ. ಅವರು ಹೋದ ಮೇಲೆ ನಮ್ಮವಳು

ನನ್ನ ನಿರ್ದಾಕ್ಷಿಣ್ಯವನ್ನು ಖಂಡಿಸಿದಳು. ಅದಕ್ಕೆ ನಾನು "ನಾನು 'ಪೊಲೋನಿಯಸ್ಸಿ'ನ ಬುದ್ಧಿವಾದವನ್ನು ಅನುಸರಿಸುವೆನೆಂದು ಶಪಥ ಮಾಡಿದ್ದೇನೆ. ಸಾಲ ಕೊಡುವವನೂ, ತರುವವನೂ ಅಲ್ಲ. ನನಗೆ ಚೆನ್ನಾಗಿ ಅನುಭವ ಬಂದಿದೆ" ಎಂದೆ. ತಕ್ಷಣವೇ ನಮ್ಮ ತಂದೆಯವರ ಕಾಗದವು ನೆನಪಿಗೆ ಬಂದಿತು. "ನೀವು ಇನ್ನೂ ಚಿಕ್ಕವರು, ಹೊಸಬರು. ಅನುಭವ ಸಾಲದೆ....ನಾಗಮ್ಮನಿಂದ ಅಷ್ಟು ಅನುಭವದ ಸಹಾಯ ವನ್ನು ಪಡೆಯಬಹುದು ..."

ನಾನು ಗಟ್ಟಿಯಾಗಿ ಹೇಳಿದೆ "ನಿಜವಾಗಿ, ನಿಜವಾಗಿ ಅನುಭವ ವನ್ನು ಕಲಿಸಿದಳು."

"ಏನು. ಯಾರು ?" ನಮ್ಮವಳು ಕೇಳದಳು.

"ಇನ್ನು ಯಾರು ? ಅಕ್ಕ !"

"ಸರಿ ಬಿಡಿ. ಹೋದುದಕ್ಕೆ ಯಾಕೆ ಮತ್ತೆ ಮತ್ತೆ ಒದ್ದಾಡು ತ್ತೀರಿ ? ನಿಮ್ಮ ಸೊಸೆಗೊಂದು ಉಡುಗೊರೆ ಆಯಿತು" ಎಂದು ವ್ಯಂಗ್ಯ ವಾಗಿ ನಕ್ಕಳು.

"ಅಹಹ ! ಸೊಸೆಗೊಂದು ಉಡುಗೊರೆ !" ಎಂದು ಹೊಳಲು ಗೊಟ್ಟು ನಾನೂ ನಕ್ಕೆನು—ನನ್ನದು ಸಂಕಟದ ನಗು.

# ಧರ್ಮಕೊಂಡದ ಕತೆ

ಆ ರಾತ್ರಿ ಅಮಾವಾಸ್ಯೆಯ ಕತ್ತಲು ಹೊರಗೆ ಕವಿದಿತ್ತು. ಎಲ್ಲೆಲ್ಲೂ ನಿಶ್ಶಬ್ದವಾಗಿತ್ತು. ಎಲ್ಲೋ ಒಂದೊಂದು ನಾಯಿ ಬೊಗಳುತ್ತಿದ್ದುದು ಮಾತ್ರ ಆಗಾಗ ಕೇಳಿಸುತ್ತಿತ್ತು. ಹಳ್ಳಿಗೆ ಹಳ್ಳಿಯೇ ವಿಶ್ರಾಂತಿಯಲ್ಲಿತ್ತು. ಗಂಟೆ ಹನ್ನೊಂದರ ಮೇಲಾಗಿತ್ತು. ಧರ್ಮಕೊಂಡದ ಶಾನುಭೋಗ ಸೂರಪ್ಪನ ಮನೆಯಲ್ಲೂ, ಅವನ ಹೊರತು ಎಲ್ಲರೂ ಮಲಗಿದ್ದರು. ಆದರೆ ಅವನು ತನ್ನ ಕೋಣೆಯಲ್ಲಿ ಲಾಟೀನಿನ ದೀಪದ ಮುಂದೆ, ದಪ್ಪ ಪುಸ್ತಕದ ದೊಡ್ಡ ಹಾಳೆಗಳನ್ನು ಮೆಲ್ಲಗೆ ತಿರುವಿಹಾಕುತ್ತ ಲೆಕ್ಕವನ್ನು ಬರೆಯುತ್ತಿದ್ದನು. ಜಮಾಬಂದಿ ಹತ್ತಿರವಾಗಿತ್ತು. ಲೆಕ್ಕವೆಲ್ಲ ಬೇಗ ಮುಗಿಯಬೇಕಾಗಿತ್ತು. ಸೂರಪ್ಪನು ಬಹಳ ಮುತುವರ್ಜಿವಹಿಸಿ ಕೆಲಸ ಮಾಡುತ್ತಿದ್ದನು. ಲೆಕ್ಕವು ಅಲ್ಲಲ್ಲಿ ಗಂಟಾದಾಗ, ಕೈ ಬೆರಳನ್ನು ತಲೆಯ ಕೂದಲಿನೊಳಕ್ಕೆ ಹಾಕಿ ಕೆರೆಯುತ್ತಿದ್ದನು, ಮತ್ತೆ ಮುಂದುವರೆಯು ತ್ತಿದ್ದನು. ಹಜಾರದ ದೊಡ್ಡ ಗಡಿಯಾರವು 'ಢಾಂ' ಎಂದು ಅರ್ಧ ಗಂಟೆಯನ್ನು ಹೊಡೆಯಿತು ಸೂರಪ್ಪನು ಅದನ್ನು ಗಣನೆಗೆ ತಾರದೆ ಇನ್ನೂ ಬರೆಯುತ್ತ ತನ್ನ ಕೆಲಸವನ್ನು ಮುಗಿಸಲು ಮಹಾಪ್ರಯತ್ನ ಮಾಡುತ್ತಿದ್ದನು. ಆದರೂ ಅವನ ಕಣ್ಣುಗಳು ಹಾಗೇ ಮುಚ್ಚಿಕೊಳ್ಳಲು ಒದ್ದಾಡುತ್ತಿದ್ದುವು ಒಂದೆರಡು ಬಾರಿ ತೂಕಡಿಕೆಯೂ ಬಂದಿದ್ದಿತು.

"ಬಾಗಿಲು!" ಸೂರಪ್ಪನಿಗೆ ಕನಸಿನಲ್ಲಿ ಯಾರೋ ಮೆಲ್ಲನೆಯ ಧ್ವನಿಯಲ್ಲಿ ಕೂಗಿದಂತಾಯಿತು. ಅರ್ಧ ಮುಚ್ಚಿದ ಕಣ್ಣುಗಳನ್ನು ತೆರೆದು, ಧ್ವನಿಯನ್ನು ಆಲಿಸಿ ಮತ್ತೆ ಕೇಳದೆ, ಅದೆಲ್ಲೊ ತನ್ನ ಭ್ರಾಂತಿ ಯೆಂದುಕೊಂಡು ಬರೆವಣಿಗೆಗೆ ಗಮನವನ್ನು ತಿರುಗಿಸಿದನು.

"ಬಾಗಿಲು!" ಮತ್ತೆ ಅದೇ ಒಳಧ್ವನಿಯು ಈಗ ಸ್ಪಷ್ಟವಾಗಿಯೆ ಕೇಳಿಸಿತು. ಹುಂ. ಅದರಲ್ಲೇನು ತಪ್ಪಿರಲಿಲ್ಲ; ಈ ಬಾರಿ ಅವನು ಅರೆನಿದ್ರಿಸುತ್ತಲೂ ಇರಲಿಲ್ಲ. ಸೂರಪ್ಪನು ದಿಗ್ಗನೆದ್ದು ಲಾಟೀನನ್ನು ಹಿಡಿದುಕೊಂಡು, ಸದ್ದಿಲ್ಲದಂತೆ ಮುಂಗಾಲಿನಮೇಲೆ ನಡೆಯುತ್ತ ಹಜಾರ ವನ್ನು ದಾಟ ಬೀದಿಯ ಬಾಗಿಲಿಗೆ ಬಂದು, ಅಗಳಿಗೆ ಕೈಹಾಕಿದನು.

ಆ ಕ್ಷಣದಲ್ಲಿ ಅವನಿಗೆ ಕೈಬಳೆಗಳ ಸದ್ದು ಹೊರಗೆ ಕೇಳಿಸಿತು. ಸೂರಪ್ಪನು ಚಕಿತನಾಗಿ ಸರ್‍ರನೆ ಅಗಳಿಯನ್ನೆಳೆದು ಬಾಗಿಲನ್ನು ತೆರೆದನು. ಲಾಟೀನಿನ ಮಂಕುಬೆಳಕಿನಲ್ಲಿ ಅವನಿಗೆ ಅಲ್ಲೇ ಹೊಸಲಿನ ಬಳಿ ಒಂದು ಸ್ತ್ರೀವ್ಯಕ್ತಿ ಕಾಣಿಸಿತು. ಕಾಂದಹಾರಿ ಹೆಂಗುಸು! ಚೀಟಿನ ಪರಕಾರ, ನೀಲಿಯ ರೇಷ್ಮೆ ಅಂಗಿ ಹಾಕಿದ್ದಳು. ತಲೆಗೆ ಕೆಂಪು ಚೌಕವನ್ನು ಕಟ್ಟಿದ್ದಳು. 'ಕಾರಬಾ' ಮಣಿಯ ಕೊರಳಸರವು ಎದೆಯಮೇಲೂ ಬಿದ್ದಿದ್ದಿತು.

ಈ ದೃಶ್ಯವನ್ನು ಕಂಡ ಕ್ಷಣದಲ್ಲಿ ಸೂರಪ್ಪನು ಭ್ರಾಂತನಾಗಿ ಕಲ್ಲಿನ ಪ್ರತಿಮೆಯಂತಾದನು ಆದರೆ ಅದೇ ಕ್ಷಣದಲ್ಲಿ ಅವಳು "ದೇವರೇ!" ಎಂದು ಪಿಸುಮಾತಿನಲ್ಲಿ ಗಟ್ಟಿಯಾಗಿ ಹೇಳಿ, ಕೆಳಗೆ ಕುಸಿದುಬಿದ್ದು ಅವನ ಕಾಲುಗಳನ್ನು ತನ್ನೆರಡು ಕೈಗಳಿಂದಲೂ ಬಾಚಿ ತಬ್ಬಿಕೊಂಡಳು. ಆ ಮಾತು, ಸ್ವರಗಳನ್ನು ಕೇಳಿದ ಸೂರಪ್ಪನು ಆಶ್ಚರ್ಯ, ಆನಂದ— ಆದರೂ ಕೊಂಚ ಅನುಮಾನದಿಂದ ತಟ್ಟನೆ ಲಾಟೀನನ್ನು ಅವಳ ಮುಖದ ಬಳಿಗೆ ತಂದು ನೋಡಿದನು. ಅವಳ ಅರೆಯೆತ್ತಿದ ಕಣ್ಣೀರಿನ ದೈನ್ಯದ ಮುಖವು ಕಂಡಿತು.

"ದೇವು!" ಸೂರಪ್ಪನು ಲಾಟೀನನ್ನು ಕೆಳಗೆ ಕುಕ್ಕಿ, ತಾನು ಬಗ್ಗಿ ಆ ಹೆಂಗುಸನ್ನು ಎರಡು ಕೈಗಳಿಂದಲೂ ಹಿಡಿದೆತ್ತಿ ತಬ್ಬಿಕೊಂಡು "ದೇವು! ದೇವು! ನನ್ನ ಚಿನ್ನ!" ಎನ್ನುತ್ತ ಅವಳ ತಲೆಯ ಚೌಕವನ್ನು ತೆಗೆದು ಕುರುಳನ್ನು ನೇವರಿಸಿದನು. ಅವಳಾದರೋ ಏನು ಮಾತನ್ನೂ ಆಡಲಾರದೆ ಅವನ ಭುಜವನ್ನು ತೊಯಿಸಿದಳು.

ಸೂರಪ್ಪನ ಆನಂದವು ಉಕ್ಕಿ ಸುರಿಯಿತು. ಅವನು ಆತುರದಿಂದ ಅಲ್ಲಿಂದಲೇ ಗಟ್ಟಿಯಾಗಿ "ಅಮ್ಮ! ದೇವು ಬಂದಿದಾಳೆ! ಸಿಕ್ಕಿದಳು!" ಎಂದು ಹಜಾರದ ಕಡೆಗೆ ಕೂಗಿದನು. ಒಳಗೆ ಕೆಮ್ಮಿದ ಶಬ್ದ ಕೇಳಿಸಿತು. ಗಂಡ-ಹೆಂಡಿರು ಬೇರೆಯಾದರು. ಹುಡುಗಿಯು ಹೆಜ್ಜೆಯನ್ನು ಹಿಂದಿಡುವಾಗ ಕುಂಟುತ್ತ "ಹಾ!" ಎಂದು ಕುಳಿತುಬಿಟ್ಟಳು. ಅವನು "ಏನಾಯ್ತು? ಏನಾಗಿದೆ?" ಎಂದು ಅವಳ ಕಾಲಿನ ಕಡೆಗೆ ನೋಡಿದನು. ಎರಡು ಪಾದಗಳೂ ಧೂಳಿನಿಂದ ಮುಚ್ಚಿದ್ದುವು. ದಪ್ಪವಾಗಿ ಬಾತುಕೊಂಡಿದ್ದುವು. ಎಡಗಾಲಿನಿಂದ ರಕ್ತವು ಸೋರುತ್ತಿತ್ತು.

ಇದನ್ನು ಕಂಡೊಡನೆ ಅವನು ತನ್ನ ಟವಲನ್ನು ಹರಿದು, ವರಾಂಡದಲ್ಲಿ ಹಸುವಿಗೆ ಇಟ್ಟಿದ್ದ ನೀರಿನಲ್ಲಿ ಆ ಚೂರನ್ನು ಒದ್ದೆಮಾಡಿ, ಅವಳ ಪಾದಕ್ಕೆ ಕಟ್ಟಿದನು.

ಇಷ್ಟರಲ್ಲಿ ಇಳಿವಯಸ್ಸಿನ ಒಬ್ಬಳು ಮುಡಿಹೆಂಗುಸು—ಸೂರಪ್ಪನ ತಾಯಿ ಗಂಗಮ್ಮನವರು—ತಡವರಿಸುತ್ತ ಹೊರಗೆ ಬಂದವರು, ಹುಡುಗಿಯ ಕಡೆಗೆ ನೋಡಿ ಅನುಮಾನದಿಂದ "ಇದೇನೋ ಮಗು! ದೇವಮ್ಮ.. " ಎಂದು ಹೇಳುವುದರಲ್ಲೇ ಸೂರಪ್ಪನು ಮಧ್ಯೆ ಬಾಯಿಹಾಕಿ "ಹು ಕಣಮ್ಮ, ಅವಳೆ" ಎಂದು ಹೇಳಿದನು ಅವರು ಬಗ್ಗಿ ನೋಡಿ ದೇವಮ್ಮನ ಮುಖವನ್ನು ಕಂಡು "ಇದೇನೆ ತಾಯಿ? ಎಲ್ಲಿ ಹೋಗಿದ್ದೆಯಮ್ಮಾ. ಇಷ್ಟು ದಿನ? ಏನು ವೇಷ, ಇದು?" ಎಂದು ಕೇಳಿದರು. ಸೂರಪ್ಪನಿಗೂ ಈಗ ಎಚ್ಚರವಾದಂತಾಗಿ, ಅವನೂ ಉತ್ತರವನ್ನು ನಿರೀಕ್ಷಿಸಿದನು ಆದರೆ ಈ ಪ್ರಶ್ನೆಗಳನ್ನು ಕೇಳಿದ ವೇವಮ್ಮನಿಗೆ ನೆನಪು ಕವಿದು ಬಂದು ಮತ್ತೆ ಕೊರಳು ಉಬ್ಬಿತು; ಮಾತು ಹೊರಡಲಿಲ್ಲ ಮತ್ತೆ ಅಳುವು ಒತ್ತಿ ಬಂದಿತು ಉತ್ತರಕ್ಕೆ ಬದಲಾಗಿ ಅತ್ತಳು. ಈಗ ಒಳಗಿನಿಂದ ಒಬ್ಬ ನಣ್ಣ ವಯಸ್ಸಿನ ಮುಡಿ ಹೆಂಗುಸು—ಸೂರಪ್ಪನ ಅಕ್ಕ, ಗುಂಡಮ್ಮ—ಒಳಗಿನಿಂದ ಬಂದು ನೋಡಿ "ದೇವಮ್ಮ!....ಹೀಗಿದಾಳಲ್ಲಮ್ಮಾ! ಏನಾಯ್ತು, ಇವಳಿಗೆ?" ಎಂದು ಕೇಳಿದಳು. ಸೂರಪ್ಪನೂ ಗಂಗಮ್ಮನವರೂ 'ಸ್ವಲ್ಪ ತಡೆದುಕೊ' ಎನ್ನುವಂತೆ ಕೈಸನ್ನೆ ಮಾಡಿದರು. ಇದೇ ಕ್ಷಣದಲ್ಲಿ ಒಳಗಿನಿಂದ "ಅಮ್ಮಾ!.... ಅಜ್ಜಿ!" ಎಂದು ಮಗುವಿನ ಧ್ವನಿಯು ಕೇಳಿಬಂದಿತು. ಇದನ್ನು ಕೇಳಿದೊಡನೆ ದೇವಮ್ಮನ ಅಳುವು ನಿಂತಿತು. ಅವಳು ತಟ್ಟನೆ ತಲೆಯನ್ನೆತ್ತಿ "ಅಪ್ಪಾ! ಚಂದೂ! ಬಾಮ್ಮಾ ಇಲ್ಲಿ! ಇಲ್ಲಿದೀನಿ" ಎಂದು ಏಳುವಂತೆ ಚಲಿಸಿದಳು. ಅಷ್ಟರಲ್ಲೇ ಎರಡು ವರ್ಷದ ಮಗುವು "ಅಮ್ಮಾ! ಅಮ್ಮಾ!" ಎನ್ನುತ್ತ ಕಣ್ಣುಜ್ಜಿಕೊಳ್ಳುತ್ತ, ಹೊಸಿಲನ್ನು ಎಡವಿಕೊಂಡು ಬೀಳುವುದನ್ನೂ ತಿಳಿಯದೆ, ತಪ್ಪುಹೆಜ್ಜೆ ಹಾಕುತ್ತ ಓಡಿಬಂದಿತು. ಆದರೆ ದೇವಮ್ಮನನ್ನು ಸಮೀಪಿಸಿದಾಗ ಅವಳ ಕಡೆಗೆ ದಿಟ್ಟಿಸಿನೋಡಿ, ಅನುಮಾನದಿಂದ ಅಜ್ಜಿಯ ಬಳಿಯಲ್ಲೇ ನಿಂತಿತು. ಅವಳು "ಚಂದು!

ಯಾಕಮ್ಮಾ? ಬಾ, ಕಂದ!" ಎಂದೊಡನೆ 'ಅಮ್ಮಾ!' ಎಂದು ಓಡಿ ಹೋಗಿ ಅವಳ ಕೊರಳನ್ನು ತನ್ನ ಪುಟ್ಟ ಕೈಗಳಿಂದ ಬಳಸಿ ಅಪ್ಪಿಕೊಂಡಿತು. ಅವಳೂ "ಚಿನ್ನ! ನನ್ನ ಚಿನ್ನ!" ಎನ್ನುತ್ತ ಮಗುವನ್ನು ಬಾಚಿ ತಬ್ಬಿಕೊಂಡು, ತನ್ನ ಕೆನ್ನೆಯನ್ನು ಅದರ ಕೆನ್ನೆಗೆ ಮತ್ತೆ ಮತ್ತೆ ಒತ್ತುತ್ತ ಅದರ ತಲೆ, ಮೈ, ಕೈ-ಕಾಲುಗಳನ್ನೆಲ್ಲ ಅಂಗೈಯಿಂದ ತಡವರಿಸಿದಳು.

ತಾಯಿ-ಮಕ್ಕಳ ಈ ಪುನರ್ಮಿಳನದ ಸೌಖ್ಯಕ್ಕೆ ಅಡ್ಡಿ ತರದಂತೆ ಯಾರೂ ಸ್ವಲ್ಪ ಹೊತ್ತು ಮಾತನಾಡಲಿಲ್ಲ. ಅನಂತರ ಗಂಗಮ್ಮನವರೇ ಮಾತನ್ನು ಮೊದಲು ಮಾಡಿದರು

"ದೇವಮ್ಮಾ, ನಿನಗಾಗಿ ಎಷ್ಟು ಹುಡುಕಿಸಿದನಮ್ಮ—ನಿನ್ನ ಗಂಡ ಸುತ್ತುಮುತ್ತಿನ ಹಳ್ಳಿಗೆಲ್ಲ ಜನ ಕಳುಹಿಸಿ ಹುಡುಕಿಸಿದ; ಹಳ್ಳಿಯ ಕೆರೆ–ಬಾವಿಗಳನ್ನೂ ಕೂಡ ಶೋಧಿಸಿ ನೋಡಿಸಿದ, ಪೋಲೀಸಿನೋರಿಗೂ ಸಮಾಚಾರ ಕೊಟ್ಟಿದ್ದಾಯ್ತು. ಇಷ್ಟಾದರೂ ನಿನ್ನ ಸುಳಿವೇ ತಿಳೀಲಿಲ್ಲ. ಆ ಸಂಜೆ ನೀನೀರು ತರೋದಕ್ಕೆ ಬಾವಿಗೆ ಹೋದಮೇಲೆ, ಮಾಯವಾದ ಹಾಗೇ ಆಗಿತ್ತಲ್ಲ. ನೀರು ತುಂಬಿದ ಕೊಡ ಕೂಡ ಬಾವಿಯ ಕಟ್ಟೇ ಮೇಲೇ ಇತ್ತು. ನೀನು ಎಲ್ಲಿಗೆ ಹೊರಟುಹೋಗಿದ್ದೆಯೆ, ತಾಯಿ?"

"ನಾನಾಗಿ ಎಲ್ಲಿಗೆ ಹೋಗಲಿ? ಏನುಕಾರಣ ಇತ್ತು?" ಅವಳು ನಿದಾನವಾಗಿ ಹೇಳಿದಳು.

"ಮತ್ತೆ?" ಸೂರಪ್ಪನು ಆತುರದಿಂದ ಕೇಳಿದನು.

"ಅಪಹರಿಸಿಕೊಂಡು—ಎಳೆದುಕೊಂಡು ಹೋದರು–ದುಷ್ಟರು!"

"ಹ್ಞ! ಯಾರು?"

"ಕಂದಾರಿಗಳು."

"ತೋಟದ ಹತ್ತಿರ ಬಿಡಾರ ಮಾಡಿದ್ದೋರು?"

"ಹುಂ" ದೇವಮ್ಮನು ತಲೆಯಾಡಿಸಿದಳು.

"ಪಾಪಿ ಮುಂಡೇ ಮಕ್ಕಳೇ! ಇವರಿಗೇನು ಬಂದಿತ್ತು ಹೊತ್ತು ಕಾಲ!" ಗಂಗಮ್ಮನವರು ಶಪಿಸಿದರು.

"ಅದು ಹೇಗೆ ಸಾಧ್ಯವಾಯ್ತು ಅಂತ. ಅವರ ಕೈಗೆ ಸಿಕ್ಕೋ ಅಷ್ಟು ಹತ್ತಿರ...." ಸೂರಪ್ಪನು ಅನುಮಾನಿಸಿದ.

"ನಾನು ಹೋಗಲಿಲ್ಲ. ಆಪೊತ್ತು ಸೀನೀರಿಗೆ ಪೋದಾಗ ಮುಚ್ಚಂಜೆಯಾಗಿತ್ತು. ನಾನು ಬೇಗ ಬೇಗ ಒಂದು ಕೊಡ ನೀರು ಸೇದಿಕೊಂಡು ಇನ್ನೇನು—ತಲೆಯಮೇಲೆ ಇಟ್ಕೊಕೋತಾ ಇದ್ದೆ. ಅಷ್ಟುಹೊತ್ತಿಗೆ ಒಬ್ಬ ಕಂದಾರಿ ಗಂಡುಸು ಅಲ್ಲಿಗೆ ಬಂದ. ಯುವುನಹಾಗಿದ್ದ. ನಂಗೆ ಭಯವಾಯ್ತು. ಕೊಡ ಅಲ್ಲೇ ಬಿಟ್ಟು ಓಡಿಬರೋಣ ಎನ್ನಿಸಿತು. ಆದರೆ ಕಾಲೇಬರಲಿಲ್ಲ. ಅವನು ಅಷ್ಟು ನೀರು ಕೇಳಿ, ತನ್ನ ದಪ್ಪ ರುಮಾಲನ್ನು ಬಿಚ್ಚಿ ಕೊಂಕುಳಿಗಿಟ್ಟುಕೊಂಡು ಮಂಡಿಯೂರಿ ಕುಳಿತ. ನಂಗೇನೂ ತೋಚದೆ ಹಾಗೇ ಕಟ್ಟೆಯ ಮೇಲಿನಿಂದ ಕೊಡ ಬಗ್ಗಿಸಿದೆ. ಸಾಕಾದ ಮೇಲೆ ಅವನು ಎದ್ದು ತನ್ನ ರುಮಾಲಿನಿಂದ ಗಡ್ಡ ಬಾಯಿ ಎಲ್ಲ ಒರಸಿಕೊಳ್ಳುತ್ತ, ಅತ್ತಿತ್ತ ತಿರುಗಿ ನೋಡಿ, ಯಾರನ್ನೂ ಕಾಣದೆ, ತಟ್ಟನೆ ಮುಂದೆ ನುಗ್ಗಿ, ತನ್ನ ರುಮಾಲನ್ನು ನನ್ನ ಬಾಯಿಗೆ ಬಿಗಿದ. ನನಗೆ ಕೂಗಿಕೊಳ್ಳಲಾಗಲಿಲ್ಲ. ಅಷ್ಟು ಒದ್ದಾಡಿದೆ. ಬಿಡಾರವನ್ನು ಸೇರಿದ ಕೆಲವು ನಿಮಿಷಗಳಲ್ಲೇ ಅವರ ಗುಂಪು ಪ್ರಯಾಣಕ್ಕೆ ಸಿದ್ಧವಾಗಿ ಹಳ್ಳಿಯನ್ನು ಬಿಟ್ಟಿತು."

"ಎಲ, ಎಲಾ! ಎಷ್ಟು ಬೇಗ! ನಾವು ಹುಡುಕೋದಕ್ಕೆ ಹೋಗುವ ಹೊತ್ತಿಗಾಗಲೇ ಅವರು ಎಲ್ಲಿಲ್ಲೂ ಕಂಡುಬರಲಿಲ್ಲ ಯಾವ ದಾರಿಯಲ್ಲೂ ಅವರು ಸಿಕ್ಕಲಿಲ್ಲ 'ಎಲ್ಲೋ ಮಧ್ಯಾಹ್ನದಲ್ಲೇ ಹೋಗಿಬಿಟ್ಟಿರಬೇಕು, ನಿಂಗೂ ಅವರಿಗೂ ಸಂಬಂಧವೇ ಇರಲಾರದು!' ಅನ್ನೋ ಅನುಮಾನ ಕೂಡ ಬಂತು" ಸೂರಪ್ಪ ನೆನಿಸಿಕೊಂಡು ಹೇಳಿದ.

"ಅವರು ಯಾವ ದಾರಿಯನ್ನೂ ಹಿಡಿಯಲಿಲ್ಲ. ಕಾಡು-ಮೇಡುಗಳಲ್ಲೇ ರಾತ್ರಿಯೆಲ್ಲ ನಡೆದರು."

"ನೀನೂ ಅವರ ಜೊತೆಯಲ್ಲೇ ಅಲ್ಲೆಲ್ಲ ನಡೆದೆಯ?"

"ಹುಂ, ಹಳ್ಳಿಯಿಂದ ಒಂದೆರಡು ಮೈಲಿಯಷ್ಟು ಅವನು ನನ್ನನ್ನು ಹಾಗೇ ಹೊತ್ತುಕೊಂಡು ನಡೆದ. ಕಾಡಿನ ಮಧ್ಯದಲ್ಲಿ ನನ್ನ ಕಟ್ಟುಗಳನ್ನು ಬಿಚ್ಚಿ, ನಾಲ್ಕಾರು ಜನ ಸುತ್ತುಗಟ್ಟಿ ದೊಡ್ಡ ಚಾಕುಗಳನ್ನು ತೋರಿಸುತ್ತ 'ಗಪ್ ಚುಪ್!' ಎಂದು ಬಹಳವಾಗಿ ಬೆದರಿಸಿ, ನಡೆಯುವಂತೆ ಸನ್ನೆಮಾಡಿದರು. ನಾನು ಪ್ರತಿಭಟಿಸಿದ್ದರೆ, ಮೊಂಡುತನ ಮಾಡಿ

ದ್ದರೆ, ಅವರು ಕೊಂದುಬಿಡೋದಕ್ಕೂ ಹೇಸುವುದಿಲ್ಲ—ಅಂತ ನಂಗೆ ಖಂಡಿತವಾಯ್ತು. ನಂಗೆ ಸಾಯೋದಕ್ಕೆ ಇಷ್ಟವಿರಲಿಲ್ಲ. ಇಲ್ಲಿಗೆ ಮತ್ತೆ ಹೇಗಾದರೂ ಬರುವ ಆಶೆಯಿತ್ತು. ಏನುಮಾಡಲಿ? ನಡೆದೆ.''

"ಪಾಪ! ಏನು ಅನುಭವಿಸಿದೆಯಮ್ಮಾ'' ಗಂಗಮ್ಮನವರು ಕರಗಿ ಹೇಳಿದರು.

"ಧೂರ್ತರಾ! ಅಲ್ಲಿ ಪೋಲೀಸಿನವರು ಗುಮಾನಿಯಮೇಲೆ ಅವರನ್ನು ಹಿಡಿದಾಗಲೂ ನೀನು ಅವರೊಡನೆ ಇರಲಿಲ್ಲವಲ್ಲ?'' ಸೂರಪ್ಪನು ಕೋಪ, ಆಶ್ಚರ್ಯಗಳಿಂದ ಕೇಳಿದ.

"ಅವರು ಬಹಳ ಎಚ್ಚರಿಕೆಯಿಂದ ನನ್ನ ಕೈಕಾಲು-ಬಾಯಿಗಳನ್ನು ಕಟ್ಟಿ, ನನ್ನನ್ನು ಯಾವುದೋ ಪೊದೆಯೊಳಗೋ, ಬಂಡೆಯ ಸಂದಿನಲ್ಲೋ ಬಚ್ಚಿಟ್ಟು ತಾವು ದೂರದಲ್ಲಿರುತ್ತಿದ್ದರು. ಭಯವು ತಪ್ಪಿಹೋಗಿ ರಾತ್ರಿ ಪ್ರಯಾಣ ಮತ್ತೆ ಮೊದಲಾದಾಗಲೇ ನಂಗೆ ಬಂಧವಿಮೋಚನೆಯಾಗುತ್ತಿತ್ತು.''

"ಅನ್ನ, ಆಹಾರ!''

"ನಾಲ್ಕು ದಿನ ಏನೂ ಇಲ್ಲದೆ ಕಳೆದೆ. ಅವರು ತಂದಿಟ್ಟದ್ದನ್ನು ಮುಟ್ಟಲಿಲ್ಲ ಆದರೆ ಐದನೆಯ ದಿನ ಹಸಿವು, ನೀರಡಿಕೆ ನಿತ್ರಾಣ ಅಸಾಧ್ಯವಾಗಿ....''

"ತಿಂದುಬಿಟ್ಟೆಯಾ, ಆ ಮುಸಲ್ಮಾನರ ಅನ್ನ?'' ಗುಂಡಮ್ಮನು ಆತುರದಿಂದ ಕೇಳಿದಳು.

ದೇವಮ್ಮನು ತಲೆತಗ್ಗಿಸಿ ಸುಮ್ಮನಿದ್ದಳು.

"ಬಡಪಾಯಿ, ಇನ್ನೇನು ಮಾಡುತ್ತಾಳೆ?'' ಸೂರಪ್ಪನು ವಹಿಸಿಕೊಂಡನು.

"ಆದರೆ ಜಾತಿ, ಮತ.. '' ಗುಂಡಮ್ಮನು ಮುಂದುವರಿಸಿದಳು.

"ಇರಲಿ ಬಿಡಕ್ಕಾ, ಅದೇನು ಮಾತು ನೋಡೋಣ'' ಎಂದು ಅಕ್ಕನಿಗೆ ಹೇಳಿ, ಸೂರಪ್ಪನು ಹೆಂಡತಿಯ ಕಡೆಗೆ ತಿರುಗಿ

"ಆಮೇಲೆ? ಹೇಗೆ ಬಂದೆ ಇಲ್ಲಿಗೆ?'' ಎಂದು ಕೇಳಿದನು.

"ನಾವಂತೂ ನಿನ್ನ ಆಸೇನೇ ಬಿಟ್ಟುಬಿಟ್ಟಿದ್ದೆವಮ್ಮಾ" ಗಂಗಮ್ಮನವರು ಹೇಳಿದರು.

"ಐದನೆಯ ಸಂಜೆಯ ಹೊತ್ತಿಗೆ ದೊಡ್ಡ ಊರಿನ ಹತ್ತಿರಕ್ಕೆ ಹೋದೆವು ಚೆನ್ನಾಗಿ ರಾತ್ರಿ ಆದಮೇಲೆ ಊರನ್ನು ಹೊಕ್ಕೆವು. ಅನುಮಾನ ಹುಟ್ಟದಹಾಗೆ ಗುಂಪಿನ ಹೆಂಗುಸರೆಲ್ಲ ಬುರುಕಿಹಾಕಿಕೊಂಡು ನಂಗೂ ಒಂದನ್ನು ಹಾಕಿದರು."

"ಅಬ್ಬಬ್ಬಾ, ಎಂಥಾ ಜನ!....ಆಮೇಲೆ?"

"ಅದೇ ರಾತ್ರಿ ಬಹಳ ಹೊತ್ತಾದಮೇಲೆ, ನನ್ನನ್ನು ಒಂದು ಮಸೀದಿಗೆ ಕರೆದುಕೊಂಡು ಹೋದರು. ಅಲ್ಲಿ ಒಬ್ಬ ಮುಲ್ಲಾ, ನಂಗೆ ಏನೋ ಮಂತ್ರ ಹೇಳುವಂತೆ ಹೇಳಿಕೊಟ್ಟ ಅದು 'ಕಲ್ಮ' 'ನಮಾಸ್' ಅಂತೆ. ನಾನು ಮೊದಮೊದಲು ವಿರೋಧಿಸಿ, ಅದನ್ನು ಹೇಳಲಿಲ್ಲ."

"ಕಡೆಗೆ ಹೇಳಿಬಿಟ್ಟೆಯಾ?" ಗುಂಡಮ್ಮನು ಪ್ರಶ್ನಿಸಿದಳು

"ಹೇಳದಿದ್ದರೆ ಗೋಮಾಂಸವನ್ನು ಬಾಯಿಗೆ ತುರುಕಿ ಜಾತಿ ಕೆಡಿಸುವುದಾಗಿ ಬೆದರಿಸಿದರು. ಅದೇನು ಸುಳ್ಳು ಬೆದರಿಕೆಯಲ್ಲ. ಇನ್ನೇನು ಮಾಡಲಿ? ಹಾಗೆ ಜಾತಿ ಕೆಡುವುದಕ್ಕಿಂತ ಅದನ್ನು ಹೆಳೋದೇ ಕಡಿಮೆಯ ಪಾಪ—ಅಂತ ತಿಳಿದು ಹೇಳಿಬಿಟ್ಟೆ. ಅವರೆಲ್ಲರೂ ಸಂತೋಷಪಟ್ಟು 'ಇನ್ನು ನೀನು ನಮ್ಮವಳಾದೆ' ಅಂದರು"

"ಹಾಗಾದರೆ ಜಾತಿ ಹೋಯ್ತು?" ಗುಂಡಮ್ಮನು ಒತ್ತಿ ಕೇಳಿದಳು.

"ಅದೇನೋ ಕಾಣೆ, ಅವರು ಹಾಗಂದರು!"

"ಏನು ಅನ್ಯಾಯ!" ಗಂಗಮ್ಮನವರು ಮರುಗಿ ಗಂಭೀರವಾದರು.

"ಇದಕ್ಕೇನು ಮಾಡೋದು, ದೇವರೆ!" ಸೂರಪ್ಪನೂ ಗಂಭೀರವಾಗಿ ಆಲೋಚಿಸತೊಡಗಿದ.

ಸ್ವಲ್ಪ ಹೊತ್ತು ಇವರ ಮಧ್ಯೆ ಮಾತಿರಲಿಲ್ಲ. ದೇವಮ್ಮನು ಒಬ್ಬರ ಮುಖದಿಂದ ಇನ್ನೊಬ್ಬರ ಮುಖದ ಕಡೆಗೆ ತನ್ನ ದೈನ್ಯದೃಷ್ಟಿಯನ್ನು ಬೀರುತ್ತ, ಮಗುವನ್ನು ಮತ್ತಷ್ಟು ಬಿಗಿಯಾಗಿ ಅಪ್ಪಿಕೊಳ್ಳುತ್ತಿದ್ದಳು.

"ಹಾಗಾದರೆ ಇಷ್ಟೆಲ್ಲ ಆಯ್ತು!" ಸೂರಪ್ಪನು ತನಗೆ ತಾನೇ ಗಟ್ಟಿಯಾಗಿ ಹೇಳಿಕೊಂಡ.

"ಅಷ್ಟಕ್ಕೇ ಮುಗಿಯಲಿಲ್ಲ ನನ್ನ ಗತಿ!" ನಿಂತಿದ್ದ ಕಣ್ಣೀರು ಮತ್ತೆ ಹರಿಯತೊಡಗಿತು.

"ಇನ್ನೂ ಇದೆಯೆ? ಆ? ಹುಂ. ಹೇಗೆ ತಪ್ಪಿಸಿಕೊಂಡುಬಂದೆ?" ಸೂರಪ್ಪನು ಭಯ, ಆವೇಶಗಳಿಂದ ಕೇಳಿದ.

"ನಾವು ಮುಸಲ್ಮಾನನೊಬ್ಬನ ಮನೆಯಲ್ಲಿ ಉಳಿದುಕೊಂಡೆವು. ಆ ರಾತ್ರಿಯಲ್ಲಿ ನಡೆದ ಮಾತುಕತೆಯಿಂದ ಆ ಕಂದಾರಿಗಳು ನನ್ನನ್ನು ಆ ಮನೆಯವನಿಗೆ ಮದುವೆಗೋಸ್ಕರ ಮಾರಿದರೆಂದು ತಿಳಿಯಿತು."

"ಹ!"

"ಹುಂ ಹಾಗೇ ಇತ್ತು. ಮಾರನೆಯ ದಿನ ಒಬ್ಬ ಕಾಜಿ ಬಂದ. ನಂಗೆ 'ನಿಕಾ' ಆಗುವುದಾಗಿ ಕಂದಾರಿಗಳು ತಿಳಿಸಿದರು. ನಾನು ಬೇಡ ವೆಂದು ಅಂಗಲಾಚಿ ಬೇಡಿಕೊಂಡೆ. ಅವರು ಕೇಳಲಿಲ್ಲ. ನನ್ನ ಎದೆ ಒಡೆಯುವಂತೆ ಅಳುಬಂತು, ಅತ್ತೆ. ಅವರ ಮನಸ್ಸು ಬೇರೆ ಕರಗಲಿಲ್ಲ. ಕಡೆಗೆ ಕೋಪದಿಂದ ಮೊಂಡುತನಮಾಡಿ ವಿರೋಧಿಸಿದೆ. ಅವರೇ ಬಗ್ಗು ವರು? ಮೊದಲು ಪುಸಲಾಯಿಸಿ ನೋಡಿದರು. ಪ್ರಯೋಜನವಾಗಲಿಲ್ಲ. ಏನೇನೋ ಆಶೆ ತೋರಿಸಿದರು. ನಾನು ಒಪ್ಪಿಕೊಳ್ಳಲಿಲ್ಲ. ಆ ಮೇಲೆ ಬೆದರಿಸಿದರು. ಅಬ್ಬಬ್ಬ, ಎಂಥೆಂಥ ಬೆದರಿಕೆ! ಇಲ್ಲಿ ಹೇಳಲಾರೆ. ಆದರೆ ನಾನು ಸಾವಿಗೆ ಸಿದ್ಧಳಾಗಿದ್ದು ಅವನ್ನೆಲ್ಲ ನಿರ್ಲಕ್ಷಿಸಿದೆ. ಕಡೆಗೆ ಅವರು ಬಲಾತ್ಕಾರದಿಂದ ಕಾಜಿಯ ಕೆಲಸವನ್ನು ನೆರವೇರಿಸಿದರು"

"ಮದುವೆಯೂ ಆಗಿ ಹೋಯ್ತೆ?" ಗುಂಡಮ್ಮನು ಚುಚ್ಚಿ ಕೇಳಿದಳು.

"ಹುಂ. ಹೊರಾಚಾರ."

"ರಾಮ! ರಾಮ!" ಗಂಗಮ್ಮನವರು ನಿಟ್ಟುಸಿರನ್ನು ಬಿಟ್ಟರು.

ಸೂರಪ್ಪನ ಬಾಯಿ ಕಟ್ಟಿಹೋಗಿತ್ತು. ದೇವಮ್ಮನು ಮಾತನ್ನು ಮುಂದುವರಿಸಿದಳು.

"ನನ್ನ ಹಟವನ್ನು ನೋಡಿದ ಮನೆಯವನು, ನಾನು ಸರಿಯಾಗುವ ವರೆಗೂ ಅವರಿಗೆ ಹಣ ಕೊಡೋದಿಲ್ಲ, ಅವರು ಅಲ್ಲಿಯತನಕ ಅಲ್ಲೇ

ಇರಬೇಕು—ಅಂತ ಹೇಳಿದ. ಅವರು ತಮ್ಮ ಕೆಲಸ ಆಯ್ತು, ಮುಂದೆ ಅವನೇ ನನ್ನನ್ನು ಹೇಗೆಬೇಕಾದರೂ ಸರಿಮಾಡಿಕೋಬೇಕು, ಹಣ ಕೊಟ್ಟುಬಿಡಬೇಕು—ಅಂತ ಕೇಳಿದರು. ವ್ಯಾಜ್ಯಕ್ಕೆ ಮೊದಲಾಯ್ತು. ಆಗ ನಾನು, 'ಇವರೇನಾದರೂ ಇವನು ಹೇಳಿದ ಹಾಗೇ ಇದ್ದುಬಿಟ್ಟರೆ ನಂಗೆ ಉಳಿಗಾಲವಿಲ್ಲ' ಅಂತ ಯೋಚಿಸಿಕೊಂಡು, ಹಟಕ್ಕಿಂತ ಉಪಾಯ ಮಾಡಿ ತಪ್ಪಿಸಿಕೋಬೇಕು—ಅಂತ ನಿಶ್ಚಯಮಾಡಿದೆ. ನನ್ನ ಗತಿಗೆ ಹೊಂದಿಕೊಂಡವಳ ಹಾಗೆ ನಟಿಸಿ, ನಾನು ಸರಿಯಾಗಿರುವುದಾಗಿ ಒಪ್ಪಿಕೊಂಡೆ. ಇದನ್ನು ಕಂಡು ಅವನಿಗೂ ಅವರಿಗೂ ಸಂತೋಷವಾಯ್ತು. ಅವರು ಹಣವನ್ನು ತೆಗೆದುಕೊಂಡು ಹೋದರು.''

''ಹುಂ!''

''ಅವನಲ್ಲಿ ಪ್ರೇಮವನ್ನು ನಟಿಸಿದೆ. ಅವನನ್ನು ಆನಂದಪಡಿಸಿದೆ. ನನ್ನಲ್ಲಿ ನಂಬಿಕೆ ಹುಟ್ಟಿಸಿದೆ. ನನ್ನ ಬಗ್ಗೆ ಧೈರ್ಯ ಹುಟ್ಟಿಸಿದೆ.''

''ಹೂಂ''

''ಸಂಜೆಯಲ್ಲಿ ಹೊರಗಾಗಿರುವುದಾಗಿ ತಿಳಿಸಿ ಆ ದಿನ, ಮಾರನೆಯ ದಿನ ಎರಡನ್ನೂ ಕಳದೆ. ಮೂರನೆಯ ರಾತ್ರಿ ಅವನು ಶಂಕೆಪಡದೆ ಮಲಗಿದ್ದಾಗ ತಪ್ಪಿಸಿಕೊಂಡೆ. ದಿನದಲ್ಲೆಲ್ಲ ಅವಿತಿದ್ದು, ರಾತ್ರಿಯಲ್ಲಿ ಬೆಂಗಳೂರು–ಹರಿಹರದ ರಸ್ತೆಗೆ ಹತ್ತಿರವಾಗಿ ಹೊಲಗಳಲ್ಲೇ ನಡೆದು ನಡೆದು, ದಾರಿ ಪತ್ತೆಮಾಡಿಕೊಂಡು ಬಂದೆ.''

''ಎಂಥ ಸಾಹಸ ನಿಂದು!'' ಗಂಗಮ್ಮನವರು ಆಶ್ಚರ್ಯ ಪಟ್ಟರು.

''ಅಂತೂ ಮತ್ತೆ ಬಂದೆಯಲ್ಲ!'' ಸೂರಪ್ಪನು ತೃಪ್ತಿಯಿಂದ ಹೇಳಿದನು.

''ಆದರೇನು ಜಾತಿ ಕೆಟ್ಟು ಹೋಗಿದ್ದಾಳಲ್ಲ!'' ಗುಂಡಮ್ಮನು ಆಕ್ಷೇಪಿಸಿದಳು.

''ಅಕ್ಕ!'' ಸೂರಪ್ಪನು ಕಠಿಣವಾಗಿ ಹೇಳಿದನು.

''ಇರೋದು ಹೇಳಿದೆ ಕಣೋ; ಅದಕ್ಕೇನು? ಅದೇನು ಸುಳ್ಳೆ? ಮದುವೆಸಹಿತ ಆಗಿದೆ'' ಗುಂಡಮ್ಮನು ಸಾಧಿಸಿದಳು.

"ಅತ್ತಿಗಮ್ಮಾ, ನಾನೇನು ಬೇಕೂಂತ ತಪ್ಪುಮಾಡಲಿಲ್ಲವಲ್ಲ!" ದೇವಮ್ಮನು ದೈನ್ಯದಿಂದ ಹೇಳಿದಳು

"ಇರಬಹುದು ನಾನು ಹಾಗೆ ಹೇಳಲಿಲ್ಲ. ಆದರೆ ಆದದ್ದು ಆಗಿ ಹೋಯ್ತೊ? ಇಲ್ಲ ಅನ್ಯೋದಕಾಗುತ್ತೆಯೆ?" ಗುಂಡಮ್ಮನು ಕಠಿಣವಾಗಿ ಲೆಕ್ಕ ಹೇಳಿದಳು.

ದೇವಮ್ಮನು ಗಂಡನನ್ನೂ ಅತ್ತೆಯನ್ನೂ ನೋಡಿದಳು. ಅವರು ಪೆಚ್ಚಾಗಿ ಸುಮ್ಮನಿದ್ದರು. ತಾನೂ ತಲೆತಗ್ಗಿಸಿದಳು. ಭುಜದಮೇಲೇ ಮಲಗಿ ಮತ್ತೆ ನಿದ್ರಿಸುತ್ತಿದ್ದ ಮಗುವನ್ನು ತೊಡೆಯ ಮೇಲೆ ಮಲಗಿಸಿಕೊಂಡು ತಟ್ಟಿದಳು ಸ್ವಲ್ಪ ಹೊತ್ತು ಯಾರೂ ಮಾತ ನಾಡಲಿಲ್ಲ.

"ಈಗೇನುಮಾಡೋದಮ್ಮಾ?" ಸೂರಪ್ಪನು ಕೇಳಲಾರದಂತೆ ತಾಯಿಯನ್ನು ಪ್ರಶ್ನಿಸಿದ. ಸಿಡಿದುಹೋಗುವ ತಲೆಯನ್ನು ಹಿಡಿಯುವಂತೆ ಎರಡು ಕೈಗಳಿಂದಲೂ ತಲೆಯನ್ನು ಹಿಡಿದುಕೊಂಡು ಕುಳಿತು ಬಿಟ್ಟ.

"ನಂಗೇನೂ ತೋಚದ ಹಾಗಿದೆಯಪ್ಪಾ" ಗಂಗಮ್ಮನವರು ಆಲೋಚಿಸುತ್ತ ಹೇಳಿ, ಇನ್ನೊಂದು ಬಾರಿ ನಿಟ್ಟುಸಿರನ್ನು ಬಿಟ್ಟರು.

"ಯಾಕೆ? ತಪ್ಪುಮಾಡಿಲ್ಲ. ಆಚಾರ ತಪ್ಪಿದೀನಿ ಅಷ್ಟೆ; ಇನ್ನೇನೂ ಮಾಡಿಲ್ಲ. ಅದೂ ನಿರ್ವಾಹವಿಲ್ಲದೆ...."

"ಹುಂ. ಹುಂ. ಗೊತ್ತು. ಅಧೈರ್ಯವಡಬೇಡ!" ಸೂರಪ್ಪನು ಸಮಾಧಾನದ ಮಾತನ್ನು ಹೇಳಿದನು.

"ಪ್ರಾಯಶ್ಚಿತ್ತ—ಶುದ್ಧಿ ಮಾಡಿ ನನ್ನ.. ." ಅವಳು ಮಾತನ್ನು ಪೂರ್ತಿಮಾಡಲಿಲ್ಲ.

"ಆಗಲಿ. ಆಗಲಿ" ಅವನು ಉತ್ತೇಜನಕೊಟ್ಟನು.

"ಏನೋಪ್ಪ. ನಂಗೆ ಅನುಮಾನ!" ಗುಂಡಮ್ಮನು ಉದ್ಗಾರ ತೆಗೆದಳು.

"ಅಕ್ಕಾ! ನೀನು ಸ್ವಲ್ಪ ಸುಮ್ಮನೆ ಇದ್ದರೆ...." ಸೂರಪ್ಪನು ಬೇಸರದಿಂದ ಗದರಿಸಿದಂತೆ ಹೇಳಿದನು.

"ಇದೇಕೆ ಹೀಗನ್ನುತ್ತೀಯೋ? ಅವಳಮೇಲೆ ನಂಗೇನು ದ್ವೇಷವೆ? ಹಾಗೇಂತ ಆಚಾರ ವಿಚಾರಿಸದೆ ಇರೋದಕ್ಕಾಗುತ್ತೆಯೆ? ಬಿಡೋದಕ್ಕಾಗುತ್ತೊ? ಸರಿ, ಬಿಡು!"

ಸೂರಪ್ಪನು ಸುಮ್ಮನೆ ಅಸಹಾಯಕತೆಯ ಹಿಂಸೆಯಿಂದ ಕೈ ಒದರಿದನು. ಮತ್ತೆ ಯೋಚಿಸಿಕೊಂಡು "ಅವ್ವಾ, ಶುದ್ಧಿಯೋ ಗಿದ್ಧಿಯೋ, ಎಲ್ಲ ಆಗುತ್ತೆ. ಈಗ ಇವಳಂತೂ ಒಳಕ್ಕೆ ಬರಬೇಕೋ! ನಡೀರಿ ಎಲ್ಲರೂ ಒಳಕ್ಕೆ" ಎಂದು ಒಳಕ್ಕೊಂದು ಹೆಜ್ಜೆಯಿಟ್ಟನು. ದೇವಮ್ಮನು ಮಗುವನ್ನೆತ್ತಿಕೊಳ್ಳಲು ಕೈ ಹಾಕಿದಳು. ಆದರೆ ಆ ಕ್ಷಣದಲ್ಲಿ ಗುಂಡಮ್ಮನು "ಇದೇನೋ ನಾಚಿಕೆಗೇಡು? ಹೇಳದೇ ಕೇಳದೆ ನೀನೇ ಏನೇನೋ ಮಾಡುತೀಯೋ? ಚೆನ್ನಾಯ್ತು ಬಿಡು!" ಎಂದಳು. ಅವನು "ನೀನು ಸುಮ್ಮನೆ ಇರು. ಸಾಕು" ಎಂದು ಗುಂಡಮ್ಮನಿಗೆ ಹೇಳಿ, ಹೆಂಡತಿಯನ್ನು ನೋಡಿ "ಹುಂ. ಏಳು. ಬಾ!" ಎಂದನು. ಈಗ ತಾಯಿಯು ಬಾಯಿಹಾಕಿ "ಅಪ್ಪಾ, ಗುಡಕಬೇಡ, ಸ್ವಲ್ಪ ತಾಳು ನಿಂಗೆ ನಿನ್ನ ಹೆಂಡತಿಮೇಲೆ ಹೇಗೋ ನಂಗೂ ನನ್ನ ಸೊಸೆಯಮೇಲೆ ಪ್ರೇಮ, ಅಭಿಮಾನ ಎಲ್ಲ ಇವೆ. ಆದರೆ ಇಂಥ ವಿಷಯದಲ್ಲಿ ತಿಳಿದೋರನ್ನು ವಿಚಾರಿಸದೆ ನಮ್ಮ ಇಷ್ಟದಂತೇ ಮಾಡಿಬಿಡಬಾರದು; ಅಲ್ಲವೆ?" ಎಂದು ತಡೆದರು. ಸೂರಪ್ಪನಿಗೆ ಬೇಸರ, ಸಿಟ್ಟು ಎರಡೂ ಮೇಲೆ ಹಾಯ್ದುವು. ಅವನು ಹುಬ್ಬು ಗಂಟಿಕ್ಕಿ "ಇನ್ನು ಯಾರು ಏನುಹೇಳಬೇಕವ್ವಾ? ನೀನು ಒಪ್ಪಿದರೆ ಆಯ್ತು!" ಅಂದ.

"ಹಾಗಲ್ಲ, ಮಗು, ಈ ವಿಚಾರದಲ್ಲಿ ನಮಗಿಂತ ತಿಳಿದೋರಿಲ್ಲವೆ? ನಕ್ಕದ ಮನೆ...."

"ಹುಂ ಆಗಲಿ ಕಾಳಪ್ಪ ಶಾಸ್ತ್ರಿಗಳನ್ನೇ ಕರೀತೇನಿ....ಏನು ಅನುಮಾನವ್ವೋ...." ಎಂದು ಸೂರಪ್ಪನು ಜಗುಲಿಯನ್ನು ಇಳಿದನು.

"ಮಗು, ಈಗ ಬೇಡ. ಬೆಳಗ್ಗೆ...." ತಾಯಿಯು ಹೇಳುತ್ತಿದ್ದರು. ಆದರೆ ಅದು ಅವನ ಕಿವಿಗೇ ಬೀಳಲಿಲ್ಲ. ಅವನು ಸರಸರನೆ ಹೋಗಿ ಶಾಸ್ತ್ರಿಗಳ ಮನೆಯ ಬಾಗಿಲನ್ನು ಜೋರಾಗಿ ತಟ್ಟಿ "ಶಾಸ್ತ್ರಿಗಳೆ! ಶಾಸ್ತ್ರಿಗಳೆ!" ಎಂದು ಕೂಗಿದನು.

ಕಾಳಪ್ಪಶಾಸ್ತ್ರಿಗಳು ಎದ್ದು ಬರುವುದು ಕೊಂಚ ಹೊತ್ತಾಯಿತು. ಅಷ್ಟುಹೊತ್ತಿಗೆ ಸೂರಪ್ಪನು ಇನ್ನೂ ನಾಲ್ಕಾರು ಬಾರಿ ಬಾಗಿಲನ್ನು ತಟ್ಟಿ ಕೂಗಿದನು. ಶಾಸ್ತ್ರಿಗಳು ಬಾಗಿಲನ್ನು ತೆರೆಯುತ್ತ "ಯಾರು? ಇದೇನು ಗಲಾಟೆ?" ಎಂದು ಗದರಿಸಿದರು.

"ಜೋಯಿಸರೆ, ಅವಳು ಮತ್ತೆ ಬಂದಿದ್ದಾಳೆ."

"ಯಾರು, ಸೂರಪ್ಪನೇ? ಏನೆಂದೆ, ನಿನ್ನ ಹೆಂಡತಿ ಬಂದಳೆ?' ಶಾಸ್ತ್ರಿಗಳು ಕಣ್ಣುಗಳನ್ನು ಉಜ್ಜಿಕೊಳ್ಳುತ್ತ ಕೇಳಿದರು.

"ಹುಂ."

"ಭಲ! ಸದ್ಯ ಸಿಕ್ಕಿದಳಲ್ಲ. ಬಹಳ ಒಳ್ಳೇ ಹುಡುಗಿ. ಪಾಪ! ನೀನು ಅದೃಷ್ಟವಂತ. ಇಷ್ಟು ದಿನ...."

"ಅದೆಲ್ಲ ಹೇಳುತೀನಿ. ದೊಡ್ಡ ಕತೆ. ಮನೆಗೆ ಬನ್ನಿ!"

"ಈಗ?"

"ಹುಂ, ನಿಮ್ಮನ್ನು ಕೇಳೋ ವಿಚಾರ ಇದೆ."

"ನಡಿ." ಬಾಗಿಲನ್ನು ಮುಂದಕ್ಕೆ ಮಾಡಿಕೊಂಡು ಹೊರಟರು.

ಸೂರಪ್ಪನ ಮನೆಯ ಮೆಟ್ಟಲನ್ನು ಹತ್ತುವಾಗಲೇ ಶಾಸ್ತ್ರಿಗಳು ದೂರದಲ್ಲಿ ದೇವಮ್ಮನನ್ನು ನೋಡಿ "ದೇವಮ್ಮಾ, ಬಂದೆಯಾಮ್ಮಾ. ಕ್ಷೇಮವಾಗಿದೀಯ?" ಎಂದು ಹರ್ಷದಿಂದ ಕೇಳುತ್ತ ಹತ್ತಿರಕ್ಕೆ ಬಂದು, ಅವಳ ಉಡುಪನ್ನು ನೋಡಿ, ಅವರೂ ಗಾಬರಿಯಾಗಿ "ಇದೇನು ಸಮಾಚಾರ?" ಎಂದು ಗಂಭೀರವಾಗಿ ಒಂದು ಹೆಜ್ಜೆ ಹಿಂದೆ ಸರಿದರು.

ಸೂರಪ್ಪನು ಕತೆಯ ಅಂಶವನ್ನು ಸಂಕ್ಷೇಪವಾಗಿ ತಿಳಿಸಿದನು. ಮಧ್ಯೆ ಮಧ್ಯೆ ಗಂಗಮ್ಮನವರು ಅವಳು ಪಟ್ಟ ಕಷ್ಟ, ಮಾಡಿದ ಸಾಹಸದ ಬಗ್ಗೆ ಅನುತಾಪ, ಮೆಚ್ಚಿಕೆಗಳನ್ನು ಸೂಚಿಸಿ ಕೆಲವು ಮಾತುಗಳನ್ನು ಹೇಳುತ್ತಿದ್ದರು. ಸೂರಪ್ಪನು ದೇವಮ್ಮನ ಮತಭ್ರಷ್ಟತೆಯ ಭಾಗವನ್ನೆಲ್ಲ ಹಗುರವಾಗಿ ತೇಲಿಸಿ ಹೇಳಿದಾಗಲೆಲ್ಲ, ಶಾಸ್ತ್ರಿಗಳು ತಡೆದು ತಡೆದು ಪ್ರಶ್ನೆಗಳನ್ನು ಕೇಳುತ್ತಿದ್ದರು. ಆಗ ಗುಂಡಮ್ಮನು ಅವಕ್ಕೆಲ್ಲ ಉದ್ದವಾದ ಸ್ಪಷ್ಟವಾದ ಉತ್ತರಗಳನ್ನು ಹೇಳುತ್ತಿದ್ದಳು. ದೇವಮ್ಮನಾದರೋ ನ್ಯಾಯಾಸ್ಥಾನದಲ್ಲಿ ತನ್ನ ಮೇಲಿನ ಆಪಾದನೆಗಳನ್ನು ಕೇಳುವ ಅಪರಾಧಿ

ಯಂತೆ ಮೌನವಾಗಿ ತಲೆ ತಗ್ಗಿಸಿದ್ದಳು. ಕತೆಯನ್ನು ಕೇಳುತ್ತ ಕೇಳುತ್ತ ಶಾಸ್ತ್ರಿಗಳ ಸೌಮ್ಯಮುಖವು ಬಿಗಿದುಕೊಂಡು ಕಠಿಣವಾಯಿತು. ಕೆಂಗಣ್ಣು ಗಳು ನೆಟ್ಟ ದೃಷ್ಟಿಯಿಂದ ನೆಲವನ್ನು ನೋಡುತ್ತಿದ್ದುವು. ಹುಬ್ಬುಗಳು ಕೂಡಿ ಗಂಟಿಕ್ಕಿದುವು. ತುಟಿಗಳು ಒಂದನ್ನೊಂದು ಒತ್ತಿದ್ದುವು. ಜೋಯಿಸರು ಕಷ್ಟದಲ್ಲಿ ಸಿಕ್ಕಿದವರಂತೆ ತೀಕ್ಷ್ಣವಾಗಿ ಯೋಚಿಸುತ್ತಿದ್ದರು.

ಕತೆಯು ಮುಗಿದರೂ ಮುಂದಿನ ವಿಷಯವು ಚರ್ಚೆಗೆ ಬರಲಿಲ್ಲ. ಸೂರಪ್ಪನೂ ಗಂಗಮ್ಮನವರೂ ಶಾಸ್ತ್ರಿಗಳ ರೀತಿಯನ್ನು ನೋಡಿ, ಈ ಮಾತನ್ನೆತ್ತುವುದಕ್ಕೇ ಭಯಪಡುತ್ತಿದ್ದರು. ಗುಂಡಮ್ಮನೇನೋ ಆತುರಳಾಗಿದ್ದಳು; ಆದರೆ ಅವಳು ತಮ್ಮನ ಹೆದರಿಕೆಯಿಂದ ಸುಮ್ಮನಿದ್ದಳು. ದೇವಮ್ಮನೆಂದರೆ ಯಜ್ಞಪಶುವಿನ ಸ್ಥಿತಿಯಲ್ಲಿದ್ದು ಮಾತಿನ ಅಧಿಕಾರವನ್ನೇ ಕಳೆದುಕೊಂಡಿದ್ದಳು. ಕಡೆಗೆ, ಕೆಲವು ನಿಮಿಷಗಳಾದ ಮೇಲೆ ಶಾಸ್ತ್ರಿಗಳೇ ಮಾತನ್ನು ಮೊದಲುಮಾಡಿದರು.

"ಹ್ಞೂಂ. ಹಾಗಾದರೆ ಪೂರ್ತಿಯಾಗೇ ಜಾತಿ ಕೆಟ್ಟುಬಿಟ್ಟದಾಳೆ!" ದೀರ್ಘವಾಗಿ ಉಸಿರನ್ನು ಬಿಟ್ಟು ತೀರ್ಮಾನವನ್ನು ಹೇಳಿದರು.

"ಶಾಸ್ತ್ರಿಗಳೆ!" ಸೂರಪ್ಪನು ಗಾಬರಿಯಾಗಿ ಆಕ್ಷೇಪಣೆಯ ಸ್ವರದಿಂದ ಹೇಳಿದನು.

"ಹುಂ ಕಣಯ್ಯಾ. ಇರೋ ವಿಷಯ ಮುಚ್ಚೋದಕ್ಕೆ ಆಗುತ್ತೆಯೆ—ಅದೂ ಇಂಥಾ ಮತಧರ್ಮ ವಿಚಾರಗಳಲ್ಲಿ?"

"ಹಾಗಲ್ಲ. ಆದರೆ ಅವಳೇನು ಬೇಕಾಗಿ ಹಾಗೆಲ್ಲ ಮಾಡಲಿಲ್ಲ. ಬೆದರಿಕೆ—ಬಲಾತ್ಕಾರಗಳಿಗೆ ಸಿಕ್ಕಿ ನಿಸ್ಸಹಾಯಕಳಾಗಿ, ಬೇರೆ ಉಪಾಯವಿಲ್ಲದೆ, ಅವರಿಂದ ತಪ್ಪಿಸಿಕೊಳ್ಳೋ ಉದ್ದಿಶ್ಯದಿಂದ ..."

"ಅದೆಲ್ಲ ಸರಿ. ಆದರೆ ತಪ್ಪು ಹೇಗೆ ಮಾಡಿದರೂ ತಪ್ಪೇ. ದೋಷವಿಲ್ಲ ಅನ್ನೋದಕ್ಕೆ ಹೇಗಾಗುತ್ತೆ?"

"ಅವಳ ಸಂದರ್ಭದಲ್ಲಿ ಯಾರಾದರೂ ತಾನೇ ಇನ್ನೇನು...."

"ನಿಜ, ಒಪ್ಪಿದೆ. ಆದರೆ ನಡೆದದ್ದು ನಡೆದುಹೋಯ್ತು? ಹಿಂದೂ ಧರ್ಮ ಹೋಯ್ತು?"

"ಹಾಗಾದರೆ ಒಳಕ್ಕೆ ತೆಗೆದುಕೊಳ್ಳೋದಕ್ಕೆ ಮುಂಚೆ ಶುದ್ಧಿಶಾಸ್ತ್ರ ಆಗಲೇಬೇಕು?"

"ಏನಂದೆ?" ಶಾಸ್ತ್ರಿಗಳು ಆತ್ಯಾಶ್ಚರ್ಯದಿಂದ ಕೇಳಿದರು.

"ಅದೇ, ಪ್ರಾಯಶ್ಚಿತ್ತ...." ಸೂರಪ್ಪನು ವಿವರಿಸಲು ಹೊರಟ.

"ಇದೇನಯ್ಯಾ, ಇಂಥಾ ಶ್ರೋತ್ರಿಯರ ವಂಶದಲ್ಲಿ ಹುಟ್ಟಿ ಹೀಗೆ ಕೇಳುತ್ತೀಯೆ?" ಶಾಸ್ತ್ರಿಗಳು ತಮಗೇ ಅಪಮಾನವಾದಂತೆ ಕೇಳಿದರು.

"ಯಾಕೆ ?"

"ಯಾಕೆ! ಚೆನ್ನಾಯ್ತು. ಹಿಂದೂಮತದಲ್ಲಿ ಜಾತಿಕೆಟ್ಟೋರನ್ನ ಮತ್ತೆ ತೆಗೆದುಕೋತಾರೇನಯ್ಯಾ? ಅದರಲ್ಲಾಗಿ ನಮ್ಮದು ಬ್ರಾಹ್ಮಣ ಕುಲ!" ಶಾಸ್ತ್ರಿಗಳು ಬಾಂಬು ಹಾಕಿದರು.

"ಆ!" ಸೂರಪ್ಪನು ಗಾಬರಿಯಾದನು.

ದೇವಮ್ಮನು ಬೆಚ್ಚಿದಳು. ದುಃಖವು ಹತ್ತಿಬಂದಿತು. ಗಂಗಮ್ಮನವರು "ಅಯ್ಯೋ!" ಅಂದರು. ಗುಂಡಮ್ಮನು "ಹೀಗೇ ಏನಾದರೂ ಇರುತ್ತೇ ಅಂತ ನಂಗೆ ಗೊತ್ತಿತ್ತು. ಆದಕ್ಕೇ ಆಗ ಎಚ್ಚರಿಸಿದ್ದು, ಇವನು ಹೇಳಿದಹಾಗೇ ದುಡುಕಿದ್ದರೆ ಏನು ಅನಾಹುತ ಆಗುತ್ತಿತ್ತೊ!" ಎಂದು ತನ್ನನ್ನು ಸಮರ್ಥಿಸಿಕೊಂಡಳು. ಮಗುವು ಗಾಢನಿದ್ರೆಯಲ್ಲಿತ್ತು.

"ಶಾಸ್ತ್ರಿಗಳೇ, ಹಾಗೆಂದರೆ ಹೇಗೆ? ಬೇರೆ ದಾರಿ ಇರಬೇಕು!" ಸೂರಪ್ಪನು ಒಪ್ಪಿಕೊಳ್ಳಲಿಲ್ಲ.

"ದಾರಿಯೇನೂ ಇಲ್ಲ—ಮತ್ತೆ ಹುಟ್ಟೋದನ್ನು ಬಿಟ್ಟು."

"ಇಷ್ಟು ಕಠಿಣವಾಗಬೇಡಿ. ದಯೆತೋರಿಸಬೇಕು!" ಅವನು ಅಂಗಲಾಚಿದನು.

"ಅಯ್ಯಾ, ಇದು ನಂಗೇನು ಇಷ್ಟವೆ? ದೇವಮ್ಮನ ವಿಚಾರ ನೀನು ನಂಗೆ ಹೇಳಬೇಕೆ? ಇದರಲ್ಲಿ ಕಾರಿಣ್ಯ, ದಯೆ ಇವಕ್ಕೇನು ಅವಕಾಶವಿದೆ? ಇರೋ ವಿಚಾರ ಅದು. ನಾನೇನು ಮಾಡಲಿ? ಯಾರೇನು ಮಾಡಬಲ್ಲರು, ಹೇಳು? ಮತಕ್ಕೆ ವಿರುದ್ಧವಾಗಿ ನಡೆಯೋದು ಹಾಗಿರಲಿ, ಹೇಳೋದೂ ಮಹಾ ಪಾಪ. ಯಾರ ಅನುಕೂಲಕ್ಕೂ ನಾನು ಬೇರೆ ಹೇಳಲಾರೆ. ನನ್ನ ಮಗಳೇ ಆಗಿದ್ದರೂ ಅಷ್ಟೇ. ಏನು ಮಾಡೋ

ದಪ್ಪಾ. ನಂಗೂ ವ್ಯಸನವೆ—ನಿನ್ನಷ್ಟೆ. ಆದರೆ ಇಂಥ ಕಷ್ಟದ, ದುಃಖದ ಸಂದರ್ಭಗಳು ಬಂದಾಗ ಸೈರಿಸಿಕೋಬೇಕು. ನಷ್ಟಕ್ಕೆ ಎದೆ ಗಟ್ಟಿಮಾಡಿ ಕೋಬೇಕು. ಬೇರೆ ಗತಿಯಿಲ್ಲ. ಹಾಗಲ್ಲದೆ, ಧರ್ಮಾಂಧರಾಗಿ ನಡೆದು ಮತಹಾನಿ ಮಾಡೋಕಾಗುತ್ತೆಯೆ? ಮಾಡೋದನ್ನ ಯಾರಾದರೂ ಒಪ್ಪುತ್ತಾರೋ, ಅದಕ್ಕೆ ಅವಕಾಶ ಕೊಡುತ್ತಾರೋ? ಎಲ್ಲ ವಿಧಿವಿಲಾಸ. ಅದೃಷ್ಟ ಇದ್ದ ಹಾಗೆ ನಡೆದುಹೋಗುತ್ತೆ. ಹಣೆಬರೆಹ. . . .''

''ಸಾಕು ಶಾಸ್ತ್ರಿಗಳೆ–ಉಪದೇಶ'' ಸೂರಪ್ಪನು ಬೇಸರದಿಂದ ತಡೆದ.

''ಅಪ್ಪಾ! ಅವರಿಗೆ ಅವಮಾನ ಮಾಡಬೇಡಪ್ಪಾ. ತಪ್ಪಾಯ್ತು ಅನ್ನು!'' ಗಂಗಮ್ಮನವರು ಬೆದರಿ ಹೇಳಿದರು.

''ನಂಗೇನೂ ಅವಮಾನವಿಲ್ಲ ತಾಯಿ. ಅದು ಅನ್ನೋರಿಗೇ ಅಶ್ರೇಯಸ್ಸು ಅಷ್ಟೆ. ಸೂರಪ್ಪನಿಗೆ ಬಹಳ ದುಃಖವಾಗಿದೆ. ಇನ್ನೂ ಹುಡುಗ. ದುಡುಕಿನಲ್ಲಿ ಏನಾದರೂ ಅಂತಾನೆ. ಅನ್ನಲಿ ಬಿಡಿ. ವಿವೇಕ ಹೇಳೋದು ನನ್ನ ಕರ್ತವ್ಯ. ಹಾಗೆ ಮಾಡುತ್ತೇನಿ, ಅಷ್ಟೆ.''

''ಕ್ಷಮಿಸಬೇಕು ಶಾಸ್ತ್ರಿಗಳೆ—ಅಂದದ್ದನ್ನು; ಆದರೆ ನಾನು ಈ ನಿರ್ಧಾರಕ್ಕೆ ಒಪ್ಪೋದಿಲ್ಲ. ಅವಳನ್ನು ಹೇಗಾದರೂ ತೆಗೆದುಕೊಳ್ಳಲೇ ಬೇಕು.''

ದೇವಮ್ಮನು ನೀರು ತುಂಬಿದ ಕಣ್ಣುಗಳನ್ನೆತ್ತಿ ಸೂರಪ್ಪನನ್ನು ಕೃತಜ್ಞತೆಯಿಂದ ನೋಡಿದಳು. ಮುಳುಗುವವರಿಗೆ ಸಿಕ್ಕಿದ ಜೊಂಡಿ ನಂತಿತ್ತು—ಅವನ ಮಾತು, ಅವಳಿಗೆ.

''ಎಲ, ಎಲಾ! ಏನುಹೇಳುತ್ತೀಯೋ ಸೂರಪ್ಪಾ! ಸ್ವಲ್ಪ ಪ್ರಜ್ಞೆ ತಂದುಕೊಂಡು ಯೋಚಿಸಿ ಮಾತಾಡು. ಅವಳನ್ನು ತೆಗೆದುಕೊಂಡರೆ ನೀವೆಲ್ಲ ಜಾತಿ ಕೆಡಬೇಕಾಗುತ್ತೆ ಗೊತ್ತೆ?'' ಶಾಸ್ತ್ರಿಗಳು ಎಚ್ಚರಿಸಿದರು.

''ಹಾಗಾಗೋದಕ್ಕೆ ಆಗುತ್ತೇನಪ್ಪಾ ಮಗು?'' ಗಂಗಮ್ಮನವರು ಎಚ್ಚೆತ್ತುಕೊಂಡರು.

''ನಾನುಬೇರೆ ಇಲ್ಲಿರೋದಿಲ್ಲ; ತಿರುಪೆಯಾದರೂ ಮಾಡಿಕೊಂಡು ಬಾಳುತ್ತೇನಿ'' ಗುಂಡಮ್ಮನು ಖಂಡಿತವಾಗಿ ಹೇಳಿದಳು.

''ಏನಾದರೂ ಆಗಲಿ—ನಂಗೆ'' ಸೂರಪ್ಪನು ಪಟ್ಟನ್ನು ಬಿಡಲಿಲ್ಲ.

"ಸೂರಪ್ಪಾ, ನಿಂಗೆಲ್ಲೋ ಹುಚ್ಚು ಹಿಡಿದಿದೆ. ನಿದಾನವಾಗಿ ಯೋಚಿಸು. ಸುಮ್ಮನೆ ಹಾಳಾಗಬೇಡ. ನೀನು ದೇವಮ್ಮನ ಜೊತೆಯಲ್ಲಿ ಬಾಳಿದರೆ ಏನೇನಾಗುತ್ತೆ ನೋಡು. ನಿನ್ನ, ಪ್ರಾಯಶಃ ಈ ಸಂಸಾರವನ್ನೆಲ್ಲ ಮರದವರು ಜಾತಿಯಿಂದ ಹೊರಗೆಹಾಕುತ್ತಾರೆ. ನಿಮ್ಮ ಬ್ರಾಹ್ಮಣ್ಯ ಹಾಳಾಗುತ್ತೆ—ಹುಂ, ಬ್ರಾಹ್ಮಣ್ಯ ಸಾಮಾನ್ಯವೆ? ಎಷ್ಟೋ ಸಾವಿರ ಜನ್ಮಗಳಲ್ಲಿ ಒಂದು ಬಾರಿ ಬ್ರಾಹ್ಮಣನಾಗಿ ಹುಟ್ಟೋದು. ತಿಳೀತೆ? ಅದನ್ನೂ ಕಳೆದುಕೊಂಡು ಚಂಡಾಲನಾಗುತ್ತೀಯೆ. ಇಲ್ಲಿ ನಿನ್ನನ್ನು ಯಾರೂ ಇರಗೊಡಿಸುವುದಿಲ್ಲ. ಮನೆ, ಮಠ, ಭೂಮಿ, ಕಾಣಿ, ಊರು, ಕೇರಿ ಎಲ್ಲ ಬಿಟ್ಟು ಹೋಗಬೇಕು. ಅಷ್ಟೇ ಅಲ್ಲ. ಇಂಥ ಸದ್ವಂಶಕ್ಕೆ ಕಳಂಕತಂದು ನಿರ್ಮೂಲಮಾಡಿದ ಅಪಕೀರ್ತಿ ಎಂದೆಂದಿಗೂ ನಿನ್ನದಾಗುತ್ತೆ. ಒಟ್ಟು ಇಲ್ಲಿಯ ಜನಕ್ಕೇ ಹೀನಾಯವಾಗುತ್ತೆ. ಅದೂ ಹೋಗಲಿ ಅಂದರೆ, ನಿಮ್ಮ ವಂಶವನ್ನಾದರೂ ಜ್ಞಾಪಿಸಿಕೊ. ಅಷ್ಟು ಪುರಾತನ ಕಾಲದಿಂದ ನಡೆದುಕೊಂಡುಬಂದ ವಂಶ. ನಿಮ್ಮ ಪೂರ್ವಜರು ಎಷ್ಟು ಜನ ಇರಬೇಕು? ಅಂಥ ಶ್ರೇಷ್ಠ ಬ್ರಾಹ್ಮಣರು—ಮಹರ್ಷಿ ಭಾರದ್ವಾಜರ ಗೋತ್ರದವರು. ಆಚಾರವಂತರು, ಕೀರ್ತಿವಂತರು. ಅವರ ಧರ್ಮ ಇಲ್ಲಿಯವರೆಗೂ ಸಂತತವಾಗಿ ನಡೆದುಕೊಂಡು ಬಂದಿದೆ. ಅವರೆಲ್ಲ ಸ್ವರ್ಗದಲ್ಲಿ ಸುಖವಾಗಿದಾರೆ. ಈಗ ನೀನು ಆ ವಂಶವನ್ನು ಕೆಡಿಸಿ ಕೊನೆಗಾಣಿಸುತ್ತೀಯೆ? ಹಾಗೆಮಾಡಿದರೆ ಮಹಾಯಜ್ಞ ಮಾಡುತ್ತ ಹವಿಸ್ಸನ್ನು ನಾಯಿಗೆ ಇಟ್ಟಹಾಗಾಗುತ್ತೆ. ನಿನ್ನ ಯೋಗ್ಯತೆ ಏನಾಯ್ತು? ನಿಂಗೆ ಏನು ಶಿಕ್ಷೆಯಾಗುತ್ತೆ, ಯೋಚಿಸಿಕೊ! ಎಲ್ಲ ಯಾತಕ್ಕಾಗಿ? ಕೇವಲ ಒಂದು ಹೆಣ್ಣು ಜೀವಕ್ಕಾಗಿ. ಹಾಗೆಂದರೆ ಅದನ್ನು ಕಡೆಗಾಣಿಸಬೇಕು ಅಂತ ಹೇಳೋದಿಲ್ಲ. ಮನುಷ್ಯಮಾತ್ರಕ್ಕೆ ಸಾಧ್ಯವಾಗಿ ಧರ್ಮ ವಿರುದ್ಧವಾಗಿರವೇ ಇದ್ದಾಗಲೆಲ್ಲ ಅದನ್ನು ರಕ್ಷಿಸಲೇಬೇಕು. ಆದರೆ ಹೀಗೆ ವಿಧಿಯಿಲ್ಲದೆ ಬಂದಾಗ ಏನುಮಾಡೋದು? ಅದಕ್ಕಾಗಿ ಅಷ್ಟೊಂದು ಪಾಪದ ಹೊರೆ ಹೊತ್ತುಕೊಳ್ಳೋದು, ಕಷ್ಟಪರಂಪರೆಗೆ ಒಳಗಾಗೋದು ಸರಿಯೇ? ನ್ಯಾಯಸಮ್ಮತವೆ? ಹೆಚ್ಚು ಯಾವುದು ಅಂತ ನೋಡಿ ಅದಕ್ಕೆ ಪ್ರಾಮುಖ್ಯತೆ ಕೊಡಬೇಡವೆ? ಇಂಥ ಸಂದರ್ಭದಲ್ಲಿ ಹೆಂಡತಿ ಅನ್ನೋ

ವ್ಯಾಮೋಹ ಬಿಡಬೇಡವೆ? ಯೋಚಿಸು. ನಿಂಗೇ ಗೊತ್ತಾಗುತ್ತೆ....." ಮೊದಲಾಗಿ ದೀರ್ಘವಾಗಿ ಉಪದೇಶಿಸಿದರು.

ಇದರ ಪರಿಣಾಮ ಮೊದಲು ಗಂಗಮ್ಮನವರ ಮೇಲಾದುದು ಕಂಡಿತು. ಅವರು "ಮಗು, ಶಾಸ್ತ್ರಿಗಳ ಮಾತುಗಳನ್ನು ವಿಚಾರಕ್ಕೆ ತೆಗೆದುಕೋಬೇಕಪ್ಪಾ. ಹಟಹಿಡಿಯಬೇಡ" ಎಂದು ಶಾಸ್ತ್ರಿಗಳಿಗೆ ಒತ್ತಾಸೆಕೊಟ್ಟರು. ಇಲ್ಲಿಯವರೆಗೆ ಅನುತಾಪತೋರಿಸುತ್ತ ಆಶೆ ಹುಟ್ಟಿಸಿದ್ದ ಅತ್ತೆಯು ಹೀಗೆ ಮಾರ್ಪಟ್ಟುದು, ದೇವಮ್ಮನಿಗೆ ತನ್ನ ಊರುಗೋಲೊಂದು ಬಿದ್ದುಹೋದಂತಾಯಿತು ಅವಳು "ಅಯ್ಯೋ!" ಎಂದುಕೊಂಡು ಬಾಯಿಗೆ ಕೈಗೊಟ್ಟು ಉಕ್ಕಿಬರುವ ದುಃಖವನ್ನು ತಡೆಯುತ್ತಿದ್ದಳು. ತಾಯಿಯ ಮಾತನ್ನು ಕೇಳಿದಮೇಲೂ ಕೊಂಚಕಾಲ ಸೂರಪ್ಪನು ನಿಶ್ಚೇಷ್ಟಿತನಾಗಿ ಕಲ್ಲಿನ ಪ್ರತಿಮೆಯಂತೆ ನಿಂತಿದ್ದವನು ಕಡೆಗೆ "ಇನ್ನೇನು ಮಾಡೋದಮ್ಮಾ?" ಎಂದು ಕ್ಷೀಣಸ್ವರದಲ್ಲಿ ಕೇಳಿದನು. ತಾನು ನಂಬಿದ್ದ ಗಂಡನೊಬ್ಬನೂ ಹೀಗೆ ಅನಿರ್ಧಾರದ ಮಾತನ್ನು ಹೇಳಿದಾಗ, ಆ ಬಡ ಹುಡುಗಿಗೆ ಬರಸಿಡಲು ಬಡಿದಂತಾಯಿತು. ನೀರಿನಲ್ಲಿ ಬಿದ್ದಿದ್ದರೂ, ಇಲ್ಲಿಯವರೆಗೆ ಈ ಜೊಂಡನ್ನು ಹಿಡಿದು ಅವಳು ಒದ್ದಾಡುತ್ತಿದ್ದಳು. ಈಗ ಇದೂ ಕಿತ್ತುಹೋಗಿ ಅವಳು ನಡುಪ್ರವಾಹದ ರಭಸಕ್ಕೆ ಸಿಕ್ಕಿದಳು. ತನ್ನ ದುಃಖದಲ್ಲಿ ದಿಕ್ಕೇತೋಚದೆ ಹುಚ್ಚಳಂತಾಗಿ ಆರ್ತಸ್ವರದಿಂದ "ಕೈ ಬಿಡಬೇಡಿ! ಕಾಪಾಡಿ!" ಎಂದು ಅವನ ಕಡೆಗೆ ಕೈ ನೀಡಿದಳು. ಅವನು ತನ್ನ ಕೈ ಕೊಡಹುತ್ತ "ಛೇ! ಇದೆಂಥ ಸಂಕಟಬಂತಲ್ಲ!" ಎಂದು ಒದರಿದ.

"ಕೆಟ್ಟೋಳಂತೂ ಕೆಟ್ಟಳು. ಅಲ್ಲೇ ಆದರೂ ಸರಿಹೋಗಿಸಿಕೊಂಡಿದ್ದರೆ, ಈ ಫಜೀತಿಯಾದರೂ ಯಾರಿಗೂ ಇರುತ್ತಾ ಇರಲಿಲ್ಲ" ಗುಂಡಮ್ಮನು ನಿರ್ದಾಕ್ಷಿಣ್ಯವಾಗಿ ಹೇಳಿದಳು.

"ಅತ್ತಿಗೆಮ್ಮಾ!" ದೇವಮ್ಮನು ಶೂಲದಿಂದ ಎದೆ ಇರಿಯಲ್ಪಟ್ಟ ಪ್ರಾಣಿಯಂತೆ ಹೇಳಿದಳು.

"ಹುಂ. ಆಗ ನೀನೂ ಒಂದು ದಾರಿ ಹತ್ತಬಹುದಾಗಿತ್ತು. ಈಗ ನೋಡು. ನಾನು ನಿಷ್ಠುರವಾಗಿ ಹೇಳತೀನಿ ಅಂತ ನೊಂದುಕೋಬೇಡ;

ನಮ್ಮಲ್ಲಿ ಜಾತಿಕೆಟ್ಟೋರಿಗೆ ಇರೋದು ಎರಡೇ: ಹೊಸ ಜಾತೀಲಿ ಇರೋದು, ಇಲ್ಲ ಸಾಯೋದು!"

"ಅಯ್ಯೊ, ನಾನು ಸಾಯಬೇಕಾಗಿತ್ತು. ಅದೇ ಸುಲಭವಾಗಿತ್ತು ಮೋಸಹೋದೆ. ಇಲ್ಲಿಗೆ ಬರೋ ಆಶೆ ಇಟ್ಟುಕೊಂಡು ಬದುಕೋದಕ ಇಷ್ಟಪಟ್ಟೆ. ಅದಕ್ಕಾಗಿ ಮಾಡಬಾರದ್ದನ್ನೆಲ್ಲ ಮಾಡಿದೆ, ಸಹಿಸಿದೆ... ಅಯ್ಯೋ" ದೇವಮ್ಮನು ಗೋಳಾಡಿದಳು.

"ಸುಮ್ಮನೆ ಇರಬಾರದೇನೇ ಗುಂಡಿ? ಹೀಗೆ ಕಠಿಣವಾಗಿ ಹೇ ಹೇಳಿ ಯಾಕೆ ನೋಯಿಸುತ್ತೀಯಾ ಅವಳನ್ನ ಪಾಪ! ಏನಾದರ ಒಂದು ಸಮಾಧಾನದ ಏರ್ಪಾಡಿಗೆ ಬರೋಣ!" ಗಂಗಮ್ಮನವ ಏನನ್ನೋ ಯೋಚಿಸಿಕೊಂಡು ಹೇಳಿದರು.

"ಹ್ಞ! ಕೊಂದಮೇಲೆ ಒಳ್ಳೇ ಸಮಾಧಾನ!" ಸೂರಪ್ಪನ ತಿರಸ್ಕಾರದಿಂದ ಹೇಳಿದನು.

"ಅಪ್ಪಾ, ಅದೃಷ್ಟ ಕೆಟ್ಟಾಗ ಬೇಕಾದ್ದು ಮಾಡೋದಕ್ಕೆ ಸಾಧ್ಯ ಹೇಳು? ಹೀಗೆಲ್ಲ ಆಡಬೇಕಾಗುತ್ತೆ. ಬೇಡವಾದ್ದನ್ನೆಲ್ಲ ಮಾಡಬೇಕ ಗುತ್ತೆ. ನನ್ನ ಎದೆಯೂ ಬೆಂದು ಹೋಗ್ತಾ ಇದೆ, ಗೊತ್ತೆ? ನಿಂ ಹೆಂಡತಿಯಾದರೆ ನಂಗೆ ಸೊಸೆ ಅಲ್ಲವೆ? ಒಬ್ಬಳೆ ಸೊಸೆ. ಅಂಥ ಸೊ ನಮ್ಮ ವಂಶ ಉಳಿಸಿರೋಳು? ನನ್ನ ಮಗಳು ಅಂತ ತಿಳಿದುಕೊಂಡಿದೀ ಇವಳನ್ನು ಬಿಟ್ಟರೋದು ನಂಗೇನು ಸ್ವಲ್ಪದ ದುಃಖವೇ? ಆದರೇನ ಮಾಡೋದು? ಮತ-ಧರ್ಮ ಬಿಟ್ಟು ನಾವೆಲ್ಲ ಹಾಳಾಗೋದಕ್ಕಾಗ ತ್ತೆಯೇ? ಅದಕ್ಕೆ ತಲೆ ತಗ್ಗಿಸಲೇಬೇಕು. ಬೇಕಾದರೆ ತಲೇನ ಕೊಡಬೇಕು. ಅದೇ ಶ್ರೇಯಸ್ಸು!" ಗಂಗಮ್ಮನವರು ಖಿನ್ನರಾ ಹೇಳಿದರು.

"ನ್ಯಾಯವಾದ ಮಾತುಗಳು!" ಶಾಸ್ತ್ರಿಗಳು ತಲೆದೂಗಿದರು.

"ಏನು ನ್ಯಾಯವೋ, ಏನು ಧರ್ಮವೋ, ಏನು ಮತವೋ ನಂ ಒಂದೂ ತಿಳಿಯೋಹಾಗಿಲ್ಲ. ನನ್ನ ಬುದ್ಧಿಯೇ ಕೆಟ್ಟುಹೋಗಿದೆ. ಏನ ಬೇಕಾದರೂ ಮಾಡಿ; ನನ್ನಿಂದ ಮಾಡಿಸಿಕೊಳ್ಳಿ. ಧರ್ಮ ಕರ್ಮ ಎಲ್ಲಾ ನಿಮ್ಮದು. ದೇವರು ನೋಡಿಕೊಳ್ಳಲಿ— ನ್ಯಾಯವನ್ನು. ಅವನೆ

ದಯೆಯಿಡಬೇಕು. ನಮ್ಮಮೇಲೆ!'' ಸೂರಪ್ಪನು ನಿಸ್ಸಹಾಯಕನಾಗಿ ನುಡಿದು ಸುಮ್ಮನಾದನು.

"ಶಾಸ್ತ್ರಿಗಳೆ, ನಿಮಗೆ ಯಾವದಾರಿಯೂ ಹೊಳೆಯೋದಿಲ್ಲವೆ?'' ಗಂಗಮ್ಮನವರು ಕೇಳಿದರು.

"ಕಠಿಣವಾಗಿ ಹೇಳಿದರೂ ಗುಂಡಮ್ಮ ಒಂದು ದಾರೀನೇನೋ ತೋರಿಸಿದ್ದಾಳೆ!''

"ಏನು, ಅಲ್ಲಿಗೇಹೋಗಿ ಬಾಳೋದೆ? ಶಿವ! ಶಿವ! ನಿಮಗೆ ಹೇಳೋದಕ್ಕಾದರೂ ಮನಸ್ಸು ಹೇಗೆ ಬರುತ್ತೆ? ಎಂದಿಗಾದರೂ ಹೋದೇನೆ?'' ದೇವಮ್ಮನು ತಾಳ್ಮೆ ಮೀರಿ ಕೂಗಿಕೊಂಡಳು.

"ಬರಿ ಹುಚ್ಚು!'' ಸೂರಪ್ಪನು ರೇಗಿದನು.

"ಹೋಗಬೇಕು ಅಂತಲ್ಲ ನಾನು ಹೇಳಿದ್ದು. ಸಾಧ್ಯವಾದ ದಾರಿ ಒಂದನ್ನು ಸೂಚಿಸಿದೆ ಅಷ್ಟೆ. ಇನ್ನೇನು ಮಾಡಬಹುದು, ಯಾರಾದರೂ ಹೇಳಿ ಮತ್ತೆ?'' ಶಾಸ್ತ್ರಿಗಳು ತಿದ್ದಿಕೊಂಡು ತಮ್ಮ ಸರದಿಯಲ್ಲಿ ಸಿಟ್ಟಾದರು.

"ಶಾಸ್ತ್ರಿಗಳೆ, ಇವಳು ಇಲ್ಲೇ ಬೇರೆ ಇರೋಹಾಗೆ ಏರ್ಪಾಡು ಮಾಡಿದರೋ?'' ಗಂಗಮ್ಮನವರು ತಮ್ಮ ಯೋಚನೆಯನ್ನು ಹೇಳಿದರು.

"ಹೂಂ. ಅದೂ ಒಂದು ದಾರಿಯೆ. ಆದರೆ ಇಲ್ಲಿ ಮುಸಲ್ಮಾನರು ಯಾರೂ ಇಲ್ಲ. ಇವಳೇ ಬೇರೆಯಕಡೆ ಬೇರೆಯ ಬೀದಿಯಲ್ಲಿ ಇರಬೇಕಾಗುತ್ತೆ!'' ಶಾಸ್ತ್ರಿಗಳು ಯೋಚಿಸುತ್ತ ಸಮ್ಮತಿಸುತ್ತ ನಿದಾನವಾಗಿ ಹೇಳಿದರು.

"ಏನು, ಬೇರೆ ನಾನೊಬ್ಬಳೇ, ನಿಮ್ಮನ್ನು ಬಿಟ್ಟು ಈ ಕಂದನನ್ನು ಬಿಟ್ಟು ಈ ಹಾಳು ಬಾಳನ್ನು ಸಾಗಿಸಲೆ? ಬೇಡಿ. ಮತ್ತೆ ನಿಮ್ಮ ಮನೆ ಸೇರೋದಕ್ಕೆ ಆಗದೇ ಇದ್ದರೆ, ನಿಮ್ಮ ಸೇವಕಳಾಗಿ ಆದರೂ ಇಟ್ಟುಕೊಳ್ಳಿ. ಇಲ್ಲೇ ಹೊರಗೆ ಹೋರಗೇ ಇರುತ್ತೀನಿ'' ಗಂಡನನ್ನು ದೈನ್ಯದಿಂದ ಬೇಡಿಕೊಂಡಳು.

ಉತ್ತರಕ್ಕಾಗಿ ಸೂರಪ್ಪನೂ, ಗಂಗಮ್ಮನವರೂ ಶಾಸ್ತ್ರಿಗಳ ಮುಖವನ್ನು ನೋಡಿದರು.

"ಅದು ಹೇಗಾದೀತು ಗಂಗಮ್ಮನ್ನೋರೆ? ಮುಸಲ್ಮಾನರೋಳು—ಮ್ಲೇಚ್ಛರೋಳು, ಮನೆಯ ಸುತ್ತ ಸುತ್ತ ಸುಳಿದಾಡ್ತಾ ಇದ್ದರೆ, ಏನು ಆಚಾರ ಉಳಿಯುತ್ತೆ ಹೇಳಿ? ಈ ಬೀದಿಯೋರಾದರೂ ಒಪ್ಪುತ್ತಾರೋ? ಎಂದಿಗೂ ಇಲ್ಲ" ಶಾಸ್ತ್ರಿಗಳು ಖಂಡಿತವಾಗಿ ಹೇಳಿದರು

"ಅಯ್ಯೋ, ಅದಾಗದು ಆಗದು. ನನ್ನ ಬಿಡಬೇಡಿ. ಹಾಗೆ ಬಾಳಲಾರೆ. ನಂಗೆ ತೌರಿಲ್ಲ ಎಲ್ಲರನ್ನೂ ಕಳೆದುಕೊಂಡ ಅನಾಥೆ. ನೀವೇ ಗತಿ!" ದೇವಮ್ಮನು ತೊಡೆಯಮೇಲೆ ಮಲಗಿದ್ದ ಮಗುವಿದ್ದಂತೆಯೇ ತೆವಳಿಕೊಂಡು ಗಂಡನ ಕಡೆಗೆ ಸರಿದು ಕೈಜೋಡಿಸಿದಳು.

"ಏನುಮಾಡು ಅಂತೀಯ? ನಿಂಗಂತೂ ಇಲ್ಲಿ ಸ್ಥಳವಿಲ್ಲ ಅನ್ನೋದು ಖಂಡಿತವಾಯ್ತು. ನಾನೂ ನಿನ್ನ ಜೊತೇಲಿ ಬರಲೇನು? ನಡಿ. ಹಾಗೆ ಆಗಲಿ. ಈ ಹಾಳು ಜಾತಿ, ಮತ, ಧರ್ಮ, ಆಚಾರ—ಮಾನವತೆಗೇ ಅವಕಾಶಕೊಡದ ಈ ಗೊಂದಲವೆಲ್ಲ ಹಾಳಾಗಿಹೋಗಲಿ! ಯಾರಿಗೆ ಬೇಕು ಏನುಬೇಕಾದರೂ ಆಗಲಿ. ನಾನು ಎಲ್ಲಕ್ಕೂ ಸಿದ್ಧ!" ಸೂರಪ್ಪನು ಕಿರಿಚಿಕೊಂಡನು

"ಅಪ್ಪಾ! ಅಪ್ಪಾ! ಮಗು! ಇದೇನು, ಸ್ವಲ್ಪವೂ ಪರಿಜ್ಞಾನವಿಲ್ಲದೆ ಮಾತಾಡುತ್ತಿದೀಯೆ?" ಗಂಗಮ್ಮನವರು ಗಾಬರಿಯಾದರು.

"ಅವನಿಗೇನೋ ಹುಚ್ಚೇ ಹಿಡಿದಿದೆ—ಹೀಗಾಡುತ್ತಿದ್ದಾನೆ" ಗುಂಡಮ್ಮನು ಗದರಿಸಿಕೊಂಡಳು.

"ಇನ್ನು ನಿಮ್ಮ ನಿಮ್ಮ ಪಾಡು. ನಾನು ಹೇಳಿದ್ದಾಯ್ತು. ಅವಿವೇಕ ಮಾಡಿದರೆ ನೀವೇ ಅನುಭವಿಸುತ್ತೀರಿ. ಎಚ್ಚರವಾಗಿರಿ!" ಶಾಸ್ತ್ರಿಗಳು ಸಿಟ್ಟಾಗಿ, ನಿಲ್ಲದೆ ಹೊರಟೇ ಹೋದರು. ಗಂಗಮ್ಮನವರು ಕೂಗಿದದು ಪ್ರಯೋಜನವಾಗಲಿಲ್ಲ.

"ಇವನ ಅವಿವೇಕವನ್ನೆಲ್ಲ ಅವರು ಯಾಕೆ ಸೈರಿಸಿಕೊಂಡು ಇಲ್ಲಿರುತ್ತಾರೆ? ಹೋದರು. ಇನ್ನು ಇವನು ಸರ್ವನಾಶಮಾಡುತ್ತಾನೆ. ದೇವರೇ ಕಾಪಾಡಬೇಕು!" ಗುಂಡಮ್ಮನು ಆಕ್ರೋಶದಿಂದ ಹೇಳಿದಳು.

ಸ್ವಲ್ಪಹೊತ್ತು ಎಲ್ಲರೂ ಸುಮ್ಮನಿದ್ದರು. ಯೋಚಿಸುತ್ತಿದ್ದರು. ಅನಂತರ ಗಂಗಮ್ಮನವರು ಸೊಸೆಯ ಕಡೆಗೆ ತಿರುಗಿ:

'ಅವ್ವಾ, ನೀನು ಆಗಲೇ ಒಂದು ಸಾರಿ ನಮ್ಮ ವಂಶವನ್ನು ಉಳಿಸಿದ್ದೀಯೆ. ಆದರೆ ಈಗ ಅದಕ್ಕಿಂತ ಹೆಚ್ಚಾದ ರೀತಿಯಲ್ಲಿ ಎರಡನೆಯ ಸಾರಿ ಅದನ್ನು ನೀನೇ ಉಳಿಸೋಕಾಲ ಬಂದಿದೆ. ನನ್ನ ಮಗನಂತೂ ನೀನು ಹೇಳಿದಹಾಗೆ ಕೇಳುತ್ತಾನೆ. ನ್ಯಾಯವಿರಬಹುದು! ಆದರೆ ನೀನು ನಿನ್ನ ವಂಶಕ್ಕೇ ಯಾವುದು ಯೋಗ್ಯ ಅಂತ ಯೋಚಿಸಬೇಕು ದೊಡ್ಡ ದುರದೃಷ್ಟ ನಿನ್ನನ್ನು ಕವಿದುಕೊಂಡಿದೆ; ನಿಜ. ಅದರ ನಿವಾರಣೆಗೆ ನಮಗೆ ಸಾಧ್ಯವಾದದ್ದನ್ನೆಲ್ಲ ಮಾಡಬೇಕು ಅನ್ನೋದು ನಮ್ಮಿಷ್ಟ. ಆದರೆ ನಿಂಗೆ ಸಂತೋಷವಾಗೋ ಅಷ್ಟು, ನಿನ್ನ ಜೀವನ ಸುಖವಾಗೋ ಅಷ್ಟು ಮಾಡೋದು ನಮ್ಮ ಸ್ಥಿತಿಯಲ್ಲಿ ಆಗೋದಿಲ್ಲ ಅನ್ನೋ ವ್ಯಸನ ನಮ್ಮನ್ನೆಲ್ಲ ತುಂಬಿದೆ ಆದರೇನು? ನಾವು ಅಸಹಾಯಕರು. ನಿರ್ಬಂಧಕ್ಕೆ ಸಿಕ್ಕಿದೀವಿ. ನೀನೇ ನೋಡು ಹೀಗಿದೆ ಅಂತ ನಿನ್ನ ದುರದೃಷ್ಟವನ್ನು ಈ ಮನೇಮೇಲೂ ಹಾಕೋದು ಸರಿಯೆ? ನಿನ್ನ ಕಳೆದುಕೊಂಡ ದುಃಖವೇ ಅದಕ್ಕೆ ಸಾಲದೆ? ಈಗ ನೀನು ಸಹಾಯವಾಗಿ ನಮ್ಮನ್ನು ಉಳಿಸಬೇಕು. ನಾನು ಕೇಳುತ್ತ ಇರೋದು ಬಲುದೊಡ್ಡದು. ನಂಗೆ ಗೊತ್ತು. ನಾನು ಹೆಂಡತಿಯಾಗಿ ತಾಯಿಯಾಗಿ ಬಾಳಿದೋಳೇ. ಆದರೆ ನಿನ್ನ ಎದೆಯೂ ದೊಡ್ಡದೆ. ನನ್ನ ಈ ಬೇಡಿಕೆಯನ್ನು ನಡೆಸಿಕೊಟ್ಟು ಪುಣ್ಯಕಟ್ಟಿಕೊ! ನನ್ನ ಏರ್ಪಾಡಿಗೆ ಒಪ್ಪಿಕೊ! ಆದಷ್ಟೂ ನಿಂಗೆ ಅನ್ಯಾಯವಾಗದಹಾಗೆ ನೋಡಿಕೋತೇವೆ. ನಮ್ಮ ಮನೆ ಉಳಿಸಿದ ದೇವತೆ ಅಂತ ನಿನ್ನ ಹೆಸರಿನಲ್ಲಿ ದೀಪ ಹಚ್ಚಿಡುತ್ತೇವೆ. ನಿನ್ನ ವಂಶವನ್ನು ನೀನೇ ಕಾಪಾಡಬೇಕು" ಎಂದು ಕೇಳಿಕೊಂಡರು.

ಗಂಗಮ್ಮನವರ ಮಾತನ್ನು ಕೇಳಿ ಎಲ್ಲರೂ ಸ್ತಬ್ಧರಾದರು. ದೇವಮ್ಮ ಅಳುವುದನ್ನು ನಿಲ್ಲಿಸಿ ತೀಕ್ಷ್ಣವಾಗಿ ಯೋಚಿಸತೊಡಗಿದಳು. ಕೆಲವು ನಿಮಿಷಗಳು ಕಳೆದುವು ಗಂಗಮ್ಮನವರು

"ಒಪ್ಪಿಕೊಳ್ಳುತ್ತೀಯಾ ತಾಯಿ?" ಎಂದು ಕೇಳಿದರು.

"ಅ?"

"ಒಪ್ಪಿಕೊಂಡು ಉದ್ಧಾರಮಾಡವ್ವಾ!"

"ಅಯ್ಯೊ, ಹೇಗೆ ಒಪ್ಪಿಕೊಳ್ಳಲಿ?"

"ಬಿಡು. ಬೇಡ!" ಸೂರಪ್ಪನು ಹೇಳಿದನು

"ಇಲ್ಲ....ಇಲ್ಲ....ಈ ಮನೆ ಹಾಳಾಗಬಾರದು ಆಗಲಿ ....ಹೇಗಾದರೂ ಆಗಲಿ—ನನ್ನ ಗತಿ!" ದೇವಮ್ಮನು ನಿರಾಶಳಾಗಿ ಒಪ್ಪಿಬಿಟ್ಟಳು.

"ಎಲೆ ಹುಚ್ಚಿ! ಇದೇನು, ನಿನ್ನ ಆತ್ಮಹತ್ಯೆ! ನಾನು ಹೇಗೆ ಒಪ್ಪಲಿ ಇದಕ್ಕೆ?" ಸೂರಪ್ಪನು ಆಶ್ಚರ್ಯ, ಖೇದಗಳಿಂದ ಹೇಳಿದನು.

"ಬೇರೆ ಮಾಡೋಹಾಗಿಲ್ಲ" ದೇವಮ್ಮನು ನಿರ್ಧಾರವನ್ನು ಹೇಳಿದಳು.

"ತಾಯಿ! ನೀನೇ ನಮ್ಮ ಮನೆ ದೇವರಮ್ಮಾ. ದೇವರು ನಿಂಗೆ ಒಳ್ಳೇದು ಮಾಡಲಿ!" ಗಂಗಮ್ಮನವರು ಆತುರದಿಂದ ಹೇಳಿ ಸಮಾಧಾನ ಹೊಂದಿದರು.

"ಸದ್ಯ ಹೇಗೋ ಅನಾಚಾರ ತಪ್ಪಿತಲ್ಲಾ!" ಗುಂಡಮ್ಮನು ತೃಪ್ತಿಹೊಂದಿದಳು

"ಹುಂ, ನೋಡೋಣ" ಸೂರಪ್ಪನು ಅನಿಶ್ಚಯದಿಂದ ಸುಮ್ಮನಾದನು.

ಗಂಟೆ ಎರಡಾಗಿತ್ತು. ಮಲಗುವ ಪ್ರಯತ್ನ ನಡೆಯಿತು. ದೇವಮ್ಮನು ಆ ರಾತ್ರಿ ಹೊರಗೆ ಮುಟ್ಟಾದವರ ಹೊರಕೋಣೆಯಲ್ಲಿ ಮಲಗಬೇಕೆಂದು ನಿಶ್ಚಯವಾಯಿತು. ಗಂಗಮ್ಮನವರು "ಬಟ್ಟೆಬಿಚ್ಚಿ ಮಗುಕೊಡು" ಅಂದರು. ದೇವಮ್ಮನು "ಇಲ್ಲ. ಹೇಗಿದ್ದರೂ ನನ್ನ ಬಳಿ ಬಂದಿದೆ. ಈ ಒಂದು ರಾತ್ರಿ ನನ್ನ ಹತ್ತಿರದಲ್ಲೇ ಇರಲಿ!" ಎಂದು ಬೇಡಿಕೊಂಡಳು. ಒಪ್ಪಿಗೆ ಸಿಕ್ಕಿತು. ಗಂಗಮ್ಮನವರು ಚಾಪೆ, ಹಳೆಯ ಸೀರೆ, ಕಂಬಳಿಯನ್ನು ಕೊಟ್ಟರು. ದೇವಮ್ಮನು ಮಗುವನ್ನು ಮಲಗಿಸಿಕೊಂಡು ಮಲಗಿದಮೇಲೆ, ಉಳಿದವರು ಒಳಗೆ ಮಲಗಿದರು.

ದೇವಮ್ಮನಿಗೆ ನಿದ್ದೆ ಹೇಗೆ ಹತ್ತೀತು? ಯೋಚನೆಗಳು ಅವಳನ್ನು ಬಾಧಿಸುತ್ತಿದ್ದುವು ತನ್ನ ಹಿಂದಿನ ಜೀವನವೆಲ್ಲ ಅವಳ ಕಣ್ಣುಮುಂದೆ ಹಾಯ್ದಿತು. ಆಗತಾನೆ ನಡೆದಿದ್ದ ಮಾತುಕತೆಗಳು ಮತ್ತೊಮ್ಮೆ ಮನಸ್ಸಿನಲ್ಲಿ ಹರಿದುವು. ಅವಳು ದೀರ್ಘವಾಗಿ ನಿಟ್ಟುಸಿರೊಂದನ್ನು ಬಿಟ್ಟಳು.

ಚಳಿಯ ಗಾಳಿ ಬೀಸಿತು. ಮಗುವು ನಡುಗಿತು. ಅವಳು ಕಂಬಳಿಯನ್ನೂ ಜೋಡಿಸಿದ್ದ ಸೀರೆಯನ್ನೂ ಸರಿಮಾಡಿ ಹೊದ್ದಿಸಿ, ಮಗುವನ್ನು ತನ್ನ ಎದೆಯ ಕಡೆಗೆ ಸರಿಸಿಕೊಂಡಳು. ಹಾಗೇ ಆ ಸೀರೆಯ ನೆನಪು ಬಂತು. ಅದು ತನ್ನ ಗಂಡನು ತನಗೆ ಮೊದಲಸಾರಿ ಆರಿಸಿ ತಂದುಕೊಟ್ಟಿದ್ದುದು. ಅದನ್ನು ಅವಳು ಉಟ್ಟಾಗಲೆಲ್ಲ ಅವನು ಬಹಳವಾಗಿ ಮೆಚ್ಚಿಕೊಳ್ಳುತ್ತಿದ್ದನು ಹುಂ; ಅವನು ಯಾವಾಗಲೂ ಹಾಗೆಯೆ. ಅವಳನ್ನು ಕಂಡರೆ ಹುಚ್ಚನಂತಾಗುತ್ತಿದ್ದನು. ಈಗಲೂ ಹಾಗೇ ಅಲ್ಲವೆ? ಉಹುಂ. ಆ ಹುಚ್ಚಿಗೆ ಇನ್ನು ಆಸ್ಪದಕೊಡದಂತೆ ಮಾಡಬೇಕು. ನಿಜ.... ಆ ಕಂಬಳಿಯೊ? ಅದನ್ನು ನಿಷೇಕದಲ್ಲಿ ತಂದೆಯವರು ಕೊಟ್ಟಿದ್ದರು. ಹಾ! ಈಗ ತಂದೆಯವರಿದ್ದರೆ? ತಾಯಿ ಇದ್ದರೆ? ಅವರು ಹೀಗೆ ದೂರ ಮಾಡುತ್ತಿದ್ದರೆ? ಎಂದಿಗೂ.. ಏನೊ, ಯಾರಿಗೆಗೊತ್ತು? ಮತದ ಪ್ರಭಾವ ಎಲ್ಲೆಲ್ಲಿಯವರೆಗೆ ಹೋಗುವುದೋ! ಹುಂ, ಅದೇಕೆ ಯೋಚನೆ —ಅವರೇ ಇಲ್ಲದಾಗ ..ಆ ಕಂಬಳಿ ಎಷ್ಟು ಸುಖವನ್ನು ಕಂಡಿದ್ದಿತು! ಒಂದು ಬಾರಿ ಕಳ್ಳರು ಮನೆಗೆ ಬಿದ್ದಾಗ, ಬಾಕಿಯದರ ಜೊತೆಗೆ ಈ ಕಂಬಳಿಯನ್ನೂ ಹೊತ್ತುಕೊಂಡು ಹೋಗಿದ್ದರು. ಆದರೆ ಅದೂ ಪತ್ತೆಯಾಯಿತು. ಉಣ್ಣೆಗೆ ದೋಷವಿಲ್ಲವೆಂದು ಬಿಸಿಲಿಗೆ ಹಾಕಿ ಇವರು ಮತ್ತೆ ಉಪಯೋಗಿಸಿದರು. ಪುಣ್ಯಶಾಲಿ ಕಂಬಳಿ! ಆಹಾ; ಈ ಕಂಬಳಿಗಿಂತ ತಾನು ಕಡೆಯಾದೆನಲ್ಲ!.. ಹೀಗೇ ಒಂದರಿಂದ ಒಂದು ವಿಷಯಕ್ಕೆ ಹಾರುತ್ತ ಯೋಚಿಸುತ್ತಿದ್ದಳು

ಗಡಿಯಾರವು ಮೂರು ಗಂಟೆಯನ್ನು ಹೊಡೆಯಿತು. ಅವಳು ದಿಗ್ಗನೆದ್ದು ಕುಳಿತು "ಹೊತ್ತಾಯ್ತು!" ಎಂದುಕೊಂಡಳು. ಶಬ್ದಕ್ಕಾಗಿ ಆಲಿಸಿದಳು. ಎಲ್ಲೆಲ್ಲೂ ನಿಶ್ಶಬ್ದವಾಗಿತ್ತು. ಹೊದ್ದಿಕೆಯನ್ನು ಇನ್ನೊಂದು ಮಡಿಕೆ ಜೋಡಿಸಿ ಮಗುವಿಗೆ ಚೆನ್ನಾಗಿ ಹೊದಿಸಿದಳು. ಅದರ ತಲೆ ಸವರಿದಳು. ಮೃದುವಾಗಿ ಮುತ್ತಿಟ್ಟಳು. ತಲೆಯೆತ್ತಿದಾಗ ಅವಳ ಕಣ್ಣೀರಿನ ಬಿಸಿ ಹನಿಯೊಂದು ಅದರ ಕೆನ್ನೆಯಮೇಲೆ ಬಿದ್ದಿತು. ಅದನ್ನು ಮೆಲ್ಲಗೆ ಒರಸಿದಳು. "ಕಂದ! ನಿನ್ನನ್ನು ದೇವರೇ ನೋಡಿಕೊಳ್ಳಲಿ!" ಎನ್ನುತ್ತ ಮೇಲೆದ್ದು ಮತ್ತೆ ಬಗ್ಗಿ ತಲೆಸವರಿ, ಕೋಣೆಯ ಬಾಗಿಲನ್ನು

ಹಾಕಿಕೊಂಡು ಹೊರಬಿದ್ದಳು. ಅವಳು ಮೆಟ್ಟಿಲನ್ನಿಳಿಯುತ್ತಿರುವಾಗ, ಅಲ್ಲೆ ವರಾಂಡದಲ್ಲಿ ನಿಂತಿದ್ದ ಹಸುವು ಶಬ್ದಮಾಡಿತು. ಅವಳು ಅದರ ಬಳಿಗೆ ಹೋಗಿ ಸೀರನ್ನು ಹತ್ತಿರಕ್ಕಿಟ್ಟು, ಮೈದಡವಿದಳು. ಅನಂತರ ಹಿಂದಿರುಗಿ ಬಂದು ಮತ್ತೆ ಮೆಟ್ಟಿಲನ್ನಿಳಿದು ಕುಂಟುತ್ತ ಹೊರಟು ಹೋದಳು.

* * *

ಮಾರನೆಯ ದಿನ ಬೆಳಿಗ್ಗೆ ಧರ್ಮಕೊಂಡದಲ್ಲಿ ಗದ್ದಲವೋ ಗದ್ದಲ. ಹಳ್ಳಿಯ ಹೊರಗಿನ ಸಿಹಿನೀರಿನ ಭಾವಿಯಲ್ಲಿ ದೇವಮ್ಮನ ಹೆಣವು ಸಿಕ್ಕಿತು. ಅವಳ ವಿಷಯವು ಹಳ್ಳಿಗೆಲ್ಲ ಗೊತ್ತಾಯಿತು. ಎಲ್ಲರ ಬಾಯಲ್ಲೂ ಅವಳದ್ದೇ ಮಾತು. ಸೂರಪ್ಪನು ತಲೆಯನ್ನು ನೆಲಕ್ಕೆ ಬಡಿದುಕೊಳ್ಳುತ್ತ ಗೋಳಾಡುತ್ತಿದ್ದನು. ಅನೇಕಬಾರಿ ತಾನೂ ಪ್ರಾಣಕಳೆದುಕೊಳ್ಳುವುದಾಗಿ ಓಡಲು ಯತ್ನಿಸುತ್ತಿದ್ದನು. ಇತರರು ಅನೇಕರು ಹಿಡಿದುಕೊಂಡು ಸಮಾಧಾನ ಹೇಳುತ್ತಿದ್ದರು. ಗಂಗಮ್ಮನವರು ಸುಮ್ಮನೆ ಕಣ್ಣೀರನ್ನು ಸುರಿಸುತ್ತ ಕುಳಿತಿದ್ದರು ಮಗುವು ಚೀರಿಡುತ್ತಿತ್ತು. ಗುಂಡಮ್ಮನ ಸುತ್ತ ಅನೇಕ ಹೆಂಗಸರು ಸೇರಿದ್ದರು. ಅವಳು ಅವರಿಗೆ ವಿಷಯವನ್ನೆಲ್ಲ ವಿಶದವಾಗಿ ವಿವರಿಸುತ್ತ "ಅಂತೂ ಅವಳ ಗೊಂದಲ ಬಗೆಹರಿದ ಹಾಗಾಯ್ತು. ಈ ಕೆಲಸವನ್ನು ಅವಳು ಆಗಲೇ ಮಾಡಿದ್ದರೆ ಈ ಗೋಳಿಗೆ ಕಾರಣವಿರುತ್ತಿರಲಿಲ್ಲ!" ಎಂದು ಹೇಳುತ್ತಿದ್ದಳು. ಗುಂಪಿನಲ್ಲಿ ಕೆಲವರು "ಛೆ, ಎಂಥಾ ದುರದೃಷ್ಟ!" ಎಂದು ಮರುಗಿದರು ಕೊಂಚಹೊತ್ತಾದ ಮೇಲೆ ಯಾರೋ "ಇದಂತೂ ಸರಿಯಲ್ಲ, ಇನ್ನು ಈ ನೀರು ತೆಗೆಸಿ ಹೊಸ ನೀರು ಬರೋತನಕ ಸೀನೀರಿಗೇನುಗತಿ ಹೇಳಿ" ಎಂದು ಕೇಳುತ್ತಿದ್ದರು. ಎಲ್ಲರೂ ಚಿಂತೆಗೊಳಗಾಗಿದ್ದರು.

ತನಿಖೆಕ್ರಮಗಳು ನಡೆದು ಆತ್ಮಹತ್ಯವು ಸ್ಥಾಪಿಸಲ್ಪಟ್ಟಮೇಲೆ, ಶಾಳಪ್ಪಶಾಸ್ತ್ರಿಗಳು ಶವಸಂಸ್ಕಾರದ ವಿಷಯವನ್ನು ಚರ್ಚಿಸುತ್ತ, ಅವಳು ಅನ್ಯಮತಸ್ಥಳಾದುದರಿಂದ ಆ ಮತದ ಕಟ್ಟಳೆಗೆ ಸರಿಯಾಗಿ ಶವವನ್ನು ಕೀಳುಜಾತಿಯವರು ಅಷ್ಟು ಜನ ಎಲ್ಲಾದರೂ ಹೂಳಬೇಕೆಂದೂ, ಶ್ರಾದ್ಧ ಮೊದಲಾದುವೆಲ್ಲ ಅನಾಚಾರವಾಗುವುವೆಂದೂ ತೀರ್ಮಾನಿಸಿದರು.

ಗಂಗಮ್ಮನವರು ಈ ಅಪಮೃತ್ಯುವಿನ ಬಗ್ಗೆ ಭಯವನ್ನು ಶಾಸ್ತ್ರಿಗಳಿಗೆ ತಿಳಿಸಿದರು. ಇದರ ವಿಚಾರವಾಗಿ ಶಾಸ್ತ್ರಿಗಳು ಮಧ್ಯಾಹ್ನದ ಹೊತ್ತಿಗೆ ಸೂರಪ್ಪನ ಮನೆಯಲ್ಲಿ ಶುದ್ಧಿ, ಪೂಜೆ, ಶಾಂತಿ ಮುಂತಾಗಿ ಆಗತ್ಯವಾದ ಕಾರ್ಯಗಳನ್ನೆಲ್ಲ ನೆರವೇರಿಸಿದರು.

* * *

ಕೆಲವು ವರ್ಷಗಳು ಕಳೆದುವು. ಸೂರಪ್ಪನಿಗೆ ಎರಡನೆಯ ಮದುವೆ ಯಾಯಿತು. ಬೇರೆ ಮಕ್ಕಳೂ ಆದುವು. ಮೊದಲನೆಯ ಹೆಣ್ಣುಮಗು ವಿಗೆ ಸೂರಪ್ಪನು ದೇವಮ್ಮನೆಂದೇ ಹೆಸರಿಟ್ಟಿದಾನೆ. 'ದೇವು' ಎಂದು ಕರೆಯುತ್ತಾನೆ. ಗಂಗಮ್ಮನವರು ಇಂದಿಗೂ ದೇವಮ್ಮನ ಹೆಸರಿನಲ್ಲೇ ದೀಪವನ್ನು ಹಚ್ಚುತ್ತಾರೆ. ಗುಂಡಮ್ಮನು ಈಗಲೂ ಈ ಕತೆಯನ್ನು ಸಮಯಸಿಕ್ಕಿದಾಗಲೆಲ್ಲ ಅವರಿವರಿಗೆ ಸವಿಸ್ತಾರವಾಗಿ ತನ್ನ ವ್ಯಾಖ್ಯಾನ ದೊಂದಿಗೆ ತಿಳಿಸುತ್ತ "ದೇವರೇ ಅವಳಿಗೆ ಒಳ್ಳೇಬುದ್ಧಿ ಕೊಟ್ಟು ನಮ್ಮನ್ನು ಆಪತ್ತಿನಿಂದ ಪಾರುಮಾಡಿಸಿದ!" ಎಂದು ಪೂರ್ತಿಮಾಡುತ್ತಾಳೆ.

# ಯೋಗಾಭ್ಯಾಸ

"ಬನ್ನಿ, ರಾಯರೇ! ಬನ್ನಿ! ಬನ್ನಿ!"

ಒತ್ತಿಹೇಳಿದ ಈ ಆಹ್ವಾನವನ್ನು ನಿರಾಕರಿಸಲಾರದೆ, ರಾಯರು ಪಡಸಾಲೆಯಿಂದ ಮೆಟ್ಟಲಿಸ್ನಿಳಿದು ಅಂಗಳಕ್ಕೆ ಬಂದರು. ಆಗಲೇ ಮೋರಾಭಾಯಿಯು ರಾತ್ರಿಯ ಊಟವನ್ನು ಮುಗಿಸಿ, ಅಂಗಳದ ಒರಗು ಬೆಂಚಿನ ಮೇಲೆ ಆರಾಮವಾಗಿ ಕುಳಿತಿದ್ದನು. ರಾಯರು ಹತ್ತಿರ ಬಂದಾಗ ಅವನು "ಇದೇನು, ಇವತ್ತು ಪುರುಸೊತ್ತು? ಎಂದೂ ಇಲ್ಲದೆ ಇರೋದು?" ಎಂದು ಕೇಳಿದನು. ಅವರು "ಏನೋ ಸ್ವಲ್ಪ; ನಾಳೆ ರಜ" ಎನ್ನುತ್ತ ಅವನ ಬಳಿ ಕುಳಿತರು. ಮೋರಾಭಾಯಿಯ ದಪ್ಪ ದೇಹದ ಪಕ್ಕದಲ್ಲಿ ಕುಳಿತ ರಾಯರ ಸಣ್ಣ ಶರೀರವು ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡಿತು.

"ನೋಡಿ, ಬೆಳದಿಂಗಳು, ಗಾಳಿ ಎಷ್ಟು ಹಿತವಾಗಿದೆ?"

"ಹುಂ"

"ಹೇಳಿ, ಏನು ಸಮಾಚಾರ?" ಅವನು ಉತ್ಸಾಹದಿಂದ ಕೇಳಿದನು.

"ಹೆಚ್ಚಿಗೆ ಏನೂ ಕಾಣಲಿಲ್ಲ" ರಾಯರು ಸಾಮಾನ್ಯವಾಗಿ ಹೇಳಿದರು.

"ಕಂಪನಿ ಕೆಲಸ ವಗ್ಗೈರೆ?"

"ಹುಂ. ಎಂದಿನಂತೆ"

"ಮನೆ ಊರು ವಗ್ಗೈರೆ"

"ಹಾಗೆ ಹಾಗೇ"

ಅರೆನಿಮಿಷ ಇಬ್ಬರೂ ಸುಮ್ಮನಿದ್ದರು.

"ಹುಂ. ಇನ್ನೇನು ವಿಶೇಷ?" ಮತ್ತೆ ಅದೇ ಪ್ರಶ್ನೆ, ಅವನಿಂದ.

"ಏನಿರುತ್ತೆ ಹೇಳಿ ಅಂಥಾದ್ದು!" ರಾಯರು ಗೊಣಗಿದರು.

"ಹಾಗಲ್ಲ, ಅದೂ ಇದೂ"

"ನೀವು ಯಾವ ಪತ್ರಿಕೆ ತರಿಸುತ್ತೀರಿ? 'ಫ್ರೀ ಪ್ರೆಸ್' ಅಲ್ಲವೇ?"

"ಹುಂ. ಅದಲ್ಲದೆ?"

"ಮತ್ತೆ ನಾನೂ ಅದನ್ನೇ ತರಿಸೋದು" ರಾಯರು ನಸುನಕ್ಕರು.

"ನೀವು ನನ್ನ ನೆರೆ ಅಂತ. ಆದರೂ ಮಾತುಕತೆ ಒಂದಕ್ಕೂ ಸಿಗೋದೇ ಇಲ್ಲವಲ್ಲ. ನೀವಾಯ್ತು, ನಿಮ್ಮ ಮನೆ ಆಯ್ತು, ನಿಮ್ಮ ಕೆಲಸ ಆಯ್ತು!"

"ಹುಂ ಏನೇನೋ ಕೆಲಸ ಇದ್ದೇ ಇರುತ್ತೆ, ಏನು ಮಾಡೋದು!"

"ಇಂಥ ನೆಕೇಲೂ ಒಳಗೇ ಕೂತುಕೊಂಡು ಏನಾದರೂ ಓದುತ್ತಲೋ ಬರಿಯುತ್ತಲೊ ಇದ್ದು ಬಿಡುತ್ತೀರಿ. ಹೇಗೋ ಏನೋ. ನನಗೆ ಅಂದರೆ ಊಟ ಮಾಡಿದ ತಕ್ಷಣ ಮನೆಯಿಂದ ಹೊರಗೆ ತಳ್ಳಿದ ಹಾಗೆ ಆಗುತ್ತೆ ಸ್ವಾಮಿ."

ಇಷ್ಟು ಹೊತ್ತಿಗೆ ಮೋರಾಭಾಯಿಯ ಭಾಗದ ಮನೆಯ ಒಳಗಿನಿಂದ ನಾಲ್ಕಾರು ಎಳೆಯ ಕಂಠಗಳ ಕಿರಿಚುಗಳು ಕೇಳಿದುವು. ಅವನು ಕುಳಿತ ಕಡೆಯಿಂದಲೇ ಅಲುಗದೆ "ಲೇ! ಯಾಕರೋ ಜಗಳ ಕಾಯುತ್ತೀರಿ? ನಿಮಗೇನು ಬಂದಿದೆ ಹೊತ್ತು ಕಾಲ? ಒಂದು ಗಳಿಗೆ ಸುಮ್ಮನೆ ಇರೋದಿಲ್ಲ. ಬಂದೆ ತಾಳಿ! ನಿಮಗೆಲ್ಲ ತಕ್ಕ ಹಾಗೆ ಮಾಡುತ್ತೀನಿ. ಒಬ್ಬೊಬ್ಬರಿಗೆ ಒಂದೊಂದು-ಕೊಡುತ್ತೀನಿ-ಬಿಸಿಬಿಸಿಯಾಗಿ!" ಎಂದು ತನ್ನ ಬಾಗಿಲಿನ ಕಡೆಗೆ ಗರ್ಜಿಸಿ "ನೋಡಿ ಸ್ವಾಮಿ, ಏನು ಮಕ್ಕಳೊ; ಮೂರು ಹೊತ್ತೂ ಜಗಳ. ಮನೇಲಿ ಯಾರನ್ನೂ ಇರಗೊಡಿಸೋದಿಲ್ಲ. ನಾವೆಲ್ಲ ಹೀಗೆ ಬೆಳೆಯಲಿಲ್ಲ ಸ್ವಾಮಿ. ನಾವೂ ನಮ್ಮ ತಂದೆ-ತಾಯಿಗಳಿಗೆ ಹದಿಮೂರು ಜನ. ಒಂದು ದಿನವಾದರೂ ಜಗಳವೇ, ಕದನವೇ—ಕೇಳಬೇಡಿ. ಎಷ್ಟು ಅನ್ಯೋನ್ಯ, ಏನು ಕತೆ! ಇಲ್ಲದೆ ಇದ್ದರೆ ನಾವು ಬಾಳುತ್ತಾ ಇದ್ದೆವೇ ಹೇಳಿ. ನಮ್ಮ ಅಪ್ಪನಿಗೆ ಬಹಳ ಮುಂಗೋಪ. ಏನಾದರೂ ದಾರಿ ತಪ್ಪಿದರೆ ಬಾರಿಸುತ್ತಾ ಇದ್ದರು. ನಾವೆಲ್ಲ ಗಡಗಡ ಅಂತ ನಡುಗುತ್ತಿದ್ದೆವು. ನಂಗೆ ವಯಸ್ಸಾದ ಮೇಲೂ ಅವರಿಗೆ ಮುಖ ಕೊಟ್ಟು ಮಾತನಾಡಿದೋನಲ್ಲ. ಈಗಿನ ಮಕ್ಕಳಾದರೆ ಏನು ಬಂದಿದೆಯೋ ಏನೋ! ಅಣ್ಣ-ತಮ್ಮ ಅಕ್ಕ-ತಂಗಿ ಅಂತ ಪ್ರೀತಿ ಕಂಡೇ ಇಲ್ಲ. ಕಾಲು ಕೆರೀತಾ ಇರುತ್ತಾರೆ—ಏನಾದರೂ ಸಿಕ್ಕಿದರೆ ಸಾಕೂ ಅಂತ.

ಇನ್ನು ಅವರಿಗೆ ಹೆದರೋದಂತೂ ಇಲ್ಲವೇ ಇಲ್ಲ. ನಾನಂತೂ ಹೊಡೆದೂ ಬಡಿದೂ ಸಾಕಾಗಿ ಸೋತು ಸುಮ್ಮನಾಗಿ ಬಿಟ್ಟಿದ್ದೇನೆ—ಪ್ರಯೋಜನ ವಿಲ್ಲಾ ಅಂತ"

"ಹಾಗೇನೂ ಇರಲಾರದು. ಮಕ್ಕಳು ಅಷ್ಟು ಬದಲಾವಣೆ ಆಗಿದಾರೋ ಇಲ್ಲವೋ ಅನುಮಾನ. ಅವರ ಶಿಕ್ಷಣ ಮಾತ್ರ ದಿನೇ ದಿನೇ ಬದಲಾಯಿಸುತ್ತಿದೆ!"

"ಏನು ಹೊಸ ಶಿಕ್ಷಣವೋ. ಅದೆಲ್ಲ ನಿಮ್ಮಂಥೋರು—ಒಂದೇ ಮಗು ಇಟ್ಕೊಂಡಿರೋರು—ಹೇಳಬಹುದು. ತುಂಬಿದ ಸಂಸಾರದಲ್ಲಿ ಅದೆಲ್ಲ ಬರಿ 'Bunkum', ನಡೆಯೋದಿಲ್ಲ. ನಾಲ್ಕು ದಿನ ನಡೆಸಿದೋರಿಗೆ ಗೊತ್ತಾಗುತ್ತೆ, ಅದರ ಗುಟ್ಟು, ಸತ್ಯ ಎಲ್ಲ "

ಈಗ ಅವನ ಮನೆಯೊಳಗೆ ದೊಡ್ಡ ದೊಂಬಿ. ಮಾರಾಮಾರಿಯಾಗಿ ತಲೆಯ ಮೇಲೆ ತಲೆ ಬಿದ್ದು ಹೋಗುವ ಸೂಚನೆಗಳು ಸ್ಪಷ್ಟವಾಗಿ ಕಂಡು ಕೇಳಿ ಬಂದುವು. ಮೋರಾಭಾಯಿಯು ಇನ್ನು ತಡೆಯಲಾಗದೆ, ಅನಾಹುತವನ್ನು ಸಿಲ್ಲಿಸುವ ಯೋಚನೆಯಿಂದ ಮೆಲ್ಲಗೆ ಎದ್ದು ರಾಯರ ಕಡೆಗೆ ತಿರುಗಿ "ಇಗೋ, ಬಂದುಬಿಟ್ಟೆ ಇವರನ್ನ ಹಾಗೆ ಬಿಟ್ಟರೆ, ಒಳಗಿರೋದನ್ನೆಲ್ಲ ಒಡೆದು ಚೂರು ಚೂರು ಮಾಡಿ, ಧೂಳೆಬ್ಬಿಸಿ ಕಡೆಗೆ ಗೋಡೆಗಳನ್ನು ಉರುಳಿಸಿ ಬಿಡುತ್ತಾರೋ ಏನೋ—ತಲೆ ಒಡೆಯೋದು, ಕೈಕಾಲು ಮುರಿಯೋದು ಹಾಗಿರಲಿ!" ಎಂದು ಮನೆಯ ಕಡೆಗೆ ತಿರುಗಿ "ಲ್ರೋ, ನಾನೇನೊ ಹೇಳಿದ್ದು? ತಿಂದು ಕೊಬ್ಬು ಹೆಚ್ಚಾಗಿದೆ. ಸುಮ್ಮನೆ ಸದ್ದಿಲ್ಲದೆ ಇರುತ್ತೀರೋ ಇಲ್ಲವೋ ಪಾಠ ಪಳಿದ್ಯ ನೋಡಿ ಕೊಳ್ಳೋದು ಬಿಟ್ಟು ಹಣಾ ಹಣಿಗೆ ಇಳಿದಿದೀರಾ? ನಿಮಗೆ ಸರಿಯಾಗಿ ಮಾಡುತ್ತೀನಿ" ಎಂದುಕೊಂಡು ಒಳಗೆ ಹೋದನು. ಒಡನೆಯೇ "ರಪ್ ರಪ್, ಛಟೀರ್ ಛಟೀರ್. ದಪ್ ದುಪ್" ಎಂಬ ಶಬ್ದಗಳು ಕೇಳಿದುವು. ತೆರೆದ ಬಾಗಿಲಿನಿಂದ ರಾಯರಿಗೆ, ಕುಂಭಕರ್ಣನು ಕಪಿಗಳನ್ನು ಎತ್ತಿ ಎಸೆದಾಡಿದಂತೆ ಮೋರಾಭಾಯಿಯು ಮಕ್ಕಳನ್ನು ಎಸೆದಾಡಿದುದು ಕಂಡಿತು. ಗುಡುಗು ಸಿಡಿಲುಗಳ ನಂತರ ಭೋರಿಡುವ ಮಳೆಯಂತೆ ಅಳು ಮೊದಲಾಯಿತು. ಇನ್ನೊಂದು ಕ್ಷಣದಲ್ಲಿ ಅದು ಅನೇಕ ಶಾಖೆ

ಗಳಾಗಿ ಒಡೆದು ಪಿಟೀಲು, ವೀಣೆ, ಏಕನಾದ, ಕೊಳಲು ಮೊದಲಾದ ಸಂಗೀತ ವಾದ್ಯಸ್ವರಗಳಿಗೆ ಎಡೆಗೊಟ್ಟುವು.

ದಂಗೆಯನ್ನು ಅಡಗಿಸಿದ ಪೋಲೀಸಿನವನ ತೃಪ್ತಿಯಿಂದ ಮೋರಾಭಾಯಿಯು ಮುಖದ ಬೆವರನ್ನು ಪಂಚೆಯ ತುದಿಯಿಂದ ಒರಸಿಕೊಳ್ಳುತ್ತ ಹೊರಗೆ ಬಂದನು. ಎಡ ಕೊಂಕುಳಿನಲ್ಲಿ ತಾಂಬೂಲದ ಹಿತ್ತಾಳೆ ಪೆಟ್ಟಿಗೆಯಿದ್ದಿತು. ಎಡಗೈಯನ್ನು ಹಿಡಿದು, ಅವನ ಕಡೆಯ ಮಗು ಒಂದೂವರೆ ವರ್ಷದ 'ಪನ್ನಿ' ಬರುತ್ತಿದ್ದಿತು. ಅವನು ಬಂದು ರಾಯರ ಬಳಿಯಲ್ಲಿ ಕುಳಿತುಕೊಳ್ಳುತ್ತ "ಏನು ಹಾಳು ಜಗಳವೋ, ಧಾಂದಲೆಯೋ ಇವರದ್ದು!" ಎಂದುಕೊಂಡನು.

"ಏನು ಕಾರಣ ಗಲಾಟೆಗೆ?" ರಾಯರು ಪ್ರಶ್ನಿಸಿದರು.

"ಏನೊ ಯಾರಿಗೆ ಗೊತ್ತು? ಅದೇ ಒಂದು ಚೂರು ಬಳಪವೋ, ಬಳೆಯ ಚೂರೋ ಇರಬೇಕು. ಇನ್ನೇನು? ಕೇಳಿಯೇನು ಪ್ರಯೋಜನ? ಕೇಳಿ ಮಾಡಿ ಪಂಚಾಯಿತಿಗೆ ಮೊದಲು ಮಾಡಿಬಿಟ್ಟರೆ ಆ ಫಜೀತಿಗೆ ಕೊನೆ ಇರುತ್ತೆಯೇ? ನನಗೇ ಹುಚ್ಚು ಹಿಡಿಸಿ ಬಿಡುತ್ತಾರೆ. ಅವರಿಗೆ 'whole sale' ಶಿಕ್ಷೆ ಮಾಡೋದೇ ಸರಿ, ಸಾಧ್ಯ ಆಗಲೇ ಕೊಂಚ ಹೊತ್ತಾದರೂ ಶಾಂತಿ ಇರಬೇಕಾದರೆ" ಎಂದನು.

ರಾಯರು ಮಗುವಿನ ಕಡೆಗೆ ತಿರುಗಿ "ಏನು ಪನ್ನಾ, ಯಾರಮ್ಮಾ ಗಲಾಟೆ ಮಾಡಿದ್ದು?" ಎಂದು ಮುದ್ದಿಸಿ ಕೇಳಿದರು. ಅದಕ್ಕೆ ಉತ್ತರವಾಗಿ ಮೋರಾಭಾಯಿಯು "ಇದೂ ಏನು ಸಾಮಾನ್ಯ ಅಂತ ತಿಳಿದುಕೋಬೇಡಿ. ತಾನೂ ಸೇರಿಕೊಂಡಿದ್ದಳು. ನೋಡಿ ಅವಳ ತಲೇನ" ಎಂದು ಅವಳ ಕೆದರಿದ ತಲೆಯನ್ನು ಸರಿಮಾಡಿ, ಮಗುವನ್ನು ಎತ್ತಿ ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡನು; ತನ್ನ ದಪ್ಪ ಹೊಟ್ಟೆಗೆ ಒರಗಿಸಿಕೊಂಡನು. ಅನಂತರ ಹತ್ತಿರ ಇಟ್ಟಿದ್ದ ತಾಂಬೂಲದ ಪೆಟ್ಟಿಗೆಯನ್ನು ತೆಗೆದು ಹಸಿಯ ಅಡಕೆಯನ್ನು ಕತ್ತರಿಸುತ್ತ,

"ಹುಂ, ಇನ್ನೇನು ವಿಶೇಷ ಹೇಳಿ!" ಎಂದನು—ಮತ್ತೆ.

ರಾಯರು 'ಇದು ಒಳ್ಳೆ ಪೀಕಲಾಟ ಬಂತಲ್ಲ....ಸಮಾಚಾರ ವಿಶೇಷದ್ದು!' ಎಂದುಕೊಂಡು, "ಇವನಲ್ಲಿ 'ರಕ್ಷಣೆ'ಯ ಕಾರ್ಯಕ್ರಮ

ಯಶಸ್ವಿಯಾಗುವುದಿಲ್ಲ, 'ಪ್ರತಿ ಧಾಳಿ'ಯೇ ಸರಿ" ಎಂದು ನಿರ್ಧರಿಸಿ ಆತನು ಕೆಲವು ದಿವಸಗಳ ಹಿಂದೆ ಎಲ್ಲಿಗೋ ಹೋಗಿದ್ದುದನ್ನು ನೆನಪಿ ತಂದುಕೊಂಡು "ನಾನೇನು ಸಮಾಚಾರ ಹೇಳಬಲ್ಲೆ—ಈ ಯಂತ್ರ ಕೆಲಸದಲ್ಲಿ ಇದ್ದುಕೊಂಡು. ನೀವೇ ಹೇಳಬೇಕು; ಮೊನ್ನೆ ತಾನೆ ನೀ ಎಲ್ಲಿಗೋ .."

ಮೋರಾಭಾಯಿಗೆ ಅಷ್ಟೇ ಕೀಲು ಸಾಕಾಯಿತು. 'ರಿಕಾರ್ಡು' ತಿರುಗುವುದಕ್ಕೆ ಮೊದಲಾಯಿತು. "ಹುಂ, ನಾಸಿಕಕ್ಕೆ ಹೋಗಿದ್ದೆ ನಮ್ಮ ಶ್ರೀ ಶ್ರೀ ಗುರುಗಳ ಬಳಿಗೆ. 'ಆಹಾ! ಏನು ಪಂಚವಟಿ! ಏನ ಗೋದಾವರಿ! ಏನು ಆಶ್ರಮ! ಎಂಥಾ ತಪಸ್ವಿಗಳು! ಮಹಾನ ಭಾವರು, ಮಹಾನುಭಾವರು ಸ್ವಾಮಿ, ಸಿದ್ಧಪುರುಷರು ಅಸ್ವಿ! ಅವರಿ ವೇದ-ವೇದಾಂಗಗಳೆಲ್ಲ ಕರತಲಾಮಲಕ ಆಗಿಬಿಟ್ಟಿವೆ ಏನು ಉಪದೇ ಮಾಡತಾರೆ ಅಂತೀರಿ? ಕೇಳಬೇಕು—ಆಗ ತಿಳಿಯುತ್ತದೆ ಅದರ ಸೊಗಸು ಕೇಳುತ್ತ ಇದ್ದರೆ ಅಲ್ಲೇ ಹಾಗೇ ಇದ್ದುಬಿಡೋಣ—ಎಲ್ಲಾ ಬಿಟ್ಟು— ಅಸ್ನಿಸುತ್ತೆ. ರಾತ್ರಿ ಬೆಳಗೂ ನಡೆಯುತ್ತೆ, ಅವರ ತತ್ತೋಪದೇಶ."

"ಓಹೋ."

"ಅದನ್ನು ತಿಳಿದುಕೊಂಡೋರಿಗಂತೂ ಜೀವನದಲ್ಲಿ ಜಿಹಾಸ ಹುಟ್ಟದೆ ಇರೋ ಹಾಗಿಲ್ಲ!"

"ಹುಂ."

"ಯೂಕ್ಲಿಡ್ 'ಥಿಯರಂ'ಗಳನ್ನು ಹೇಗೆ ಪ್ರಮಾಣಮಾಡಿ ತೋರಿಸಿ ದಾನೋ ಹಾಗೇ, ಅಷ್ಟೇ ಸ್ಪಷ್ಟವಾಗಿ' ಈ ಜಗತ್ತೆಲ್ಲ ಬರಿ ಮಾಯೆ ಅಂತ ತೋರಿಸಿ, ನಂಬಿಸಿ ಬಿಡುತ್ತಾರೆ ಶ್ರೀ ಶ್ರೀ ಗುರುಗಳು, ಅದೇನು ದೃಷ್ಟಾಂತಗಳು! ಅದೇನು ವ್ಯಾಖ್ಯಾನ! ಅಬ್ಬಬ್ಬಾ! ಅಷ್ಟೊಂದು ಸಿದ್ಧಿ ಪಡೆದೋರಿಗೆ ಮಾತ್ರ ಸಾಧ್ಯ!"

"ಅವರು ಎಲ್ಲಿಯೋರು?"

"ಅವರ ಊರು ಸೂರತ್ತು. ಅವರ ಹೆಂಡತಿ ಮಕ್ಕಳು ಎಲ್ಲಾ ಇದಾರೆ!"

"ಹುಂ. ಮತ್ತೆ ಅವರನ್ನ...."

"ಅದಕ್ಕೇನು, ಭಕ್ತಾದಿಗಳು ಇಲ್ಲವೆ?"

"ಸರಿ."

"ಅವರಾಗಲೇ ಸಂಸಾರ ತೊರೆದು ಎಷ್ಟೋ ವರ್ಷಗಳಾದುವಂತೆ!"

"ಊಹೂಂ!"

"ಆಗಿನಿಂದ, ಯೋಗಾಭ್ಯಾಸ ಮಾಡಿ ಸಿದ್ಧಿ ಪಡೆದಿದಾರೆ. ಇದರಿಂದ ಅವರಿಗೆ ಅಸಾಧ್ಯವಾದದ್ದು ಎನ್ನೋದೇ ಇಲ್ಲ."

"ಓ!"

"ಅವರದ್ದು ಏನೇನು ವಿಚಿತ್ರವಂತೆ ಅನ್ನುತ್ತೀರಿ. ನೀವು ಅವರಿಗೆ ಏನೇ ಕೊಡಿ. ಚಿನ್ನ, ತಿಂಡಿ, ಹಣ್ಣು ಏನೇ ಆಗಲಿ. ಎಲ್ಲಾನೂ 'ತಾಯಿ ಗೋದಾವರಿ'ಗೇ ಎಸೆದುಬಿಡುತ್ತಾರಂತೆ. ಅವರಿಗೆ ಚಿನ್ನವೂ ಒಂದೇ ಮಣ್ಣೂ ಒಂದೇ. ಈ ದೃಷ್ಟಿ ಬಂದಿರೋದರಿಂದಲೇ ಪ್ರಪಂಚವೇ ಬೇರೆಯಾಗಿದೆ. ನಮಗೆ ಕಾಣೋ ಪ್ರಪಂಚವೆಲ್ಲ ಮಾಯೆ. ನಿಮಗೆ ಏನು ಬೇಕು ಅಂತ ಕೇಳಿ. ಮಿಠಾಯಿ ಕೇಳಿದಿರಿ ಅನ್ನಿ. ಅವರು ಕಣ್ಣು ಮುಚ್ಚಿ ಕಣ್ಣು ಬಿಟ್ಟು 'ತಗೋ ತಗೋ' ಅನ್ನುವಾಗ, ಒಂದು ಮಣ್ಣು ಗಡಿಗೆಯ ತುಂಬ ಮಿಠಾಯಿ ಗೋದಾವರಿಯಲ್ಲಿ ತೇಲಿ ಬರುತ್ತದಂತೆ. ಹಾಗೇ ಏನು ಬೇಕಾದರೂ ಅಂಥಾ ಮಹಾತ್ಮ್ಯ. ಅವರ ಧ್ಯಾನದ ಹೊತ್ತು ಬಂದರೆ ಹತ್ತಿರವಿದ್ದವರಿಗೆ 'ಇನ್ನು ಹೋಗಿ' ಅನ್ನುತ್ತಾರಂತೆ. ಮರುಕ್ಷಣದಲ್ಲಿ ಅಂತರ್ಧಾನವಾಗುತ್ತಾರಂತೆ."

"ಹೂಂ!"

"ಇನ್ನೂ ಏನೇನೋ ವಿಚಿತ್ರ—ನೂರೆಂಟು."

"ಹುಂ."

ಮೋರಾಭಾಯಿಯು ಇಲ್ಲಿಯವರೆಗೆ ಮಾತನಾಡುತ್ತಲೇ, ಸಿದ್ಧಪಡಿಸಿದ ತಾಂಬೂಲವನ್ನು ಬಾಯಿಗೆ ತುಂಬಿಕೊಂಡು ಅಗಿದನು. ಕೊಂಚ ಕಾಲ ಇಬ್ಬರ ಮಧ್ಯೆ ಮಾತಿರಲಿಲ್ಲ. ಆ ಮೇಲೆ ಹಿಂತಿರುಗಿ ಬಾಯಿ ತುಂಬಿದ ತಾಂಬೂಲವನ್ನು 'ಪಿಚಕ್' ಎಂದು ಉಗುಳಿ, ಬಾಯೊಳಗೆ ನಾಲಗೆಯನ್ನು ಹೊರಳಿಸಿ ಸರಿಮಾಡಿಕೊಂಡು "ನೋಡಿ, ಅಲ್ಲಿಗೆ ಹೋಗಿ ಬಂದಾಗಿನಿಂದ ಜೀವನದಲ್ಲಿ ನನ್ನ ದೃಷ್ಟಿಯೇ ಸಂಪೂರ್ಣವಾಗಿ

ಬದಲಾಯಿಸಿ ಹೋಗಿದೆ. ವೈರಾಗ್ಯ ಮನೋವೃತ್ತಿ ಬಂದುಬಿಟ್ಟಿದೆ. ಪ್ರಾಪಂಚಿಕವಾಗಿರೋದಕ್ಕೆಲ್ಲಾ ದೂರವಾಗಿದ್ದು ಬಿಡಬೇಕು ಅನ್ನಿಸುತ್ತೆ...."

ರಾಯರು ತಟ್ಟನೆ ಅವನ ಕಡೆಗೆ ನೋಡಿ, ಹಕ್ಕಿಗಳು ಕುಕ್ಕಲು ಆಶೆಪಡುವ ಮಾವಿನ ಹಣ್ಣಿನಂತಿದ್ದ ಅವನ ಕೆನ್ನೆಗಳನ್ನೂ, ತಾಂಬೂಲ ಸೂಸಿ ಕೆಂಪಾಗಿದ್ದ ದಪ್ಪ ತುಟಿಗಳನ್ನೂ, ಬೊಜ್ಜು ಮೈಯನ್ನು ಮುಚ್ಚಿದ್ದ 'ಮಲ್ಲು' ಅಂಗಿಯನ್ನೂ, ತೊಡೆಯಮೇಲೆ ಕುಳಿತಿದ್ದ ಸಣ್ಣ ಮಗುವನ್ನೂ ಗಮನಕ್ಕೆ ತಂದುಕೊಂಡು ಆಶ್ಚರ್ಯಪಟ್ಟರು. ಮತ್ತೆ 'ಯಾರಿಗೆ ಯಾವಾಗ ಯಾವ ಕರೆಯು ಹೇಗೆ ಬರುತ್ತದೆಯೋ' ಎಂದುಕೊಂಡು, ಇನ್ನೂ ಬೆಳೆಯುತ್ತಿದ್ದ ಆತನ ಸಂಸಾರವನ್ನು ನೆನೆಸಿಕೊಂಡು ಅಂತಕಪಟ್ಟು ಕನಿಕರದಿಂದ,

"ಛೆ, ಇನ್ನೂ ..." ಎಂದು ಮೊದಲು ಮಾಡಿದಾಗ ಅವನು ತಡೆದು,

"ಹಾಗೆಂದರೇನು ಸ್ವಾಮಿ. ನನಗೂ ಐವತ್ತರ ಹತ್ತಿರವಾಯ್ತು. ನಮ್ಮ ವರ್ಣಾಶ್ರಮ ಧರ್ಮದ ಪ್ರಕಾರ ಈ ವಯಸ್ಸಿಗೆ ನಾನು ವಾನಪ್ರಸ್ಥಾಶ್ರಮದಲ್ಲಿರಬೇಕು. ಏನೋ ನನ್ನ ಮೊದಲ ಎರಡು ಸಂಬಂಧದಲ್ಲೂ ಮಕ್ಕಳಾಗಿ ಉಳಿಯುವ ಅದೃಷ್ಟವಿಲ್ಲದೆ, ದೊಡ್ಡ ಮಕ್ಕಳು ಇಲ್ಲದೆ ಇದ್ದ ಮಾತ್ರಕ್ಕೇ—ಇನ್ನೂ ಚಿಕ್ಕ ಸಂಸಾರ ಅಂದುಕೊಂಡು, ವಯೋಧರ್ಮವನ್ನು ಮರೆಯೋದಕ್ಕೆ ಆಗುತ್ತೆಯೆ? ಇಷ್ಟಕ್ಕೂ ನನಗೂ ಆರು ಮಕ್ಕಳಿವೆ. ಸಾಕು. ಅವರು ಬೆಳೆದು ಬಾಳೋದೊಂದೇ ಬೇಕು. ಅಷ್ಟೆ."

"ಹಾಗಾದರೆ ಸಂತಾನನಿರೋಧ ಮಾಡಿದರಾಯ್ತು."

"ಓ, ಅದರಲ್ಲಿ ನಿಮಗೆ ವಿಶ್ವಾಸವಿರಬಹುದು. ನನಗಿಲ್ಲ. ಅದು ಪ್ರಕೃತಿಗೆ ವಿರುದ್ಧವಾದದ್ದು. ಮಕ್ಕಳು ಆಗದೆ ಇರೋದಕ್ಕೆ ಬ್ರಹ್ಮಚರ್ಯವೇ ಸರಿ. ಮಹಾತ್ಮಾಜಿಯವರೂ ಸಹ ಅದನ್ನೇ ಹೇಳಿದಾರೆ. ನೀವು ಗಾಂಧೀ ಶಿಷ್ಯರಲ್ಲವೇ?"

"ಹುಂ. ಆದರೆ ಎಲ್ಲಾದರಲ್ಲೂ ಅಲ್ಲ."

“ಬ್ರಹ್ಮಚರ್ಯದ ವಿಷಯದಲ್ಲಿ ನಮ್ಮ ಶ್ರೀ ಶ್ರೀ ಗುರುಗಳೂ ಬಹಳವಾಗಿ ಹೇಳುತ್ತಾರೆ. ‘ಬ್ರಹ್ಮಚರ್ಯ, ಯೋಗಾಭ್ಯಾಸ, ವೈರಾಗ್ಯ, ದೈವಧ್ಯಾನ’ ಇವು ಸಿದ್ಧಿಸೋಪಾನಕ್ಕೆ ಮೆಟ್ಟಲುಗಳಂತೆ.”

“ಓ!”

“ಇವನ್ನು ಪಾಲಿಸಿಕೊಂಡು ಬಂದಿರೋದರಿಂದಲೇ ಅವರ ಮುಖದ ಮೇಲೆ ಏನು ವರ್ಚಸ್ಸು ಇದೆ ಅಂತೀರಾ? ಆ ಕಣ್ಣುಗಳ ಹೊಳವೋ, ದೇಹಪುಷ್ಟಿಯೋ, ಆರೋಗ್ಯವೋ!....ಆಶ್ಚರ್ಯ.”

“ಹೂಂ.”

“ಬ್ರಹ್ಮಚರ್ಯವಿಲ್ಲದೆ ಯೋಗಾಭ್ಯಾಸವಿಲ್ಲ. ಯೋಗಾಭ್ಯಾಸವಿಲ್ಲದೆ ಸಾಧನೆ ಯಾವುದೂ ಸಾಧ್ಯವಿಲ್ಲ. ನಾನೂ ಯೋಗಾಭ್ಯಾಸ ಮಾಡಬೇಕೂ ಅಂತ ನಿರ್ಧರಿಸಿದ್ದೀನಿ.”

“ಭಲೆ!”

“ಅದಕ್ಕಾಗಿ ಶ್ರೀ ಶ್ರೀ ಗುರುಗಳ ಅಪ್ಪಣೆ—ಉಪದೇಶಗಳನ್ನೂ ಪಡೆದುಕೊಂಡಾಗಿದೆ!”

“ಅಷ್ಟು ಬೇಗ ಯೋಗಾಭ್ಯಾಸದ ರೀತಿ ವಿಧಾನಗಳೆಲ್ಲ ತಿಳಿದುಕೊಳ್ಳೋದಕ್ಕೆ ಸಾಧ್ಯವೆ?”

“ಇಲ್ಲ. ಅಷ್ಟು ಸುಲಭವಲ್ಲ. ಉಪದೇಶದ ಜತೆಗೆ ಶ್ರೀ ಶ್ರೀಯವರ ಪುಸ್ತಕಗಳನ್ನೂ ಕೊಂಡುಕೊಂಡಿದೀನಿ ಅಭ್ಯಾಸಕ್ಕೆ. ಅಲ್ಲದೆ ಇನ್ನು ಮುಂದೆ ಸಮಯಸಿಕ್ಕಿದಾಗ ನಾಸಿಕಕ್ಕೂ ಹೋಗಿ ಬರುತ್ತಿರುತ್ತೀನಿ. ಮುಖ್ಯವಾಗಿ ಮನಸ್ಸು ಮಾಡೋದೊಂದೇ ತಡ, ಅದು ಆಗಿದೆಯೋ, ಇನ್ನು ಮುಂದಿನವೆಲ್ಲ ನಡೆದೇ ನಡೆಯುತ್ತದೆ—ಎಷ್ಟೇ ಕಷ್ಟವಾಗಲಿ.”

“ಅದು ಹೇಗೆ ಅಷ್ಟು ನಿಶ್ಚಲವಾದ ಮನಸ್ಸಿನಿಂದ....”

“ಹುಂ. ಅದು ನಿಜ. ಆದು ಎಲ್ಲರಿಗೂ ಸಾಧ್ಯವಿಲ್ಲ”

“ನನ್ನ ವಿಷಯಕ್ಕಂತೂ ದೇವರೇ ಗತಿ. ನನ್ನಿಂದ ಆವೆಲ್ಲ.”

“ನನ್ನ ವಿಷಯ ಕೊಂಚ ಬೇರೆ. ನನ್ನ ಜಾತಕ ನೋಡಿಕೊಂಡಿದೀನಿ....”

“ಹುಂ. ನೀವೇ ಜೋತಿಷ್ಯರು ತಾನೆ?”

"ಅದರಲ್ಲಿ ಸಂನ್ಯಾಸಯೋಗವಿದೆ."

"ಹೂಂ!"

"ಅದು, ಈ ನನ್ನ ಮನೋವೃತ್ತಿಗೆ ಸಹಾಯಮಾಡುತ್ತೆ ಅನ್ನಿ."

"ಹಾಗೋ, ಸರಿ!"

ಮೋರಾಭಾಯಿಯು ಮಗುವನ್ನು ತೊಡೆಯಿಂದ ಕೆಳಗಿಳಿಸಿ, "ಹೋಗು. ಅಮ್ಮನ ಹತ್ತಿರ ಇನ್ನೆರಡು ಎಲೆ ಇಸಕೊಂಡು ಬಾ!" ಎಂದು ಮಲ್ಲು ಅಂಗಿಯ ಜೇಬಿನಿಂದ ನಸ್ಯದ ಡಬ್ಬಿಯನ್ನು ತೆಗೆದು, ಒಂದು ಚಿಟಕೆಯನ್ನು ಮೂಗಿಗೆ ಏರಿಸಿದನು. ಈ ಕಾಲದಲ್ಲಿ ರಾಯರು ವೈರಾಗ್ಯ, ಬ್ರಹ್ಮಚರ್ಯ, ಯೋಗಾಭ್ಯಾಸಗಳನ್ನು ಮತ್ತೆ ಮತ್ತೆ ನೆನೆದು, ಮೋರಾಭಾಯಿಯ ಸಂಸಾರದಲ್ಲಿ ಇನ್ನು ಮುಂದೆ ಗಂಡನ, ತಂದೆಯ ಭಾಗವು ಎಷ್ಟು ಕಳಚಿ ಹೋಗುವುದೋ ಎಂದು ಯೋಚಿಸಿಕೊಂಡು ಮರುಗುತ್ತಿದ್ದರು ಅದರಲ್ಲಿಯೂ ಚಿಕ್ಕವಯಸ್ಸಿನ ಹೆಂಡತಿ ಸುಶೀಲಾ ಬಾಯಿಯ ಕಡೆಗೆ ಅವರ ಕನಿಕರವು ವಿಶೇಷವಾಗಿ ಹರಿಯಿತು

ಪನ್ನಾ ಎಲೆಯೊಡನೆ ಹಿಂತಿರುಗಿ ಬರಲಿಲ್ಲ. ಅದಕ್ಕೆ ಬದಲಾಗಿ ಅದು "ಬಾಬಾ! ಬಾಬಾ!" ಎಂದು ಕಿರಿಚಿಕೊಂಡ ಸದ್ದು ಕೇಳಿಸಿತು. ಸುಶೀಲಾಬಾಯಿಯು ಒಳಗಿನಿಂದ "ಆ ಮಗೂನ ಬಿಡಿರೋ ಪಾಪ!" ಎಂದು ಕೂಗಿಕೊಂಡಳು. ಒಂದು ಕಂಠ "ರಮೇಶ, ಎಲೆ ಕಿತ್ತುಕೋತಾ ಇದಾನೆ–ತಿಂದುಬಿಟ್ಟ" ಅಂದಿತು. ಇಷ್ಟರೊಳಗೆ ಕಕ್ಷಿ–ಪ್ರತಿಕಕ್ಷಿಗಳಾಗಿ ಜಗಳ ಹತ್ತಿ, 'ದಬ್ ದುಬ್' ಸದ್ದುಗಳು ಕೇಳಿ ಬಂದವು. ಯಾರೊ ದೀಪವನ್ನು ಆರಿಸಿದರು. ಯಾರೊ ಪುಸ್ತಕವನ್ನು ಹರಿದರು. ಯಾರೊ ಸ್ಲೇಟನ್ನು ಕುಕ್ಕಿದರು. ಕುರುಕ್ಷೇತ್ರವೇ ಅವತರಿಸಿ ಹೊಗೆಯಾಡುತ್ತಿದ್ದಂತೆ ಕಂಡುಬರಲು ಮೋರಾಭಾಯಿಯು "ಇವರಿಂದ ಆಗೋದಿಲ್ಲ. ಏನು ಮಾಡಬೇಕೋ ತಿಳೀದು. ರಾಕ್ಷಸರಾಗಿದಾರೆ—ರಾಕ್ಷಸರು! ಇಷ್ಟು ಮಕ್ಕಳು ಯಾತಕ್ಕಾದರೂ ಹುಟ್ಟಿದುವೋ ಏನೋ" ಎಂದುಕೊಂಡು ತನ್ನ ಶಿಸ್ತನ್ನು ಚಲಾಯಿಸುವುದಕ್ಕಾಗಿ ಹೊರಟನು. ರಾಯರೂ ಹಿಂಬಾಲಿಸಿ ತಮ್ಮ ಭಾಗದ ಮನೆಯನ್ನು ಹೊಕ್ಕರು.

ಹೀಗೆ ಮೊದಲಾಯಿತು ಮೋರಾಭಾಯಿಯ ಯೋಗಾಭ್ಯಾಸ.

'ಭಾಲಚಂದ್ರ ನಿವಾಸ'ದ ವಠಾರದ ಜನರಲ್ಲಿ ರಾಯರೇ ಸಾಮಾನ್ಯವಾಗಿ ಬಹಳ ಹೊತ್ತಾಗಿ ಮಲಗುತ್ತಿದ್ದವರು. ಮೋತಾಭಾಯಿಯ ಮನೆಯ ನಿತ್ಯನಾಟಕವಾದರೋ ಒಂಬತ್ತುವರೆ ಗಂಟೆಯ ಹೊತ್ತಿಗೆ ಮುಗಿದು ಹೋಗಿರುತ್ತಿತ್ತು. ಆದರೆ ಇತ್ತೀಚೆಗೆ ರಾಯರು ಮಲಗುವ ಹೊತ್ತಿನಲ್ಲೂ ಅವನ ಮನೆಯಲ್ಲಿ ದೀಪವು ಉರಿಯುತ್ತಿರುತ್ತಿದ್ದಿತು ರಾಯರು 'ಯೋಗಾಭ್ಯಾಸದ ಭರಾಟೆ' ಎಂದುಕೊಳ್ಳುತ್ತಿದ್ದರು. ಒಂದೊಂದು ವೇಳೆ ರಾಯರು ಮಲಗಿ ನಿದ್ರಿಸಿದಮೇಲೆ, ಮರದ ಪಾದುಕೆಗಳ 'ಕಟ ಕಟ' ದಿಂದ ಅವರ ನಿದ್ದೆಗೆ ಭಂಗ ಬಂದು, ತಟ್ಟನೆ ಎಚ್ಚರವಾಗುತ್ತಿದ್ದಿತು. ಆಗ ಮನೆಯ ದೀಪ ಹಾಕಿದ ಶಬ್ದ, ಕದಗಳನ್ನು ತೆರೆದು, ಹಾಕಲ್ಪಟ್ಟ ಶಬ್ದಗಳು ಕೇಳುತ್ತಿದ್ದುವು. ಹಾಗೇ ಅವನ ಬಚ್ಚಲಮನೆಯ ಕಡೆಯ ಬೆಳಕೂ ರಾಯರ ಹಾಸಿಗೆಯಮೇಲೆ ಬೀಳುತ್ತಿತ್ತು. ಆಗ ರಾಯರು ಹುಬ್ಬು ಗಂಟಿಕ್ಕಿಕೊಂಡು ಬೇಸರದಿಂದ "ಯಾಕೋ ಈತನ ಯೋಗಾಭ್ಯಾಸ ಸಾಕಾಗಿದೆ. ನೆರೆಯವರಿಗೂ ನಿದ್ದೆ ಕೊಡುವ ಹಾಗಿಲ್ಲ" ಎಂದು ಗೊಣಗಿಕೊಳ್ಳುತ್ತಿದ್ದರು ಆದರೇನು! ಇನ್ನೂ ಕೊಂಚ ಹೊತ್ತು ಬೆಳಕು, ಪಾತ್ರೆ ಪರಟೆ ಜರುಗಿಸಿದ 'ಜರ ಜರ,' ನೀರು ತುಂಬಿ ಸುರಿದ ಸದ್ದು, ಪಾದುಕೆಯ ಮತ್ತಷ್ಟು 'ಕಟ ಕಟ,' ದೀಪದ ಸ್ವಿಚ್ಚಿನ 'ಟಕ್', ಮನೆಯ ಕದಗಳ ಕೀ ಕೀ' ಇವನ್ನು ಸಹಿಸದೆ ಗತಿಯಿರಲಿಲ್ಲ. ಶಬ್ದಗಳ ಮಧ್ಯೆ ಕೈ ಬಳೆಗಳ ಸದ್ದೂ ಆಗಾಗ ಅಲ್ಲಲ್ಲಿ ಕೇಳಿಸಿದಾಗ ರಾಯರು "ಏನು ಸಿದ್ಧಿಯೋ ಇವನದು. ತಾನೊಬ್ಬ ಹೊಯ್ದಾಡುವುದೆ ಅಲ್ಲದೇ ಪಾಪ, ಬೆಳಗಿನ ಜಾವದಿಂದ ಒಂದೇ ಸಮನಾಗಿ ದುಡಿದು ಒದ್ದಾಡಿದ ಹೆಂಡತಿಯನ್ನೂ ಗೋಳುಹುಯ್ದುಕೊಳ್ಳುತ್ತಾನೆ. ಅಥವಾ ಇದೇನು ಆಕೆಯ ಪತಿಪರಾಯಣತೆಯೋ ಏನೋ!" ಎಂದುಕೊಳ್ಳುತ್ತಿದ್ದರು. ಅಂತೂ ಈ ಸದ್ದುಗಳೆಲ್ಲ ಅಡಗಿ ಮತ್ತೆ ರಾಯರಿಗೆ ನಿದ್ದೆ ಹತ್ತಬೇಕಾದರೆ ಇನ್ನು ಅರ್ಧ ಗಂಟೆಯಾದರೂ ಆಗುತ್ತಿದ್ದಿತು.

* * *

ತಿಂಗಳುಗಳು ಕಳೆದುವು. ಯೋಗಾಭ್ಯಾಸದ ಒಳಪರಿಣಾಮವು ಹೇಗಿದ್ದಿತೋ ಏನೋ, ರಾಯರಿಗೆ ತಿಳಿಯದಿದ್ದರೂ ಹೊರಗಿನ ದೃಷ್ಟಿ

ಯಿಂದ ಅವರಿಗೆ ಮೋರಾಭಾಯಿಯು ಕುಂದುತ್ತಿದ್ದಂತೆ ತೋರಿತು. ಮೊದಲೇ ಮಂಕಾಗಿದ್ದ ಅವನ ಕಣ್ಣುಗಳು ಈಗ ಮಸಕಾಗಿ ಗುಳಿ ಬಿದ್ದಿದ್ದುವು. ಕಣ್ಣಿನ ಸುತ್ತ ಕಪ್ಪು ಉಂಗುರಗಳು ಕಾಣಿಸಿಕೊಂಡವು. ಕುಂಬಳದ ಹಣ್ಣಿನಂತಿದ್ದ ಅವನ ಮುಖದಲ್ಲಿ ಈಗೀಗ 'ಗ್ಯಾಬೆ' ಕಟ್ಟಿಕೊಂಡಂತಿತ್ತು. ಕ್ರಮಕ್ರಮವಾಗಿ ಹೆಚ್ಚಿ ಈಚೀಚೆಗೆ ಬೆಳಗ್ಗೆ ಸಂಜೆಗಳಲ್ಲಿ ಮನೆಯನ್ನು ನಡುಗಿಸುವಂತಹ ಅರ್ಭಟದ ಸೀನುಗಳೂ, ಯಂತ್ರದಿಂದ ಹೊರನುಗ್ಗುವ ಆವಿಯ ರಾಗದ ನಿಶ್ವಾಸವೂ, ಹುಡಿಕೆಮ್ಮಿನ ಶಬ್ದವೂ ತಪ್ಪದೆ ಕೇಳಿಬರುತ್ತಿದ್ದುವು ಅವನ ಮಕ್ಕಳ ಮೇಲೆ ರೇಗುವುದೂ, ಹೆಂಡತಿಯ ಮೇಲೆ ಸಿಡಿಗುಟ್ಟುವುದೂ ದಿನದಿನಕ್ಕೆ ಹೆಚ್ಚುತ್ತಿದ್ದಂತೆ ರಾಯರಿಗೆ ತೋರಿತು. ಈಚೆಗೆ ರಾಯರು ಅವನ ಮುಖ ನೋಡಿದಾಗಲೆಲ್ಲ ಹುಬ್ಬುಗಂಟಿಕ್ಕಿದಂತೆಯೆ ಕಾಣುತ್ತಿತ್ತು

ಮೋರಾಬಾಯಿಯು ತನ್ನ ಬಾಗಿಲಿನ ಮುಂದೆ ನಿಂತು ಪಂಚೆಯ ಕೊನೆಯನ್ನು ಮೂಗಿಗಿಟ್ಟು ಸೀನುತ್ತಿದ್ದನು. ರಾಯರು ಅವನನ್ನು ನೋಡುತ್ತ "ಏನು ಮೈಯಲ್ಲಿ ಚೆನ್ನಾಗಿಲ್ಲವೇ?" ಎಂದು ಕೇಳಿದರು. ಅವನು "ಏನೋ ಸ್ವಲ್ಪ ನೆಗಡಿ" ಎಂದು "ಈ ಮೋಡ, ಮಳೆ, ಚಳಿ ಗಾಳಿ ಇದರಿಂದ ಏನೋ ಸ್ವಲ್ಪ ವ್ಯತ್ಯಾಸವಾಗಿದೆ. ಹಾಳು ಮುಂಬಯಿಯಲ್ಲಿ ಹವ ತಟ್ಟನೆ ಬದಲಾಯಿಸುತ್ತೆ" ಎಂದ. ರಾಯರು "ಹೂಂ. ಇರಬಹುದು" ಎಂದರು. ಹೀಗೆ ಇನ್ನೆರಡು ಬಾರಿ ಆದ ಮೇಲೆ ರಾಯರು "ಏನು ಮೋರಾಭಾಯಿ, ನಿಮ್ಮ ಆರೋಗ್ಯ ಈಚೀಚೆಗೆ ಒಂದೇ ಸಮನಾಗಿ ಇದ್ದಹಾಗಿಲ್ಲ?...." ಎಂದು ಕೇಳಿ ಮುಗಿಸುವಷ್ಟರಲ್ಲಿ ಅವನು ಬಾಯಿ ಹಾಕಿ "ಹಾಗೇನೂ ಇಲ್ಲವಲ್ಲ! ಮೊದಲಿಗಿಂತ ಶಕ್ತಿಯಾಗಿದೀನಿ" ಎಂದು ಸಮಾಧಾನ ಹೇಳಿಕೊಂಡನು. ಅವರು "ಹಾಗೇನು? ಯೋಗಾಭ್ಯಾಸದ ಫಲವಿರಬೇಕು" ಎಂದರು. ಅವನು ಗಂಭೀರವಾಗಿ "ಹುಂ. ಅಭ್ಯಾಸಮಾಡುತ್ತ ಇನ್ನೂ ಉತ್ತಮವಾಗುತ್ತೆ" ಎಂದು ಭರವಸೆ ತೋರಿಸಿದನು.

* * *

ಇನ್ನು ಕೆಲವು ತಿಂಗಳುಗಳು ಉರುಳಿದುವು.

ಆ ದಿನ ರಾಯರು ತಮ್ಮ ಪ್ರೈಮುಸ್ ಒಲೆಯನ್ನು, ಹೊರ ಬಾಗಿಲಿನ ಸಂಜೆ ಬೆಳಕಿನಲ್ಲಿಟ್ಟುಕೊಂಡು ಸರಿಮಾಡುತ್ತಿದ್ದರು ಆಗ ಕಾಲು ಸಪ್ಪಳ ಕೇಳಿಸಿ, ಒಲೆಯ ಮೇಲೆ ನೆರಳು ಬಿದ್ದಿತು. ಕಣ್ಣೆತ್ತಿ ನೋಡಿದಾಗ ಮೋರಾಭಾಯಿಯು ಮೆಟ್ಟಲನ್ನು ಹತ್ತಿ ಬರುತ್ತಿದ್ದನು. ರಾಯರು ಕತ್ತನ್ನು ಬಗ್ಗಿಸಿಯೇ "ನಮಸ್ಕಾರ!" ಎಂದರು. ಅದಕ್ಕೆ ಉತ್ತರವಾಗಿ ಅವನು "ಏನು ರಾಯರು, ನೀವಾಯ್ತು ನಿಮ್ಮ ಕೆಲಸವಾಯ್ತು. ನೆರೆಹೊರೆಯಲ್ಲಿ ಏನು ನಡೆಯುತ್ತಿದೆ ಅನ್ನೋದೇ ನಿಮಗೆ ಗೊತ್ತಿಲ್ಲ! ವಿಚಾರಿಸೋದು ಮಾಡೋದು ಇಲ್ಲವೋ, ಬೇಡವೋ?" ಎಂದು ಕೇಳಿದನು. ರಾಯರು ಕಕ್ಕಾಬಿಕ್ಕಿಯಾಗಿ, ಒಲೆಯಿಂದ ಕೈತೆಗೆದು, ತಲೆಯನ್ನು ಮೇಲಕ್ಕೆತ್ತಿ "ಏನು ಸಮಾಚಾರ—ಅಂಥಾದ್ದು? ಏನಾದರೂ ನನ್ನಿಂದ...." ಎನ್ನುವಷ್ಟರಲ್ಲಿ ಅವನು "ನನ್ನ ಹೆಂಡತಿ ಆಸ್ಪತ್ರೇಲಿದಾಳೆ ರಾಯರೆ! ಬದುಕಿದ್ದೇ ಹೆಚ್ಚಾಯಿತು!" ಎಂದು ಹೇಳಿದನು. ರಾಯರಿಗೆ ಆಶ್ಚರ್ಯ—ಗಾಬರಿಗಳು ಒಂದೇ ಕಾಲದಲ್ಲಿ ಉಂಟಾದುವು. ಅವರು ಆತುರದಿಂದ "ಆಸ್ಪತ್ರೆ! ಯಾವಾಗ ಹೋದರು? ಏನು...." ಎಂದು ಕೇಳುವಾಗಲೇ ಅವನು "ಈ ದಿನ ಬೆಳಗ್ಗೆ. ಖಾರಿನ ರಾಮಕೃಷ್ಣ ಮಿಷನ್ ಆಸ್ಪತ್ರೆ. ಮೈ ಇಳಿದು .."

"ಹ!" ರಾಯರಿಗೆ ಇನ್ನೂ ಆಶ್ಚರ್ಯವಾಯಿತು—ಒಂದಕ್ಕಿಂತ ಹೆಚ್ಚಾದ ಕಾರಣದಿಂದ.

"ಬಹಳ ಕೆಟ್ಟ ಕೇಸು ಎಂದರು ಡಾಕ್ಟರು. ಏನೋ ದೇವರ ಕೃಪೆ. ಉಳಿದುಕೊಂಡಳು."

"ಎಷ್ಟು ತಿಂಗಳು?"

"ಏಳು"

ರಾಯರ ಮನಸ್ಸು ತಟ್ಟನೆ ಎಂಟು ಒಂಬತ್ತು ತಿಂಗಳ ಹಿಂದಿನ ಆ ಬೆಳದಿಂಗಳ ದಿನಕ್ಕೆ ಹೋಯಿತು. 'ವೈರಾಗ್ಯ, ಬ್ರಹ್ಮಚರ್ಯ, ಯೋಗಾಭ್ಯಾಸ' ಇವು ನೆನಪಿಗೆ ಬಂದು, ಅವರ ಮುಖದಮೇಲೆ ನಸುನಗುವು ಕಾಣಿಸಿಕೊಳ್ಳುವುದರಲ್ಲಿತ್ತು. ಅಷ್ಟರಲ್ಲೇ ಅವರು ಈಗಿನ

ವಿಷವು ಪರಿಸ್ಥಿತಿಯನ್ನು ಮನಸ್ಸಿಗೆ ತಂದುಕೊಂಡು ಗಂಭೀರ ಮುದ್ರೆಯನ್ನು ಹೊಂದಿ "ಸದ್ಯ ಅಪಾಯ ತಪ್ಪಿತಲ್ಲ!" ಎಂದರು.

"ನಿಮಗೆ ಈವರೆಗೆ ಗೊತ್ತಿದೆ ಅಂತ ತಿಳಿದಿದ್ದೆ."

"ಇಲ್ಲ."

"ನೀವೇನು, ನೆರೆಯಾದರೂ ಹೊರಗಿನೋರ ಹಾಗೇ ಇದ್ದು ಇದ್ದು ಬಿಡುತ್ತೀರಿ. ನಿಮ್ಮ ಕೆಲಸವೇ ನಿಮಗೆ. ಅಕ್ಕಪಕ್ಕದಲ್ಲಿ ಏನೂ ಅಂತ.. ."

"ನಿಜ. ಅದೊಂದು ನನ್ನಲ್ಲಿಯ ಲೋಪ. ಆದರೆ ಅದಕ್ಕೆ ಕಾರಣ. ನೀವು ನಿಮ್ಮ ಸಂಸಾರದ ಯೋಗಕ್ಷೇಮ ನೋಡಿಕೋಬೇಕಾದೋರು ಹಾಗೆ ಸರಿಯಾಗಿಯೇ ನೋಡಿಕೋತೀರಿ ಅಂತ ಇದ್ದ ಭರವಸೆ—ಅನ್ನಿ!"

"ನಿಜ, ನಿಜ. ಅಡ್ಡಿಯಿಲ್ಲ. ಸುಮ್ಮನೆ ಹಾಗೆಂದೆ."

ರಾಯರು ಒಲೆಯನ್ನು ತೆಗೆದುಕೊಂಡು ಎದ್ದರು. ಭಾಯಿಯು "ಇದೇನು ನಿಮ್ಮ ಕೆಲಸ?" ಎಂದು ಕೇಳಿದನು. ಅವರು "ಏನೋ ತಾಪತ್ರಯ. ಇದ್ದೇ ಇದೆಯಲ್ಲ. ನಮ್ಮೋಳು ಕ್ಯಾಷುಯಲ್ ರಜೆ ತೆಗೆದುಕೊಂಡಿದ್ದಾಳೆ. ನಾನು ಬದಲಿ ನೋಡಬೇಕಾಗಿದೆ" ಎಂದು ನಸುನಕ್ಕು ಮನೆಯೊಳಕ್ಕೆ ತಿರುಗಿದರು. ಅವನು "ನೀವೇ ಪುಣ್ಯವಂತರಪ್ಪಾ. ಇಷ್ಟರಲ್ಲೇ ನಿಮ್ಮ ಕಷ್ಟ ಕೊನೆಗಾಣುತ್ತಲ್ಲ. ನಮ್ಮ ಮನೆಯಲ್ಲಿ ಪ್ರಿವಿಲೇಜುರಜದ ಸಮಾಚಾರ!" ಎಂದು ಬಾಯಿ ಸೊಟ್ಟ ಮಾಡಿಕೊಂಡು ತನ್ನ ಬಾಗಿಲಿನ ಕಡೆಗೆ ಹೋದನು.

ಈಗ ಮೋರಾಭಾಯಿಯ ವಾನರ ಸೇನೆಯ ಸಂಖ್ಯೆ ಎಂಟಕ್ಕೆ ಏರಿದೆ. ಇನ್ನೂ ಅವನ ಯೋಗಾಭ್ಯಾಸ ಭರದಿಂದ ನಡೆಯುತ್ತಲೇ ಇದೆ.

# ಆಗಮನ

ಚಳಿಗಾಲವು ಮೊದಲಾದೊಡನೆ ಸರ್ಕಾರವು ಡೆಲ್ಲಿಗೆ ಇಳಿದು ಹೋದಾಗ ಅದರೊಡನೆ ಸಿಮ್ಲಾದ ಗೆಲುವೂ ಹೊರಟುಹೋಯಿತು. ಎಲ್ಲಿ ಸೊಗಸುಗಾರರಾದ ಜನರು ಸಂಜೆಯಲ್ಲಿ ತಮ್ಮ ತಮ್ಮ ವಿಶೇಷ ವೇಷಭೂಷಣಗಳೊಡನೆ ಕಿಕ್ಕಿರಿದು ತುಂಬಿ, ಮೆರವಣಿಗೆ ನಡೆದು ವಿಲಾಸ ವನ್ನು ಬೀರಿ ತಮ್ಮ ಹೆಚ್ಚುಗೆಯಿಂದ ಮೆಚ್ಚುಗೆ ಪಡೆಯುತ್ತಿದ್ದರೋ ಆ 'ಮಾಲು'[೧] 'ರಿಡ್ಜು'ಗಳು[೨] ಬರಿದಾಗಿ ಬಿಟ್ಟ ಮನೆಯಂತಾದುವು. ಹಿಂದೆ ತಮ್ಮ ದೀಪ ವೈಭವದಿಂದ ಕೂಡಿ, ತಮ್ಮ ದೊಡ್ಡ ದೊಡ್ಡ ಗಾಜಿನ ಹಿಂದೆ ಅನೇಕಾನೇಕ ಹೊಸ ಸಾಮಾನುಗಳನ್ನು ಅಂದವಾಗಿಟ್ಟು ಕೊಂಡು, ನಗೆಗೂಡಿ, ಜನರನ್ನು ಆಕರ್ಷಿಸಿ ಸೂರೆಗೊಳ್ಳುತ್ತಿದ್ದ ಅಂಗಡಿ ಗಳು, ಅಳುಮೋರೆಯ ಸೆರೆಗನ್ನೆಳೆದುಕೊಂಡುಬಿಟ್ಟವು. ಗುಂಪುಗುಂಪಾಗಿ ಬಂದ ಶ್ರೀಮಂತರನ್ನು ಸೆಳೆದು, ಆದರಿಸಿ, ಶಿಕ್ಷಿಸಿ ತಮ್ಮ ಬೊಕ್ಕಸವನ್ನು ತುಂಬಿಕೊಳ್ಳುತ್ತಿದ್ದ ಹೋಟಲುಗಳೂ, ನೃತ್ಯಶಾಲೆಗಳೂ ಮುತ್ತು ಹತ್ತಿ ಮಲಗಿದಂತಾದುವು. ಒಂದೇ ತರಹದ ಪೋಷಾಕು ದವಾಲಿಗಳನ್ನು ಧರಿಸಿ ನಾಲ್ಕೈದು ಜನರೊಂದಾಗಿ 'ಸಾಹೇಬರು'ಗಳ 'ರಿಕ್ಷಾ'ಗಳನ್ನು ಏರು ಬೀಳು ಹಾದಿಗಳಲ್ಲೆಲ್ಲ ಒಂದೇ ಸಮನೆ ಎಳೆದು ಸದಾ ಗಂಟೆ ಬಡಿಯುತ್ತ ಓಡುತ್ತಿದ್ದ ಕೂಲಿಯ ಜನರೂ ಬಹುಮಟ್ಟಿಗೆ ಮಾಯವಾದರು. ಧನಿ ಕರನ್ನೂ ಅವರ ಮಕ್ಕಳನ್ನೂ ಹೊತ್ತು ದಾರಿಯ ಪಕ್ಕದಲ್ಲಿ ಸಾಲಾಗಿ ಮೆಲ್ಲಗೆ ನಡೆಯುತ್ತಿದ್ದ ದೊಡ್ಡ, ಸಣ್ಣ ಕುದುರೆಗಳೂ ಕಾಣದಾದುವು. ನೆತ್ತಿ ಪೂರ್ತಿ ಸಣ್ಣ ಟೋಪಿ, ದೊಗಳೆಯೂ ಕೊಳಕೂ ಆದ ಅಂಗಿ ಚೆಲ್ಲಣಗಳನ್ನು ಸಿಕ್ಕಿಸಿಕೊಂಡು, ಸೊಂಟಮುರಿಯುವ ಭಾರದ ವಸ್ತು ಗಳನ್ನು ಹಗ್ಗಗಳಿಂದ ಬೆನ್ನಿಗೆ ಬಿಗಿದುಕೊಂಡು, ಬಗ್ಗಿ ನಡೆದು, ಚಳಿ ಯಲ್ಲಿಯೂ ನಿರಂತರವಾಗಿ ಬೆವರು ಹನಿಗಳನ್ನು ತೊಟ್ಟಿಕ್ಕಿಸುತ್ತಿದ್ದ ಶ್ರಮಜೀವಿಗಳ ಸಂಖ್ಯೆಯೂ ಸಹ ಕೇವಲ ಕಡಿಮೆಯಾಯಿತು. ಒಂದು ವಾಕ್ಯದಲ್ಲಿ ಹೇಳುವುದಾದರೆ ಅತಿ ಜೀವದಿಂದ ಗುಜಿಗುಜಿಸುತ್ತಿದ್ದ

---

೧ ಸಿಂಮ್ಲಾದ ದೊಡ್ಡಪೇಟೆ      ೨ 'ಮಾಲ್' ಬಳಿಯ ಮೈದಾನ

ಅತ್ಯಾಡಂಬರದ ಮಹಾ ಪಟ್ಟಣವು, ಮದುವೆಮುಗಿದ ಮಂಟಪದಂತೆ ನಿಶ್ಶಬ್ದದ ಮಂಕು ಹಳ್ಳಿಯಾಯಿತು.

ಸಿಮ್ಲದ ಪರಿಸ್ಥಿತಿಯು ಹೀಗಾದಮೇಲೆ ಛತ್ರಸಿಂಗನು—ನಮ್ಮ ಹೋಟಲಿನವನು—ಅಲ್ಲಿದ್ದು ಹೊಟ್ಟೆ ಹೊರೆಯುವುದು ಹೇಗೆ? ಅವನೂ ಮೂಟೆ ಕಟ್ಟಿಬಿಟ್ಟ. ನಮಗೆ—ರಾಯರು, ರಂಗಪ್ಪ ಮತ್ತು ನಾನು—ಉಚ್ಚಾಟನೆಯಾಯಿತು....ಚಳಿಗಾಲದಲ್ಲಿ ಈ ಹೊಟ್ಟೆಗಿಲ್ಲದ ತೊಂದರೆಯು ಬೆನ್ನಿಗಂಟಿದಮೇಲೆ, ನಾವು ನಮ್ಮ ಮೂರ್ತಿಯವರಿಗೆ—ಇವರು ಮುನಿಸಿಪಲ್ ನೌಕರರು—ಗಂಟುಬಿದ್ದು ಜಾಕೋ ಗುಡ್ಡದಲ್ಲಿ ಪುಕ್ಕಸಟ್ಟೆ ಮನೆಗಳನ್ನು ಗೊತ್ತುಮಾಡಿಕೊಂಡೆವು ನಮ್ಮ ನಮ್ಮ ಮನೆಯವರಿಗೆ ಬೇಗನೆ ಬಂದುಬಿಡಬೇಕೆಂದು ಕಾಗದ, ತಾರುಗಳ ಮೂಲಕ ತಿಳಿಸಿಯೂ ಆಯಿತು. ಆದರೆ ಅವರ ಬರುವಿಕೆಯೆಂದರೇನು ಸಾಮಾನ್ಯದ ಮಾತೆ ....ಸಾಹಸವೆ? ಚಾಮರಾಜಪೇಟೆಯಿಂದ ಬಸವನಗುಡಿಗೆ ಆರತಿ ಅಕ್ಷತೆಗಳಿಗೆ ಹೋಗುವುದಕ್ಕೇ ಒಂದು ಪೂರ್ತಿ ದಿನದ ಸಜ್ಜು ಆಗಬೇಕಾಗುವಲ್ಲಿ, ಹೆಚ್ಚುಕಡಿಮೆ ಎರಡು ಸಾವಿರ ಮೈಲಿ ಪ್ರಯಾಣಮಾಡಿ ಸಂಸಾರ ಹೂಡುವುದಕ್ಕೆ ಎಷ್ಟು ದಿನಗಳು ಸಿದ್ಧತೆ ಬೇಕು? ನೀವೇ ಗುಣಿಸಿ ನೋಡಿ. ಅದರಲ್ಲಿಯೂ ರಂಗಪ್ಪನ ಮತ್ತು ನಮ್ಮ ಮನೆಯವರಿಗೆ ಅದೇ ಮೊದಲನೆಯ ಅನುಭವ—ಸಂಸಾರದ್ದು. ಇದರಮೇಲೆ, ನಾವು ಗಂಡಸರು ಬಡವರಾದರೂ ಅವರ ಮನೆತನಗಳು ದೊಡ್ಡವು. ಅವಕ್ಕೆ ತಕ್ಕಂತೆ ಹುಡುಗಿಯರಿಗೆ ಮನೆಗೆಲಸದಲ್ಲಿ ನ್ಯಾಯವಾದ ಅಜ್ಞಾನ. ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ ಮಾಡಿದಂತೆ ಕಾಗದಕಂಡು ತರವೇತು ಮೊದಲಾಗಿ, ಇದಕ್ಕಷ್ಟು ಕಾಲಬೇಕು. ಇಷ್ಟನ್ನೆಲ್ಲ ಹೇಳಿದರೆ ಲೆಕ್ಕಾಚಾರಸ್ತರು "ಏನು, ಗರತಿಯರು ಇನ್ನೂ ಸಿಮ್ಲಾವನ್ನು ಮುಟ್ಟಿರುವರೆ?" ಎಂದು ಕುಚೋದ್ಯಮಾಡೀರಿ. ಸಂದರ್ಭವು ತೀರ ಅಷ್ಟು ವಿಷಮವಿದ್ದಲ್ಲ. ಆದರೂ ಎಷ್ಟೇ ಕಮ್ಮಿಯೆಂದರೂ ಮಡದಿಯರ ಮುಖಗಳನ್ನು ನೋಡಬೇಕಾದರೇ ಹದಿನೈದು ಇಪ್ಪತ್ತು ದಿನಗಳ ಮಾತು—ಅವರೂ ಸಹಕರಿಸಿದರೆ. ಇನ್ನು ನಮ್ಮ ಗೃಹಕೃತ್ಯದ ಕಷ್ಟವನ್ನು ಅವರು ಹಂಚಿಕೊಂಡು, ಅನಂತರ ವಹಿಸಿಕೊಂಡು, ಅದರ ಭಾರವನ್ನು ನಮಗೆ ಕಡಿಮೆಮಾಡು

ವುದಕ್ಕೆ ಎಷ್ಟು ಕಾಲವು ಬೇಕೋ ಆ ಪರಮಾತ್ಮನಿಗೇ ಗೊತ್ತು. ಹೇಗಾದರೂ ನಮಗೆ ಕೆಲವು ದಿನದ ಬಾಣಸಿಗತನದ ಯೋಗವು ತಪ್ಪಿದ್ದಲ್ಲವೆಂದು ತಿಳಿದು, ಆಫೀಸು, ಅಡಿಗೆ—ಈ ಎರಡು ಚಾಕರಿಗೆ ಇಳಿದ-ಏರಿದ?—ಉತ್ಸಾಹದಿಂದ ಎದೆಯನ್ನು ಕಲ್ಲುಮಾಡಿಕೊಂಡು ಹೆಚ್ಚುಕಟ್ಟಲೆಗೆ ಸಿದ್ಧರಾದೆವು.

ಒಂದೇ ಮನೆಯ ಅಂತಸ್ತುಗಳನ್ನು ನಾವು ಆರಿಸಿಕೊಂಡಿದ್ದುದರಿಂದ ಒಂದೇಕಡೆ ಅಡಿಗೆ ಮಾಡಿಬಿಟ್ಟು ತೊಂದರೆಯನ್ನು ಕಡಿಮೆಮಾಡಿಕೊಳ್ಳುವುದೆಂದು ನಿರ್ಧರಿಸಿದೆವು. ರಂಗಪ್ಪನ ಬಳಿಯಲ್ಲೇ 'ಪಾತ್ರೆ ಪರಟೆ'ಗಳು ಇದ್ದುದರಿಂದ ಅವನ ಮನೆಯಲ್ಲಿಯೇ ನಮ್ಮ ಸಮಾರಂಭವು ಶುಭಮುಹೂರ್ತದಲ್ಲಿ—ಅಥವ ಮತ್ತಾವುದರಲ್ಲೋ—ಮೊದಲಾಯಿತು.

ಹಿಂದಿನ ಸಂಜೆಯಲ್ಲಿ ಮೂರು ತಲೆಗಳನ್ನೂ ಕೂಡಿಸಿ—ಗುದ್ದಿ ಹಾಕಿ ಬಹಳ ಯೋಚಿಸಿ, ಪೇಟೆಯಲ್ಲಿ ನಾಲ್ಕಾರು ಬಾರಿ ಹಿಂದೆಮುಂದೆ ನಡೆದು, ಇಪ್ಪತ್ತೆಂಟುಕಡೆ ಬಗ್ಗಿ ಎದ್ದು ಎಲ್ಲಾ ಸಾಮಾನುಗಳನ್ನೂ ಕಷ್ಟಪಟ್ಟು ತಂದಿದ್ದೆವು. ಬೆಳಿಗ್ಗೆ 'ಅಲಾರಂ'ಮೂಲಕ ಮುಂಚೆಯೇ ಎದ್ದು ಎಂದೂ ಇಲ್ಲದ ಸಡಗರದಿಂದ ಮೂವರೂ ಪೈಪೋಟಿಯಿಂದ ಕೆಲಸ ಮಾಡಲು ಪ್ರಾರಂಭಿಸಿದೆವು.

ಒಲೆ ಹತ್ತಿಸುವುದೇನು ಒಬ್ಬರಿಗೆ ಜಗ್ಗಲಿಲ್ಲ. ಒಬ್ಬರಾದಮೇಲೆ ಇನ್ನೊಬ್ಬರಂತೆ ಮೂವರೂ ಕಣ್ಣು ಇಂಗಿಸಿಕೊಂಡುದರ ಫಲವಾಗಿ ಒಲೆಯು ಉರಿಯಿತು. ಹಂಡೆ—ಅಲ್ಲಿ 'ಬಂಬ' ಅನ್ನುತ್ತಾರೆ—ತರುವುದು ತಡವಾಗಿ, ತಣ್ಣೀರು ತಾಕಿಸಲಾಗದ ಈ ಚಳಿಯ ಊರಿನಲ್ಲಿ, ಸಣ್ಣ ಪಾತ್ರೆಯ ಬಿಸಿನೀರಿನಲ್ಲಿ ಅಂತೂ ಆ ದಿನ ಸ್ನಾನವಾಯಿತು. ತರಕಾರಿ ತರುವುದಕ್ಕೆ ಹೊತ್ತಿಲ್ಲದಿದ್ದುದರಿಂದ, ನಮ್ಮ ಮುಖಂಡರಾದ ರಾಯರು 'ಬೇಳೆ ಹುಳಿ'ಯೆಂದು ಏನೋ ಒಂದು 'ಮಿಕ್ಸಚರ್' ಕುಡಿಸಿದರು. ಅಡಿಗೆಯಲ್ಲಿ ಹಿಂದಾದರೂ, ರುಚಿಯಲ್ಲಿ ಮುಂದಾದ ರಂಗಪ್ಪನು ಅದು ಸಾರೆಂದು ವಾದಿಸಿದನು. ರಾಯರು ಹುಳಿಯೆಂದು ನಿಶ್ಶಂಕೆಯಿಂದ ನಿರ್ಧರಿಸಿದರು. ನಿಜವಾಗಿ ಅದು ಭಕ್ತರಿಗೆ ಹಲವು ರೂಪಗಳಲ್ಲಿ ಕಾಣಿಸಿಕೊಳ್ಳುವ ಒಂದೇ ದೈವದಂತೆ, ಹುಳಿಯೆನ್ನುವವರಿಗೆ ಹುಳಿಯೂ

ಸಾರೆನ್ನುವವರಿಗೆ ಸಾರೂ, ನೀರೆನ್ನುವವರಿಗೆ ನೀರೂ ಆಗಿದ್ದಿತು. ಕುದಿಯ ಕಲಹದಲ್ಲೇನೋ ಅಂತರ್ಯುದ್ಧ ನಡೆದು ಬೇಳೆಯೂ, ನೀರೂ, ಹುಳಿ, ಉಪ್ಪು, ಕಾರಗಳೂ ಪರಸ್ಪರ ವಿರೋಧದಿಂದ ನಡೆದುಕೊಂಡರೆ ರಾಯರು ಪಾಪ! ಏನನ್ನು ಮಾಡಬಲ್ಲರು? ಮೊಸರನ್ನು ತರಲಾಗದಿದ್ದುದರಿಂದ ಹಾಲಿನಲ್ಲೇ ಸೇರಿದಷ್ಟು ಅನ್ನವನ್ನು ಚೀಲಕ್ಕೆ ತುಂಬಿಕೊಂಡದ್ದಾಯಿತು.

ಈ ಮಹಾ ಭೋಜನವು ಮುಗಿಯುವುದರಲ್ಲೇ ಆಫೀಸಿಗೆ ಹೊತ್ತಾದುದರಿಂದ, ತಟ್ಟೆ ಪಾತ್ರೆಗಳನ್ನು ತೊಳೆಯುವುದು, ಮನೆಯಲ್ಲೆಲ್ಲೆಲ್ಲೂ ಹಾರಾಡುತ್ತಿದ್ದ ಸುಟ್ಟ ಕಾಗದ, ಹರವಿದ್ದ ಬೂದಿ ಇವನ್ನು ಗುಡಿಸುವುದು ಮುಂತಾದ 'ಸಣ್ಣ ಪುಟ್ಟ' ಕೆಲಸಗಳನ್ನು ಸಂಜೆಗೆ ತಳ್ಳಬೇಕಾಯಿತು ಈ ರೀತಿ ಮನೆಗೆಲಸವನ್ನು ಮುಗಿಸಿ, 'ಉಸ್ಸಪ್ಪ!' ಅನ್ನುತ್ತ, ಕೆದರಿದ ತಲೆ, ಕೆಂಗಣ್ಣುಗಳಿಗೆ ಲಕ್ಷ್ಯಕೊಡದೆ ಆಫೀಸನ್ನು ಸೇರಿದೆವು. ಆ ದಿನದ ಆಫೀಸಿನ ಕೆಲಸ ಹೇಗೆ ನಡೆಯಿತೆಂಬುದನ್ನು ನಿಮ್ಮ ಊಹೆಗೇ ಬಿಡುವುದು ಉತ್ತಮ.

ದಿನವೂ ಸಂಜೆ ಆರುಗಂಟೆಯಾಯಿತೆಂದರೆ ನಮಗೆ ಬಹಳ ಉಲ್ಲಾಸವಾಗುತ್ತಿದ್ದಿತು. ಆಫೀಸಿನ ಕೆಲಸವನ್ನು ಬಿಸುಡಿ, ಕೊರಡಿಗೆ ಬಂದು, ವೇಷವನ್ನು ಬದಲಾಯಿಸಿಕೊಂಡು, ಹೋಟಲಿನವನಿಗೆ ಕೂಗುಹಾಕಿ, ಬಿಸಿಬಿಸಿ ಕಾಫಿ ಒಂದು ಬಟ್ಟಲನ್ನು ಇಳಿಸಿ ವಿಹಾರಕ್ಕೆ ಹೊರಡುತ್ತಿದ್ದೆವು. 'ಕಾರ್ಟರೋಡಿ[೧]'ನಲ್ಲಿ ನಡೆದೋ, 'ಸಮ್ಮರ್ ಹಿಲ್ಲ[೨]'ನ್ನು ಬಳಸಿಯೋ, 'ಬಾಲೂಗಂಜ್'[೩] ಇಲ್ಲವೆ 'ಛೋಟಾ ಸಿಮ್ಲಾ[೪]'ಕ್ಕೆ ಹೋಗಿಯೋ, 'ಜಾಕೋ[೫]'ವನ್ನು ಹತ್ತಿಯೋ, 'ಎಲೀಸಿಯಮ್ಮ[೬]'ನ್ನು ಸುತ್ತಿಯೋ, ಮಶ್ರೋಬದ[೭] ದಾರಿಯನ್ನು ಹಿಡಿದೋ ಬೇಗಬೇಗನಾಗಿ ಮೈಗೆ ಶಾಖ ತಂದುಕೊಳ್ಳುತ್ತಿದ್ದೆವು. ಸುತ್ತಮುತ್ತಲಿನ ಸಸ್ಯವರ್ಗ, ಇಳಿಸೂರ್ಯನ ಕಿರಣಗಳಲ್ಲಿ ಮಿನುಗುತ್ತಿದ್ದ ದೂರದ ಹಿಮಶಿಖರಗಳು, ಅಕ್ಕಪಕ್ಕದ ಆಳವಾದ ಕಣಿವೆಗಳು, ಆಕಾಶದ ವೈಚಿತ್ರ್ಯಗಳು, ಇವುಗಳನ್ನೋ ಇಲ್ಲವೆ ಮನಸ್ಸಿಗೆ ಹಿತವಾದ ಬೇರೆ ಯಾವ ವಿಷಯವನ್ನೋ ಕುರಿತು ಹಲವಾರು ಮಾತುಗಳನ್ನಾಡುತ್ತಿದ್ದೆವು. ಅನೇಕವೇಳೆ ಕಡಲೇಕಾಯಿ, ಮುಸುಕಿನ

---

೧–೭ ಇವು ಸಿಮ್ಲಾದ ವಿಹಾರ ಸ್ಥಾನಗಳು

ಜೋಳ, 'ಗೋಲ್ಡನ್' ಮತ್ತು 'ರೆಡ್ ಡೆಲಿಷ್', ಸೇಬು, ಕಾಬೂಲು ದ್ರಾಕ್ಷಿ, 'ಪೀಚಸ್', ಜಿಲೇಬಿ, ಫೇಡ ಅಥವಾ ನಮ್ಮ ಗಮನವ ನ್ನಾಕರ್ಷಿಸಿದ ಮತ್ತೆ ಯಾವುದರದ್ದೋ ಉಪಹಾರವೂ ಆಗುತ್ತಿದ್ದಿತು. ಇಷ್ಟಾದರೂ ಮನೆಗೆ ಹಿಂದಿರುಗುವ ವೇಳೆಗೆ ಹೊಟ್ಟೆ ತಾಳಹಾಕುತ್ತಿದ್ದು, ಹೋಟಲಿನ ಬಿಸಿಯೂಟಕ್ಕೆ ಆತುರದಿಂದ ನೇರವಾಗಿ ಕುಳಿತುಬಿಡು ತ್ತಿದ್ದೆವು.

ಆದರೆ ಈ ದಿನದ ಸಂಜೆಯು ಪರಿಣಾಮವೇ ಬೇರೆ. ಆಫೀಸನ್ನು ಬಿಟ್ಟರೆ ಮನೆಗೆಲಸಕ್ಕೆ ಬೀಳಬೇಕು—ಬಾಣಲೆಯಿಂದ ಒಲೆಗೆ ಬಿದ್ದಹಾಗೆ. ಈ ಮುಜುಗರದಿಂದ ಏಕಾದರೂ ಸಂಜೆಯಾಯಿತೋ ಅನ್ನಿಸಿತು. "ವಾಕಿಂಗ್ ಇಲ್ಲದೆ ಇದ್ದರೆ ನನಗೆ ತಿಂದದ್ದೇ ಅರಗುವುದಿಲ್ಲ" ಅಂದ ರಂಗಪ್ಪ. "ಮುಸುರೆ ತಿಕ್ಕಿ ಕಸ ಬಳಿದರೆ ಬೇಕಾದಷ್ಟು ವ್ಯಾಯಾಮ ಆಗುತ್ತೆ" ಅಂದು ರಾಯರು ಪ್ರೋತ್ಸಾಹಿಸಿದರು. ನಿಜವಾಗಿಯೂ ನಮಗಿನ್ನೂ ಕೆಲಸದವನು ಸಿಕ್ಕದೆ ಈ ಪದವಿಯೂ ನಮ್ಮ ಪಾಲಿಗೇ ಬಂದಿದ್ದಿತು. ಹೊರಗಡೆ ಹೋಗುವಾಗ ಪೇಟೆಯಲ್ಲಿ ಹೋಗಿ ಕೊಂಚ ತರಕಾರಿಯನ್ನು ಕೊಳ್ಳಬೇಕೆಂದು ನಾನು ಸೂಚಿಸಿದೆ. ರಾಯರೂ ಒಪ್ಪಿ ದರು. ಆದರೆ ರಂಗಪ್ಪನು "ತಕ್ಷಣ ಕಾಫಿ ಬೀಳದೆ ಇದ್ದರೆ ಹೊಟ್ಟೆಯ ಲ್ಲೆಲ್ಲ ತಳಮಳ ಆಗುತ್ತೆ" ಅಂದ. "ಈಗ ಕೊಳ್ಳದೆ ಹೋದರೆ ಕವಳದ ವಿಷಯದಲ್ಲಿ ಕಳವಳ ಆಗುತ್ತೆ, ನನಗೆ" ಅಂದರು ರಾಯರು. ರಂಗಪ್ಪ ರುಚಿಗಾರ. ಬಟಾಣಿಕಾಯಿ ತೆಗೆದುಕೊಳ್ಳಬೇಕೆಂದು ಸೂಚಿಸಿದನು. "ನನ್ನ ತಲೆಯನ್ನೇ ಬೇಕಾದರೂ ಕಡಿಯಿರಿ. ನಾನು ಬೇರೆ ಅದನ್ನು ಬಿಡಿಸಲಾರೆ. ಅಷ್ಟು ತಾಳ್ಮೆಯಿಲ್ಲ, ನನಗೆ" ಅಂದುಬಿಟ್ಟೆ ನಾನು. ರಾಯರು "ಏನು ರಂಗಪ್ಪ, ಮಧ್ಯ ರಾತ್ರಿಗೆ ಮುಂಚೆಯಾದರೂ ಊಟ ಮಾಡಬೇಕೋ ಇಲ್ಲವೋ" ಎಂದು ಕೇಳಿದರು. ಅನಂತರ ಯೋಚಿಸಿ, ನೇರವಾಗಿ ಕುಯ್ದು ಹಾಕುವುದಕ್ಕೆ ಆಲೂಗೆಡ್ಡೆಯೇ ಸರಿಯೆಂದು ನಿರ್ಧರಿಸಿ ಕೊಂಡೆವು.

ಮನೆಯಲ್ಲಿ ರಂಗಪ್ಪನ ಕಸಮುಸುರೆ, ರಾಯರ ಬಾಣಸಿಗತನ, ನನ್ನ ಇತರ ಕೆಲಸಗಳಿಂದ ಕಾಫಿ, ಊಟ ಎಲ್ಲವೂ 'ಯಥಾ ಸಾವಕಾಶ'

ವಾಗಿ ಆದುವು. ಅಡಿಗೆಯ ವಿಷಯ ಎಷ್ಟು ಕಡಿಮೆ ಹೇಳಿದರೆ ಅಷ್ಟು ಒಳ್ಳೆಯದು. ಮೇಲಾಗಿ ಆದರ ವರ್ಣನೆಯನ್ನು ಬರೆದು ರಾಯರ ಶತ್ರುತ್ವವನ್ನು ಸಾಧಿಸುವುದು ನನಗೇನೂ ಹಿತವಾದ ಕೆಲಸವಲ್ಲ. ಹೇಗಿದ್ದರೂ ತಪ್ಪಲೆ, ಕೊಳದಪ್ಪಲೆಯಲ್ಲಿ ಏನೂ ಬಾಕಿ ಉಳಿಯಲಿಲ್ಲ—ಇದಕ್ಕೆ ಕಾರಣ ನಾವಾಗಲೇ ಬಂಗಾಳಾ ಕ್ಷಾಮಬಾಧಿತರಂತೆ ಆಗತೊಡಗಿದ್ದುದು. ನಾವು ನಮ್ಮ ನಮ್ಮ ಮನೆಗೆ ಹೊರಡಲು ಸಿದ್ಧರಾದ ಸಮಯದಲ್ಲಿ ರಂಗಪ್ಪನು ತನ್ನ ಕಸಬರಿಕೆಯನ್ನು ಬಿಸುಟು ಆತುರದಿಂದ ಹೊರಕ್ಕೆ ಬಂದು ದೀನಸ್ವರದಲ್ಲಿ "ರಾಯರೆ!" ಅಂದ. ರಾಯರು ನಸುನಗುತ್ತ "ಏನು ರಂಗಪ್ಪನವರೇ? ಬಹಳ ಕಷ್ಟದಲ್ಲಿದ್ದಂತೆ ಇದ್ದೀರಿ?" ಅಂದರು. "ಹೌದು, ಇನ್ನೇನೂ ಇಲ್ಲ. ಬೆಳಿಗ್ಗೆ ಮಾತ್ರ ಕಾಫಿ ಆದಮೇಲೇ ನಾನು ಏಳುತ್ತೇನೆ. ಅಷ್ಟೊಂದು ಕ್ಷಮಿಸಿಬಿಡಿ 'ಕನಮುನುರೆಗೆ ಕೊಂಚ ನೀರನ್ನೂ ಕಾಯಿಸಿಬಿಡಿ. ಏನೂ ತಿಳಿದುಕೊಳ್ಳಬೇಡಿ. ನನ್ನ ಸಹಕಾರದಲ್ಲಿ ಇದು ನ್ಯೂನತೆ ಅಂತ ಅನ್ನಬೇಡಿ. ಇಷ್ಟು ಉಪಕಾರಮಾಡಿ" ಅಂದು ನಕ್ಕನು. ನಾವೂ ನಕ್ಕೆವು. ರಾಯರು "ಏನ್ರಿ ಈಗಾಗಲೇ ಇಷ್ಟು ಶಯನಸುಖಾಪೇಕ್ಷೆಯೆ? ಮುಂದೆ.. " ಅಂದು ನಿಲ್ಲಿಸಿದರು. ನಾನು "ಈ ಚಳಿಯಲ್ಲಿ ಆದಷ್ಟು ಹೊತ್ತು ಮಲಗಿರಲು ಯಾರಿಗೆ ಬೇಕಿಲ್ಲ?" ಅಂದೆ. ರಾಯರು "ಹಾಗಲ್ಲ. ರಂಗಪ್ಪನ ವಿಷಯ ವಿಶೇಷ" ಅಂದರು. ಎಲ್ಲರೂ ಮತ್ತಷ್ಟು ನಕ್ಕೆವು.

ಇದಕ್ಕೆ ಕಾರಣ ರಂಗಪ್ಪನು ರಸಿಕ, ಖುಷಿಗಾರ, ಎಂದು ಪ್ರಕಟವಾಗಿದ್ದ ಅವನ ಪ್ರಖ್ಯಾತಿ. ಅವನ 'ಖಯಾಲಿ'ಯು ಅವನ ಸ್ನೇಹಿತರ ಗುಂಪಿನಲ್ಲಿ ಗಾದೆಯಾಗಿಬಿಟ್ಟಿದ್ದಿತು. ಅವರು ಸೇರಿದಾಗ ಹಾಸ್ಯವು ಹುಚ್ಚು ಹೊಳೆಯಾಗಿ ಹರಿಯುತ್ತಿದ್ದಿತು. ರಂಗಪ್ಪನು ಸುಖವಾಗಿ ಅದರಲ್ಲಿ ಈಸುತ್ತಿದ್ದನು. 'ಬ್ಯಾರಕ್ಸಿ'ನಲ್ಲಿ[೧] ಒಬ್ಬಂಟಿಗನಾಗಿ ಇರುವಾಗಲೇ ಬಹಳ ಮುಂದಾಲೋಚನೆಯಿಂದ ಒಂದು 'ಡಬ್ಬಲ್' ಅಳತೆ ಮಂಚವನ್ನೇ ಕೊಂಡಿದ್ದನು. ಅದರಮೇಲೆ ಅಷ್ಟೇ ಅಗಲದ, ಒಂಬತ್ತು ಅಂಗುಲ ದಪ್ಪದ ಆರಿಸಿದ ಹತ್ತಿಯ ಮೆತ್ತೆ. ಅದಕ್ಕೆ ತಕ್ಕಂತೆ ತಲೆ

೧ ಒಬ್ಬಂಟಿಗರ ಕೋಣೆಗಳು

ಎಂಬು, ಮಂಚವನ್ನು ಮುಚ್ಚಿ ಕೆಳಗೂ ಇಳಿಬೀಳುವ 'ಮಜಬೂತಾ'ದ ಜಾಯಿ. ಕೊಠಡಿಯ ಗೋಡೆಯಮೇಲೆ ರಂಗಪ್ಪ ದಂಪತಿಗಳ ಬೇರೆ ಬೇರೆ ಭಾವದ ನಾಲ್ಕಾರು ಪಟಗಳು. ಇವನ ಚಿತ್ರಪೂರ್ಣವಾದ ಕರ ವಸ್ತ್ರಗಳನ್ನು ನೋಡಿದವರಿಗೆ ಅವು ಎಲ್ಲಿಂದ ಬಂದುವೆಂಬ ಅನುಮಾನವೇ ಇರುತ್ತಿರಲಿಲ್ಲ. ಅವನು ಹೆಚ್ಚಿಗೆ ಇತರರಿಗೆ ಕಾಗದ ಬರೆದುದಿಲ್ಲ. ಆದರೂ ಅವನ ಮೇಜಿನಮೇಲೆ ಸುಗಂಧಪೂರಿತವಾದ ಬರೆಯುವ ಕಾಗದ ಮತ್ತು ಕವರುಗಳು ಬೇಗ ಬೇಗ ಸವೆಯುತ್ತಿದ್ದುದು ಹೇಗೆಂದು ಎಲ್ಲರೂ ಬಲ್ಲರು. ಅವನಿಗೆ ವಾರಕ್ಕೆ ಒಂದು ಎರಡರಂತೆ ಒಂದೇ ಕೈಬರಹದ ಕವರುಗಳು ಎಲ್ಲಿಂದ ಬರುತ್ತಿದ್ದುವೆಂಬದೂ ಹಾಗೆಯೇ ಹೊರಗುಟ್ಟು. ರಂಗಪ್ಪನ ಕೈಪೆಟ್ಟಿಗೆಯ ತುಂಬ "ನಮ್ಮ ಬ್ರೌನಿಂಗು"ಗಳ ಪತ್ರವ್ಯವಹಾರವಿದೆ ಯೆಂದು ಶಾಸ್ತ್ರಿಗಳಂತೂ ಘಂಟಾಘೋಷವಾಗಿಯೇ ಹೇಳುತ್ತಿದ್ದರು. ಕಾಗದವು ಅನಿರೀಕ್ಷಿತವಾಗಿ ಎರಡು ದಿನ ತಡವಾದರೆ "ಯಾಕೋ ಎಲ್ಲಿಂದಲೂ ಕಾಗದವೇ ಇಲ್ಲ" ಎಂದು ಅವನು ಕಂಡಕಂಡವರ ಮುಂದೆಲ್ಲ ಹೇಳಿಕೊಳ್ಳದೆ ಇರುತ್ತಿರಲಿಲ್ಲ. ಕಾಯುತ್ತ ಸುಮ್ಮನಿರುವುದು ಅವನಿಗೆ ಸಾಧ್ಯವಿಲ್ಲ. ಅವನು ಹಾಗೆಂದಾಗ ತನ್ನ ಹೆಂಡತಿಯ ಕಾಗದದ ಮಾತನ್ನೇ ಹೇಳುತ್ತಾನೆಂದು ಅವನ ಗುಂಪಿಗೆಲ್ಲ ಗೊತ್ತು. ಶಾಸ್ತ್ರಿಗಳು "ಕಾಗದ ಬರದಿದ್ದರೆ ಎಲ್ಲರೂ ಕ್ಷೇಮ ಅಂತ ಚಿಂತಿಸಬೇಡ" ಅನ್ನು ವರು. "ನೀನೇ ಆ ಕಡೆಯದನ್ನೂ ಬರೆದು ರುಜು ಮಾತ್ರ ಹಾಕುವು ದಕ್ಕೆ ಕಳುಹಿಸಯ್ಯ. ಆಗ ಕಾಗದಗಳು ಕಾಲಕಾಲಕ್ಕೆ ಬರುತ್ತವೆ" ಅನ್ನುತ್ತಿದ್ದ ಗುಂಡಪ್ಪ. ರಾಯರು "ನಿರೀಕ್ಷಿಸಿದ ತಕ್ಷಣವೇ ಬರಲಿಲ್ಲ ಅಂತ ಯಾಕೆ ತಲ್ಲಣಿಸುತ್ತೀರಿ. ಕೊಂಚ ತಾಳಿಕೊಳ್ಳಿ" ಅನ್ನುವರು. ಇವನ ಸ್ವಭಾವವನ್ನರಿತ ಅಯ್ಯನವರು "ನಮ್ಮ ರಂಗಪ್ಪ ಮಾಸ್ತಿಯವರ ರಂಗಪ್ಪನಂತೆ ಕಣ್ರಿ. ಅವರ ಕತೆ ಅಷ್ಟು ಹಳೆಯದಾಗಿಲ್ಲದಿದ್ದರೆ ಇವನನ್ನು ನೋಡಿಯೇ ಅವರು ಬರೆದರು ಅನ್ನುತ್ತಿದ್ದೆವು. ಈಗ ಅವರನ್ನು ಓದಿಯೇ ಇವನು ಹೀಗೆ ನಡೆಯುತ್ತಿದ್ದಾನೆ. ಅನ್ನಬೇಕು" ಅನ್ನುತ್ತಿದ್ದರು.

ಅಂತೂ ರಂಗಪ್ಪನನ್ನು ಚೆನ್ನಾಗಿ ಬಲ್ಲ ರಾಯರು ಅವನ ಪ್ರಾರ್ಥ ನೆಗೆ 'ಅಸ್ತು' ಅಂದರು. ಹೋಗುವಾಗ ನಾನು "ಇಂತಹ ಮನುಷ್ಯ

ಇನ್ನೂ ಒಬ್ಬಂಟಿಗನಾಗಿರುವುದು ಆಶ್ಚರ್ಯ" ಅಂದೆ. ಆದಕ್ಕೆ ರಾಯ
"ಆಶ್ಚರ್ಯವೇನು. ಅವರೇನೋ ಮಿಲಿ ಮಿಲಿಗುಟ್ಟುತ್ತಲೇ ಇದ್ದಾ
ಆದರೆ ಅಮ್ಮಾವರು ದಯಮಾಡಿಸಬೇಕಲ್ಲ. ಅದರಲ್ಲಿದೆ ಫಜೀತಿ
ಅಂದರು. "ಇನ್ನೇನು ಸದ್ಯದಲ್ಲೇ ಬರುತ್ತಾರಲ್ಲ. ಎಲ್ಲರೂ" ಎಂ
ನಾನು ಹರ್ಷಗೊಂಡೆ. "ನಿಜ. ಬರುವಿಕೆಯೇನೋ ನನಗೂ ಬಹ
ಹಿತವಾದದ್ದೆ. ಆದರೆ ನಾನು ಆಗಲೇ ಹಳಬ. ನನಗೆ ಎರಡು ಮ
ಳಾಗಿವೆ. ನೀವಾದರೆ ಇನ್ನೂ ಹೊಸ ಹೊಸ ಸಂಸಾರಿಗಳು. ಆ ಆತು
ವೆಲ್ಲ ನಿಮಗೇ" ಅಂದರು.

ಗಂಡ ಗಂಡಸರ ಗೃಹಕೃತ್ಯವು ಐದಾರು ದಿನ ಸಾಗಿತು. ಮನೆ
ಗೆಲಸವು ನೀರಿನಲ್ಲಿ ಅದ್ದಿದ ಸೆಣಬಿನಂತೆ ದಿನಕ್ಕೆ ದಿನಕ್ಕೆ ಭಾರವಾಗು
ತ್ತಿದ್ದಂತೆ ಕಂಡಿತು. ದಿನ ದಿನಕ್ಕೂ 'ಅರಿಯರ್‍ಸ್' ಕೂಡಿಕೊಳ್ಳು
ತ್ತಿದ್ದಿತು. ಅತ್ತ ಆಫೀಸಿನ 'ಹುಲಿ' ಇತ್ತ ಮನೆಗೆಲಸದ 'ಹೊಳೆ'.
ಈ ಮಹಾ ಕಂಟಕಗಳ ಮಧ್ಯೆ ನಮ್ಮ ಜೀವನವು ತೂರಾಡುತ್ತ ಕಷ್ಟದಿಂ
ಸಾಗುತ್ತಿದ್ದಿತು. ನಮ್ಮ ತಾರು ಕಾಗದಗಳಿಗೆ ಊರಿನವರೇನು 'ಜುಂ'
ಅನ್ನಲಿಲ್ಲ. ರಂಗಪ್ಪನು ರೋಷಾವೇಶದಿಂದ ಮತ್ತೊಂದು ತಾರು
ಬಿಟ್ಟನು. ಅದಕ್ಕೆ ಉತ್ತರವಾಗಿ ನಾಲ್ಕು ದಿನದಮೇಲೆ ಒಂದು ಕಾಗದವ
ಮಾತ್ರ ಬಂದಿತು. ಸಮಾಚಾರ. ರತ್ನಮ್ಮನವರ—ರಂಗಪ್ಪನ ಧರ್ಮ
ಪತ್ನಿ—ಅಕ್ಕನ ಮಗನಿಗೆ ಒಂದು ವಾರದ ನಂತರ ಚೌಲವು ನಿಶ್ಚಯ
ವಾಗಿದ್ದು ಅದನ್ನು ಮುಗಿಸಿಕೊಂಡು ಹೋಗಬೇಕೆಂದು ಹಿರಿಯರು
ಅಭಿಪ್ರಾಯಪಟ್ಟು ಬಲವಂತಪಡಿಸಿದ ಕಾರಣ ಆ ಉತ್ಸವವನ್ನು ಮುಗಿಸಿ
ಕೊಂಡು ಪ್ರಯಾಣವನ್ನು ನಿಶ್ಚಯಿಸಲಾಗುವುದು ಎಂದು. ರಂಗಪ್ಪ
ಕಿಡಿಕಿಡಿಯಾದನು. "ಅಲ್ಲ, ಇಲ್ಲಿ ನಮಗೆ ಅನ್ನಕ್ಕೇ ಗತಿಯಿಲ್ಲ. ಇವ
ಕೂತಿದ್ದಾಳೆ, ಚೌಲದ ಪರಮಾನ್ನಕ್ಕೆ. ಇನ್ನೇನು ಮುಂದೆ ಅಜ್ಜನ ತಿಥಿ
ಅಂತ ಪ್ರಯಾಣ ಮುಂದೆಹಾಕ್ತಾರೋ ಏನೋ—ಇಲ್ಲಿ ನಮ್ಮ ತಿಥಿ
ಆಗುತ್ತಾ ಇದ್ದರೂ" ಎಂದು ರೇಗಿದ, ಸುಮ್ಮನಾದ.

ಚೌಲ ಮುಗಿಯಿತು, ಇನ್ನೇನು ಹೊರಡುತ್ತಾರೆ ಅನ್ನುವ ಹೊತ್ತಿಗೆ
ನಮ್ಮ ಮನೆಯವರಿಂದ ಬಂತು ಒತ್ತ. ಅವಳಿಗೆ ಹೊರಗಾಗುವ ದಿನ

ಹಾದ್ದರಿಂದ ಅದನ್ನು ಮುಗಿಸಿಕೊಂಡು ಪ್ರಯಾಣವನ್ನು ನಿಶ್ಚಯಿಸುವ ರೆಂದು ನನಗೆ ಸುದ್ದಿಬಂದಿತು. "ಹೊರಗಾದರೆ ಏನು? ರೈಲೇನು ದೇವಸ್ಥಾನವೆ? ಇವರದ್ದೆಲ್ಲ ಕೆಲಸಕ್ಕೆ ಬಾರದ ಹಳೆಯ ಕಗ್ಗ" ಎಂದು ನಾನೂ ತಕ್ಕಮಟ್ಟಿಗೆ ಹಾರಾಡಿದೆ; ಸುಮ್ಮನಾದೆ. ನಮ್ಮವಳ ಅಡ್ಡಿ ಕೊನೆಗಾಣುವ ಹೊತ್ತಿಗೆ ನಮ್ಮ ಇಬ್ಬರದ್ದೇ ಏನು ವೈಶಿಷ್ಟ್ಯವೆಂದು ಜರಿಯುವುದಕ್ಕೋ ಅನ್ನುವಂತೆ ರಾಯರ ಕೈಮುಗುವಿಗೆ ನೆಗಡಿಯಾಗಿ ಪ್ರಯಾಣವು ಇನ್ನೂ ಮುಂದುವರಿಯಿತು. ಇದು ತಿಳಿದಮೇಲಂತೂ ನಾವು ಎಲ್ಲ ಆಸೆಯನ್ನೂ ಬಿಟ್ಟು ತಣ್ಣಗೆ—ಸುತ್ತ ಅಗ್ನಿಪರ್ವತಗಳಂತೆ ಹೊರಗೆ ಮಾತ್ರ—ಆಗಿ ಹೋಗಿ ನಮ್ಮ ಕಠಿಣ ಸಜವನ್ನು ಸಾಗಿಸು ತ್ತಿದ್ದೆವು. "ಇನ್ನು ಎಲ್ಲವನ್ನೂ ಅವರಿಗೇ ಬಿಟ್ಟುಬಿಡೋಣ. ಅವರು ಬರುವುದಿಲ್ಲ ಅಂತ ತಿಳಿದುಕೊಳ್ಳೋಣ. ಬಂದರೆ ಅದೃಷ್ಟ ಅಂದುಕೊಳ್ಳು ವುದು ಅಷ್ಟೆ" ಎಂದು ರಾಯರು ಉಪದೇಶಿಸಿದರು. "ಇದೇನು ಹೀಗೆ ತಣ್ಣಗೆ ಹೇಳುತ್ತೀರಲ್ಲ ನಿಮಗೆ ಅದು ಹೇಗೆ ಸಾಧ್ಯವಾಗುತ್ತದೆ?" ಎಂದು ರಂಗಪ್ಪನು ಆಕ್ಷೇಪಿಸಿದನು. ಅದಕ್ಕೆ ರಾಯರು "ಅಷ್ಟಲ್ಲದೆ ಎರಡುಸಾವಿರ ಮೈಲಿ ಈಚೆ ನಾವು ಒದರಿದರ ಬಂದ ಲಾಭವೇನು? ಅದರಿಂದ ಆಗುವುದೇನು? 'ಟ್ರಂಪು' ಅವರು ಕೈಯಲ್ಲಿ" ಎಂದು ನಮ್ಮನ್ನು ಸುಮ್ಮನಾಗಿಸಿದರು.

ಮೂರುವಾರದ ಕಡೆಗೆ ನನಗೊಂದು ಕಾಗದ. ತಾರು ಅಲ್ಲ, ಅವರು ಅಷ್ಟು ದುಂದು ವೆಚ್ಚಮಾಡುವರಲ್ಲ ತಾತ್ಪರ್ಯ: ನಾಲ್ಕು ದಿನ ಬಿಟ್ಟು ಒಂದು ದಿನವನ್ನು ಗೊತ್ತುಮಾಡಿ ಎಲ್ಲರೂ ಹೊರಡಬೇಕೆಂದು ನಿಶ್ಚಯಿಸಿದ್ದಾರೆ ಗುಂಪು ಆದಿನ ಬೆಂಗಳೂರನ್ನು ಬಿಟ್ಟು ಹರಿಹರದ ಮಾರ್ಗವಾಗಿ ಹುಬ್ಬಳ್ಳಿಗೆ ಬಂದು ಅಲ್ಲಿ ನಮ್ಮ ಚಿಕ್ಕಮಾವನವರ ಮನೆ ಯಲ್ಲಿ ತಂಗಿ, ಅಲ್ಲಿಂದ ಹೊರಟು 'ಪೂನ'ದಲ್ಲಿಳಿದು ರಾಯರ ಭಾವನವರ ಮನೆಯಲ್ಲಿ ಒಂದು ದಿನವಿದ್ದು, ಮಾರನೆಯ ದಿನ ಸಂಜೆಗೆ ಬೊಂಬಾಯಿ ಯನ್ನು ಸೇರಿ ಅಲ್ಲಿ ರಂಗಪ್ಪನ ಚಿಕ್ಕಪ್ಪನವರ ಮನೆಯಲ್ಲಿ ಒಂದು ದಿನ ಸುಧಾರಿಸಿಕೊಂಡು, ಮತ್ತೆ ಹೊರಟು ನೇರವಾಗಿ ಸಿಮ್ಲಾಕ್ಕೆ ಸೋಮ ವಾರ ಸೇರಬೇಕೆಂದು ಪ್ರಯಾಣ ಕ್ರಮ. ಇದಕ್ಕೊಂದು ಟಿಪ್ಪಣಿ ಬೇರೆ:

ಬೊಂಬಾಯಿನಲ್ಲಿ ಹೆಚ್ಚಿಗೆ ವಿಶ್ರಾಂತಿ ಬೇಕಾಗಿ ತೋರಿದರೆ, ಇಲ್ಲವೆ ರಂಗಪ್ಪನ ಚಿಕ್ಕಪ್ಪನವರು ಬಲವಂತ ಪಡಿಸಿದರೆ ಇನ್ನೂ ಒಂದೆರಡು ದಿನಗಳ ಮಟ್ಟಿಗೆ ಅಲ್ಲಿ ಇರಲಾಗುವುದು. ಆಗ ತಾರಿನ ಮೂಲಕ ಮುಂದಿನ ಪ್ರಯಾಣವನ್ನು ತಿಳಿಯಪಡಿಸಲಾಗುವುದು. ಈ ಕಾಗದವು ನಿಮಗೆ ಮುಟ್ಟಿತೆಂದು ನಮಗೆ ತಾರು ತಲುಪಿದರೆ ನಿಶ್ಚಿಯಿಸಿದ ದಿನ ಹೊರಡಲಾಗುತ್ತದೆ.

ಇದನ್ನು ಕೇಳಿದ ರಂಗಪ್ಪನು "ಇಷ್ಟೇ ತಂಗಿದರೆ ನಾಕೆ? ಅರಸೀಕೆರೆ, ಬರೋಡ, ರತ್ಲಾಂ, ಡೆಲ್ಲಿ, ಕಾಲ್ಕ ಈ ಊರುಗಳಲ್ಲಿ ನಮ್ಮ ನಮ್ಮ ಸಂಬಂಧಿಗಳು, ಸ್ನೇಹಿತರು, ಪರಿಚಿತರು, ಪರಿಚಿತರ ಪರಿಚಿತರು, ಯಾರೂ ಇಲ್ಲವೆ?" ಅಂದ. ರಾಯರು "ಸ್ವಲ್ಪ ಸೈರಿಸಿಕೊಳ್ಳಿ. ಹೇಗೂ ಹೊರಡುತ್ತಾರಲ್ಲ. ಒಂದೆರಡು ದಿನ ಹಿಂಚುಮುಂಚು ಬರುತ್ತಾರಲ್ಲ. ಅದೇ ನಮ್ಮ ಪುಣ್ಯ" ಅಂದರು. ನನಗೆ ಹೆಚ್ಚಿಗೆ ಏನೂ ಹೇಳಲು ತೋರದಂತಾಗಿ "ಇವರು ಬರಿಯುವಾಗ ಕಾಗದ, ನಾವು ಮಾತ್ರ ತಾರು ಕೊಡಬೇಕಂತೆ. ನಾನೂ ಕಾಗದವನ್ನೇ ಬರೆಯುತ್ತೇನೆ" ಎಂದು ಗಾಳಿಯನ್ನು ಬೆದರಿಸಿದೆ. ತಕ್ಷಣವೇ ರಂಗಪ್ಪ ಬೆಚ್ಚಿಬಿದ್ದು "ಮಹಾರಾಯರೇ, ಹಾಗೆಲ್ಲಮಾಡಬೇಡಿ. ಕೈಗೆ ಬಂದ ತುತ್ತು ಬಾಯಿಗೆ ಬರದೆ ಹೋದೀತು. ನಿಮ್ಮ ವಿಳಾಸ ಕೊಡಿ, ನಾನೇ ತಾರುಕೊಡುತ್ತೇನೆ ಅಂದ.

ಪ್ರಯಾಣದ ದಿನ ಬಂದಿತು. ಬೆಳಿಗ್ಗೆ ಆಫೀಸಿಗೆ ಹೋಗುವಾಗ ರಂಗಪ್ಪನು ದೀರ್ಘವಾಗಿ "ಸದ್ಯ, ಎರಡು ಚಾಕರಿಯ ಶನಿಕಾಟ ತಪ್ಪಿತು—ಇನ್ನೇನು" ಅಂದ. ರಾಯರು "ಅಷ್ಟೇ ಅಲ್ಲ; ಶುಕ್ರದೆಶೆಯೂ ಮೊದಲಾಗುತ್ತದೆ—ಆದರಲ್ಲಿಯೂ ನಿಮಗೆ ಅವನು ಕಳತ್ರಾಧಿಪತಿ" ಅಂದರು. ನನಗೂ ಒಳಗೊಳಗೇ ಹರ್ಷ. ಹೊರಗೆ ತೋರಿಸಲು ಏಕೋ ಇಷ್ಟವಿಲ್ಲ. ಅಲ್ಲದೆ ಮುಂದಿನ ಸಿದ್ಧತೆಗಳಲ್ಲಿ ನನ್ನ ಮನಸ್ಸು ಮುಳುಗಿ ಹೋಗಿದ್ದಿತು. ಹೊರಟದ್ದಕ್ಕೆ ಸಮಾಚಾರ ತಿಳಿಸಬೇಕೆಂದು ನಾನು ಸೂಚಿಸಿದ್ದ ಕಾರಣ, ಆ ದಿನ ತಾರಿನ ನಿರೀಕ್ಷಣೆ ಇತ್ತು. ರೈಲು ಬೆಳಿಗ್ಗೆ ಎಂಟುಗಂಟೆಗೆ ಹೊರಡುವುದರಿಂದ ಸಮಾಚಾರವು ಹನ್ನೆರಡು ಗಂಟೆಗೆ ತಲುಪಬೇಕು. ಹನ್ನೆರಡು, ಒಂದು, ಎರಡು, ಮೂರು, ನಾಲ್ಕು—

ಸುದ್ದಿಯಿಲ್ಲ. ನಮ್ಮ ಮನಸ್ಸುಗಳು ತವಕಗೊಂಡುವು. ಆಗಾಗ್ಗೆ ಮೂವರೂ ಸೇರಿ ಚರ್ಚಿಸಿದೆವು. ಹೆಚ್ಚೇನೂ ಲಾಭವಾಗಲಿಲ್ಲ. ರಾಯರು "ಈಗ ಯುದ್ಧದ ದಿನ. ತಾರು ನಿಧಾನವಾಗಿ ಬಂದೀತು" ಎಂದು ಸಮಾಧಾನಪಡಿಸಿದರು. ಅದು ಐದು ಗಂಟೆಗೆ ಬಂದಿತು—ತಾರಲ್ಲ. ಕಾಗದ! ನಮ್ಮ ಮಾವನವರದ್ದು. ಸಾರಾಂಶ: ಅವರ ಮನೆಗೆ ಶ್ರೇಷ್ಠ ಜೋಯಿಸರೊಬ್ಬರು ಬಂದಿದ್ದರು. ಅವರು ಪಂಚಾಂಗವನ್ನು ನೋಡಿ ಮನೆಯ ಜೋಯಿಸರು ನಿಶ್ಚಯಿಸಿದ್ದ ದಿನ ಪ್ರಶಸ್ತಪ್ರಯಾಣ ಯೋಗವಲ್ಲವೆಂದೂ—ಯೋಗ 'ಕ್ಲೇಶ'ವಂತೆ—ಎರಡು ದಿನಗಳ ನಂತರ ಬಹಳ ಶ್ರೇಷ್ಠ—ಯೋಗ 'ಕಲ್ಯಾಣ'ವೆಂದೂ ಅಭಿಪ್ರಾಯಪಟ್ಟುದುದರಿಂದ ಪ್ರಯಾಣವನ್ನು ಎರಡು ದಿನ ಮುಂದುವರಿಸಿದೆ. ಹುಬ್ಬಳ್ಳಿ, ಪೂನ, ಬೊಂಬಾಯಿಗಳಿಗೂ ಸಮಾಚಾರ ಕಳುಹಿಸಿದೆ. ಹೀಗಿದ್ದು ಸಿಮ್ಲವನ್ನು ಸೇರುವ ದಿನ ಸೋಮವಾರಕ್ಕೆ ಬದಲು ಬುಧವಾರವಾಗುತ್ತದೆ. ತಿಳಿಯುವುದು.

ಇದು ಅವನ ಮಾವನವರ ಕಾಗದವಾಗಿದ್ದರೆ ರಂಗಪ್ಪ ಏನೇನನ್ನು ಹೇಳಿಬಿಡುತ್ತಿದ್ದನೋ ಏನೋ. ಈಗಂತೂ ತಡೆದುಕೊಂಡು ನಿಟ್ಟುಸಿರನ್ನು ಮಾತ್ರ ಬಿಟ್ಟನು. "ಅವರೆಂದಿಗೂ ಬರುವುದಿಲ್ಲ" ಎಂದು ಮಾತ್ರ ಹೇಳಿದ. ರಾಯರು "ಕೆಟ್ಟ ಅದೃಷ್ಟ, ಮುಖ್ಯ" ಅಂದು ನಸುನಕ್ಕರು. "ಈ ಪ್ರಯಾಣ ಸಂತೋಷಕ್ಕೆ ಕಾರಣವಾಗುವ ಬದಲು ಬೇಸರಕ್ಕೇ ಕಾರಣವಾಗಿದೆ" ಅಂದು ನಾನೂ ಸೈರಿಸಿಕೊಂಡೆನು.

ಆದರೆ ಎರಡು ದಿನ ಬಿಟ್ಟು, ಅವರು ರೈಲು ಹತ್ತಿದ ಸಮಾಚಾರವು ತಿಳಿದೊಡನೆ ನಮ್ಮ ಸಿಟ್ಟು, ಸಂಕಟಗಳೆಲ್ಲವೂ ಮಾಯವಾದುವು. ನಾವು ನಮ್ಮ ಗೃಹಿಣಿಯರ ಬರುವಿಕೆಗಾಗಿ ಅಣಿಮಾಡಲು ಮೊದಲಾದೆವು. 'ಉಡಿದಾರ ಲಂಗೋಟಿ' ಅಂದ ಹಾಗೆ ಮೊದಲಿನಿಂದ ಎಲ್ಲ ಸಂಸಾರ ವಸ್ತುಗಳನ್ನು ಕೂಡಿಡಲು ಮೊದಲುಮಾಡಿದೆವು. ಅಂದಿನಿಂದ ಪಟ್ಟಿ ಹಾಕಿದ್ದೂ ಹಾಕಿದ್ದೇ, ಸಾಮಾನು ಕೊಂಡಿದ್ದೂ ಕೊಂಡಿದ್ದೆ. ಅಕ್ಕಿ, ಬೇಳೆಯಿಂದ ಸಾಸುವೆ, ಇಂಗಿನವರೆಗೂ ಆಹಾರ ಪದಾರ್ಥಗಳನ್ನು ಕೊಂಡಾಯಿತು. ಒಂದು ಹೊರೆ ಡಬ್ಬಗಳನ್ನು ಕೊಂಡು ಅವುಗಳಿಗೆ

ಇವುಗಳನ್ನೆಲ್ಲ ತುಂಬಿ ಅಂದವಾಗಿ ಅಡುಗೆಯ ಮನೆಯ ಮಾಡಿನಮೇಲೆ ಇಟ್ಟಾಯಿತು ತಲೆ ಎಣ್ಣೆ, ದೊಡ್ಡ ಕನ್ನಡಿ, ಮೊದಲಾದ ಕೆಲವು 'ಟಾಯಿಲೆಟ್' ಸಾಧನಗಳು ಎರಡನೆಯ ಗುಂಪಿನಲ್ಲಿ ಬಂದುವು. 'ಬಂಬ,' ಪಾತ್ರೆಗಳು, ಊಟದ ತಟ್ಟೆಗಳು ಮೊದಲಾದುವುಗಳನ್ನು ಆರಿಸಿ ಪ್ರಯಾಸಪಟ್ಟು ತಂದೆವು. ಬಾಗಿಲಿಗೆ, ಕಿಟಕಿಗಳಿಗೆ ಪರದೆಗಳು, ಸೇರಿ ದುವು. ಹೊಸಲಿನ ರಗ್ಗುಗಳು ಎರಡು ಮೂರು ಕಡೆ. ಎದುರು ಕೋಣೆ ಯಲ್ಲಿ ಚುನಾಯಿಸಿದ ಪಟಗಳು ಹಲವನ್ನು ನೇತುಹಾಕಲಾಯಿತು. ಮೇಜು ಕುರ್ಚಿಗಳೂ ಅಂದವಾಗಿ ಇರಿಸಲ್ಪಟ್ಟುವು. ಇದೇ ಎಚ್ಚರಿಕೆಯಿಂದ ಮಲಗುವ ಮನೆಯನ್ನೂ ಅಲಂಕರಿಸಿಯಾಯಿತು. ಎರಡು ಮೂರು ದಿನದ '[illegible] ಚಾಕರಿಯಿಂದ ಒಬ್ಬಂಟಿಗನ ಅಲಕ್ಷ್ಯದ ಮನೆಯು ಗೃಹಸ್ಥನ ಮಂದಿರವಾಯಿತು. ಇನ್ನು ದೇವಿ ಬರುವುದೊಂದೇ ಬಾಕಿ. ನಮ್ಮ ಪೈಪೋಟಿಯಲ್ಲಿ ರಂಗಪ್ಪನು ಮೊದಲನೆಯ ಬಹುಮಾನವನ್ನು ಪಡೆದನೆಂದು ಧಾರಾಳವಾಗಿ ಒಪ್ಪಿಕೊಳ್ಳುತ್ತೇನೆ.

ಶುಭಮುಹೂರ್ತದಲ್ಲಿ ಗುಂಪು ಬೆಂಗಳೂರನ್ನು ಬಿಟ್ಟಿತು. ದಾರಿ ಯಲ್ಲಿ ಯಾವ ಅಡಚಣೆಯೂ ಆಗಲಿಲ್ಲ. ಬೊಂಬಾಯಿಂದಲೂ ನಿರೀಕ್ಷಿ ಸಿದ ಕಾಲಕ್ಕೆ ತಾರು ಬಂದಿತು. ರಂಗಪ್ಪನ ಚಿಕ್ಕಪ್ಪನು ಹೆಚ್ಚು ಬಲವಂತ ಮಾಡಿರಲಾರರು. ಅವರಿಗೆ ವಂದನೆಗಳು. ಡೆಲ್ಲಿಯನ್ನು ಇವರು ಸೇರಿ ದಾಗ ಕೊಂಚ ಆತಿಥ್ಯವನ್ನು ಮಾಡಿ 'ಕಾಲ್ಕಾದ' ರೈಲನ್ನು ಹತ್ತಿಸ ಬೇಕೆಂದು ರಂಗಪ್ಪನು ಡೆಲ್ಲಿಯಲ್ಲಿದ್ದ ತನ್ನ ಪ್ರಾಣಸ್ನೇಹಿತ 'ಸೀನಿ'ಗೆ ಆಗಲೇ ಬರೆದಿದ್ದುದರಿಂದ ಆ ಭಾಗದಲ್ಲೂ ನಮ್ಮ ಮನಸ್ಸು ನೆಮ್ಮದಿ ಯಾಗಿದ್ದಿತು.

ಆಗಮನದ ಬುಧವಾರವೂ ಬಂದಿತು. ಹಿಂದಿನ ದಿನವೇ ರಜಕ್ಕೆ ಒಂದು ಚೀಟಿಯನ್ನು ಗೀಚಿ ಹಾಕಿದ್ದೆವು. ರಜದ ದಿನವಾದರೂ ನಮಗೆ ಬಹಳ ಕೆಲಸವಿದ್ದುದರಿಂದ ಮುಂಚೆಯೇ ನಾವೂ ರಂಗಪ್ಪನೂ ಸೇರಿ— ಎದ್ದು ಕೆಲಸದಲ್ಲಿ ತೊಡಗಿದೆವು. ಊರನ್ನೆಲ್ಲ ಬಾಚಿನೋಡಿದರೂ ಒಬ್ಬ ಸೇವಕನಿನ್ನೂ ಸಿಕ್ಕದಿದ್ದ ಕಾರಣ ನಮ್ಮ ಸಂಭ್ರಮದ ಭಾರವೆಲ್ಲ ನಮ್ಮ ಮೇಲೆಯೇ ಅಗತುಕೊಂಡಿತು.

ಕಸಬರಿಕೆಯಿಂದ ಗೋಡೆ ಗೂಡು ನೆಲಗಳನ್ನೆಲ್ಲ ಚೆನ್ನಾಗಿ ಗುಡಿಸಿದೆವು. ಲಕ್ಷಣವಾಗಿ ನೆಲವನ್ನೆಲ್ಲ ಸಾರಿಸಿದೆವು. ನಂಬಿದರೆ ನಂಬಿ, ಬಿಟ್ಟರೆ ಬಿಡಿ; ಹಿಟ್ಟಿನ ರಂಗವಲ್ಲಿಯನ್ನೂ ಇಟ್ಟೆವು. ಹತ್ತಾರು ಗಂಧದ ಕಡ್ಡಿಗಳನ್ನು ಹಚ್ಚಿ ವಾಸನೆಯು ಬೇಗ ಹೊರಟುಹೋಗದಂತೆ ಕಿಟಕಿಗಳನ್ನು ಮುಚ್ಚಿದೆವು ಅಲ್ಲಲ್ಲಿ ಹೂಗಳನ್ನು ಹಾಕಿದೆವು. 'ಬಂಬ'ದಲ್ಲಿ ನೀರು ಕಾಯುತ್ತಿದ್ದಿತು. ರಂಗಪ್ಪನ ಮನೆಯಲ್ಲಿ ಒಂದು ದೊಡ್ಡ ಕೊಳಗದಪ್ಪಲೆ ತುಂಬ ಈರುಳ್ಳಿ ಆಲೂಗೆಡ್ಡೆಯ ಹುಳಿ—ರಾಯರ ಸರ್ಟಿಫಿಕೇಟಿನಂತೆ—ಘಮ ಘಮಾಯಿಸುತ್ತಿತ್ತು ಸೇರು ಅಕ್ಕಿ ಅನ್ನ ತಪ್ಪಲೆಯಲ್ಲಿ ತಯಾರಾಗಿದ್ದಿತು ರಾಯರ ಕೈವಾಡದ ಕೆನೆಮೊಸರು ಒಂದು ಬೋಗಣಿ ತುಂಬ. ರಂಗಪ್ಪನು ತನ್ನ ಸ್ವಂತ ಕೈಯಿಂದಲೇ ಕಾಫಿ 'ಡಿಕಾಕ್ಷನ್' ಮಾಡಿ 'ಫಿಲ್ಟರಿಗೆ' ಹಾಕಿದ್ದನು ಹೀಗೆ ಆತಿಥ್ಯಕ್ಕೆ ಸಕಲ ಸಾಮಗ್ರಿಯೂ ಸಿದ್ಧವಾಗಿದ್ದಿತು ಪ್ರತಿಯೊಂದು ಸಾಮಾನೂ—ಹಾಸಿಗೆ, ಬಟ್ಟೆಬರೆ ಎಲ್ಲವನ್ನೂ ಕೂಡಿ—ಪ್ರತಿಯೊಬ್ಬರ ಮನೆಯಲ್ಲಿಯೂ—ಅದರಲ್ಲೂ ರಂಗಪ್ಪನ ಮನೆಯಲ್ಲಿ—ಅದರದರ ಸ್ಥಾನದಲ್ಲಿದ್ದುಕೊಂಡು ಆಗಂತುಕರನ್ನು ಮೆಚ್ಚಿಸಲು ಆತುರವಾಗಿದ್ದುವು.

ಹೀಗೆ ಸಿದ್ಧತೆಗಳನ್ನು ಸಕಾಲದಲ್ಲಿಯೇ ಮುಗಿಸಿ, ವೇಷಭೂಷಣಗಳನ್ನು ಆದಷ್ಟು ವಿಚಕ್ಷಣೆಯಿಂದ ಧರಿಸಿ ಹನ್ನೆರಡು ಗಂಟೆಯ ರೈಲಿಗಾಗಿ ಹನ್ನೊಂದಕ್ಕೇ ಹೊರಬಿದ್ದೆವು ನಾನೂ ಬಹಳ ಎಚ್ಚರಿಕೆಯಿಂದಲೇ ಬಟ್ಟೆ ಹಾಕಿಕೊಂಡಿದ್ದರೂ ರಂಗಪ್ಪನನ್ನು ನೋಡಿ ನನಗೆ ಅಸೂಯೆಯಾಯಿತು. ಅವನು ನೀಲಿಬಣ್ಣದ ಹೊಸ 'ಸರ್ಜುಸೂಟ'ನ್ನು ಹಾಕಿದ್ದನು. 'ವಾಪ್ಲಿನ್' ಗೆರೆಗೆರೆಯ ಷರಟು, ಮಾಸು ಕೆಂಪಿನ ಮನ ಮೋಹಕವಾದ ಟೈ. ಎಡಗಡೆಯ ಜೇಬಿನಿಂದ ಅವನ 'matchless' ರೇಶ್ಮೆ ಕರವಸ್ತ್ರವು ಕಾಣುತ್ತಿದ್ದಿತು. 'ಬಟನ್ ಹೋಲಿ'ನಲ್ಲಿ ಒಂದು ಬಿಳಿಯ ಗುಲಾಬಿ ಹೂ ಬೇರೆ. ತಾನೇ ಬಣ್ಣ ಹಾಕಿ 'ಬ್ರಷ್' ಹೊಡೆದಿದ್ದ, ಮಿಂಚು 'ಪಾಲಿಷಿ'ನ ಕಪ್ಪು 'ಷೂ' ಹಾಕಿಕೊಂಡಿದ್ದನು. 'ಉಲ್ಲಾಸೀದಾ' ಹೊಡೆದು ಹೊಡೆದು ನುಣ್ಣಗೆ ಮುಖಕ್ಷೌರವನ್ನು ಮಾಡಿಕೊಂಡಿದ್ದನು. ಗುಂಗುರು ಕೂದಲಿಗೆ 'ಅಟ್‌ಕಿನ್‌ಸನ್ನಿನ' ಎಣ್ಣೆ

ಯನ್ನು ತೊಡೆದುಕೊಂಡು ಬಹುಹೊತ್ತು ಕನ್ನಡಿಯ ಮುಂದೆ ನಿಂತು ಬಾಚಿಕೊಂಡಿದ್ದನು. ಕೈಯಲ್ಲಿ ನಾಜೂಕಾದ ಸಿವ್ಲಾದ 'ಲಕ್ಕಡಿ ಬಜಾರಿನ' ಕೋಲು ಬೇರೆ. ಇಷ್ಟಕ್ಕೂ ಮೇಲಾಗಿ ಅವನ ಠೀವಿಯ ನಡಿಗೆ; ಗಂಭೀರದ ನಗೆ. ರತ್ನಮ್ಮನವರೆ; ನೀವು ಧನ್ಯರು!

ದಾರಿಯಲ್ಲಿ ಯಾರೂ ಹೆಚ್ಚು ಮಾತನಾಡಲಿಲ್ಲ. ಅವರವರ ಯೋಚನೆಯಲ್ಲಿ ಅವರವರು ಮಗ್ನರಾಗಿದ್ದರು—ನ್ಯಾಯವಾಗಿ ಆದರೂ ಸ್ಟೇಷನ್ನನ್ನು ಸಮೀಪಿಸಿದಾಗ ರಂಗಪ್ಪನು "ಸದ್ಯ ಇಂದಿಗೆ ಎಲ್ಲ ಕಷ್ಟವೂ ಪಾರು—ಅದು ನನ್ನ ನಿರೀಕ್ಷೆ" ಅಂದ. "ಅಷ್ಟೇನೆ?" ಎಂದೆ ನಾನು. ರಾಯರು "ಅಷ್ಟೇ ಅಲ್ಲ. ರಂಗಪ್ಪ ಈದಿನ ಏಳನೇ ಸ್ವರ್ಗದಲ್ಲಿರುತ್ತಾನೆ" ಅಂದರು. ರಂಗಪ್ಪನು ನಕ್ಕು ಒಪ್ಪಿಗೆಯನ್ನು ಸೂಚಿಸಿದನು.

ಸ್ಟೇಷನ್ನನ್ನು ಸೇರಿದಾಗ ಹನ್ನೊಂದುವರೆ ಗಂಟೆ. ಇನ್ನೂ ಅರ್ಧ ಗಂಟೆ, ರೈಲು ಬರುವುದಕ್ಕೆ. ಅಲ್ಲಲ್ಲಿ ಸುತ್ತಾಡಿ ಕೊಂಚ ಕಾಲವನ್ನು ಕಳೆದೆವು. ಅದು ಬೇಗಲೇ ಬೇಸರವಾಯಿತು. ಕೆಲಸಕ್ಕೆ ಬಾರದ 'ಮ್ಯಾಗಸೀನ್' ಯಾವುದನ್ನೋ ಕೊಂಡೆವು. ಆದರೆ ಅದರಲ್ಲಿ ಮನಸ್ಸು ನಿಲ್ಲದೆಹೋಯಿತು. ದೃಷ್ಟಿಯು ಹತ್ತಿರವೇ ಇದ್ದ ಕೈಮರದ ಮೇಲೇ. ಒಂದೊಂದು ನಿಮಿಷವೂ ಒಂದೊಂದು ದಿನದಂತೆ. ಇನ್ನೂ ಐದು ನಿಮಿಷ. ಇನ್ನೇನು ರೈಲು ಆ ತಿರುವಿನಲ್ಲಿ ಕಾಣಿಸಿಕೊಳ್ಳಬೇಕು. ಊಹುಂ. ಹನ್ನೆರಡು ಗಂಟೆ. ರೈಲಿನ ಸುಳಿವಿಲ್ಲ. ಮತ್ತೆ ಐದು ನಿಮಿಷ—ಹತ್ತು—ಹದಿನೈದು ಇನ್ನೂ ಕಾಯುತ್ತಲೇ ಇದ್ದೆವು. ರಂಗಪ್ಪನು ಉದ್ವೇಗದಿಂದ "ಥೂ, ಈ ಹಾಳು ರೈಲು ಈ ದಿನವೇ ಹೊತ್ತಾಗಬೇಕೆ?" ಅಂದು "ಮಾಸ್ತರನ್ನು ವಿಚಾರಿಸುತ್ತೇನೆ" ಎಂದು ಹೇಳಿ ಹೋದ. ಅವನು ತಂದ ಸಮಾಚಾರದ ಪ್ರಕಾರ ರೈಲು ಅಂದು ಒಂದು ಗಂಟೆ ಹೊತ್ತು; ಸರಿ ಇನ್ನೂ ಮುಕ್ಕಾಲು ಗಂಟೆಯಷ್ಟು ಕಾಯ್ದೆವು—ಮುಳ್ಳಿನಮೇಲೆ ನಿಂತುಕೊಂಡು. ಕಡೆಗೆ ರೈಲು ತಲೆ ಹಾಕಿತು; ಬಂದಿತು, ನಿಂತಿತು. ನಾವು ಜತೆ ಜತೆಯಾಗಿ ಗಾಡಿಯ ಒಂದು ಕಡೆಯಿಂದ ಮತ್ತೊಂದು ಕಡೆಗೆ ಭರದಿಂದ ಸಾಗಿದೆವು. ಏನಾದರೊಂದು ಚಿಹ್ನೆಗಾಗಿ ರೈಲಿನ ಉದ್ದಕ್ಕೂ ನೋಡಿದೆವು. ರೈಲಿನ ಸಣ್ಣ ಕಿಟಕಿಗಳಲ್ಲಿ ಇಣಿಕಿ ನೋಡಿದ್ದೂ ಆಯಿತು. ಎಲ್ಲ ವ್ಯರ್ಥ!

ವ್ಯರ್ಥ! ನಮ್ಮ ಭಾವನೆಯನ್ನು ನೀವೇ ಊಹಿಸಿಕೊಳ್ಳಿ. ಅದೇನು ನಿರಾಸೆಯೋ, ಕೋಪವೋ, ಭಯವೋ ಅಥವಾ ಎಲ್ಲವೂ ಕೂಡಿದುದೋ. ಎಲ್ಲ ಕಡೆಯೂ ಚೆನ್ನಾಗಿ ನೋಡಿ, ಪ್ರಯಾಣಿಕರನ್ನೆಲ್ಲ ಕಣ್ಣಿನಿಂದ ಶೋಧಿಸಿದೆವು. ಸಪ್ಪೆಯ ಮುಖ ಹಾಕಿಕೊಂಡು ತೆಪ್ಪನೆ ಗುಡ್ಡವನ್ನು ಹತ್ತಿದೆವು. ರಂಗಪ್ಪನು "ಇವರಿಗೇನಾಗಿರಬಹುದು?" ಅಂದ ನಾನು "ಅವರು ಇಲ್ಲಿಗೆ ಸೇರುವುದೇನೋ ಒಂದು ಗಂಡಾಂತರವನ್ನು ಗೆದ್ದ ಹಾಗಲ್ಲ!" ಅಂದೆ. ರಾಯರು "ನಿಮಗೆ ಆತುರ, ಅವರಿಗೆ ಏನ್ರಿ?" ಅಂದರು ವ್ಯಂಗ್ಯವಾಗಿ. "ಇವತ್ತು ನಾಳೆಯಲ್ಲಿ ಕಾಗದ ಬರುತ್ತದೆ. ಎಲ್ಲಿ ಏನು ಅಸಂಗತವಾಗಿದೆಯೋ ನೋಡೋಣ" ಅಂದುಕೊಂಡು ಹತ್ತಿ ಬರುವ ಭಾವನೆಗಳನ್ನು ಅಮುಕಿಕೊಂಡು ಮನೆಯನ್ನು ಸೇರಿದೆವು. ನಾವು ಬಾಗಿಲನ್ನು ತೆಗೆಯುವಾಗ ಸುವಾಸನೆಯು ಇದಿರುಗೊಂಡು ನಮ್ಮ ದುಃಖ ವನ್ನು ಹೆಚ್ಚಿಸಿತು. "ಈ ಸಂಪತ್ತಿಗೆ ಈ ಭೋಜನ್ನೆಲ್ಲ ಬೇರೆ ಮಾಡಿ ಹೋಗಿದ್ದೆವು" ಅಂದ ರಂಗಪ್ಪ ಕಹಿಯಾಗಿ. ಊಟದ ಸಮಯದಲ್ಲಿ "ಇಷ್ಟೊಂದು ಹುಳಿ ಅನ್ನ ಮಾಡಿದೆವಲ್ಲ" ಅಂದರು ರಾಯರು. "ಒಳ್ಳೆಯದಾಯ್ತು, ರಾತ್ರಿಗೆ ತಂಗಳೇ ಆಯ್ತು" ಅಂದೆ ನಾನು ಬೇಸರದಿಂದ. "ಇಂತಹ ಹುಳಿಯನ್ನು ಊಟಮಾಡುವುದಕ್ಕೆ ಅದೃಷ್ಟ ಬೇಕಲ್ಲ ಅವರಿಗೆ" ಅಂದರು ರಾಯರು ತುತ್ತನ್ನು ಎತ್ತಿದ್ದ ರಂಗಪ್ಪನು "ಆ? ಹುಳಿಯೇ? ಸರಿ" ಅಂದು ತಿದ್ದುಕೊಂಡ. ರಾಯರು "ಯಾಕೆ? ಅನುಮಾನಿಸುತ್ತೀರ?" ಎಂದು ಕೇಳಿದರು. "ಹಾಗಲ್ಲ" ಅಂದು ರಂಗಪ್ಪ ಸುಮ್ಮನಾದ.

ಅನಂತರ ಆಫೀಸಿಗೆ ಹೋಗಿ ಟಪಾಲನ್ನು ನೋಡಬೇಕೆ ಎಂಬ ಪ್ರಶ್ನೆಯು ಚರ್ಚಿಸಲ್ಪಡುತ್ತಿದ್ದಾಗ ಅಂಚೆಯವನು ಬಂದು "ರಂಗಪ್ಪ ಯಾರು?" ಎಂದು ಪ್ರಶ್ನಿಸಿದನು. ರಂಗಪ್ಪನು ಚಂಗನೆದ್ದು ಕೈನೀಡಿದ. ಅದರ ಸಾರಾಂಶ: "ಇಲ್ಲಿ ಉಳಿಸಿಕೊಂಡಿದ್ದೇವೆ. ನಾಳೆ ಬರುತ್ತಾರೆ?" ಸೀನಿಯ ರುಜು. ನಾವಿಬ್ಬರೂ ರಂಗಪ್ಪನ ಭುಜದ ಮೇಲಿನಿಂದ ಓದಿ ಕೊಂಡೆವು. ರಂಗಪ್ಪನು "ಓ, ಆ ಸೀನಿ ಬೇಕೆಂತಲೇ ಹೀಗೆ 'mischief' ಮಾಡಿದಾನೆ. ನನಗೆ ಗೊತ್ತು ಅವನ ಸ್ವಭಾವ. ಆತಿಥ್ಯಕ್ಕಾಗಿ ಅವನಿಗೆ

ಬರೆಯುಲೇ ಬಾರದಾಗಿತ್ತು'' ಅಂದ. "ಹಾಗಲ್ಲ...." ಅಂತ ರಾಯರು ಮೊದಲು ಮಾಡಿದರು. "ಹ್ಯಾಗೂ ಅಲ್ಲ. ಹಾಗೇ. ಅವನು ಇದಕ್ಕೆಲ್ಲ ತಯಾರು'' ಎಂದು ರಂಗಪ್ಪ ಪಟ್ಟು ಹಿಡಿದ. ನಮಗೆ ಈಗ ನಗುಬಂದಿತು. ಸೀನಿಗೆ ರಂಗಪ್ಪನ ಸ್ವಭಾವ ಗುಟ್ಟುಗಳೆಲ್ಲವೂ ಗೊತ್ತು. ಇವನ ಖಯಾಲಿ ಕಂಡು 'Practical Joke' ಮಾಡಿದನೋ ಏನೋ ಅನ್ನಿಸಿತು, ನಮಗೂ ಸೀನಿ ಅಂತಹವನೇ ಎಂದು ಹೇಳಿದರೆ ಅವನಿಗೆ ಅನ್ಯಾಯ ಮಾಡಿದಂತಾಗುವುದಿಲ್ಲ. ಹೀಗೆ ಅಂದುಕೊಂಡು ಮರುಕ್ಷಣ ದಲ್ಲಿ ನಾವೂ ಸೀನಿಯನ್ನು ದೂರಲು ಮೊದಲು ಮಾಡಿದೆವು.

ಇನ್ನೊಂದು ದಿನದ ರಜ ಹಿಂದಿನ ದಿನದಂತೆ ಇಂದೂ ಆಗಮನದ ನಾಟಕ. ಈ ದಿನವೂ ರೈಲು ಹೊತ್ತು. ಹೊತ್ತನ್ನು ಕಳೆಯಲು ಅದೇ ಮುಜುಗರ ಹೇಗಾದರೂ ಆಗಲಿ. ಇಂದಾದರೂ ನಿರೀಕ್ಷಿಸಿದ್ದ ನಟಿಯರು ರಂಗಭೂಮಿಗೆ ಇಳಿದರು. ರತ್ನಮ್ಮನವರನ್ನು ಕಂಡ ರಂಗಪ್ಪನ ಗಡಿಬಿಡಿ ಯಂತೂ ಎಲ್ಲೆಲ್ಲೂ ಹಿಡಿಸದು. ಅವರು ಗಾಡಿಯಿಂದ ಇಳಿಯುತ್ತಿದ್ದಾ ಗಲೇ ಇವನು ಹೋಗಿ ಇಳಿಸಿಕೊಳ್ಳಲು ಕೈನೀಡಿದನು. ಆದರೆ ಆ ಸಹಾಯ ವನ್ನು ಹೊಂದದೆಯೇ ಅವರು ಧುಮಿಕಿದರು ಅನಂತರ ಗಾಡಿಯಲ್ಲಿದ್ದ ತನ್ನ ಸಾಮಾನುಗಳನ್ನು ಎಳೆದು ಹಾಕಿದನು. ಕೂಲಿಯವರನ್ನು ಕೂಗಿ ಕೂಲಿ ಗೊತ್ತುಮಾಡಿದನು. ಆ ಪರಾಣರು ಸಾಮಾನುಗಳ ಮುಂದೆ ಕುಳಿತುಕೊಂಡು ಹಗ್ಗವನ್ನೆಸೆದು ಎಲ್ಲವನ್ನೂ ಬೆನ್ನಿಗೆ ಬಿಗಿದುಕೊಂಡು ಹೊರಟರು. ಎಲ್ಲರ ಟಿಕೇಟನ್ನೂ ರಂಗಪ್ಪನೇ ಈ ಗುಂಪಿನ ಜತೆಗೆ ಬಂದಿದ್ದ ನಮ್ಮ ತಂದೆಯವರಿಂದ ತೆಗೆದುಕೊಂಡು ಮಾಸ್ತರಿಗೆ ಕೊಟ್ಟನು. ಅವನ ಮುಖದಲ್ಲಿ ಹರ್ಷವು ತುಂಬಿ ತುಳುಕುತ್ತಿದ್ದಿತು. ನಿರಾತಂಕ ಭಾವನೆಯೂ ಸ್ಪಷ್ಟವಾಗಿ ಕಾಣುತ್ತಿದ್ದಿತು. ರಾಯರು "ರಂಗಪ್ಪ ನವರ ಮುಖನೋಡಿ. ಅವನ ಸಡಗರ ನೋಡಿ'' ಎಂದು ಮೆಲುನುಡಿ ಯಲ್ಲಿ ಹೇಳಿದರು.

ವಿಚಾರಿಸಿದ್ದರಲ್ಲಿ ಒಂದು ದಿನದ ತಡೆಗೆ ರಾಯರ ಮಗುವಿನ ಅಲಸಿಗೆಯೇ ಕಾರಣವೆಂದು ಗೊತ್ತಾಯಿತು. ಗೈರು ಹಾಜರು 'ಸೀನಿ'ಗೆ ನಮ್ಮ ಕ್ಷಮಾಪಣೆಗಳನ್ನು ಅರ್ಪಿಸಿದೆವು. ಸ್ಟೇಷನ್ನಿನ ಹೊರಗೆ ಬಂದವನೇ

ರಂಗಪ್ಪನು ರಿಕ್ಷಾಗಳನ್ನು ಕರೆದನು. ಹೆಂಗಸರು ಈ 'ನರವಾಹನ'ವು ಬೇಡವೆಂದು ಹೇಳಿದರು. ಆದರೆ ಅವರ ಮುಖಗಳನ್ನು ಕಂಡ ನಾವು ಅವರಿಗಾಗಿದ್ದ ಆಯಾಸವನ್ನೂ, ಹತ್ತಬೇಕಾದ ಗುಡ್ಡವನ್ನೂ ಅವರ ಗಮನಕ್ಕೆ ತಂದು ಆ ವಾಹನಕ್ಕೆ ಒಡಂಬಡುವಂತೆ ಪ್ರೇರೇಪಿಸಿದೆವು. ರಾಯರ ಮಡದಿ ಮಕ್ಕಳು ಒಂದು ರಿಕ್ಷದಲ್ಲಿ ಕುಳಿತರು. ನಮ್ಮ ಮನೆ ಯವಳೂ, ರತ್ನಮ್ಮನವರೂ ಬೇರೆ ಬೇರೆಯವಕ್ಕೆ ಹತ್ತಿದರು. ನಮ್ಮ ತಂದೆಯವರು ಖಂಡಿತವಾಗಿ ರಿಕ್ಷದಲ್ಲಿ ಕೂಡುವುದಿಲ್ಲವೆಂದು ಹೇಳಿದ ಮೇಲೆ ನಾವು—ಗಂಡಸರು—ನಡಗೆಯಲ್ಲಿ ಹೊರಟವು.

ಈ ಗುಂಪು ಒಂದೆರಡು ಮಾರು ಸರಿದಿರಬಹುದು. ಇಷ್ಟರಲ್ಲಿ ರಂಗಪ್ಪನು ಏನನ್ನು ಯೋಚಿಸಿದನೋ ಏನೋ, ನಮ್ಮನ್ನು ಉದ್ದೇಶಿಸಿ "ನೀವೇನೂ ತಿಳಿದುಕೊಳ್ಳದಿದ್ದರೆ ನಾನೂ ಆ ರಿಕ್ಷಾದಲ್ಲೇ ಹೋಗು ತ್ತೇನೆ" ಅಂದ. ಅವನ ರೀತಿಯನ್ನು ತಿಳಿದ ನಾವು ನಸುನಕ್ಕೆವು ರಾಯರು "ಓಹೋ, ಅದಕ್ಕೇನು? ಕೇಳುವುದು, ಹೇಳುವುದು ಎಲ್ಲ ಯಾಕೆ?" ಅಂದರು. ರಂಗಪ್ಪನು ಮುಂದೆ ಸಾಗಿದ್ದ ರತ್ನಮ್ಮನವರ ರಿಕ್ಷದ ಕಡೆಗೆ ಹಾರಿದನು—ಅನ್ನಿ. ಇನ್ನೇನು ಹತ್ತಬೇಕು. ಅಷ್ಟರಲ್ಲೇ ಗಂಡಹೆಂಡಿರಲ್ಲಿ ಏನೋ ಮೆಲ್ಲಗೆ ಮಾತಾಯಿತು. ರಂಗಪ್ಪನು ಮೇಲಿಡು ತ್ತಿದ್ದ ಕಾಲನ್ನು ಹಿಂದಕ್ಕೆ ತೆಗೆದುಕೊಂಡು ಪೆಚ್ಚಾಗಿ ನಿಂತುಬಿಟ್ಟನು. ರಿಕ್ಷವು ಮುಂದಕ್ಕೆ ಸಾಗಿತು. ಇದನ್ನು ನೋಡಿ ನಮಗೆ ಆಶ್ಚರ್ಯ ವಾಯಿತು ಒಬ್ಬರ ಮುಖವನ್ನು ಒಬ್ಬರು ನೋಡಿದೆವು. ಇದಕ್ಕೆ ಉತ್ತರವಾಗಿ ತಂದೆಯವರು "ಓ, ನಾನು ಮರೆತಿದ್ದೆ; ರತ್ನಮ್ಮ ಒಳಗಿಲ್ಲ ಅಂತ ಕಾಣುತ್ತೆ" ಅಂದರು ನಾನೂ ರಾಯರೂ ಮತ್ತೆ ಒಬ್ಬರನ್ನೊ ಬ್ಬರು ನೋಡಿಕೊಂಡೆವು, ರಾಯರು "ಪಾಪ, ಬಡಪಾಯಿ!" ಎಂದು ನನ್ನ ಬಳಿ ಪಿಸುಗುಟ್ಟಿದರು.

ಇಷ್ಟುಹೊತ್ತಿಗೆ ನಾವು ರಂಗಪ್ಪನನ್ನು ಸಮೀಪಿಸಿದೆವು. ಅವನು ಪೆಚ್ಚಾಗಿ ನಗುತ್ತ "ಬೋಲ್ಡ್!" ಅಂದ.

# ಹವಾಲ್ದಾರ

ದಂಡಪ್ಪನು ಮುಂಬಯಿ ಪೋಲೀಸಿನಲ್ಲಿ ಹಳೆಯ ಹವಾಲ್ದಾರ. ಅವನಿಗೆ ವರ್ಷ ಐವತ್ತು. ಆಸಾಮಿ ಒಳ್ಳೇ ಕಟ್ಟುಮಸ್ತು. ಪೈಲವಾನನಿಗೆ ತಯಾರಿ ಹೊಂದಿ ಪೋಲೀಸಿಗೆ ಹೇಗೋ ಸೇರಿಬಿಟ್ಟಿದ್ದನು ಅವನ ಅಗಲವಾದ ಮೊಗಕ್ಕೆ ಚೌಕದ ಗಲ್ಲ, ಎದ್ದ ಕೆನ್ನೆ ಮೂಳೆ, ಅರೆ ನರೆತು ಹುರಿಮಾಡಿದ ಉದ್ದ ಮಿಸೆ, ಕೆಂಗಣ್ಣುಗಳು ಕಾಠಿಣ್ಯವನ್ನು ಕೊಟ್ಟಿದ್ದವು. ನೀಲಿಚಡ್ಡಿ, ಅಂಗಿ, ಹಳದಿ ಟೊಪ್ಪಿಗೆ, ಚರ್ಮದ ಪಟ್ಟಿ, ದಪ್ಪಮೆಟ್ಟು ಸೊಂಟದ ಕೋಲು, ಹಿತ್ತಾಳೆಯ ನಂಬರು "ಸಿಟ್ಟಿ"ಗಳಲ್ಲಿ ಆತನ ಆಕಾರ ಮಾದರಿ ಹವಾಲ್ದಾರನದು.

ಆ ಕಾಲದಂತೆಯೇ ಸ್ವಭಾವವೂ ವಿಷಮ ಸಂದರ್ಭಗಳಲ್ಲಿ ಅವನ ದಿಟ್ಟತನ, ಹಂಚಿಕೆ, ಶೋಧನೆಗಳಲ್ಲಿ ಅವನಿಗಿದ್ದ ಯುಕ್ತಿ, ಅವನು ಕೆಲಸ ದಲ್ಲಿ ತೋರಿಸುತ್ತಿದ್ದ ವಿಶೇಷ ಆಸಕ್ತಿ, ಶ್ರಮಸಹಿಷ್ಣುತೆ, ಇಲಾಖೆಯಲ್ಲಿ ಅವನಿಗಿದ್ದ ಪ್ರೇಮ ಭಕ್ತಿ ಇವುಗಳಿಂದ ತನ್ನ ಅಧಿಕಾರಿಗಳನ್ನು ತೃಪ್ತಿ ಪಡಿಸಿ ಅವರ ಮೆಚ್ಚಿಗೆಯನ್ನು ಸಂಪಾದಿಸಿದ್ದನು. ಯಾವ ಕಷ್ಟದ ಕೆಲಸದ ಸಾಧನೆಯಲ್ಲೂ ಅವನು ಮುಂದಿನ ಪಂಕ್ತಿಯಲ್ಲಿರುತ್ತಿದ್ದನು. ಹಾಗೆಯೇ ಸೂಕ್ಷ್ಮವಾದ ಕೆಲಸವಿದ್ದ ಕಡೆಯಲ್ಲೂ ಹವಾಲ್ದಾರ ದಂಡಪ್ಪನು ಚುನಾಯಿಸಲ್ಪಡುತ್ತಿದ್ದನು ಹೀಗಿದ್ದ ಅವನು ಇಲಾಖೆಯಲ್ಲಿ "safe man' ಅನ್ನಿಸಿಕೊಂಡಿದ್ದನು. ಅಕ್ಷರವೊಂದು ಅವನ ದೌರ್ಬಲ್ಯ. ಇಲ್ಲದಿದ್ದರೆ ಅವನು ಖಂಡಿತವಾಗಿಯೂ ಮೇಲಿನ ಪದವಿಗಳಿಗೆ ಏರುತ್ತಿದ್ದನು.

ದಂಡಪ್ಪನು ಮುಂಬಯಿಗೆ ಬಂದು ಮೂವತ್ತು ವರುಷಗಳಾಗಿ ದ್ದವು. ಅದಕ್ಕೆ ಹಿಂದೆ ಅವನು ತನ್ನ ಹಳ್ಳಿಯಲ್ಲಿ ಬೇಸಾಯಮಾಡಿಕೊಂಡು ಜೀವಿಸುತ್ತಿದ್ದನು. ಅಲ್ಲಿ ಅವನಿಗೆ ಒಂದು ಎಕರೆ ಜಮಿನೂ ಇದ್ದಿತು. ಆದರೆ ಕಾಲ ಕೆಟ್ಟು ಮಳೆ ಬೆಳೆ ಸರಿಯಾಗಿ ಆಗದೆ ಜೀವನ ನಡೆಸುವದು ಅತಿ ಕಷ್ಟವಾದಾಗ ಇನ್ನೂ ಯುವಕನಾಗಿದ್ದ ದಂಡಪ್ಪನು ಧೈರ್ಯಮಾಡಿ "ಕೆಟ್ಟು ಪಟ್ಟಣ ಸೇರು" ಅನ್ನುವ ಗಾದೆಗೆ ಸರಿಯಾಗಿ ತಾನು ಯಾವುದರ

ವಿಷಯವಾಗಿ ಬಹಳೇ ಕೇಳಿದ್ದನೋ ಆ ಮುಂಬಯಿ ಮಹಾಪಟ್ಟಣಕ್ಕೆ ಹೇಗೋ ಬಂದು ಬಿದ್ದನು. ಅಲ್ಲಿ ಐದು ವರ್ಷ ಅಲ್ಲಿ ಇಲ್ಲಿ ಅಲೆದು ಮಣ್ಣಿಗೆ ಮಣ್ಣು ತಿಂದು ನಾಲ್ಕಾರು ಚಾಕರಿ ಕಳೆದುಕೊಂಡು ಕಡೆಗೆ ತನ್ನ ಗೆಳೆಯನೊಬ್ಬನ ಮೂಲಕ ಪೋಲೀಸಿಗೆ ಸೇರಿಕೊಂಡನು. ಈ ಹುದ್ದೆಯು ಸಿಕ್ಕಿದ ಮೇಲೆ ಅವನ ಜೀವನವು ಸುಗಮವಾಯಿತು. ಎರಡು ವರ್ಷದೊಳಗಾಗಲೇ ಇನ್ನೂರು ರೂಪಾಯಿಗಳನ್ನು ಕೂಡ ಹಾಕಿ ಕೊಂಡು ಊರಿಗೆ ಹೋಗಿ ತಾನು ಮೊದಲೇ ಒಲೆದಿದ್ದ ಅಂಬವ್ವನನ್ನು ಮದುವೆಯಾಗಿ ಮುಂಬೈಗೆ ಅವಳನ್ನು ಕರೆದುಕೊಂಡು ಬಂದು ಗಿರಿಗಾಮಿನ ಪಕ್ಕದ ದಾರಿಗಳಲ್ಲಿ ಒಂದಾದ "ಕಾಂದೇವಾಡಿ"ಯಲ್ಲಿ ಎತ್ತರದ "ಚಾಲು" ಒಂದರಲ್ಲಿ ಒಂದೇ ಕೋಣೆಯಲ್ಲಿ ಎರಡು ಭಾಗ ಮಾಡಿದ್ದ ಮನೆಯನ್ನು ಐದು ರೂಪಾಯಿ ಬಾಡಿಗೆಗೆ ತೆಗೆದುಕೊಂಡು ವಾಸಮಾಡಲು ಮೊದಲುಮಾಡಿದನು

ಅಂಬವ್ವನು ತೆಳ್ಳಗೆ, ಬೆಳ್ಳಗೆ ಲಕ್ಷಣವಾದ ಹೆಂಗಸು. ಸ್ವಭಾವವೂ ಬಹಳ ಮೃದು ಮತ್ತು ಮುಗ್ಧ. ಬಾಳಿನಲ್ಲಿ ಗಂಡನ ನೆರಳಿನಂತೆ ನಡೆದು ಕೊಳ್ಳುತ್ತಿದ್ದಳು ಅವನ ಇಷ್ಟವು ಏನೆಂಬುದನ್ನು ತಿಳಿದು ಅವನನ್ನು ತೃಪ್ತಿಪಡಿಸುವದಕ್ಕಾಗಿಯೇ ಹುಟ್ಟಿದವಳಂತೆ ಅವಳು ಯಾವಾಗಲೂ ನಡೆದುಕೊಳ್ಳುತ್ತಿದ್ದಳು. ಈ ಸಾಧನದಲ್ಲೇ ಅವಳು ಕಾಲವನ್ನೆಲ್ಲವನ್ನು ಕಳೆಯುತ್ತಿದ್ದಳು ಇದಕ್ಕೆ ಅವಳಿಗೆ ಅವನಲ್ಲಿದ್ದ ಪ್ರೇಮದ ಜತೆಗೆ ಒಂದು ಬಗೆಯ ಭಯವೂ ಕಾರಣವಾಗಿದ್ದಿತು—ಏಕೆಂದರೆ ದಂಡಪ್ಪನು ಅವಳಿಗೆ ಎಷ್ಟು ಒಡವೆ ವಸ್ತುಗಳನ್ನು ತಂದುಕೊಟ್ಟರೂ ಅವಳನ್ನು ಎಷ್ಟೇ ಪ್ರೀತಿಸುತ್ತಿದ್ದರೂ ಅವಳೊಡನೆ ಎಷ್ಟೆಷ್ಟು ಸಲಿಗೆಯಿಂದ ನಡೆದು ಕೊಂಡರೂ ಅವನ ಉದ್ಯೋಗದ ಶಿಸ್ತಿನ ಕಾಠಿಣ್ಯ ಸಂಸಾರದಲ್ಲಿಯೂ ಒಂದೊಂದುವೇಳೆ ತಲೆಹಾಕದೆ ಇರುತ್ತಿರಲಿಲ್ಲ. ಆಗ ಅವನು ಮುಂಗೋಪ ಬೇಸರಗಳಿಂದ ಕಟುವಾಗಿ ಟೀಕಿಸಿಬಿಡುತ್ತಿದ್ದನು. ಅವಳು ನೋವಿನಿಂದ ಪಳಪಳ ಕಣ್ಣೀರನ್ನು ಸುರಿಸುತ್ತಿದ್ದಳು. ಮತ್ತೆ ಒಬ್ಬರನ್ನೊಬ್ಬರು ಹೊಂದಿ ಕೊಳ್ಳುವದಕ್ಕೆ ಕೊಂಚಕಾಲವು ಹಿಡಿಯುತ್ತಿತ್ತು. ಹೀಗಿದ್ದು ಅವನು ಯಾವಾಗ ಏನೆಂದುಬಿಡುವನೋ, ಏನನ್ನು ಮಾಡಿದರೆ ಹೇಗೋ ಎಂಬ

ಅಂಜಿಕೆಯು ಅವಳ ಸ್ವಭಾವದಲ್ಲಿ ಆಳವಾಗಿ ಹೊಕ್ಕು ನಡತೆಯಲ್ಲಿ ಪ್ರತಿಬಿಂಬಿಸುತ್ತಿದ್ದಿತು.

ಮದುವೆಯಾದ ಎರಡು ವರುಷಗಳನಂತರ ಇವರಿಗೆ ಹುಟ್ಟಿದ ಮಗುವೇ ಪಾಂಡುರಂಗ. ಇವನು ರೂಪ ಮತ್ತು ಗುಣಗಳಲ್ಲಿ ಬಹಳ ಮಟ್ಟಿಗೆ ತಾಯಿಯನ್ನೇ ಹೋಲುತ್ತಿದ್ದನು. ಅಂತಃಕರಣವೂ ಅವಳದೇ. ಮೇಲಿನ ನಡವಳಿಕೆಯ ಮೃದುತ್ವ ಗಾಂಭೀರ್ಯಗಳೂ ಅವಳಿಂದಲೇ ಬಂದವು. ಆದರೂ ಸಮಯವೊದಗಿದಾಗ ದಂಡಪ್ಪನ ಧೈರ್ಯ, ಸ್ಥೈರ್ಯ, ದಿಟ್ಟತನ, ಖಂಡಿತಗಳೂ ಹೊರಗಾಣಿಸಿಕೊಳ್ಳುತ್ತಿದ್ದವು. ಹೀಗೆ ಒಬ್ಬನೇ ಮಗನಾದ ಪಾಂಡುರಂಗನಲ್ಲಿ ತಾನು ಮೋಹಿಸಿದ ರೂಪ ತಾನು ಮೆಚ್ಚಿದ ಗುಣಗಳನ್ನು ಕಂಡು ದಂಡಪ್ಪನು ಹಿಗ್ಗಿ ಸುರಿಯುತ್ತಿದ್ದನು.

ಪಾಂಡುರಂಗನು ಮಗುವಾಗಿದ್ದಾಗ ಅವನನ್ನು ಎಲ್ಲಿರಿಸಿದರೂ ದಂಡಪ್ಪನಿಗೆ ತೃಪ್ತಿಯಿಲ್ಲ. ಕಂಡವರಲ್ಲೆಲ್ಲ ಎತ್ತಿಕೊಂಡು ಹೋಗಿ ಆಟ ಪಾಟಗಳನ್ನು ತಿಳಿಸಿ ಹೊಗಳಿ ಹೆಮ್ಮೆಪಡುತ್ತಿದ್ದನು. ಯೋಗ್ಯತೆ ಮೀರಿ ಒಡವೆ ವಸ್ತು ಬಟ್ಟೆಬರೆಗಳನ್ನು ತಂದು ಮಗುವನ್ನು ಅಲಂಕರಿಸುತ್ತಿದ್ದನು. ತಿಂಡಿತೀರ್ಥಗಳಿಂದಂತೂ ರಂಗನಿಗೆ ಅಜೀರ್ಣವೆ ಆಗುತ್ತಿದ್ದಿತು. ಇದೇ ಸಾಮಾನ್ಯವಾದರೂ ಮಗುವು ಒಂದೊಂದುವೇಳೆ "ಚಂಡಿ" ಹಿಡಿದಾಗ ದಂಡಪ್ಪನು ಕೈ ಎತ್ತುತ್ತಿದ್ದುದೂ ಉಂಟು. ಆಗ ಅಂಬವ್ವನು ಅಡ್ಡಬಂದು ಕಂದನನ್ನು ಬದುಕಿಸಿಕೊಳ್ಳಬೇಕಾಗಿದ್ದಿತು. ಇದನ್ನರಿತ ಅಂಬವ್ವನು "ಹಾಲಿನಂತೆ ಒಲವಿದ್ದರೂ ಕೆಂಡದಂಥ ಕೋಪವೂ ಇದೆ ಅವರಿಗೆ" ಅನ್ನುತ್ತಿದ್ದಳು.

ತಂದೆತಾಯಿಗಳು ಹೇಗೊ "ಹೊಟ್ಟೆಕಟ್ಟಿ–ಬಟ್ಟೆಕಟ್ಟಿ" ಹುಡುಗನನ್ನು ಶಾಲೆಗೂ ಸೇರಿಸಿದರು. ಮಗನಿಗೆ ದೊಡ್ಡ ಪರೀಕ್ಷೆ ಪಾಸುಮಾಡಿಸಿ ಭಾರಿ ಕೆಲಸಕ್ಕೆ ಸೇರುವಂತೆ ಮಾಡಿ ಸೈ ಎನ್ನಿಸಿಕೊಳ್ಳಬೇಕೆಂಬುದು ದಂಡಪ್ಪನ ದೊಡ್ಡ ಆಸೆಯಾಗಿದ್ದಿತು. ಇದರಿಂದ ಹುಡುಗನಿಗೆ ಪುಸ್ತಕ, ಕಾಗದಕಡ್ಡಿ ಇವುಗಳಲ್ಲೊಂದಕ್ಕೂ ಕಡಮೆಮಾಡಿರಲಿಲ್ಲ. ಕಡೆಗೆ ಹ್ಯಾಟು ಬೂಟುಗಳನ್ನು ಸಹ ಒದಗಿಸಿಕೊಟ್ಟಿದ್ದನು. ಮನೆ ಮೇಷ್ಟರನ್ನು ಇಡುವ ಚೈತನ್ಯವಿಲ್ಲದಿದ್ದುದು ಅವನಿಗೆ ಒಂದು ದೊಡ್ಡ ಕೊರತೆ. ತಾನೇ

ಹೇಳಿಕೊಡುವದು ತನ್ನ ನಿರಕ್ಷರತೆಯಿಂದ ಸಾಧ್ಯವಿರಲಿಲ್ಲ. ಹೀಗಾಗಿ ಹುಡುಗನು ಮನೆಯಲ್ಲಿ ಕಾಲವ್ಯರ್ಥವಾಡದಿರುವಂತೆ ನೋಡಿಕೊಳ್ಳು ವದರಲ್ಲಿ ತನ್ನ ಜವಾಬುದಾರಿಯನ್ನು ಸಮರ್ಪಕವಾಗಿ ಜರುಗಿಸುತ್ತಿದ್ದನು. ಆಗಾಗ ಹುಡುಗನು ಅತ್ತ ಇತ್ತ ದಾರಿತಪ್ಪಿದರೆ ದಂಡಪ್ಪನ ದಂಡವು ಕಾದಿದ್ದು "ದಾರಿ"ಗೆ ತರುತ್ತಿದ್ದಿತು. ಈ ಸಂದರ್ಭಗಳಲ್ಲಿ ಅವನು ಬಲತಂದೆಗಿಂತಲೂ ಕಠಿಣವಾಗಿಯೇ ನಡೆದುಕೊಂಡು ಬರುತ್ತಿದ್ದನು. ಆಗಾಗ ಅಂಬವ್ವನು ಸಹಿಸಲಾರದೆ "ಏನು ಹುಡುಗನನ್ನು ಕೊಂದು ಬೀಡುತ್ತೀರೇನು?" ಎನ್ನುವಷ್ಟು ಧೈರ್ಯಮಾಡಿ "ದಮ್ಮಯ್ಯಾ, ಬಿಟ್ಟು ಬಿಡಿ, ಏನಾದರೂ ಆದೀತು" ಎಂದು ಅಂಗಲಾಚುತ್ತಿದ್ದಳು. ಅದಕ್ಕೆ ಅವನು "ಈಗ ಓದದೆ ಗೀದದೆ ಇದ್ದರೆ ನಾಳೆ ಯಾತಕ್ಕೆ ಆದಾನು? ನಾನು ಇದನ್ನು ನೋಡಿಕೊಂಡು ಸುಮ್ಮನಿರುವದಿಲ್ಲ" ಎಂದು ಗರ್ಜಿಸು ತ್ತಿದ್ದನು. ಈ ನಡತೆಗೆ ಗೋಲ್ಡಸ್ಮಿತ್ತನ ಹಳ್ಳಿಯ ಮೇಷ್ಟರಂತೆ ಅವನ ಕಾಠಿಣ್ಯದಲ್ಲಿ ವಿದ್ಯಾಪ್ರೇಮ ಮತ್ತು ಮಗನ ಭವಿಷ್ಯದಲ್ಲಿನ ಆಸಕ್ತಿಗಳು ಕಾರಣವಾಗಿದ್ದವು.

ಏನಾದರೇನು? ಯುದ್ಧವು ಬಂದಿತು. ಬದುಕಿನ ವೆಚ್ಚವು ಸುರು ಸುರು ಬತ್ತಿಯು ಆಕಾಶವನ್ನೇರುವಂತೆ ಹೆಚ್ಚಾಯಿತು. ಬಡ ಹವಾಲ್ದಾರ ನಿಗೆ ಸಂಸಾರವನ್ನು ತೂಗಿಸುವದು ಸಾಧ್ಯವಾಗದೆ ಹೋಯಿತು. ಇನ್ನು ಹುಡುಗನ ವಿದ್ಯಾಭ್ಯಾಸವು ಹೇಗೆ ನಡಿದೀತು? "ಕುಂಬಾರನಿಗೆ ವರುಷ–ದೊಣ್ಣೆಗೆ ನಿಮಿಷ"ದಂತೆ ಯುದ್ಧವು ಪಾಂಡುರಂಗನ ವಿದ್ಯೆಯನ್ನು ಐದನೆಯ ತರಗತಿಗೇ ಕೊನೆಗಾಣಿಸಿತು. ಸರಿ, ಹದಿನಾರು ವರುಷದ ಮಗನು ಸುಮ್ಮನೆ ಮನೆಯಲ್ಲಿದ್ದು ಹೆಚ್ಚಿನ ಆದಾಯದ ಆವಶ್ಯಕತೆ ಬಿದ್ದೂ ದಂಡಪ್ಪನು ಸುಮ್ಮನಿದ್ದಾನೆಯೇ? ಕೆಲಸಕ್ಕೆ ಸೇರಿಸಬೇಕೆಂದು ಯೋಚಿಸಿದ. ಅಂಬವ್ವನು ಅವನಿಗೆ "ಯಾಕೆ ಈಗಾಗಲೇ ಆ ಪಾಡು? ನಾಲ್ಕು ದಿನ ಹಾಯಾಗಿರಲಿ—ಆಮೇಲೆ ಹೆಣವಾಗುವವರೆಗೂ ಹೆಣ ಹೋದುದು ಇದ್ದೇ ಇದೆ" ಅಂದಳು. ಆದಕ್ಕೆ ಅವನು "ಹಾಗಂದರೇನು? ಈ ಕಾಲದಲ್ಲಿ ಯಾರು ದುಡಿಯದೆ ಇದ್ದರೆ ತಾನೇ ನಡೆಯುತ್ತದೆ? ಊಂ ಹುಂ. ಅವನನ್ನು ಕೆಲಸಕ್ಕೆ ಹಾಕಲೇಬೇಕು" ಎಂದು ತೀರ್ಮಾನಿಸಿದ.

ಅನಂತರ ಉದ್ಯೋಗದ ವಿಷಯವು ಚರ್ಚೆಗೆ ಬಂದಿತು. ದಂಡಪ್ಪನು "ಕಂಡಂತೆ ಇದ್ದೇ ಇದೆ. ಪೋಲೀಸು ನೌಕರಿ" ಅಂದ. ಅಂಬವ್ವನು "ಅಯ್ಯೋ ಆ ಚಾಕರಿ ಬೇಡ. ನೀವು ಒಬ್ಬರು ಹೆಣಗುವದೇ ಸಾಕು ಮಾಡಬಾರದ್ದನ್ನೆಲ್ಲ ಮಾಡಿಸುವ ಚಾಕರಿ ಯಾರಿಗೆ ಬೇಕು? ಸೇರಲೇ ಬೇಕಾದರೆ ಬೇರೆ ಯಾವುದಕ್ಕಾದರೂ ಸೇರಿಸಿ" ಅಂದು ಬೇಡಿಕೊಂಡಳು ಇದನ್ನು ಕೇಳಿ ದಂಡಪ್ಪ ಕೆಂಡವಾದ. "ಏನಂದೇ? ನನ್ನ ಕೆಲಸ ಕೇಡೆ? ಅದು ರಾಜಕೆಲಸ. ಕೋಟ್ಯಾಧೀಶರನ್ನಾದರೂ ಕೈದು ಮಾಡುವ ಅಧಿಕಾರದ ಕೆಲಸ ಆದರ ಸಮವುಂಟೇ? ಅದರಿಂದಲೇ ನಾವು ಬದುಕಿ ಬಾಳಿ ಗೌರವದಿಂದಿರುವದು. ಮರೆಯಬೇಡ. ಉಂಡ ಕಡೆ ಎರಡೆನ್ನ ಬಾರದು" ಅಂದ. ಅಂಬವ್ವನು "ನಿಮ್ಮ ಎದುರಿಗೇ ಆ ಗೌರವವೆಲ್ಲ. ಹಿಂದೆ ಅವರು ಆಡಿಕೊಳ್ಳುವದನ್ನು ಕೇಳಬೇಕು. ನಾನು ದಿನ ದಿನಾಲು " ದಂಡಪ್ಪನು ಅವಳನ್ನು ಮುಂದೆ ಮಾತನಾಡಗೊಡದೆ ಬಾಯಿಹಾಕಿ "ಯಾರು ಏನು ಬೇಕಾದರೂ ಹೇಳಿಕೊಳ್ಳಲಿ ನಮಗೇನು? ಈಗ ಎಲ್ಲಾರೂ ಪೋಲೀಸರ ಮೇಲೆ ಬಿದ್ದು ಬಡಿದುಕೊಳ್ಳುವವರೇ? ದಿನೇ ದಿನೇ ಹರತಾಳ, ಮೆರವಣಿಗೆ, ಮೀಟಿಂಗು. ಅಂಥ ಪುಂಡಾಟ ಹೆಚ್ಚಾಗಿರುವದನ್ನು ನಾವು ಬಲ್ಲೆವು. ನಾನು ಈ ಮಾತನ್ನೆಲ್ಲ ಲಕ್ಷಕ್ಕೆ ತರುವದಿಲ್ಲ. ನಿನ್ನ ಕಿವಿಯಲ್ಲಿ ಯಾರಾದರೂ ರಾಜದ್ರೋಹದ ಮಾತನ್ನು ಊದಿಯಾರು. ಜೋಪಾನವಾಗಿರು" ಅಂದ. ಅಂಬವ್ವನಿಗೆ ಆಗ ಏನು ಹೊಳೆಯಿತೋ ಏನೋ. ಎಂದಿನಂತೆ ಸುಮ್ಮನಿರಲಿಲ್ಲ. "ಯಾರು ಊದುವದೇನು? ಕಂಡಿಲ್ಲವೇ ಈ ಗುಲಾಮಗಿರಿ." ಅಂದುಬಿಟ್ಟಳು. ಈ ಮಾತುಗಳು ಹೊರಬಿದ್ದೊಡನೆಯೇ ದಂಡಪ್ಪನು ತಿವಿದ ಘಟಸರ್ಪದಂತೆ ಮೇಲೆದ್ದು "ಹಾಂ, ನನ್ನೆದುರಿಗೆ ಈ ಮಾತು? ಮುಚ್ಚು ಬಾಯಿ. ಹೊಡೆದು ಬಿಟ್ಟೇನು" ಎಂದು ಕೈ ಎತ್ತಿದನು. ತಕ್ಷಣವೇ ಮಗನು ಮುಂದೆ ಬಂದು ದಂಡಪ್ಪನ ಕೈ ಹಿಡಿದುಕೊಂಡು "ಅಪ್ಪ, ಅವ್ವನಮೇಲೆ ಕೈಮಾಡಬೇಡ. ನಾನು ಪೋಲೀಸಿಗೆ ಸೇರಲು ಸಿದ್ಧನಿದ್ದೇನೆ" ಅಂದ. ದಂಡಪ್ಪನಿಗೆ ಕೊಂಚ ಸಮಾಧಾನವಾಯಿತು. ಅಂಬವ್ವನು ಗಳಗಳ ಅತ್ತಳು.

'ನಲವತ್ತೆರಡರ ಆಗಸ್ಟಿನ ಮಹಾವಿಪತ್ತಿನ ದಿನ. ಮಧ್ಯಾಹ್ನ. ದಂಡಪ್ಪನು ಹಿಂದಿನ ರಾತ್ರಿಯೆಲ್ಲ ಮುಖಂಡರ ದಸ್ತಗಿರಿಯಲ್ಲಿ ಭಾಗ ವಹಿಸಿ ನಿದ್ದೆಗೆಟ್ಟಿದ್ದು ಆಗ ಮನೆಯಲ್ಲಿ ನಿದ್ರಿಸುತ್ತಿದ್ದನು. ಅಂಬವ್ವನು ಅಡಿಗೆಮಾಡುತ್ತಿದ್ದಳು. ಗಂಟೆಯು ಹನ್ನೆರಡಾಗಿದ್ದರೂ ಬೆಳಗಿನ ಝಾವದಲ್ಲೇ ಕೆಲಸಕ್ಕೆ ಹೋಗಿದ್ದ ಪಾಂಡುರಂಗನು ಇನ್ನೂ ಹಿಂದಿರುಗಿರಲಿಲ್ಲ. ಗಂಟೆ ಗಂಟೆಗೂ ಆ ದಿನದ ಕೋಲಾಹಲದ ವಿಷಯವು ನೆರೆಹೊರೆಯವರಿಂದ ಅಂಬವ್ವನನ್ನು ಮುಟ್ಟುತ್ತಿದ್ದಿತು. ಆ ಘಟನೆಗಳನ್ನು ಕೇಳಿದಷ್ಟೂ ಅವಳ ಹೃದಯವು ತಳಮಳಗೊಳ್ಳುತ್ತಿದ್ದಿತು. ಮಗನ ಬಗ್ಗೆ ಆತಂಕವು ಇನ್ನೂ ಇನ್ನೂ ಹೆಚ್ಚಾಗುತ್ತಿದ್ದಿತು. ಗಂಟೆಯು ಒಂದು, ಎರಡಾಯಿತು. ಇನ್ನೂ ಪಾಂಡುರಂಗನ ಸುಳಿವಿಲ್ಲ. ಅಂಬವ್ವನು ಹೊರಕ್ಕೂ ಒಳಕ್ಕೂ ಗಳಿಗೆ ಗಳಿಗೆಗೆ ಓಡಾಡುತ್ತಿದ್ದವಳು ಈಗ ಬೀದಿಯ ಕಡೆ ವರಾಂಡದಲ್ಲಿ ನಿಂತು ಮಗನನ್ನು ಇದಿರುನೋಡುತ್ತಿದ್ದಳು. ಇನ್ನೂ ಅರ್ಧ ಗಂಟೆಯಾಯಿತು. ಅಂಬವ್ವನು ಅಲುಗಾಡಲಿಲ್ಲ. ದಂಡಪ್ಪನೂ ಏಳಲಿಲ್ಲ ನಿಂತು ನಿಂತು ಕಾಲು ಸೋತು ಅಂಬವ್ವನು ಇನ್ನೇನು ಒಳಗೆ ಬರಬೇಕು. ಅಷ್ಟರಲ್ಲೇ ಒಂದು "ಆಂಬ್ಯುಲೆನ್ಸ ಕಾರು" ಬೀದಿಗೆ ತಿರುಗಿ ಮನೆಯ ಬಳಿ ಬಂದು ನಿಂತಿತು. ಅಂಬವ್ವನ ಎದೆ "ಡವ ಡವ" ಎಂದು ಬಡಿದುಕೊಳ್ಳಲಾರಂಭಿಸಿತು. ಇನ್ನೊಂದು ನಿಮಿಷದಲ್ಲಿ ಆ ಕಾರಿನ ಒಳಗಿನಿಂದ ಬಿಳಿ ಬಟ್ಟೆಯಿಂದ ಮುಚ್ಚಲ್ಪಟ್ಟಿದ್ದ ವ್ಯಕ್ತಿಯೊಂದನ್ನು ಇಬ್ಬರು ಪೋಲೀಸಿನವರು ಹೊರಕ್ಕೆಳೆದುಕೊಂಡರು. ಇದನ್ನು ನೋಡಿದೊಡನೆ ಅಂಬವ್ವನು ಚೀರಿಟ್ಟಳು. ದಂಡಪ್ಪನು ಗಡಿಬಿಡಿಯಿಂದ ಎದ್ದು "ಏನಿದು ನಿನ್ನ ಕೂಗಾಟ?" ಎಂದು ಹೊರಕ್ಕೆ ಬಂದನು.

ಅಲ್ಲಿ ಅವನ ಮುಂದೆ ಕಾಣಿಸಿತು—ಮಗನ ಶವ. ಹುಂ. ಆ ದಿನ ಸತ್ತ ಸಾವಿರಾರು ಜನರಲ್ಲಿ ಈ ಮಗನೂ ಒಬ್ಬನಾಗಿದ್ದನು. ಹೊತ್ತು ತಂದ ಸ್ನೇಹಿತರಿಬ್ಬರು ಮೌನದಿಂದ ತಲೆಬಾಗಿ ನಿಂತುಕೊಂಡರು. ಅಂಬವ್ವನು ಶವದಮೇಲೆ ಬಿದ್ದುಕೊಂಡು ಗೋಳಿಟ್ಟಳು. ದಂಡಪ್ಪನು ಕ್ಷಣಕಾಲ ನಿಶ್ಚೇಷ್ಟಿತನಾಗಿ ನೆಟ್ಟದೃಷ್ಟಿಯಿಂದ ನಿಂತುಕೊಂಡನು. ಅವನಿಗೆ ಎಲ್ಲವೂ ಹೊಳೆಯಿತು. ಸ್ನೇಹಿತರಲ್ಲೊಬ್ಬನು ಮರಣದ

ಸಂದರ್ಭವನ್ನು ವಿವರಿಸಿದನು. ಮೆರವಣಿಗೆಯೊಂದನ್ನು ಬಲವಂತದಿಂದ ಚದುರಿಸಲು ಪೋಲೀಸರು ಗುಂಡು ಹಾರಿಸಬೇಕಾಯಿತು. ಈ ಬಾರಿ ಜನರು ಚದುರುವದಕ್ಕೆ ಬದಲು ರೋಷಾವಿಷ್ಟರಾಗಿ ಮುಂದೆನುಗ್ಗಿ ಕೈಗೆ ಸಿಕ್ಕ ಪೋಲೀಸು ದಳದವರನ್ನು ಹೊಡೆದುಹಾಕಿದರು. ಇವರಲ್ಲಿ ಪಾಂಡುರಂಗನೂ ಒಬ್ಬ. ಆದರೆ ಆ ಮಾತುಗಳು ದಂಡಪ್ಪನ ಕಿವಿಯನ್ನು ಹೊಗಲಿಲ್ಲ. ಕ್ರಮಕ್ರಮವಾಗಿ ಶೋಕವು ಕೋಪಕ್ಕೆ ಎಡೆಗೊಟ್ಟಿತು. ಕಡೆಗೆ ಅವನು ಮಾತನಾಡುವ ಸ್ಥಿತಿಗೆಬಂದು "ಇದಕ್ಕಾಗಿ ಏನಾದರೂ ದಸ್ತಗಿರಿ ಆಗಿದೆಯೇ? ಎಂದು ತಡವರಿಸುತ್ತ ಕೇಳಿದನು.

ಹುಂ. ಅಷ್ಟೊ ಜನರೂ ಸಿಕ್ಕಿದರು. ಆದರ ..."

"ಆದರೆ?"

"ಅದರ ಮುಖಂಡನು ಜಾರಿಕೊಂಡ"

"ಹಾಂ, ಜಾರಿಕೊಂಡ?"

"ಹುಂ."

"ಅವನನ್ನು ಹಿಡಿದು ಫಾಸಿಗೆ ಹಾಕಿಸದಿದ್ದರೆ ನಾನು ಎಂಥ ಹವಾಲ್ದಾರ?"

ಅಂದಿನಿಂದ ಈ ಹಗೆಯ ಪತ್ತೆಯಲ್ಲಿ ದಂಡಪ್ಪನು ಉದ್ಯುಕ್ತನಾದನು, ಅಧಿಕಾರಿಗಳೂ ಒಪ್ಪಿದರು. ದಸ್ತಗಿರಿಯಾದವರಿಂದ ಆ ಮುಖಂಡನ ವಿಷಯ ಪಷ್ಟು ಗೊತ್ತಾಯಿತು. ಅವನು ಪಂಢರಪೂರದ ಹುಡುಗ. ಹೆಸರು ದೇಶಪಾಂಡೆ. ಮುಂಬಯಿಯಲ್ಲಿ ಅವರ ಭಾವನ ಮನೆಯಲ್ಲಿದ್ದುಕೊಂಡು ಕಾಲೇಜಿನಲ್ಲಿ ಓದುತ್ತಿದ್ದನು. ವಯಸ್ಸು ಸುಮಾರು ಹದಿನೆಂಟು ಇರಬಹುದು. ಇದನ್ನರಿತ ಕ್ಷಣವೇ ದಂಡಪ್ಪನು ಆ ಭಾವನ ಮನೆಗೆಹೋಗಿ ತನಿಖೆನಡಿಸಿ ಹುಡುಗನ ಚಿತ್ರವನ್ನು ವಶಪಡಿಸಿಕೊಂಡನು. ಅಲ್ಲೇ ಸುತ್ತಲೂ ಹೊಂಚುಹಾಕುವುದಕ್ಕೆ ಒಬ್ಬನನ್ನು ನೇಮಿಸಿಯೂ ಆಯಿತು. ಮೂರನೆಯ ದಿನ ಅಲ್ಲಲ್ಲಿ ಗೋಡೆಗಳಮೇಲೆ "ಎರಡು ಸಾವಿರ ರೂಪಾಯಿ ಬಹುಮಾನ" ಎಂಬ ದೊಡ್ಡ ಚೀಟಿಗಳು ಅಂಟಿಸಲ್ಪಟ್ಟಿದ್ದವು. ಅದರಲ್ಲಿ ದೇಶಪಾಂಡೆಯ ಚಿತ್ರ, ವಿವರಣೆಗಳು ಕೊಡಲ್ಪಟ್ಟು, ಅವನ ದಸ್ತಗಿರಿಗೆ ಸಹಾಯಮಾಡಿದವರಿಗೆ ಆ ಬಹು

ಮಾನವು ಸಿಕ್ಕುವದೆಂದು ಸೂಚಿತವಾಗಿತ್ತು. ದಂಡಪ್ಪನು ದೇಶಪಾಂಡೆಯನ್ನು ಹಿಡಿದು ಗಲ್ಲಿಗೇರಿಸಿ ಸೇಡನ್ನು ತೀರಿಸಿಕೊಳ್ಳುವದಲ್ಲದೆ ಬಹುಮಾನವನ್ನು ಪಡೆದುಕೊಳ್ಳುವೆನೆಂದು ನಿರ್ಧರಿಸಿದನು.

ಆಗಿನಿಂದ ದಂಡಪ್ಪನ ಜೇಬಿನಲ್ಲಿ ಯಾವಾಗಲೂ ದೇಶಪಾಂಡೆಯ ಚಿತ್ರವು ಇದ್ದೇ ಇರುತ್ತಿದ್ದಿತು. ಅವನು ಎಲ್ಲೆಲ್ಲಿ ಹೋಗುವಾಗಲೂ ಕಂಡ ಕಂಡವರ ಮುಖದಮೇಲೆಲ್ಲ ಗಮನವಿಡುತ್ತಿದ್ದನು. ಕೊಂಚ ಅನುಮಾನ ಬಂದರೆ ಸಾಕು; ಚಿತ್ರವನ್ನು ತೆಗೆದು ನೋಡುತ್ತಿದ್ದನು. ದೇಶಪಾಂಡೆಯ ಕಾಲೇಜಿನವರು, ಮನೆಯವರು, ಸಂಗಡಿಗರು ಕಂಡವರನ್ನೆಲ್ಲ ವಿಚಾರಿಸಿ, ಅವನ ನಡವಳಿಕೆ ಪದ್ಧತಿಗಳು, ವಾಡಿಕೆಯಾಗಿ ಇರುತ್ತಿದ್ದ ಸ್ಥಳಗಳು ಸಿನಿಮಾ ಮಂದಿರಗಳು, ಹೋಟೆಲುಗಳು ಇವುಗಳನ್ನೆಲ್ಲ ಪತ್ತೆಮಾಡಿ, ಇಲ್ಲೆಲ್ಲ ಸಾಧ್ಯವಾದಷ್ಟುಮಟ್ಟಿಗೆ ಹೊಂಚುಹಾಕುತ್ತಿದ್ದನು. ಒಂದು ದಿನ ವಿಠ್ಠಲಭಾಯಿ ಪಟೇಲ ರಸ್ತೆಯಲ್ಲಿ ಅವನು ಹೋಗುತ್ತಿರುವಾಗ ಯಾವನೋ ಒಬ್ಬಾತನು ಒಂದುಬಾರಿ ಇವನ ಕಡೆಗೆ ನೋಡಿ ನುಸುಳಿಕೊಂಡನು. ದಂಡಪ್ಪನು ಬಹುಕಷ್ಟದಿಂದ ಅವನನ್ನು ಹಿಡಿಯಬೇಕಾಯಿತು. ಕಡೆಯಲ್ಲಿ ಅವನು ಒಬ್ಬ ಬೇಕಾಗಿದ್ದ ಕೇಡಿಯೆಂದು ಗುರುತು ಹಚ್ಚಲ್ಪಟ್ಟನು ಇದಕ್ಕಾಗಿ ದಂಡಪ್ಪನಿಗೆ " ಶಾಭಾನುಗಿರಿ "ಯೇನೋ ಬಂದಿತು. ಆದರೆ ಇದು ಅವನ ಮನಸ್ಸಿಗೇನೂ ಶಾಂತಿಯನ್ನು ತರಲಿಲ್ಲ. ಆಗಾಗ ಅಲ್ಲಲ್ಲಿ ಒಂದೊಂದು ಸುದ್ದಿ ಬರುತ್ತಲಿದ್ದಿತು ದಂಡಪ್ಪನು ಬಹಳ ಜಾಗರೂಕತೆಯಿಂದ ಸಿದ್ಧತೆಗಳನ್ನು ಮಾಡಿಕೊಂಡು ಸುಳಿವನ್ನು ಅನುಸರಿಸುತ್ತಿದ್ದನು. ಹೀಗಿದ್ದರೂ ಬೇಕಾದ ಆಸಾಮಿಯು ಮಾತ್ರ ಸಿಕ್ಕುಬಿದ್ದಿರಲಿಲ್ಲ. ಇದಕ್ಕಾಗಿ ಹೊರಗಿನ ಕೆಲವು ಊರುಗಳಿಗೂ ಸಹಿತ ಹೋಗಿಬಂದನು. ಪ್ರಯತ್ನವು ಸಫಲವಾಗಲಿಲ್ಲ. ಎಷ್ಟು ಸೋಲುಗಳಾದರೂ ಅವನು ಬೇರೆ ಈ ಕೆಲಸದಲ್ಲಿ ನಿರಾಶೆ ಹೊಂದಲಿಲ್ಲ, ದಣಿಯಲಿಲ್ಲ. ಈ ಪತ್ತೆಯೇ ಅವನ ಜೀವನದ ಗುರಿಯಾಗಿ ಬಿಟ್ಟಿದ್ದಿತು.

ದಿನಗಳು ಕಳೆದವು. ತಿಂಗಳುಗಳೂ ಆದವು. ವರ್ಷವೇ ತುಂಬುವದಕ್ಕೆ ಬಂದಿದ್ದರೂ ಪತ್ತೆಯು ಮಾತ್ರ ಆಗಲಿಲ್ಲ. ದಂಡಪ್ಪನಿಗೆ

ಒಂದೊಂದುವೇಳೆ "ಅವನು ನಿಜವಾಗಿಯೂ ಬದುಕಿರಬಹುದೇ?" ಎನ್ನುವ ಅನುಮಾನವೂ ಬರುತ್ತಿದ್ದಿತು. ಮರುಕ್ಷಣದಲ್ಲಿಯೆ "ಇಲ್ಲದೆ ಏನು? ಎಲ್ಲೋ ಇಲ್ಲೇ ಅವಿತುಕೊಂಡಿದ್ದಾನೆ. ಒಂದಿಲ್ಲ ಒಂದು ದಿನ ಸಿಕ್ಕಿಬೀಳದೇ ಇದ್ದಾನೇ? ಇರಲಿ" ಎಂದು ಆಸೆ ಹೊಂದುವನು. ಈವರೆಗೆ ಅಧಿಕಾರಿಗೆ ದಂಡಪ್ಪನಮೇಲೆ ಕೊಂಚ ಅಸಮಾಧಾನವಾಗಿದ್ದಿತು. ಆಗಾಗ್ಗೆ ಸೂಚನೆಗಳು ಬರುತ್ತಿದ್ದರೂ ದಂಡಪ್ಪನು ಅವುಗಳಿಂದ ಪತ್ತೆಯನ್ನು ಹಚ್ಚಲಿಲ್ಲವೆಂಬುದು ಆತನಿಗೆ ಬೇಸರವನ್ನುಂಟುಮಾಡಿದ್ದಿತು. ಇದನ್ನು ದಂಡಪ್ಪನೂ ತಿಳಿದಿದ್ದನು. ಆದರೆ ಅವನು ಏನುಮಾಡಿಯಾನು? ತನ್ನ ಶಕ್ತಿಯೆಲ್ಲವನ್ನೂ ಈ ಯತ್ನದಲ್ಲಿಯೇ ಸವೆಸುತ್ತಿರಲಿಲ್ಲವೇ? ಎಂದು ಅವನಿಗೂ ಕೊಂಚ ಬೇಸರವನ್ನುಂಟುಮಾಡುತ್ತಿತ್ತು.

ಒಂದು ದಿನ ಇಂತಹ ಒಂದು ಗಳಿಗೆಯಲ್ಲಿ ತನ್ನ ಒಡನಾಡಿಯೊಂದಿಗೆ ಮನೆಯ ಕಡೆಯಿಂದ ಬೀಟಿಗಾಗಿ ಬರುತ್ತ "ಬಾ, ಗಂಗಪ್ಪ, ಕೊಂಚ ಚಾ ಕುಡಿಯೋಣ. ಇನ್ನು ರಾತ್ರಿಯೆಲ್ಲ ಕಳೆಯಬೇಕಲ್ಲ" ಅಂದು ಕಾಂದೇವಾಡಿಯ ಕೊನೆಯಲ್ಲಿದ್ದ "ರಾಯಲ್ ರೆಸ್ಟೋರೆಂಟ"ನ್ನು ಹೊಕ್ಕನು. ಹೊತ್ತು ಮುಳುಗಿ ದೀಪಗಳು ಹಚ್ಚಲ್ಪಟ್ಟಿದ್ದವು ಇಬ್ಬರೂ ಬಾಗಿಲುಬಳಿ ಒಂದು ಕಡೆಯ ಮೇಜಿಗೆ ಕುಳಿತುಕೊಂಡರು. ದಂಡಪ್ಪನು "ಎರಡು ಸಿಂಗಲ್ ಚಾ"ಕೆ ಹೇಳಿದನು. ಅದು ಬರುವ ಹೊತ್ತಿನಲ್ಲಿ ದಂಡಪ್ಪನು ಸಂಗಡಿಗನನ್ನು ಕುರಿತು "ಗಂಗಪ್ಪ, ನಾನು ಏನುಮಾಡಲಿ? ಇದಕ್ಕಾಗಿ ಜೀವಾನೇ ಸವೆಸುತ್ತಾ ಇದ್ದೀನಿ; ಹಾಗಾದರೂ ಇನಸ್ಪೆಕ್ಟರರಿಗೆ ಅಸಮಾಧಾನ. ನನ್ನ ಮಗನ ಜೀವಹೋಗಿದೆ; ಇದಕ್ಕಿಂತ ನನಗೆ ಹಟ ಬೇಕೆ? ಇಷ್ಟರಮೇಲೆ ಎರಡು ಸಾವಿರ ರೂಪಾಯಿ ಬಹುಮಾನ ಬೇರೆ ಇದೆ" ಅಂದ. ಈ ಮಾತು ಮುಗಿಯುವದರೊಳಗಾಗಿ ಇವರಿಗೆ ಎದುರಿನ ಮೂಲೆಯ ಮರೆಯಲ್ಲಿದ್ದ ಕುರ್ಚಿಯೊಂದರ ಸದ್ದಾಯಿತು. ಹಾಗೇ ಅಲ್ಲಿಂದ ತಿಂಡಿಯು ಗಂಟಲಿಗೆ ಸಿಕ್ಕಿ ಕೆಮ್ಮಿದ ಸದ್ದೂ ಕೇಳಿಸಿತು. ತಟ್ಟನೆ ದಂಡಪ್ಪನ ದೃಷ್ಟಿಯು ಆಕಡೆ ಹೋಯಿತು. ಆ ಮೂಲೆಯವನು ಆಗಲೇ ಎದ್ದು ಹೊರಡಲು ಅನುವಾಗಿದ್ದನು. ಇನ್ನೂ ಚಾ ಕುಡಿದಂತೆ

ಇರಲಿಲ್ಲ. ದಂಡಪ್ಪನಿಗೆ ಅನುಮಾನವಾಯಿತು, ಒಂದು ಬಾರಿ ಆ ವ್ಯಕ್ತಿಯನ್ನು ದಿಟ್ಟಿಸಿ ಜೇಬಿನಲ್ಲಿಯ ಚಿತ್ರವನ್ನು ತೆಗೆದು ನೋಡಿದನು. ಆ ಮುಸುಕಿನಲ್ಲಿಯೂ ಗುರುತು ಕಂಡಹಾಗಾಯಿತು.

ಒಮ್ಮೆಲೆ ದಂಡಪ್ಪನು ವ್ಯಕ್ತಿಯಕಡೆಗೆ ಹಾರಿದನು. ಆ ವ್ಯಕ್ತಿಯು ಆ ಗಳಿಗೆಯಲ್ಲಿ ಬಾಗಿಲಕಡೆ ನೋಡಿದನು. ಅಲ್ಲಿ ದಂಡಪ್ಪನು ನಿಂತಿದ್ದನು. ಅದನ್ನು ಅರೆನಿಮಿಷದಲ್ಲಿ ನಿರೀಕ್ಷಿಸಿಯೇ ತಯಾರಾಗಿದ್ದಂತೆ ವ್ಯಕ್ತಿಯು ಹತ್ತಿರ ಬಂದ ದಂಡಪ್ಪನ ಮುಖಕ್ಕೆ ಖಾರವಲಕ್ಕಿ ಸಹಿತವಾದ ತಟ್ಟೆಯನ್ನು ಎಸೆದು ಒಳಗೆ ನುಗ್ಗಿದನು. ಖಾರಬಿದ್ದ ಕಣ್ಣೊರಸಿಕೊಂಡು ದಂಡಪ್ಪನು ಹಿಂಬಾಲಿಸುವದರೊಳಗಾಗಿ ಇತರರು ಯಾರೂ ಈ ವಿಷಯವನ್ನು ಅರಿಯುವದರೊಳಗಾಗಲೆ ವ್ಯಕ್ತಿಯು "ಕ್ಲಾಸೆಟ" ಒಂದರಲ್ಲಿ ಅಡಗಿಕೊಂಡು ಅಗಳಿಹಾಕಿಕೊಂಡನು. ಎಲ್ಲರೂ ಒಟ್ಟುಗೂಡಿ ಬೇಗ ಬಾಗಿಲನ್ನೊಡೆದರು. ಆದರೆ ಅಷ್ಟರಲ್ಲಿ ಒಳಗಿನವನು ಬಾಗಿಲಲ್ಲಿದ್ದ ಅಡ್ಡ ಕಿಡಿಕಿಯೊಳಗಿಂದ ತೂರಿ ಪರಾರಿಯಾಗಿದ್ದನು. ಕಿಡಿಕಿ ಕಾಂದೇವಾಡಿಗೆ ತೆರೆಯುತ್ತಿದ್ದಿತು ಪ್ರಾಯಶಃ ಇದು ಅವನಿಗೆ ಪರಿಚಯವಾಗಿದ್ದಿರಬೇಕು ಬಹಳ ದಿನದಿಂದ. ಒಡನೆಯೇ ದಂಡಪ್ಪ-ಗಂಗಪ್ಪ ಇಬ್ಬರೂ ಸಿಟ್ಟಿಗಳನ್ನೂದುತ್ತ ಕಾಂದೆವಾಡಿಯಲ್ಲಿ ಓಡಿದರು.

ಈ ಸಮಯದಲ್ಲಿ ಅಂಬವ್ವನು ಬಾಗಿಲನ್ನು ತೆಗೆದುಕೊಂಡು ದೀಪದ ಬೆಳಕಿನಲ್ಲಿ ಕುಳಿತುಕೊಂಡು ಅಕ್ಕಿಯನ್ನು ಆರಿಸುತ್ತಿದ್ದಳು. ತಟ್ಟನೆ ಯಾರೋ ಒಳಗೆ ಹೆಜ್ಜೆಯಿಟ್ಟ ಸದ್ದಾಯಿತು. ಕತ್ತೆತ್ತಿ ನೋಡಿದಳು. ಒಬ್ಬ ಅಪರಿಚಿತ ವ್ಯಕ್ತಿ ಒಳಹೊಕ್ಕು ಬಾಗಿಲಬಳಿ ನಿಂತಿದ್ದನು. ಅವಳಿಗೆ ಗಾಬರಿಯಾಯಿತು. ಇನ್ನೇನು ಕಿರಿಚಿಕೊಳ್ಳಬೇಕು ಅಷ್ಟರಲ್ಲಿ ಆ ವ್ಯಕ್ತಿಯು ನಡುಗುತ್ತ ದೀನಸ್ವರದಲ್ಲಿ "ಅವ್ವ ಹೆದರಬೇಡಿ, ಕಾಪಾಡಿ, ಬಚ್ಚಿಡಿ, ಬಾಗಿಲುಹಾಕಿ," ಅಂದ. ಅವಳು ದಿಗ್‌ಭ್ರಮೆಯಿಂದ ಇನ್ನೂ ಹಾಗೆಯೇ ದಿಟ್ಟಿಸಿ ನೋಡುತ್ತಿದ್ದಳು. ವ್ಯಕ್ತಿಯೇ ಮೆಲ್ಲಗೆ ಬಾಗಿಲನ್ನು ಮುಂದೆಮಾಡಿ "ಅವ್ವ, ನಿಮ್ಮನ್ನು ಮೊರೆಹೊಕ್ಕಿದ್ದೇನೆ. ನನ್ನ ಜೀವ ನಿಮ್ಮ ಕೈಯಲ್ಲಿದೆ" ಎಂದು ಹಾಗೆಯೇ ನೆಲದಮೇಲೆ ಕುಸಿದುಕೊಂಡನು.

ಈವರೆಗೆ ಅಂಬವ್ವನು ಅಪರಿಚಿತನನ್ನು ನೋಡಿ ಮುಗಿಸಿದ್ದಳು. ಅವನ ಎಳೆಯದಾದ, ತೆಳುವಾದ, ಕೃಶವಾದ, ನಶಿಸಿದ ದೇಹ, ಬೆಳೆದ ತಲೆಗೂದಲು, ಸಣ್ಣ ಗಡ್ಡ, ಬೇಟೆಮೃಗದ ಭಯತುಂಬಿದ ಹೊಳೆಗಣ್ಣುಗಳು, ಇವುಗಳು ಆ ತಾಯಿಯ ಹೃದಯದಲ್ಲಿ ಕನಿಕರವನ್ನು ತುಂಬಿದವೋ ಏನೋ, ಅಂತೂ ಅವಳು ಯಾವ ಮಾತನ್ನೂ ಆಡದೆಯೇ ವ್ಯಕ್ತಿಯ ಕೈ ಹಿಡಿದುಕೊಂಡು ಬೇಗನೆ ಕರೆದೊಯ್ದು ಅಡಿಗೆ ಮನೆಯಲ್ಲಿ ಕುಳ್ಳಿರಿಸಿದಳು.

ಇದೇ ಸಮಯದಲ್ಲಿ ಯಾರೋ ಬಾಗಿಲನ್ನು ತಳ್ಳಿದಂತಾಯಿತು. ದಂಡಪ್ಪನ ಧ್ವನಿಯೂ ಕೇಳಿಸಿತು. ಅಂಬವ್ವನು ಬೆಚ್ಚಿಬಿದ್ದಳು. ಕೆಲಸಕ್ಕೆ ಹೋದವನು ಇಷ್ಟು ಬೇಗ ಏಕೆ ಬಂದನು? ಇವಳು ಬೆದರಿದಳು. ಕೈಕಾಲುಗಳಲ್ಲಿಯ ತ್ರಾಣವೇ ಹೋಯಿತು. ಇಷ್ಟರಲ್ಲಿ ದಂಡಪ್ಪನು ಒಳಹೊಕ್ಕನು. ಅಂಬವ್ವನು ಮಹಾ ಪ್ರಯತ್ನಮಾಡಿ ಮುಂದಿನ ಕೋಣೆಗೆ ಬಂದಳು. ದಂಡಪ್ಪನು ತನ್ನ ಹೆಂಡತಿಯನ್ನು ಕಂಡೊಡನೆ "ಇಲ್ಲಿ ಎಲ್ಲಾದರೂ—ಯಾರಾದರೂ ಸುಳಿದಿದ್ದನ್ನು ಕಂಡೆಯಾ?" ಎಂದು ಕೇಳಿದ. ಅಂಬವ್ವನ ಕೈ ಕಾಲುಗಳು ನಡುಗಿದವು. ಅವಳಿಗೆ ಮಾತೇ ಹೊರಡದಹಾಗಾಯಿತು. ಸುಮ್ಮನೆ "ಆಂ" ಎಂದಳು. ಅದಕ್ಕೆ ಅವನು "ಇಷ್ಟೇಕೆ ನಿನಗೆ ಗಾಬರಿ? ಇತ್ತಕಡೆಗೆ ಯಾರಾದರೂ ಓಡಿ ಹೋದದ್ದು ನಿನಗೆ ಕಾಣಲಿಲ್ಲವೇ? ಎಂದು ಕೇಳಿದೆ ಅಷ್ಟೇ. ಇಷ್ಟಕ್ಕೇ ಕೈಕಾಲು ಕೆಟ್ಟಿತೇನು?" ಅಂದ. ಅವಳು ಅತಿ ಕಷ್ಟದಿಂದ "ಇಲ್ಲ" ಎನ್ನುವಷ್ಟು ಧೈರ್ಯಮಾಡಿಬಿಟ್ಟಳು. ಆಗ ದಂಡಪ್ಪನು ಬೇಸರದಿಂದ "ಇಷ್ಟು ಹೇಳುವದಕ್ಕೆ ಎಷ್ಟು ಹೊತ್ತು?" ಎಂದ. ಗಂಗಪ್ಪ, ಆ ಕೊಲೆಗೇಡಿ ಮುಂದೆಹೋಗಿರಬೇಕು" ಅಂದುಕೊಂಡು ಬಾಗಿಲನ್ನು ರಪ್ಪನೆ ಬಡಿದುಕೊಂಡು ಹೊರಬಿದ್ದನು. ಅಂಬವ್ವನನ್ನು ನೋಡಿದ ಗಂಗಪ್ಪನು ಅನುಮಾನದಿಂದ ಹಿಂತಿರುಗಿ ನೋಡುತ್ತ ದಂಡಪ್ಪನನ್ನು ಹಿಂಬಾಲಿಸಿದನು. ದಾರಿಯೊಳಗೆ ಗಂಗಪ್ಪನು "ದಂಡಪ್ಪ ನಿಮ್ಮಾಕೆ ಏಕೆ ಹಾಗೆ ಗಾಬರಿಬಿದ್ದಿದ್ದಳು?" ಎಂದ. ದಂಡಪ್ಪನು "ಅವಳದೊಂದು ಪುಕ್ಕಲು ಜೀವ. ನನ್ನ ಕಂಡರೇ ನಡುಗುತ್ತಾಳೆ. ಇನ್ನು ಕೊಲೆಗೇಡಿ ಅಂದಾಗ

ಕೈಕಾಲೇ ಹೋಗಿರಬೇಕು'' ಎಂದ. ಗಂಗಪ್ಪನು "ಅಷ್ಟೇ ಅಂತೀಯಾ?'' ಎಂದು ರಾಗ ಎಳೆದನು. ದಂಡಪ್ಪನು ಇದನ್ನೂಹಿಸಿ "ಇನ್ನೇನು ಅಂತೀಯಾ? ನನಗೇನಾದರೂ ಸುಳ್ಳು ಹೇಳ್ತ್ಯಾಳೇ ಅವಳು? ಅದರ ಪರಿಣಾಮ ಅವಳಿಗೆ ಗೊತ್ತಿಲ್ಲವೇ? ನನ್ನ ಹೆಂಡತೀನ ಹೇಗಿಟ್ಟೇನಿ ನಿನಗೆ ಗೊತ್ತಿಲ್ಲ'' ಎಂದ. ಗಂಗಪ್ಪನು ಸುಮ್ಮನಾದ.

"ಕೊಲೆಗೇಡಿ'' ಎಂಬ ಮಾತನ್ನು ಕೇಳಿದ ಗಳಿಗೆಯಲ್ಲಿ ಅಂಬವ್ವನು ದಂಡಪ್ಪನಿಗೆ "ಹೇಳಿಬಿಡಲೇ'' ಎಂದುಕೊಂಡಳು. ಅಷ್ಟರಲ್ಲೇ ಅವನು ದೂರವಾಗಿದ್ದನು. ಅವಳ ಮನಸ್ಸನ್ನು ಅಂದು ಮತ್ತೆ ತಿರುಗಿಸುವದಕ್ಕೋ ಎನ್ನುವಂತೆ ಈ ಹೊತ್ತಿಗೆ ಒಳಗಿನಿಂದ ಆ ಬಡಪಾಯಿಯು ಕ್ಷೀಣಸ್ವರ ದಲ್ಲಿ "ಅವ್ವಾ, ನೀರು'' ಎಂದು ಮೆಲ್ಲಗೆ ಉಸುರಿದನು. ಅಂಬವ್ವನು ಅಡಿಗೆ ಮನೆಗೆ ಬಂದು ನೀರನ್ನು ಕೊಟ್ಟಳು. ಹುಡುಗನು ನೀರನ್ನು ಹೀರಿದವನೆ, ಕೈಬಾಯಿ ಸನ್ನೆಯಿಂದ ಆಹಾರವನ್ನು ಕೇಳಿದನು. ಅಂಬವ್ವನು ಇನ್ನೂ ಊಟಮಾಡಿರಲಿಲ್ಲ. ಆದುದರಿಂದ ಅವಳು ಅವನ ಮುಂದೆ ತಟ್ಟೆಯನ್ನಿಟ್ಟು ಬಡಿಸಿದಳು ಹುಡುಗನು ಗಬಗಬನೆ ನಾಲ್ಕು ತುತ್ತುಗಳನ್ನು ತಿಂದನು. ಅವನ ಆತುರವನ್ನು ನೋಡಿ ಅಂಬವ್ವನಿಗೆ "ಅಯ್ಯೋ ಎಷ್ಟು ದಿನದಿಂದ ಅನ್ನವಿಲ್ಲವೋ ಪಾಪ!'' ಅನ್ನಿಸಿತು.

ಹೊಟ್ಟೆಗೆ ಕೊಂಚ ಹದವಾದಮೇಲೆ ಹುಡುಗನು "ಅವ್ವ, ನಾನು ಕೊಲೆಗೇಡಿಯಲ್ಲ ನಿಜವಾಗಿ ನಂಬಬೇಡಿ'' ಎಂದು ಬೇಡಿಕೊಂಡನು. ಅಂಬವ್ವನಿಗೆ ಏನು ಹೇಳಲೂ ತೋರದೆ ತಲೆಯನ್ನು ಮೇಲೆ ಕೆಳಗೆ ಆಡಿಸಿ ದಳು. ಹುಡುಗನು ಮುಂದುವರಿಸಿದನು. "ಆ ಮಹಾ ವಿಪತ್ತಿನ ಆಗಸ್ಟು ಒಂಬತ್ತರಲ್ಲಿ ನಡೆದುಹೋಯಿತು.'' ಅಂಬವ್ವನಿಗೆ ತಟ್ಟನೆ ಪಾಂಡುರಂಗನ ನಾವು ನೆನಪಾಯಿತು. ಅವಳು "ಅಪ್ಪ, ನನ್ನ ಮಗನೂ ಆ ದಿನವೇ ತೀರಿಕೊಂಡುಬಿಟ್ಟ. ನಿನ್ನ ಹಾಗೆಯೇ ಇದ್ದ'' ಎಂದು ಕಣ್ಣೀರು ತಂದು ಕೊಂಡಳು. ಹುಡುಗನು "ಅಯ್ಯೋ ಪಾಪ'' ಅಂದು "ಆ ದಿನ ಎಷ್ಟು ಜನ ಸತ್ತರೋ ಏನೋ, ಕಾರಣವಿದ್ದು, ಇಲ್ಲದೆ ನಾನಂತೂ ಕೊಲ್ಲ ಬೇಕೆಂದು ಕೈಮಾಡಲಿಲ್ಲ. ನನ್ನ ಜೀವನದಲ್ಲಿ ಒಂದು ಪ್ರಾಣಿಯನ್ನು ನೋಯಿಸಿದವನಲ್ಲ. ನಾನು ವಿದ್ಯೆಯನ್ನು ಕಲಿತಿದ್ದೇನೆ. ಆದರೇನು?

ಗ್ರಹಚಾರ ಎಲ್ಲಕ್ಕೂ ಮೀರಿದುದು. ಅಂದಿನ ಉದ್ರೇಕದಲ್ಲಿ ಆಗಿ ಹೋಯಿತು ಅವಿವೇಕ" ಎಂದು ಮರುಗಿದನು. ಊಟವು ಮುಗಿಯಿತು. ಹುಡುಗನು "ಅವ್ವ ರಾತ್ರಿಗೆ ಇಲ್ಲಿ ತಂಗಬಹುದೇ?" ಎಂದು ಪ್ರಶ್ನಿಸಿದನು. ಅಂಬವ್ವನು ಅರೆಕ್ಷಣ ಅನುಮಾನಿಸಿ ಯೋಚಿಸಿದಳು. ಇಂಥ ಅಪಾಯ ಸ್ಥಳದಿಂದ ಇವನನ್ನು ಕಳುಹಿಸುವದೇ ಉತ್ತಮವೇ? ಈ ಸ್ಥಿತಿಯಲ್ಲಿ ಹೊರಕ್ಕೆ ಕಳುಹಿಸಿದರೆ ಇವನು ಮಲಗುವುದೆಲ್ಲಿ? ಇವನ ಕ್ಷೇಮವ್ರೋ? ಪೋಲೀಸರು ಇನ್ನೂ ಅಲ್ಲಲ್ಲಿ ಹುಡುಕುತ್ತಲೇ ಇರಬಹುದು. ಆದರೆ ಇಲ್ಲಿ ಮಲಗಗೊಡುವದು ಸರಿಯೇ? ಏಕಲ್ಲ ಪಾಪ? ಸರಿ. ಆದರೆ ದಂಡಪ್ಪನು....ಛೇ ಅವನೆಲ್ಲಿ ಈಗ ಬರುವದು? ರಾತ್ರಿ ಕೆಲಸವಲ್ಲವೆ? ಈ ಹುಡುಗನು ಕೊಂಚ ವಿಶ್ರಮಿಸಿಕೊಂಡಮೇಲೆ ಬೆಳಗಿನ ಝಾವದಲ್ಲಿ ಎಬ್ಬಿಸಿ ಕಳುಹಿಸಿದರಾಯಿತು. ಹುಂ. ಅದೇ ಸರಿ. ಇದು ಹೊಳೆದೊಡನೆಯೆ "ಆಗಲಿ. ಈ ಅಡುಗೆ ಮನೆಯಲ್ಲಿಯೇ ಮಲಗಿಕೋ ನಾನು ಹೊರಗಿರುತ್ತೇನೆ. ಬೆಳಗ್ಗೆ ಮುಂಚೆಯೇ ಎದ್ದು ಹೋಗಬೇಕು. ನಾನೇ ಎಬ್ಬಿಸುತ್ತೇನೆ" ಎಂದಳು. ಹುಡುಗನು ಕೃತಜ್ಞತೆಯಿಂದ ಕೈ ಮುಗಿದು "ನೀನೇ ತಾಯಿ ಕಣವ್ವ—ನಾನು ಮತ್ತೆ ಹುಟ್ಟಿದೆ—ಈ ಹೊತ್ತು" ಎಂದ.

ಅಂಬವ್ವನು ಅವನಿಗೆ ಚಾಪೆ ಕಂಬಳಿಗಳನ್ನು ಕೊಟ್ಟಳು. ಹುಡುಗನು ಒಂದೆರಡು ನಿಮಿಷಗಳಲ್ಲೇ ನಿದ್ರಿಸಿದನು. ಅಂಬವ್ವನು ತನ್ನ ಹಾಸಿಗೆಯನ್ನು ಹಾಸುತ್ತಾ "ಯಾವತ್ತು ಮಲಗಿದ್ದನೋ ಏನೋ! ಏನು ಪಾಡು?" ಅಂದುಕೊಂಡಳು. ಅವಳು ಮಲಗಲಿಲ್ಲ. ನಾನಾತರದ ಯೋಚನೆ, ಅನುಮಾನ ಭಯಗಳು ಅವಳನ್ನು ಬಾಧಿಸುತ್ತಿದ್ದವು.

ಸುಮಾರು ಅರ್ಧ ಗಂಟೆಯು ಕಳೆದಿರಬೇಕು. ಒಮ್ಮೆಲೆ ಹೊರಬಾಗಿಲು ತೆರೆಯಿತು. ಅವಳು ಗಡಿಬಿಡಿಯಲ್ಲಿ ಅಗಳಿಹಾಕುವದನ್ನು ಸಹ ಮರೆತಿದ್ದಳು. ಒಳಗೆ ಯಾರು ಬರಬೇಕು? ದಂಡಪ್ಪ ಮತ್ತೆ? ಏಕಕಾಲದಲ್ಲಿ ಅವಳಿಗೆ ಆಶ್ಚರ್ಯ ಭಯಗಳು ಉಂಟಾದವು. ತನಗೆ ಗೊತ್ತಿಲ್ಲದಂತೆಯೇ ಜಿಗಿದೆದ್ದು ಅಡಿಗೆಯ ಮನೆಯ ಬಾಗಿಲಿಗೆ—ಅದಕ್ಕೆ ಕದವಿರಲಿಲ್ಲ—ಅಡ್ಡವಾಗಿ ನಿಂತುಕೊಂಡಳು. ದಂಡಪ್ಪನು ಒಳಗೆ

ಬಂದವನೆ ತನ್ನ ಟೊಪ್ಪಿಗೆಯನ್ನು ತೆಗೆದು ಹಾಸಿಗೆಯಮೇಲೆ ಒಗೆದು "ಈ ದಿನ ನನ್ನ ಅವತಾರ ಆಗಿಹೋಯಿತು. ಇಷ್ಟು ವರ್ಷ ಕಷ್ಟಪಟ್ಟ ದ್ದೆಲ್ಲ ನೀರುಪಾಲಾಯಿತು" ಎಂದು ಹಾಸಿಗೆಯಮೇಲೆ ಕುಳಿತುಕೊಂಡ. ಅಂಬವ್ವನಿಗೆ ಏನು ಅರ್ಥವಾಗಲೂ ಇಲ್ಲ. ಹೇಳಲೂ ತೋರಲಿಲ್ಲ ಸುಮ್ಮನೆ "ಅಂದರೆ?" ಅಂದಳು.

ಅಂದರೇನು? ನನಗೆ "ಸಸ್ಪೆಂಡ" ಆಯಿತು. ತಿಳಿಯಿತೇ? ಈ ಹೊಸ ಅಧಿಕಾರಿಗೇನು ಗೊತ್ತು, ನನ್ನ ಬೆಲೆ ಅವನಿಗೆ ಈ ಕೇಸು ಎಂದೇ ಗೊತ್ತು. ನನ್ನ ಶಕ್ತಿಯನ್ನೆಲ್ಲ ವೆಚ್ಚಮಾಡುತ್ತಿದ್ದೇನೆ. ಅದೃಷ್ಟ ಕಿನ್ನಾಗಿಲ್ಲ. ಏನುಮಾಡುವದು? ನನಗೆ ಎಷ್ಟೋ ಅವಕಾಶಗಳನ್ನು ಕೊಟ್ಟನಂತೆ ಮಹಾ; ಈಸಾರಿ ಆ ಕೊಲೆಗೇಡಿ ಜಾರಿಕೊಂಡದ್ದಕ್ಕಂತೂ ಕಿಡಿಕಿಡಿಯಾದ. ಆ ಗಂಗ ಬೇರೆ ದೂರು ಹೇಳಿದ. ಹೀಗೆಮಾಡಬಾರ ದಾಗಿತ್ತು, ಹಾಗೆ ಮಾಡಬಾರದಾಗಿತ್ತು. ಯುಕ್ತಿಯಿಂದ ಹಿಡಿಯಬೇ ಕಾಗಿತ್ತಂತೆ. ಇವರೆಲ್ಲ ನನಗೆ ಯುಕ್ತಿ ಕಲಿಸಿಕೊಡೋರು. ಹುಂ. ಅಂತೂ ಈ ಕೊಲೆಗೇಡಿಯಿಂದಲೇ ನನ್ನ ಕೆಲಸ, ಬಡ್ತಿ, ಪೆನ್‌ಷನ್ ಎಲ್ಲಕ್ಕೂ ಧಕ್ಕೆ ತಗುಲಿತು. ಆ ಬಹುಮಾನದ ಮಾತು ಹಾಗಿರಲಿ ಒಟ್ಟು ನನ್ನ ಜೀವನವೇ ಹಾಳಾಯಿತು. ಅಹಾ ಅವನು ಮಾತ್ರ ಸಿಕ್ಕಿದರೆ? . ." ಎಂದು ಕೇಳದಿದ್ದರೂ ಹೇಳುತ್ತ ತನ್ನ ಹೃದಯದ ದುಗುಡ ವನ್ನು ಹಗುರುಮಾಡಿಕೊಂಡನು. ಅಂಬವ್ವನು ಏನನ್ನೂ ಹೇಳಲಿಲ್ಲ. ಅವಳ ಭಾವನೆಗಳನ್ನು ಊಹಿಸುವದೂ ಅಸಾಧ್ಯ. ದಂಡಪ್ಪನು ಸುಮ್ಮ ನಾಗಿ ಮತ್ತೆ "ಹುಂ. ಇರಲಿ ನೋಡೋಣ. ಒಂದು ಲೋಟ ನೀರು ಕೊಡು" ಎಂದ.

ಅಂಬವ್ವನು ಅಡಿಗೆ ಮನೆಯೊಳಗೆ ಹೋಗಿ ಲೋಟವನ್ನು ತೆಗೆದು ಕೊಂಡು ಹಂಡೆಯಿಂದ ನೀರನ್ನು ತುಂಬಿ ತಂದಳು. ಕೈ ಸ್ವಲ್ಪ ನಡುಗು ತ್ತಿದ್ದಿತು. ಅವಳ ಪರಿಸ್ಥಿತಿಯಲ್ಲಿ ಹಂಡೆಯ ಮುಚ್ಚಳವನ್ನು ಹೇಗೆ ಮುಚ್ಚಿದ್ದಳೋ ಏನೋ. ದಂಡಪ್ಪನು ನೀರನ್ನು ಕುಡಿದು ಮುಗಿಸುವದ ರೊಳಗಾಗಿ "ಥ್‌ಣ್ ಥ್‌ಣ್" ಎಂಬ ಶಬ್ದದಿಂದ ಜಾರಿ ಕೆಳಗೆಬಿದ್ದಿತು. ಗುಡುಗನು ಗಾಬರಿಯಿಂದ ಎದ್ದನು. ತಕ್ಷಣ ಅದರ ಸರ್‌ಸರ ಸಪ್ಪಳವು

ದಂಡಪ್ಪನ ಕಿವಿಗೆ ಬಿದ್ದಿತು. ಅವನು ಅನುಮಾನದಿಂದ "ಏನದು?" ಎಂದು ಪ್ರಶ್ನಿಸಿದ. ಅಂಬವ್ವನು ಏನನ್ನೂ ಹೇಳದೆ ಮತ್ತೆ ಬಾಗಿಲಿಗೆ ಹೋಗಿ ಅಡ್ಡವಾಗಿ ನಿಂತುಕೊಂಡಳು. ದಂಡಪ್ಪನಿಗೆ ಯಾರೋ ಒಳಗೆ ಇರುವರೆಂದು ಹೊಳೆಯಿತು. ಒಡನೆಯೇ ಪುಟನಗೆದು ಎದ್ದನು. "ಯಾರೇ ಅವನು ನಿನ್ನ ಮಿಂಡ?" ಎನ್ನುತ್ತ ಬಾಗಿಲಿಗೆ ಹಾರಿದನು. ಅಂಬವ್ವನಿಗೆ ಆ ಗಳಿಗೆಯಲ್ಲಿ ಏನು ಧೈರ್ಯವು ಬಂದಿತೋ ಏನೋ "ಮಿಂಡನಲ್ಲ–ಮಗ." ಅಂದುಬಿಟ್ಟಳು. ಏನು ಶಕ್ತಿಯು ಬಂದಿದ್ದಿತೋ ಏನೋ ದಂಡಪ್ಪನನ್ನು ಅಡ್ಡಗಟ್ಟಿದಳು. ದಂಡಪ್ಪನು ಕೋಪಾವಿಷ್ಟ ನಾಗಿ "ಮಗ! ನಿನ್ನ ಮಗ ಆಗಲೇ ಸತ್ತ. ಇವನ್ಯಾರು? ಹಂ. ದಾರೀಬಿಡು" ಅಂದ. ಆದರೆ ಅವಳು ಜಗ್ಗಲಿಲ್ಲ ದಂಡಪ್ಪನು ಮುಂದೆ ನುಗ್ಗಲು ಅವಳ ಕೈಗಳನ್ನು ಕೀಳುತ್ತಿದ್ದನು.

ಇಷ್ಟರಲ್ಲಿ ಹುಡುಗನು ಎಚ್ಚತ್ತು ತನ್ನ ಅಪಾಯವನ್ನು ತಿಳಿದು ಹೊರಕ್ಕೆ ಹೋಗಲು ದಾರಿಯಿಲ್ಲದೆ ಅಡಿಗೆ ಮನೆಯ ಅಡ್ಡ ಕಿಟಕಿಯ ತಂತಿಯನ್ನು ಹಾರಿಯಿಂದ ಎಬ್ಬುತ್ತಿದ್ದನು. ದಂಡಪ್ಪನು ಇವನನ್ನು ಕಂಡವನೇ "ಓ! ಕೊಲೆಗೇಡಿ!" ಅಂದನು "ಅಲ್ಲ, ಕೊಲ್ಲಬೇಕು ಅಂತ ಕೈಮಾಡಿದವನಲ್ಲ" ಅಂದಳು ಅಂಬವ್ವ.

"ನಿನ್ನ ಮಗನನ್ನು ಕೊಂದವನು" ಎಂದ ದಂಡಪ್ಪ.

ಇದನ್ನು ಕೇಳಿದೊಡನೆ ಅಂಬವ್ವನ ಕೈ ಸಡಿಲಾಗುವಂತಾಯಿತು. ಆದರೂ ತಕ್ಷಣವೇ ಚೇತರಿಸಿಕೊಂಡು.

"ನನ್ನ ಮಗ ಅಂತ ಕೊಲ್ಲಲಿಲ್ಲ—ಅವನು, ಉದ್ರೇಕದಲ್ಲಿ ಅವಿವೇಕ ವಾಯಿತು" ಅಂದಳು.

"ಹಂ, ನಿನಗೇನು ಬಂದಿದೆ ಮೈಮೇಲೆ? ಈ ಧೈರ್ಯ, ಈ ಶಕ್ತಿ. ಬಿಡು ಇವನ್ನ ಫಾಸಿಗೆ ಹಾಕಿಸದಿದ್ದರೆ ಏಕೆ? ನನ್ನ ಮಗನ ಸಾವಿಗೆ ಕಾರಣವಾಗಿದ್ದಾನೆ."

"ಇವನ ಎಳೆ ಕೊರಳ ಕೊಯ್ದರೆ ನಮ್ಮ ಮಗ ಎದ್ದು ಬಂದಾನೇ?"

"ನನ್ನ ಕೆಲಸ, ಪೆನ್ಶನ್ನು, ಬಹುಮಾನ...."

"ಇವನ ಜೀವ ಮಾರಿಬಂದ ಯಾವ ಭಾಗ್ಯವೂ ನಮಗೆ ಬೇಡ."

"ಓ ನೋಡು, ನೋಡು ತಪ್ಪಿಸಿಕೊಳ್ಳುತ್ತಿದ್ದಾನೆ. ಬಿಡು ಅಂತೀನಿ."

ಇಷ್ಟರಲ್ಲಿ ಹುಡುಗನು ಸರಳನ್ನು ಕಿತ್ತು ಕಿಟಕಿಯಿಂದ ಇಳಿಬೀಳುವದರಲ್ಲಿದ್ದನು. ದಂಡಪ್ಪನು ಇದನ್ನು ಕಂಡು ಆವೇಶದಿಂದ

"ಅವನೇನಾದರೂ ತಪ್ಪಿಸಿಕೊಳ್ಳಲಿ. ನಿನ್ನ ಸೀಳಿಬಿಡುತ್ತೇನೆ" ಎಂದು ಅಂಬವ್ವನಿಗೆ ಫಟ್ ಎಂದು ಏಟನ್ನು ಕೊಟ್ಟನು. ಅಂಬವ್ವನು ಎಂದಿನಂತೆ ಅಳಲಿಲ್ಲ. ಜಗ್ಗಲೂ ಇಲ್ಲ. ಮುಖವನ್ನು ಮಾತ್ರ ತಿರುಗಿಸಿಕೊಂಡಳು.

ಆ ಏಟಿನ ಶಬ್ದವನ್ನು ಕೇಳಿ ಹುಡುಗನು ತಿರುಗಿನೋಡಿದನು ದಂಡಪ್ಪನು ಮತ್ತೊಂದು ಬಾರಿ ಕೈ ಎತ್ತಿದ್ದನು. ಅಂಬವ್ವನು ಪ್ರತಿಮೆಯಂತೆ ಅಲುಗದೆ ನಿಂತಿದ್ದಳು ಅವನಿಗೆ ಏನೆನ್ನಿಸಿತೋ ಏನೋ ಕಿಟಕಿಯ ಹೊರಗಿಟ್ಟಿದ್ದ ಕಾಲನ್ನು ಮತ್ತೆ ಒಳಕ್ಕೆ ತೆಗೆದುಕೊಂಡು ಹಾರಿ ಅಂಬವ್ವನ ಬಳಿಗೆ ಬಂದು ದಂಡಪ್ಪನ ಎತ್ತಿದ ಕೈಯನ್ನು ಹಿಡಿದುಕೊಂಡು "ಅವ್ವನ ಮೇಲೆ ಕೈ ಮಾಡಬೇಡಿ ನಿಮ್ಮೊಡನೆ ಬರಲು ನಾನು ಸಿದ್ಧನಾಗಿದ್ದೇನೆ" ಅಂದನು.

ದಂಡಪ್ಪನು ಪಕ್ಕನೆ ಹುಡುಗನ ಕೈ ಹಿಡಿದುಕೊಂಡನು. ಅಂಬವ್ವನು "ಅಯ್ಯೋ" ಅಂದಳು ಮತ್ತೆ ದಂಡಪ್ಪನಿಂದ ಹುಡುಗನ ಕಡೆ ನೋಡಿ "ನೀವೇ ನೋಡಿ ಚೆನ್ನಾಗಿ ಇವನು ಕೊಲೆಗೇಡಿಯೆ" ಎಂದಳು.

ದಂಡಪ್ಪನು ಹುಡುಗನ ಕೈ ಹಿಡಿದುಕೊಂಡಿದ್ದರೂ ಅವನನ್ನು ಎಳೆದೊಯ್ಯಲಿಲ್ಲ. ಅವನ ಕಡೆಗೇ ದಿಟ್ಟಿಸುತ್ತಿದ್ದನು. ಅವನ ಎಳೆಯ ಕಂಗೆಟ್ಟ ಶರೀರ, ಸ್ವಚ್ಛವಾದ ಕಣ್ಣುಗಳು, ದಂಡಪ್ಪನ ಕಣ್ಣನ್ನು ಕುಕ್ಕಿದವು ಹಿಂದೆ ಅಂಬವ್ವನಮೇಲೆ ಕೈ ಎತ್ತಿದಾಗ ಪಾಂಡುರಂಗ ತನ್ನ ಕೈ ಹಿಡಿದು ತನ್ನ ಇಷ್ಟಕೊಪ್ಪಿದುದು ತಟ್ಟನೆ ನೆನಪಾಯಿತು. ಅವನಿಗೂ ಇವನಿಗೂ ಇದ್ದ ಹೊರಹೋಲಿಕೆಯೂ ದಂಡಪ್ಪನ ಮನಸ್ಸನ್ನು ಹೊಕ್ಕಿತು. ಅವನಿಗ ಗೊತ್ತಿಲ್ಲದಂತೆಯೇ ಹುಡುಗನ ಮೇಲಿನ ಹಿಡಿತವು ಸಡಿಲವಾಯಿತು. ಕಣ್ಣೊ ಒದ್ದೆಯಾದುದು ಅವನಿಗೆ ಆಶ್ಚರ್ಯ. ಇನ್ನೊಂದು ಕ್ಷಣದಲ್ಲಿ ಅವನಿಗೆ ಏನೋ ಹೊಳೆಯಿತು. ಅಂಬವ್ವನ ಕಡೆಗೆ ತಿರುಗಿ

"ಇವನು ಎಲ್ಲಾದರೂ ಹೋದಾನು ಜೋಪಾನವಾಗಿ ನೋಡಿಕೋ ಈಗಲೇ ಬರುತ್ತೇನೆ" ಎಂದು ಟೊಪ್ಪಿಗೆಯನ್ನು ಹಾಕಿಕೊಂಡು ಹೊರಕ್ಕೆ ಹೊರಟುಹೋದನು.

ಅವನು ಹೋದೊಡನೆ ಅಂಬವ್ವನು ಹುಡುಗನಿಗೆ "ಎಲ್ಲಾದರೂ ಹೋಗಿಬಿಡಪ್ಪ ದೇವರು ಮಾಡಿಸಿದ್ದು ಆಗಲಿ. ಅವರು ಏನುಮಾಡುತ್ತಾರೋ ಏನೋ" ಎಂದಳು. ಆದರೆ ಹುಡುಗನು ಒಪ್ಪಲಿಲ್ಲ. "ಅವ್ವ ಇನ್ನು ನನಗೆ ಯಾತರ ಆಸೆಯೂ ಇಲ್ಲ. ತಪ್ಪಿಸಿಕೊಂಡು ಏನು ಫಲ?" ಅಂದುಬಿಟ್ಟನು.

ಅರ್ಧಗಂಟೆಯ ಮೇಲೆ ದಂಡಪ್ಪನು ಬಂದಾಗ ಅವನ ನೌಕರಿಯ ಉಡುಪು ಸಾಧನಗಳೆಲ್ಲವೂ ಹೋಗಿದ್ದವು. ಚಡ್ಡಿ ಬನಿಯನ್ನುಗಳನ್ನು ಮಾತ್ರ ಹಾಕಿದ್ದನು. ಇದನ್ನು ಕಂಡು ಅಂಬವ್ವನು "ಇದೇನು? ಏನಾಯಿತು?" ಎಂದು ಆತುರದಿಂದ ಕೇಳಿದಳು. ಅದಕ್ಕೆ ಅವನು

"ಏನು ಇಲ್ಲ. ಕೆಲಸಕ್ಕೆ ರಾಜೀನಾಮೆಕೊಟ್ಟೆ ಅಷ್ಟೆ" ಅಂದ ದಂಡಪ್ಪ.

"ನನಗಾಗಿ?" ಅಂದ ಹುಡುಗ.

"ಇಲ್ಲಪ್ಪ, ನನಗಾಗಿ. ನಾನಿನ್ನು ನೌಕರಿಗೆ ನಾಲಾಯಕ್ಕು. ನೌಕರನಾಗಿ ಬೇಸರವಾಗಿ ಮನುಷ್ಯನಾಗೋಕೆ ಇಷ್ಟಪಟ್ಟೆ. ಒಬ್ಬ ಮಗನನ್ನು ಕೊಲ್ಲಿಸಿದುದು ಸಾಕಾಯಿತು—ನನಗೆ" ಎಂದು ದಂಡಪ್ಪನು ಉತ್ತರವಿತ್ತನು.

ಅಂಬವ್ವನು ಗಳಗಳ ಅತ್ತಳು. ದಂಡಪ್ಪನು ಇವಳನ್ನು ಸಮಾಧಾನಪಡಿಸುತ್ತ "ಹೋಗಲಿ ಬಿಡು, ಹಿಂದಿನದೆಲ್ಲ ಮರೆಯೋಣ. ಈ ಹಾಳೂರು ಈವತ್ತಿಗೆ ಕಡೆ. ನಾವೆಲ್ಲ ಇಲ್ಲಿರುವದು ಸರಿಯಲ್ಲ. ಹೇಗಾದರೂ ಮರೆಸಿಕೊಂಡು....

"ಏನು? ನಾನೂ?".. ಆಶ್ಚರ್ಯದಿಂದ ಹುಡುಗ ಮಧ್ಯೆ ಬಾಯಿಹಾಕಿದನು. ದಂಡಪ್ಪನು ತಲೆಯನ್ನು ಮೇಲೆ ಕೆಳಗೆ ಆಡಿಸಿದನು. ಅಂಬವ್ವನಿಗೂ ಅಚ್ಚರಿಯು ಮಿಗಿಲಾಯಿತು. ಅವಳ ದುಃಖ ಕೊಂಚ ಮರೆಯಾಯಿತು.

"ಅವಳು "ಅಲ್ಲಿ ಯಾರಾದರೂ ಕಂಡರೆ?" ಎಂದು ಕೇಳಿದಳು.

"ಕೇಳಿದರೇನು ಅಲ್ಲಿ ಯಾರಿಗೆ ಏನು ಗೊತ್ತು? ನಾವು ಅಂತೂ ಈವರೆಗೆ ಅಲ್ಲಿಗೆ ಹೋಗಿಯೇ ಇಲ್ಲ. ಪಾಂಡುರಂಗ ಇದ್ದರೆ ಹೀಗೆಯೇ ಇರುತ್ತಿರಲಿಲ್ಲವೇ? ಇವನೂ ನಮ್ಮ ಮಗನೇ" ಅಂದು ಪೂರೈಸಿದ ದಂಡಪ್ಪ.

"ನಮ್ಮ ಮಗ!" ಹೊಳಲುಗೊಟ್ಟಲು ಅಂಬವ್ವ.

ಹುಡುಗನು ತಲೆವಾಗಿ ನಿಂತಿದ್ದ.

# ಭಯ್ಯಾನ ಗಣಪತಿ

ವರ್ಷಾವಧಿ ಹಬ್ಬ—ವಿನಾಯಕನ ಚತುರ್ಥಿ ಬಂದಿತು. ದೇಶ ದಲ್ಲಿ, ಊರಿನಲ್ಲಿ ಹೇಗೋ ಹಾಗೆ, ನಮ್ಮ ವಠಾರದಲ್ಲೂ ಸಡಗರವೋ ಸಡಗರ. ಆದರೆ ನಮ್ಮ ಮನೆಯ ಮೇಲಿನ ಮನೆಯ ಕಾಕುಬಾಯಿಯ ಮಗ ಭಯ್ಯಾನ ಸಂಭ್ರಮ ಎಲ್ಲರದಕ್ಕಿಂತ ಒಂದು ಕೈ ಮೇಲು ಅವನು ಆಗ ಬಿ.ಎ.ಗೆ ಕಟ್ಟುವನಿದ್ದನು. ವರಸಿದ್ಧಿ ವಿನಾಯಕನು ವಿದ್ಯಾದಾಯಕ ನಲ್ಲವೇ? ಹೀಗಿದ್ದು ಭಯ್ಯಾನ ವಿಜೃಂಭಣೆಯೇನೂ ಯಾರಿಗೂ ಆಶ್ಚರ್ಯ ವನ್ನುಂಟುಮಾಡುವುದಿಲ್ಲ.

ಇಷ್ಟಾದರೂ, ಇವನಿಗೆ ಉತ್ಸುಕತೆಯಲ್ಲಿ ಸರಿಗಟ್ಟುವ ಇಲ್ಲವೆ ಇನ್ನೊಂದು ತೂಕ ಮೀರುವ ವ್ಯಕ್ತಿಯೊಂದುಂಟು. ಅದು ಹಿಂದಿನ ಮನೆಯ ಹರಿಬಾಬುಜಿಯ ಚಿಕ್ಕ ಮಗು ಅವಿನಾಶ. ಅವನಿಗೆ ವಯಸ್ಸು ಎರಡಕ್ಕೆ ಮೀರಿ ಮೂರರ ಒಳಗಿದ್ದಿತು. ಅವನ ಹೊಳಪಾದ ಕಣ್ಣುಗಳು, ಉಬ್ಬಿದ ಕೆನ್ನೆಗಳು, ತುಂಬಿದ ನಗು, ತೊದಲು ನುಡಿಗಳು, ಆಟ ಓಟ ಗಳ ಚಟುವಟಿಕೆ, ಇವು ವಠಾರಕ್ಕೇ ಮೆಚ್ಚಿಗೆಯಾಗಿದ್ದುವು. ಅವನ ಸಂಚಾರವು ಅಲ್ಲಿಯ ಆರುಮನೆಗಳಲ್ಲೂ ಉಂಟು. ಆದರೆ ಭಯ್ಯಾನ ಮನೆಯೇ ಅವನಿಗೆ ಮೆಚ್ಚಿಗೆ. ಅಲ್ಲಿಯೇ ಅವನ ಮಧ್ಯಾಹ್ನದ ಮುಕ್ಕಾಲು ಭಾಗವು ಕಳೆಯುತಿದ್ದಿತು. ಈಚೆಗೆ ಮಕ್ಕಳನ್ನು ಕಾಣದ ಕಾಕುಬಾಯಿ ಇವನನ್ನು ಬಹುವಾಗಿ ಮುದ್ದಿಸುತ್ತಿದ್ದರು. ಅದಕ್ಕಿಂತ ಹೆಚ್ಚಾಗಿ ಮಿಠಾಯಿಯನ್ನು ಕೊಡುತ್ತಿದ್ದರು. ಭಯ್ಯಾನಿಗಾದರೋ ಈ ಸಣ್ಣ ಮನುಷ್ಯನು ಸ್ನೇಹಿತನಂತೆಯೇ ಭಯ್ಯಾನು ಮನೆಯಲ್ಲಿದ್ದಾಗಲೆಲ್ಲ ಚಿಕ್ಕ ಅವಿನಾಶನು ಅವನ ಸುತ್ತ ಮುತ್ತ ಓಡಾಡಿಕೊಂಡಿರುತ್ತಿದ್ದನು ಭಯ್ಯಾನು ಆಗಾಗ್ಗೆ ಪಾಠಪದ್ಯಗಳನ್ನು ಮೂಲೆಗಿರಿಸಿ ಅವಿನಾಶನೊಡನೆ ಹಿಡಿದಾಟವಾಡುತ್ತಿದ್ದನು. ಅವನ ಸಾವಿರಾರು ಪ್ರಶ್ನೆಗಳ ಸುರಿಮಳೆ ಯಲ್ಲಿ ನೆನೆದು ಶಾಂತನಾಗಿ ಉತ್ತರಕೊಡುತ್ತಿದ್ದನು. ಅವನನ್ನು ಎತ್ತಿ, ಎಸೆದು, ಆಡಿಸಿ, ಕಚಗುಳಿ ಇಟ್ಟು ಹುಚ್ಚು ಹುಚ್ಚಾಗಿ ನಗಿಸಿ, ಲೊಚ ಲೊಚನೆ ಮುತ್ತಿಟ್ಟು ಸಂತೋಷಪಡುತ್ತಿದ್ದನು. ಪಾಪ, ಪದವಿ

ಪರೀಕ್ಷೆಗೆ ಕಟ್ಟುವ ಹುಡುಗನ ಪಾಠಕ್ಕೆ ತೊಂದರೆಯಾದೀತೆಂದು. ಅವಿನಾಶನ ತಾಯಿ ರಾಧಾಬಾಯಿಯು ಆಗಾಗ್ಗೆ ಏನೇನೋ ಹೊಂಚು ಹಾಕಿ, ಆಸೆ ತೋರಿಸಿ, ತುಂಟನನ್ನು ಕರೆದೊಯ್ಯುತ್ತಿದ್ದಳು.

ಇಂತಹ ಗೆಳೆಯರು ವರಸಿದ್ಧಿವಿನಾಯಕನ ವ್ರತ ಸಮಾರಂಭದಲ್ಲಿ ಒಂದಾಗಿ ದುಡಿಯುತ್ತಿದ್ದರೆಂಬುದನ್ನು ಮತ್ತೆ ಹೇಳಲೇ ಬೇಕಾಗಿಲ್ಲ. ಹತ್ತಾರು ದಿನಗಳಿಂದ ಭಯ್ಯಾನು ಕಟ್ಟುತ್ತಿದ್ದ ಕಾಗದದ ಮಂಟಪ. ಅದಕ್ಕೆ ನಾವೆಲ್ಲರೂ ಕಂಡಂತೆ, ಕಾಣದಂತೆ ನೂರಾರು ಬಗೆಯ ಅಲಂಕಾರಗಳನ್ನು ಮಾಡಿ ನೋಡಿ ಹಿಗ್ಗುವುದೇ ಅವಿನಾಶನ ಸಹಾಯ ಕೆಲಸವು ಮುಗಿದ ಮೇಲೆಯೂ, ಭಯ್ಯಾನು ಕಾಲೇಜಿಗೆ ಹೋದಾಗಲೂ ಅವನ ಪರಮಮಿತ್ರನನ್ನು ಸ್ನಾನ ಊಟಗಳಿಗಾಗಿ ಮಂಟಪದಿಂದ ಸೆಳೆದೊಯ್ಯುವುದು ಪ್ರಯಾಸವಾಗಿದ್ದಿತು. ಮನೆಗೆ ಬಂದಾಗ ಬೇಗಡೆ, ಬಣ್ಣದ ಕಾಗದ, ಗೋಂದುಗಳಿಂದ ಅವಿನಾಶನನ್ನು ಬಿಡಿಸಬೇಕಾದರೆ ರಾಧಾಬಾಯಿಗೆ ಸಾಕು ಸಾಕಾಗಿ ಹೋಗುತಿದ್ದಿತು.

ಚತುರ್ಥಿಯ ದಿನ ಗಣಪತಿಯ ಮೂರ್ತಿಯನ್ನು ತಂದಮೇಲಂತೂ ಅವಿನಾಶನ ಸಂತೋಷಕ್ಕೆ ಪಾರವೇ ಇಲ್ಲ. ಮತ್ತೆ ಮತ್ತೆ ನೋಡಿದನು. ಚಪ್ಪಾಳೆ ತಟ್ಟಿ ತಟ್ಟಿ ಕುಣಿದನು. 'ಬಣ್ಣದ ಗಣಪ'ನೆಂದು ಹೇಳಿ ಹೇಳಿ ಹಾಡಿದನು. ಎಲ್ಲರನ್ನೂ ಕರೆಕರೆದು ತೋರಿಸಿದನು. ನನ್ನನ್ನೂ ಎಳೆದು ಕೊಂಡು ಹೋಗಲಾಗಿ ನನಗೂ ಮೂರ್ತಿಯ ದರ್ಶನವು ವ್ರತಕ್ಕೆ ಮುಂಚೆಯೇ ಆಯಿತು. ಅದನ್ನು ನೋಡಿದ ಮೇಲೆ ಅವಿನಾಶನ ಹುಚ್ಚೇನು ಹೆಚ್ಚಲ್ಲವೆಂದು ನನಗೆ ಅನ್ನಿಸಿತು. ಮೂರ್ತಿಯು ಬಹು ಮುದ್ದಾಗಿದ್ದಿತು. ನಮ್ಮ ಕಡೆಯ ನೂರು ಮೂರ್ತಿಗಳಲ್ಲಿ ತೊಂಬತ್ತೊಂಬತ್ತಕ್ಕೆ ಆನೆಯ ಮೈಕಟ್ಟೇ ಇರುತ್ತದೆ. ಆದರೆ ಬೊಂಬಾಯಿನಲ್ಲಿ ಹಾಗಲ್ಲ. ಆಕಸ್ಮಿಕವಾಗಿ ಸಂಭವಿಸಿದ ಆನೆಯ ತಲೆಯೊಂದನ್ನು ಬಿಟ್ಟರೆ ಉಳಿದ ಶರೀರದ ಸಮುಕಟ್ಟು ಅಂದವಾಗಿರುತ್ತದೆ. ತಲೆಯೂ ನಾಗರಿಕತೆಯಿಂದ ತಿದ್ದಲ್ಪಟ್ಟ ಸೊಂಡಿಲೊಂದೇ ಮನುಷ್ಯನ ಪ್ರತಿಮೆಯಿಂದ ವಿನಾಯಕನನ್ನು ಬೇರ್ಪಡಿಸುತ್ತದೆಯೆಂದರೂ ಅನ್ನಬಹುದು.' ಇದು ಸಾಮಾನ್ಯದ ಗಣಪತಿಯಾದರೆ ಭಯ್ಯಾನದು ವಿಶೇಷಮೂರ್ತಿ. ಅದರ

ತಿಳಿಗೆಂಪಿನ ಮೈ, ಕೋಮಲವಾದ ಅಂಗಾಂಗಗಳು, ಸುಂದರವಾದ ವಿವಿಧಾಯುಕಗಳು, ತಲೆಯ ಮೇಲೆ ಚಿನ್ನದ ರಂಗಿನ ಕಿರೀಟ, ಚಿನ್ನ ದಂಚಿನ ಬಿಳಿಯ ಪಂಚೆ, ಕೇಸರಿ ಬಣ್ಣದ ಶಲ್ಯ, ಹೊಟ್ಟೆಗೆ ಸುತ್ತಿಕೊಂಡು 'ಬುಸ್ಸೆ'ನ್ನುವಂತೆ ಹೆಡೆಬಿಟ್ಟಿದ್ದ ಕಪ್ಪು ನಾಗರಹಾವು. ಮೂರ್ತಿಯು ಕುಳಿತಿದ್ದ ಚಿತ್ರಸಿಂಹಾಸನ, ಉದ್ದಬಾಲದ ಇಲಿ ಇವುಗಳೆಲ್ಲವೂ ಮೂರ್ತಿ ಯನ್ನು ಅತ್ಯಂತ ಮನೋಹರವನ್ನಾಗಿ ಮಾಡಿದ್ದುವು. ನಾನೂ ಸಹ ಬೆರಗಾಗಿ ಅದನ್ನು ಕೆಲವು ನಿಮಿಷಗಳಕಾಲ ದಿಟ್ಟಿಸಿ ನೋಡುತ್ತಿದ್ದೆ. "ಭಯ್ಯಾ, ಬಹಳ ಒಳ್ಳೆಯ ಪ್ರತಿಮೆ" ಎಂದೆ. ಅದಕ್ಕವನು "ಅದರ ಬೆಲೆಯೇನು ಗೊತ್ತೆ? ಐದು ರೂಪಾಯಿ" ಎಂದ. "ಇರಬಹುದು. ಧಾರಾಳವಾಗಿ ಕೊಡಬಹುದು" ಅಂದೆ ಕಾಕುಬಾಯಿ ಒಳಗಿನಿಂದ ಬಂದು ಈ "ಸಾರಿ 'ಫಸ್ಟ್ ಕ್ಲಾಸಿ'ನಲ್ಲಿ ಪಾಸಾಗಬೇಕು ಅಂತ ಇಷ್ಟು ದುಡ್ಡನ್ನು ಸುರಿದು ತಂದಿದ್ದಾನೆ. ಹೆಣಗಾಡಿ ತಿಂಗಳಿಂದ ಮಂಟಪ ಕಟ್ಟಿದ್ದಾನೆ" ಅಂದರು ನಾನು ನಕ್ಕೆನು. ಭಯ್ಯನೂ ಹುಸಿನಕ್ಕ ನಾದರೂ ಅವನ ಬಗ್ಗೆ ಕಾಕೂಬಾಯಿಯ ಅಭಿಪ್ರಾಯವು ಸುಳ್ಳಾಗಿರಲಿಲ್ಲ. ಇದರ ಸತ್ಯವನ್ನು ವಿದ್ಯಾರ್ಥಿಗಳೇ ಬಲ್ಲರು.

ಅಂತೂ ಇಂತಹ ಮೂರ್ತಿಗೆ ಗಂಟುಬಿದ್ದ ಅವಿನಾಶನಿಗೆ ಊಟ ವೇನೋ ಬಲವಂತದಿಂದ–ಮನೆಯ ಗಂಡುಮಗು ಅಲ್ಲವೇ?–ತಾಯಿಯ ಮನೆಯಲ್ಲೇ ಆದರೂ, ಹಬ್ಬದ ಪೂಜೆಪುನಸ್ಕಾರ ವ್ರತ, ಕಥೆ, ನೈವೇದ್ಯ ಮಂಗಳಾರತಿಗಳೆಲ್ಲ ಭಯ್ಯನ ಮನೆಯಲ್ಲೇ ಕಳೆದುವು. ಅವಿನಾಶನೂ ಜರಿಯ ಜಾರುವ ಕಚ್ಚೆ ಪಂಚೆಯುಟ್ಟು, ಬಿದ್ದು ಬಿದ್ದು ಹೋಗುವ ರೇಶ್ಮೆಯ ಶಲ್ಯವನ್ನು ಹೊದ್ದು, ತಾನೂ 'ದೇವರಿಗೆ' ಹೂವನ್ನೆರಚಿದನು, ತೆಂಗಿನಕಾಯನ್ನು ಒಡೆದನು, ದಾನಮಾಡಿದನು, ಚಿಕ್ಕ ಜಾಗಟೆಯನ್ನು ಬಾರಿಸಿದನು, ಅಡ್ಡಬಿದ್ದನು, ತೀರ್ಥಪ್ರಸಾದಗಳನ್ನು ಹೊಂದಿದನು. ಇವನ ಭಕ್ತಿಯನ್ನು ಕಂಡು ಜೋಯಿಸರು ಹಿಗ್ಗಿದರು. ಮಗುವನ್ನು ಬಾಯಿತುಂಬ ಹೊಗಳಿದರು. ಇಷ್ಟು ವಯಸ್ಸಿನಲ್ಲೇ ಇಷ್ಟು ಶ್ರದ್ಧೆ ತೋರಿಸುವ ಕೂಸು ಮುಂದೆ ಭಕ್ತಶಿರೋಮಣಿಯಾಗಲು ಏನೂ ಸಂದೇಹ ವಿಲ್ಲವೆಂದು ಹೇಳಿ ದಾನ ತೆಗೆದುಕೊಂಡು ನಾಲ್ಕು ಕಾಳು ಮಂತ್ರಾಕ್ಷತೆ

ಯನ್ನು ಹಚ್ಚಾಗಿಯೇ ಅವನ ತಲೆಯ ಮೇಲೆ ಹಾಕಿ ದೊಡ್ಡ ದೊಡ್ಡ ಸಂಸ್ಕೃತ ಶ್ಲೋಕಗಳಲ್ಲಿ ಹರಸಿದರು.

ಭಯ್ಯನೂ ಅತ್ಯಂತ ಶ್ರದ್ಧೆಯಿಂದ ವ್ರತವನ್ನಾಚರಿಸಿದನು. ಜೋಯಿಸರಿಂದ 'ಆಯುರಾರೋಗ್ಯೈಶ್ವರ್ಯಾದಿ'ಗಳ ಜೊತೆಗೆ ಮೊದಲನ ತರಗತಿಯಲ್ಲಿ ಪಾಸಾಗುವಂತ ಆಶೀರ್ವಾದವನ್ನು ಪಡೆದನು. ಕಾಕು ಬಾಯಿ ಹಿಗ್ಗಿದರು. ತಲೆಯ ಮೇಲೆ ನೆಟ್ಟಗೆ ಮುರಿದರು ಕಡೆಯಲ್ಲಿ ಈ ದೃಶ್ಯವನ್ನು 'ಎರಡು ಕಣ್ಣುಗಳಿಂದಲೂ' ನೋಡಿ ಸಂತೋಷಪಡುವು ದಕ್ಕೆ ಅವರ ಯಜಮಾನರು ಬದುಕಿಲ್ಲವಲ್ಲಾ ಎಂದು ಮರುಗಿದರು, ಕಣ್ಣೀ ರನ್ನೂ ಹಾಕಿದರು ಮಂಗಳಾರತಿಗಾಗಿ ನನಗೂ ಆಹ್ವಾನವಿದ್ದುದರಿಂದ ನಾನೂ ಹೋಗಿ 'ಹೊಟ್ಟೆಯ ತುಂಬ' ಉಂಡು ಆನಂದಪಟ್ಟಿದ್ದಾಯಿತು

ಚತುರ್ಥಿಯು ಕಳೆದು ಚತುರ್ದಶಿಯು ತಲೆ ಹಾಕಿತು ಜೋಯಿ ಸರು ಪಂಚಾಂಗವನ್ನು ತಿರುವಿ ತಿರುವಿ ಹಾಕಿ ಗಣಪತಿಯನ್ನು ಕಳು ಹಿಸಲು ಈ ದಿನವೇ ಪ್ರಶಸ್ತವೆಂದು ತೀರ್ಮಾನ ಹೇಳಿದ್ದರು ಹಾಗಿದ್ದರೂ ಊರಿನಲ್ಲೆಲ್ಲ ಅನೇಕರಿಗೆ ವರಸಿದ್ಧಿವಿನಾಯಕನು ಹಳೆಯ ನಂಟನಾಗಿ ಬಿಟ್ಟಿದ್ದುದರಿಂದ, ಅವರು ಇವನ ಇರವನ್ನು ಸಹಿಸಲಾರದ ಸುಮಾರಾದ ಮುಹೂರ್ತಗಳಲ್ಲಿಯೇ ಅವನನ್ನು ಸಾಗಿಸಿಬಿಟ್ಟು. ನಿತ್ಯದ ಮಡಿ, ಮಂಗಳಾರತಿಗಳ ಕಸರತ್ತನ್ನು ಕಳದುಕೊಂಡು ಹಾಯಾಗಿ ಉಸಿರು ಬಿಡುತ್ತಿದ್ದರು ಆದರ ನಮ್ಮದು ಎಷ್ಟರ ಸರಾರವಾಗಿದ್ದುದರಿಂದ ನಾವುಗಳೆಲ್ಲರೂ ಈ ದೇವರ ಬಾಳನ್ನು ಹೇಗೋ ಕಷ್ಟದಿಂದ ಸೈರಿಸುತ್ತ, ಸಾಗಿಸಿಕೊಂಡು ಬಂದಿದ್ದೆವು. ನಮ್ಮ ನಮ್ಮಲ್ಲಿಯೇ "ಇಷ್ಟು ದಿನ ಗಣಪತಿಯನ್ನು ಸಲ್ಲಿಸಿಕೊಳ್ಳುವುದು ಭಾರಿ ಜವಾಬ್ದಾರಿ "—"ಕೈಲಾಸ ದಲ್ಲಿ ಕೆಲಸವೆಷ್ಟೋ ನಿಂತು ಹೋಗುವುದಕ್ಕೆ ನಾವು ಕಾರಣರಾಗಲಿಲ್ಲವೆ"?— ಎನ್ನುತ್ತ ಮಾತು ಮೊದಲಾಗಿ "ನಿತ್ಯದ ಪೂಜೆಗೀಜೆಗಳೆಲ್ಲ ಬಹಳ ತಾಪತ್ರಯ" ಅಂದು "ಈ ಮಡಿಗಿಡಿ ಪಜೀತಿಯನ್ನೆಲ್ಲ ಯೋಚಿಸಿದರೆ ಗಣಪತಿಯನ್ನು ವ್ರತದ ಮಾರನೆಯ ದಿನವೇ ಸಾಗಹಾಕುವುದು ಸುಸೂತ್ರ'" ಎಂದು ಕೊನೆಗಂಡಿತ್ತು. ನಿಮ್ಮಲ್ಲೂ ಅನೇಕ ನಿಷ್ಠುರು ಹೀಗೆ ನಿಷ್ಠುರವಾಗಿ 'ungodly' ಮಾತುಗಳನ್ನಾಡಿದ್ದರೂ ಭಯ್ಯನು

ಮಾತ್ರ ನಿಂದೆ ನುಡಿಯಲಿಲ್ಲ. ಇದಕ್ಕೆ ಕಾರಣ ದೈವದಲ್ಲಿ ಭಕ್ತಿಯೋ ಭೀತಿಯೋ ಹೇಳುವುದು ಅಸಾಧ್ಯ ಅಂತೂ ಅವನು ಪ್ರತಿದಿನವೂ 'ದೇವರಿಗೆ' ಸೇವೆಯನ್ನು ಚಾಚೂ ತಪ್ಪಿಸದೆ ನಡೆಸಿಕೊಂಡು ಬಂದಿದ್ದನು. ಅವನಂತೆಯೇ ಅವನ ಶಿಷ್ಯ ಅವಿನಾಶ. ಅವನು ಆಟವನ್ನೂ ಕಡಮೆ ಮಾಡಿ ಆರಾಧನೆಯನ್ನು ಮಾಡುತ್ತಿದ್ದನು.

ಚತುರ್ದಶಿಯದಿನ ಕಡೆಯ ಪೂಜೆ, ಮಂಗಳಾರತಿಗಳಾಗಿ, ವಿಸರ್ಜನೆಗಳು ನಡೆದುವು. ಪ್ರತಿಯೊಬ್ಬರೂ ಇನ್ನೆಲ್ಲರ ಮನೆಗೂ 'ಗಣೇಶನ ಮಂಗಳಾರತಿಗೆ' ಹೋಗಿ, ಮತ್ತೆ ಅವರೆಲ್ಲರನ್ನೂ ಬರಮಾಡಿಕೊಂಡು 'ಪೀಪೀಟಿ' ನಡಸಿ, ಕೋಸಂಬರಿ ತಿಂದು ತಿಂದು, ಕಡಲೆ ಹಿಟ್ಟನ್ನು ಮುಕ್ಕಿ ಮುಕ್ಕಿ ಸಂತೃಪ್ತರಾದಮೇಲೆ ಎಲ್ಲರೂ ಗಣಪತಿಗಳನ್ನು 'ಕಳುಹಿಸುವ ಕಾರ್ಯ'ದಲ್ಲಿ ಉದ್ಯುಕ್ತರಾದರು. ಆಗಿನ ನಮ್ಮ ಉತ್ಸಾಹವು ಚತುರ್ಥಿಯ ದಿನವಿದ್ದಷ್ಟೆ. ಅದಕ್ಕೊಂದು ತೂಕ ಮೇಲೆಂದೇ ಹೇಳಬಹುದಾಗಿದ್ದಿತು ಜೋಯಿಸರೂ ಪ್ರತಿಷ್ಠಾಪನೆಯ ದಿನದ ಗಂಟೆನಷ್ಟು ದಪ್ಪದ ಗಂಟನ್ನೇ ಈ ವಿಸರ್ಜನೆಯ ದಿವಸವೂ ಜಮಾಯಿಸಿದ್ದರು. ಅಂತೂ ಅತ್ಯುತ್ಸಾಹದಿಂದ ದೀಪ, ಗಂಟೆ, ತಾಳ ಮೇಳಗಳೊಡನೆ, ಹುಳಿಯನ್ನ ಮೊಸರನ್ನಗಳೊಡನೆ ಮೆರವಣಿಗೆ ರಾತ್ರಿ ಎಂಟೂವರೆ ಒಂಬತ್ತು ಗಂಟೆಗೆ ಮಠವನ್ನು ಬಿಟ್ಟಿತು.

ಚಿಕ್ಕ ಅವಿನಾಶನು ಅವರ ತಂದೆ ಹರಿಬಾಬುಜಿಯ ಹೆಗಲ ಮೇಲೆ ಸವಾರಿ ಮಾಡುತ್ತಿದ್ದರೂ ತನ್ನ ಚಿಕ್ಕ ಗಂಟೆಯನ್ನೇನೋ ಬಲವಾಗಿ ಬಾರಿಸುತ್ತ ಒಟ್ಟಿನ 'ಗಣ ಗಣ'ದ 'ಹುಯ್ಲು'ಗೆ ತನ್ನ ಕಾಣಿಕೆಯನ್ನು ಗಣ್ಯವಾಗಿ ಸಲ್ಲಿಸುತ್ತಿದ್ದನು. ಮಧ್ಯ ಮಧ್ಯೆ ಚೀರಿಡುತ್ತಿದ್ದ 'ಗಣಪತಿಯಣ್ಣಗೆ ನಮೋ ನಮೋ' ಮೊದಲಾದ ಜಯಘೋಷಗಳಿಗೆ ತನ್ನ ಕೂಗನ್ನೂ ತಪ್ಪದೆ ಸೇರಿಸುತ್ತಿದ್ದನು.

ಮೆರವಣಿಗೆಯಲ್ಲಿ ಆರು ಗಣಪತಿಗಳಿದ್ದರೂ ಅವಿನಾಶನ ಶ್ರದ್ಧೆಯೆಲ್ಲ ಭಯ್ಯನ ಗಣಪತಿಗೇ. ಹುಳಿಯನ್ನದ ಕೊಳದಪ್ಪಲೆಯ ಮೇಲೊಂದು ಕಣ್ಣನಿಟ್ಟಿದ್ದರೂ ಈ ಮೂರ್ತಿಯ ಸಾಮೀಪ್ಯವನ್ನು ಬಿಟ್ಟು ಅವನು ಕದಲುತ್ತಿರಲಿಲ್ಲ. ಅಪ್ಪಿತಪ್ಪಿ ಹರಿಬಾಬುಜಿಯು ಒಂದೆರಡು ಹೆಜ್ಜೆ ಹಿಂದೆ

ಬದ್ದರೂ "ನನ್ನ ಬಣ್ಣದ ಗಣಪತಿ ಹತ್ತಿರ" ಎಂದು ಸೂಚಿಸಿ ಅದರ ಬಳಿಗೆ ಸೇರುತ್ತಿದ್ದನು.

ಗುಂಪಿನಲ್ಲಿ ಕಾಕುಬಾಯಿಯಂತಹ ಕೊಳದಪ್ಪಲೆ ಹೊತ್ತ ವೃದ್ಧ ಹೆಂಗಸರು, ಪಟಪಟದ ಹುಡುಗಿಯರು, ಅವಿನಾಶನಂತಹ ನಡೆಯದ, ಆದರೆ, ಹೊರಲಾಗದ ಮಕ್ಕಳು, ಭಾರ ಭಾರವಾದ ಗಣಪತಿಗಳು, ಅವು ಗಳಂತೆಯೇ ನಾಗಲಾಗದ ಹೊರುವವರು ಇದ್ದುದರಿಂದಲೋ, ಅಥವಾ ಆ ತಿಳಿ ಬೆಳದಿಂಗಳ ಆನಂದದಲ್ಲಿ ತಂಗಾಳಿ ತೀಡಿನಲ್ಲಿ ಗುಂಪು ಮೈಮರೆದು ದರಿಂದಲೋ ಮೆರವಣಿಗೆಯು ಹಜ್ಜೆಯ ಮೇಲೆ ಹಜ್ಜೆಯಿಟ್ಟು ಸಾಗುತ್ತ 'ಜುಹು' ತೀರಕ್ಕೆ ಒಂಬತ್ತೂವರೆ ಗಂಟೆಗೆ ಹಾಗೂ ಹೀಗೂ ತಲಪಿತು. ಏರಿಳಿಯುತ್ತ, ನೊರೆಯುಕ್ಕುತ್ತ, ಮೊರೆಯುತ್ತ, ಥಳಥಳಿಸುತ್ತಿದ್ದ ಕಡಲು ಆಗ ನಮ್ಮಗಳ ಮನವನ್ನು ಸರೆಹಿಡಿದು ಕವಿತೆಗಳನ್ನು ಬರೆಯಿಸ ಬೇಕಾಗಿದ್ದಿತು. ಆದರೆ ನಮ್ಮ ಅದೇ ಮನಸ್ಸನ್ನು ಗಣಪತಿಗೆ ಗುತ್ತಿಗೆಗೆ ಕೊಟ್ಟದ್ದುದರಿಂದಲೋ, ಅಥವ ಹೊಟ್ಟೆಯು ಹುಳಿಯನ್ನದ ಸಂಪರ್ಕ ಕ್ಕಾಗಿ ತವಕಿಸುತ್ತಿದ್ದುದರಿಂದಲೋ ಆ ಸಮುದ್ರದ ಸೊಬಗು ನಮ್ಮ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಲಲ್ಲ; ಹೋಗಲಿ. ಆದುದರಿಂದ ತೀರವನ್ನು ಸೇರಿದರೆ ಗಣಪತಿಗೆ ಕಡೆಯ ಮಂಗಳಾರತಿ ಯನ್ನು ಕಾಣಿಸಿ ಬೀಳ್ಕೊಳ್ಳುವ ಸಂದರ್ಭದಲ್ಲಿ ತೊಡಗಿದೆವು. ಜೋಯಿ ಸರು ಕಡಲೇ ಒಡೆದುಹೋಗುವಂತೆ ಮಂತ್ರೋಪಚಾರಣೆ ಮಾಡಿ 'ದೀಪಧೂಪ ಸಕಲಾರಾಧನೈಸ್ಸಮರ್ಚಿತಂ' ಎಂದು ಮುಗಿಸಿ ಎಲ್ಲರೂ ಅವರವರ ಗಣಪತಿ ಮೂರ್ತಿಗಳನ್ನು ಮುಳುಗಿಸಲು ಸಿದ್ಧರಾಗಿರೆಂದು ಅಪ್ಪಣೆ ಮಾಡಿದರು. ಹಾಗಂದದ್ದೇ ತಡ, ಅದೇ ಸಮಯವನ್ನು ಕಾಯುತ್ತಿದ್ದ ನಾವು ಗಣಪತಿಯನ್ನೆತ್ತಿಕೊಂಡು, ಅಲೆಗಳಲ್ಲಿ ನುಗ್ಗಿ ಮುಗ್ಗರಿಸಿ, ನೀರಿನಲ್ಲಿ ನೆನೆದು, ನಾವೂ ಮುಳುಗಿ ಗಣಪತಿಯನ್ನೂ ಮುಳುಗಿಸಿ ಹಿಂದಿರುಗಿದೆವು.

ಆದರೆ ಭಯ್ಯಾನು ಮಾತ್ರ ಹೂಬತ್ತಿ ಪ್ರಸಾದಗಳ, ಗುಡ್ಡದ ತೊಡಕಿನಲ್ಲಿ ಸಿಕ್ಕಿ ಹಿಂದೆ ಬಿದ್ದಿದ್ದನು. ಅವನೂ ನಮ್ಮನ್ನು ಹಿಂಬಾಲಿ ಸುವನೆಂದುಕೊಂಡು ನಾವು ಮುಂದೆ ಸಾಗಿದ್ದೆವು. ಹೀಗಿದ್ದುದರಿಂದ

ನಾವು ಹಿಂದಿರುಗಿದಾಗಲೂ ಅವನು ತೀರದಲ್ಲೇ ಇದ್ದುದು ನಮಗೆ ಕುತೂಹಲವನ್ನುಂಟುಮಾಡಿತು. ಅದಕ್ಕಿಂತ ಹೆಚ್ಚಾದ ವಿಷಯವೆಂದರೆ ಅವಿನಾಶನ ಅಳುವಿನ ಶಬ್ದ. ಕಾರಣವೇನೆಂದರೆ ಅವಿನಾಶ ಅತ್ತ ಮಗುವೇ ಅಲ್ಲ. ಆದುದರಿಂದ ನಾವು ಬೇಗ ತೀರವನ್ನು ಸೇರಿದೆವು ಅಲ್ಲಿನ ದೃಶ್ಯವು ಅಪೂರ್ವವಾಗಿದ್ದಂತೆಯೇ ತೊಡಕಾಗಿಯೂ ಇದ್ದಿತು.

ಮಾಲ್ಯಾಭರಣಗಳಿಂದ ವಿಸರ್ಜಿತನಾದ ಬಣ್ಣದ ಗಣಪತಿಯನ್ನು ಹಿಡಿದುಕೊಂಡು ದಿಕ್ಕು ತೋರದೆ ಭಯ್ಯಾನು ಬಗ್ಗಿ ನಿಂತಿದ್ದನು. ಅವಿನಾಶನು ಹಟಮಾಡಿ ಚೀರಿಡುತ್ತ ಅಳುತ್ತಿದ್ದನು. ರಾಧಾಬಾಯಿ ಅವನನ್ನು ಎತ್ತಿಕೊಂಡು ಏನೇನೋ ಬಾಯಿಗೆ ಬಂದ ಸಮಾಧಾನಗಳನ್ನೆಲ್ಲ ಹೇಳಿ ಮುದ್ದಿಸಿ ಒಪ್ಪಿಸಲು ವಿಶ್ವಪ್ರಯತ್ನವನ್ನು ಮಾಡುತ್ತಿದ್ದಳು ಕಾಕುಬಾಯಿಯು ಇಲ್ಲದ ಸಲ್ಲದ ಆಸೆಗಳನ್ನೆಲ್ಲ ತೋರಿಸುತ್ತ ಹಟದಿಂದ ಮಗುವನ್ನು ವಿಮುಖನನ್ನಾಗಿ ಮಾಡಲು ಹೆಣಗಾಡುತ್ತಿದ್ದರು. ಜೋಯಿಸರು ಆಚಾರ, ವೇದಾಂತ ಪರಿಸುತ್ತಲೂ ಸಾರ ಹೇಳುತ್ತಲೂ, ಮಧ್ಯೆ ಮಧ್ಯೆ ಗದರಿಸುತ್ತಲೂ ಮಗುವನ್ನು ಬಗ್ಗಿಸಲಾರದೆ ಕಿಡಿಕಿಡಿಯಾಗಿ ಸಿಡಿಯುತ್ತಿದ್ದರು. ಅವರ ದೃಷ್ಟಿಯಲ್ಲಿ ಮುಂದಿನ 'ಭಕ್ತಶಿರೋಮಣಿ' ಈಗ 'ಅಧೋಗತಿಗೆ' ಇಳಿದಿದ್ದನು. ಬಾಕಿಯವರೆಲ್ಲರೂ ಸುತ್ತುಗೂಡಿ ಚಿತ್ರಿತರಾಗಿದ್ದರು. ನಾವೂ ಗುಂಪನ್ನು ಸೇರಿದೊಡನೆ ಹರಿಬಾಬುಜಿಯು ಸಮಾಚಾರವನ್ನು ಕೇಳಿದರು. ರಾಧಾಭಾಯಿಯು "ಭಯ್ಯಾನು ಗಣಪತಿಯನ್ನು ಬಿಡಬಾರದು ಅಂತ ಸುಮ್ಮನೆ ಹಟ ಮಾಡುತ್ತ ಇದ್ದಾನೆ" ಅಂದಳು. ನಮಗೆಲ್ಲ ಆಶ್ಚರ್ಯವೂ ವಿನೋದವೂ ಏಕಕಾಲದಲ್ಲಿ ಉಂಟಾಯಿತು. ಹರಿಬಾಬುಜಿಯು ಅವಿನಾಶನನ್ನು ಎತ್ತಿಕೊಂಡನು ಬಿಕ್ಕಿ ಬಿಕ್ಕಿ ಅಳುತ್ತಿದ್ದ ಮಗುವು ಮಧ್ಯೆ ಮಧ್ಯೆ ಬಿಟ್ಟು "ನನ್ನ ಬಣ್ಣದ. ಗಣಪತಿ. ನೀರಿಗೆ....ಎಸಿ ಬೇಡ" ಅಂದನು. ಬಾಬುಜಿ "ನಿನಗೆ ಯಾಕೆ ಅದು" ಎಂದು ಕೇಳಿದರು. "ಪೂಜೆ ಮಾಡಬೇಕು" ಎಂದು ತಕ್ಷಣವೇ ಉತ್ತರಕೊಟ್ಟಿತು. ಬಾಬುಜಿಗೂ ಏನು ಹೊಳೆಯಿತೋ ಅವರು ಸುಮ್ಮನಾದರು. ಬಾಕಿಯವರೂ ಮಾತನಾಡಲಿಲ್ಲ. ಜೋಯಿಸರು ಮಾತ್ರ "ಒಳ್ಳೆಯ ಹಠ ಇದು! ಹ್ಞು!" ಅಂದರು.

ಹರಿಬಾಬುಜಿಯು ಏನು ಏನನ್ನೋ ನೂರಾರು ಉಪಾಯಗಳನ್ನು ಹುಡುಕಿ ಹೂಡಿದರು. ಆದರೆ ಮಗು ಮಾತ್ರ 'ಜುಂ' ಅನ್ನಲಿಲ್ಲ, ಪಟ್ಟನ್ನು ಬಿಡಲಿಲ್ಲ. ಹೊಸ ಗಣಪತಿಗಳು, ಆಟದ ಸಾಮಾನುಗಳು, ತಿಂಡಿತೀರ್ಥಗಳು ಎಲ್ಲದರ ಆಸೆಯೂ ನೀರು ಪಾಲಾದುವು. ಆದರೆ ಭಯ್ಯನ ಗಣಪತಿಯನ್ನು ಮಾತ್ರ ಅವಿನಾಶನು ಹಾಗಾಗಿಸಲೊಲ್ಲನು. ರಾಧಾಬಾಯಿಯು "ಇದಕ್ಕಿನ್ನೇನು ಮಾಡೋಣ" ಅಂದಳು. ಕಾಕೂ ಬಾಯಿ "ಹೀಗ ಹಠ ಹಿಡಿದರೆ ಇನ್ನೇನು ಗತಿ" ಅಂದರು. ಜೋಯಿ ಸರು "ಗತಿಯೇನು ಗಂಗಮ್ಮನ ಪಾಲು! ಇದು ಒಳ್ಳೆ ಮಗು. ಭಯ್ಯ ಗಣಪತಿಯನ್ನು ಬಿಟ್ಟು ಬಾರಯ್ಯ, ತಾನಾಗಿ ಸುಮ್ಮನಾಗುತ್ತಾನೆ" ಅಂದರು ಅವಿನಾಶನು "ಬೇಡ ಬೇಡ. ನನ್ನ....ಬಣ್ಣದ ಗಣಪತಿ ಬೇಕು, ಪೂಜೆ ಮಾಡಬೇಕು, ಎಸಿ ಬಾರದು" ಅಂದು ಅಳುವನ್ನು ಜೋರು ಮಾಡಿದನು ಭಯ್ಯನು "ಪಾಪ, ಇನ್ನೂ ಮಗು, ಅದಕ್ಕೇನು ತಿಳಿಯುತ್ತದೆ. ಇನ್ನೂ ಕೊಂಚ ಕಾಯೋಣ, ನೋಡೋಣ" ಅಂದನು. ಎಲ್ಲರೂ ಇದೊಂದು ವಿಚಿತ್ರ. ಅಂದುಕೊಂಡು ಪಿಸುಗುಟ್ಟಿದರು. ಜೋಯಿಸರು ತಗ್ಗು ಧ್ವನಿಯಲ್ಲಿ "ನನ್ನ ಮಗು ಆಗಿದ್ದರೆ " ಅಂದು ಕೊಂಡು ಬಾಕಿಯ ಮಾತನ್ನು ನುಂಗಿಕೊಂಡರು

ಇನ್ನೂ ಐದು ನಿಮಿಷ ತಾಟಸ್ಥ್ಯ, ಪ್ರಯೋಜನವಿಲ್ಲ. ಮತ್ತೆ 'ಪುಸಲಾವಣೆ', ಪ್ರಯೋಜನವಿಲ್ಲ. ಅವಿನಾಶನು ಬೇರೆ ತನ್ನ ಗಾಯತ್ರಿ "ಬಣ್ಣದ ಗಣಪತಿ ಪೂಜೆ ಮಾಡಬೇಕು, ಎಸಿಬಾರದು" ಎಂಬುದನ್ನು ಬಿಡಲಿಲ್ಲ ಹರಿಬಾಬುಜಿ ನಸುನಗುತ್ತಿದ್ದಾರೆ ಭಯ್ಯನು ಪ್ರತಿಮೆ ಯಂತೆ ನಿಶ್ಚೇಷ್ಟಿತನಾಗಿದ್ದಾನೆ ಕಾಕುಬಾಯಿ ಭೀತಿಯಿಂದ ಕರಗಿ ಹೋಗುತ್ತಿದ್ದಾರ. ಜೋಯಿಸರು ಕೋಪಜ್ವಾಲೆಯಲ್ಲಿ ದಗ್ಧರಾಗಿ ದ್ದಾರೆ. ಬೂದಿಯು ಮಾತ್ರ ಇನ್ನೂ ಆಗಿಲ್ಲ ಬಾಕಿಯವರು ಚಂಚಲ ರಾಗಿದ್ದಾರೆ, ಆತುರರಾಗಿದ್ದಾರೆ. ಮತ್ತೆರಡು ನಿಮಿಷ. ಗುಂಪಿನಲ್ಲಿ ಯಾರೋ "ಭಯ್ಯ, ಏನಯ್ಯ ಹೀಗೆ ಮಾಡುತ್ತೀಯೆ?" ಅಂದರು. ಜೋಯಿಸರು "ಹೋಗಯ್ಯ. ಇಷ್ಟು ತಡ ಆದದ್ದೇ ಸಾಕು" ಅಂದರು. ಭಯ್ಯನು ನೀರಿನ ಕಡೆಗೆ ತಿರುಗಿದನು. ಒಂದು ಹೆಜ್ಜೆ ಇಟ್ಟನು. ಆದರೆ

ಅವಿನಾಶನು ಮತ್ತೆ ಚೀರಿಟ್ಟನು. ಭಯ್ಯನು ಇನ್ನೊಂದು ಹೆಜ್ಜೆ ಹಾಕ ಮಸಿದ್ದವನು ನಿಂತನು. ಅರೆಕ್ಷಣ ಸುಮ್ಮನಿದ್ದು ತೀರದ ಕಡೆಗೇ ತಿರುಗಿ ದನು. ಹರಿಬಾಬುಜಿ "ಇದೇಕೆ ಭಯ್ಯ?" ಅಂದರು. "ಹೋಗಲ ಗಣಪತಿಯನ್ನು ಬಿಡುವುದೇ ಬೇಡ ಯೋಚಿಸಿ ನೋಡಿದರೆ ಅವಿನಾಶನೇ ಸರಿ ಅಂತ ಕಾಣುತ್ತದೆ ಇದನ್ನು ತಂದದ್ದು ಪೂಜೆ ಮಾಡುವುದಕ್ಕೇ ಎಸೆಯುವುದಕ್ಕಲ್ಲ . ಹೌದು ಅದೇ ನ್ಯಾಯ" ಎಂದನು.

ಎಲ್ಲರಿಗೂ ದಿಗ್ಭ್ರಮೆಯಾಯಿತು ದೊಡ್ಡ ಗುಂಪಾಗಿದ್ದರೆ ಹಾಹಾ ಕಾರ ಹುಟ್ಟುತ್ತಿತೆಂದು ಬಣ್ಣಿಸಬಹುದಾಗಿದ್ದಿತು. ಜೋಯಿಸರು "ಪೂಜ ಗೀಜೆ ಎಲ್ಲವೂ ಆಯಿತಲ್ಲ. ಈಗ ಅದು ಬರಿಯ ಮಣ್ಣು ಮುದ್ದೆ" ಅಂದರು ಭಯ್ಯನು "ಹಾಗಾದರೆ ಈ ಮುದ್ದೆಯು ಸಮುದ್ರದಲ್ಲಿ ದ್ದರೇನು, ಮನೆಯಲ್ಲಿದ್ದರೇನು ? ಮನೆಯಲ್ಲಿದ್ದರೆ ಈ ಮಗುವಿಗಾದರೂ ಸಂತೋಷವಾಗುತ್ತದೆ" ಅಂದನು ಜೋಯಿಸರು ಇದೇನಯ್ಯ ಈ ವಿಚಿತ್ರ? ನೈವೇದ್ಯವನ್ನಿಟ್ಟು ಮಾಡಿ ನಾಯಿಗೆ ಇಟ್ಟ ಹಾಗೆ ಆಯಿತು. ಶುದ್ಧ ಅನಾಚಾರ!" ಅಂದರು. ಭಯ್ಯನು "ನ್ಯಾಯವಾಗಿದ್ದರೆ ಅನಾಚಾರವೂ ಗ್ರಾಹ್ಯವೇ" ಎಂದುಬಿಟ್ಟು ಗಣಪತಿಯನ್ನು ಬುಟ್ಟಿ ಯೊಳಗೇ ಇಟ್ಟುಬಿಟ್ಟನು ಕಾಕುಬಾಯಿಯು ಭಯಭೀತಿಗಳಿಂದ "ಭಯ್ಯ ಇದೇನಪ್ಪ ಅಪಶಕುನ? ನೀನು ಈ ಬಾರಿ ದೊಡ್ಡ ಪರೀಕ್ಷೆಗೆ ಕುಳಿತಿದ್ದೀಯೆ" ಅಂದರು. ಭಯ್ಯನು "ಕಾಕು, ನಿನ್ನ ಭಯವೇನು ಈ ಸಾರಿ ಫೇಲಾಗುತ್ತದೆ ಎಂದೆ? ಆದರೆ ಆಗಲಿ ಬಿಡು" ಅಂದುಬಿಟ್ಟು ಅವಿನಾಶನನ್ನು ಎತ್ತಿಕೊಂಡು "ಅವಿ, ಅಳಬೇಡ ನನ್ನ ಕಂದ, ನಿನ್ನ ಬಣ್ಣದ ಗಣಪತಿಯನ್ನು ಯಾವತ್ತೂ ನೀರಿಗೆಸೆಯುವುದೇ ಇಲ್ಲ. ದಿನವೂ ನಾವಿಬ್ಬರೂ ಅದನ್ನು ಪೂಜೆ ಮಾಡೋಣ" ಅಂದನು. ಮಗುವು "ಭಯ್ಯ, ಭಯ್ಯ" ಅನ್ನುತ್ತ ತನ್ನ ಪುಟ್ಟ ಕೈಗಳಿಂದ ಭಯ್ಯನ ಕೊರಳನ್ನು ಬಳಸಿಕೊಂಡು, ಅವನ ಹೆಗಲ ಮೇಲೆ ತಲೆಯಿಟ್ಟು ಸುಮ್ಮ ನಾದನು. ಇತರರೆಲ್ಲರೂ ತೆಪ್ಪಗಾದರು.

ಅಂದು ಭಯ್ಯನ ಬಣ್ಣದ ಗಣಪತಿಯನ್ನು ಪೂಜೆಗೆ ಮತ್ತೆ ತಂದ ಗುಂಪು ಶವದ ಮೆರವಣಿಗೆಯಂತಿದ್ದಿತೆಂದು ಮುಗಿಸಿದರೆ ಸಾಕು.

# ವ್ಯಭಿಚಾರ

ಪಿಲಾನಿಯು ಜಯಪುರದ ಬನಿಯ. ಸಣಕಲ ಶರೀರ ಮೂರು ದಿನ ಉಪವಾಸದ ಮೊಗ. ಅವನು ಸಣ್ಣ ಹಾಸಿಗೆಯನ್ನು ಕಂಕಳಿನಲ್ಲಿ ಇರಿಕಿಕೊಂಡು, ಒಂದು ಲೋಟ ಹಿಡಿದುಕೊಂಡು ತನ್ನ ಊರಿನಿಂದ ಮುಂಬಯಿಗೆ ಬಂದು ಆಗಲೇ ಬಹಳ ವರ್ಷಗಳಾದುವು ಈಗ ಅವನ ಮಳಿಗೆ ನಮ್ಮ ಮನೆ ಎದುರಿಗೆ ಎತ್ತರವಾದ ಜಗಲಿಯ ಮೇಲಿದೆ. ಹೆಸರಿಗೆ ಮಾತ್ರ ಕಿರಾಣಿ ಅಂಗಡಿ. ಆದರೆ ಅವನಲ್ಲಿ ಸಿಕ್ಕದ ಸಾಮಾನು ಅಪೂರ್ವ ಅನ್ನಿ. ಯುದ್ಧ ಮೊದಲಾದ ಮೇಲಂತೂ ಅವನ ವ್ಯಾಪಾರ ಬಹಳ ಭರಾಟೆಯಿಂದ ಸಾಗಿತು ಬೆಲೆಯ ಹತೋಟಿ ಜಾರಿಗೆ ಬಂದ ಮೇಲಂತೂ ಅವನ ಲಾಭವೂ ಹತೋಟಿಯನ್ನೇ ಮೀರಿತು. ಮಿತಿಯಾದ ಬೆಲೆಗೆ ಪದಾರ್ಥವನ್ನು ಮಾರಿದರೆ ಅವನ ಕುಲಕ್ಕೇ ಅತಿಯಾದ ಹಾನಿ ಎಂದು ಅವನ ನೀತಿ.

ಉದಾಹರಣೆಗೆ ಸಕ್ಕರೆಯನ್ನೇ ತಗದುಕೊಳ್ಳಿ ಇದರ ಮೇಲೆ ಸರ್ಕಾರದ ಕಟ್ಟು ಮೊದಲಾದಂದಿನಿಂದ ಇವನ ಬಳಿಯಲ್ಲಿ ಸಕ್ಕರೆಯ ಸರಕು ಬೆಳೆಯುವುದೂ ಮೊದಲಾಯಿತು. ಸರಕಾರಿ ಸಕ್ಕರೆ ಸಾಲದೆ ಇದ್ದ—ಯಾರಿಗೆ ತಾನೆ ಸಾಕು?—ಸುತ್ತುಮುತ್ತಿನವರಿಗೆಲ್ಲ ಪಿಲಾನಿ ಹತ್ತಿರ ಸಕ್ಕರೆಗೆ ಬರವಿಲ್ಲ ಅನ್ನುವುದು ಗೊತ್ತು. ನೀವು ಹೋಗಿ ಮೊದಲು ಕೇಳಿದಾಗ ಅವನು 'ಇಲ್ಲ' ಅಂತಲೇ ಹೇಳುವುದು. ಹುಂ. ಸಕ್ಕರೆ ಸರಕಾರದ ಅಂಗಡಿಯಲ್ಲಿಲ್ಲದೆ ಬೇರೆ ಎಲ್ಲಿ ಸಿಕ್ಕಬೇಕು? ಆದರೆ ನೀವು ಕೊಂಚ ನಿಂತು, 'ನೋಡಿ, ನನಗೆ ಬಹಳ ಅಗತ್ಯವಿದೆ; ಬೆಲೆಯ ಮುಖ ನೋಡುವುದಿಲ್ಲ. ಏನಾದರೂ ಅಷ್ಟು ಇಷ್ಟು ಉಳಿದಿದ್ದರೆ ಕೊಂಚ ನೋಡಿ' ಎಂದು ಹೇಳಿದರೆ, ಪಿಲಾನಿ ಮಾರ್ವಾಡಿಗೆ ನೀವು ತಂಟಿಕೋರರಲ್ಲ, ಸಾಧುವಾದ ಬಲಿ ಎಂದು ಕಂಡುಬಂದರೆ 'ಹಾಗೇ? ನೋಡುತ್ತೇನೆ. ಏನಾದರೂ ಇದ್ದರೆ ನಿಮಗೆ ಕೊಟ್ಟುಬಿಡುತ್ತೇನೆ. ಆದರೆ ಬೆಲೆ ಮಾತ್ರ ಪೌಂಡಿಗೆ ಹತ್ತಾಣೆ ಆಗುತ್ತದೆ' ಅನ್ನುವನು. ನೀವು ಬೆಚ್ಚಿ 'ಏನು ಆರಾಣೆಯಿಂದ....' ಎನ್ನುವಾಗಲೇ ಅವನು ಮಧ್ಯೆ ಬಾಯಿಹಾಕಿ

"ಆ ಹತೋಟಿ ಮಾತು ಬಿಡಿ ಈಗ ಸರಕನ್ನು ಜಮಾಯಿಸಬೇಕಾದ ಹತ್ತಾಣೆ ನಾನೇ ಕೊಡಬೇಕು, ಛಾಯಿ, ಇದನ್ನು ಮಾರಿ ನನಗೆ ಒಂದು ಬಿಡಿಕಾಸೂ ಲಾಭವಿಲ್ಲ" ಅನ್ನುವನು. ನೀವು ಕೊಂಚ ಮಿಸಿಮಿ ಮಾಡುವಾಗ ಅವನು ಶಾಂತವಾಗಿ ಕುಳಿತಿದ್ದು, ಕಡೆಗೆ ನಿಮಗೇ ನಾಕಾ ಸ್ತೋತ್ರ ನಿಟ್ಟುಸಿರನ್ನು ಬಿಟ್ಟು, 'ಹುಂ ಹೋಗಲಿ. ಕೊಡಿ ಒಂದು ಪೌಂಡು ನಾಳೆ ಹಬ್ಬ. ಮಿರಾಯಿ ಮಾಡದೇ ಇದ್ದರೆ ಆಗುತ್ತದೆಯು' ಅಂದರ ಅವನು ನಿಮ್ಮ ಮಾತಿನ ಉತ್ತರಾರ್ಧಕ್ಕೆ ಗಮನಕೊಡದೆ ಒಳಗೆ ಹೋಗಿ ಒಂದು ಪೊಟ್ಟ ತಂದು, "ಇಗೊ, ನನ್ನಲ್ಲಿ ಇಷ್ಟವೇ ಇಷ್ಟು, ಬಳಿದು ಕೊಟ್ಟಿದ್ದೇನೆ" ಅಂದು, ಕೂಟ್ಟು ನಿಮ್ಮ ರೂಪಾಯಿ ನೋಟನು ತೆಗೆದುಕೊಂಡು. ನೀವೇನಾದರೂ ಅಲ್ಪ ಸ್ವಲ್ಪ ರಿಯಾಯಿತಿಗೆ ಆಸೆಪಡುತ್ತಿದ್ದರೆ ನಿರಾಶೆಮಾಡಿ, ಸರಿಯಾಗಿ ಆರಾಣೆ ಚಿಲ್ಲರೆಯನ್ನು ಎಣಿಸಿ ಕಟುಕ ಹೃದಯದಿಂದ ಕೊಟ್ಟುಬಿಡುವನು

ಒಂದು ದಿನ ಇದ್ದಕ್ಕೆ ಇದ್ದ ಹಾಗೆಯೇ—ನಮ್ಮ ದೃಷ್ಟಿಯಿಂದ—ಕೊಬ್ಬರಿಎಣ್ಣೆಯ ಬೆಲೆಗೆ ಹತೋಟಿ ಬಂದಿತು. ಸರಿ, ಆ ದಿನದಿಂದ ಯಾವ ಅಂಗಡಿಯಲ್ಲೂ ಎಣ್ಣೆಯೇ ಇಲ್ಲ—ನಮಗಾಗಿ. ವಾರದ ಮೇಲೆ ವಾರ ಕಳೆಯಿತು. ಮನೆಯಲ್ಲಿ ಇದ್ದ ಎಣ್ಣೆಯೂ ತೀರಿತು. 'ಟಾಂಕೋ ಮೊದಲಾದ ಎಣ್ಣೆಗಳೂ ಮಾಯ. ಅವು ಇದ್ದರೆ ತಾನೆ ಅವನ್ನು ಕೊಂಡು ಪೂರಯಿಸಬಹುದೊ ನಾವು' ಅಂತು ತಲೆಗೆ ಒಳ್ಳೆಣ್ಣೆಯನ್ನು ಹಚ್ಚಿಕೊಳ್ಳುವ ಗತಿ ಒರುತ್ತಿತ್ತು. ಸರಿ, ಈ ಪಾಡು ಬರುವ ಹಿಂದಿನ ದಿನ ನಾನು ಹೋಗಿ ಪಿಲಾನಿಯನ್ನು ಮರಹೊಕ್ಕೆ. ರೂಢಿಯ ಪ್ರಕಾರ ಮೊದಲನೆಯ ಮಾತುಕತೆಯಾದ ಮೇಲೆ ಪಿಲಾನಿಯಲ್ಲಿ ಕೊಂಚವೇ—ನನಗೆ ಬೇಕಾದಷ್ಟೇ ತಾನೆ—ಕೊಬ್ಬರಿ ಎಣ್ಣೆ ಇರುವುದಾಗಿಯೂ, ಆದರೆ ಬೆಲೆಯು ಹತೋಟಿಯ ಹಿಂದಿನ ದಿನ ಇದ್ದುದಕ್ಕೆ ಎರಡರಷ್ಟು ಎಂದೂ ಗೊತ್ತಾಯಿತು. ಇದನ್ನು ಕೇಳಿದೊಡನೆ ನನಗೆ ಉಂಟಾದ ಕೋಪವನ್ನು ನುಂಗಿಕೊಂಡು ಒಂದು ಪೌಂಡು ಎಣ್ಣೆಯನ್ನು ಕೊಂಡು ಎರಡು ರೂಪಾಯಿ ಕೊಟ್ಟು ಪಿಲಾನಿಯನ್ನು ಮನಸ್ಸಿನಲ್ಲಿ—ಅಂಗಡಿಯನ್ನು ಬಿಟ್ಟಮೇಲೆ ಗಟ್ಟಿಯಾಗಿ—ಶಪಿಸುತ್ತ ಮನೆಗೆ ಬಂದೆ. ಮಾರನೆಯ ದಿನ

ಸಮ್ಮವಳು ಅದನ್ನು ತಲೆಗೆ ಹಚ್ಚಿಕೊಳ್ಳುತ್ತಾ 'ಇದೇನು ಕೊಬ್ಬರಿ ಎಣ್ಣೆಯೋ ಒಳ್ಳೆಣ್ಣೆಯೋ ತಂದದ್ದು? ಒಳ್ಳೆಣ್ಣೆ ಮನೆಯಲ್ಲೇ ಇತ್ತು' ಎಂದಳು ಆಗ ನನ್ನಲ್ಲಿ ಅಡಗಿದ್ದ ಹೆಚ್ಚುತ್ತಿದ್ದ ಸಿಟ್ಟನ್ನು ಎಲ್ಲಿ ತೋರಿಸ ಬೇಕು? 'ಏನೋ ಎಂತಹದೋ ಸುಮ್ಮನೆ ತಲೆಗೆ ಚಟ್ಟಿಕೊ' ಅಂದು ಗದರಿಸಿದೆ.

ಈ ಮಾದರಿಯ ವ್ಯಾಪಾರದಿಂದ ಪಿಲಾಸಿಯು ಅಷ್ಟು ಇಷ್ಟು ದುಡ್ಡನ್ನು ಕೂಡಿಹಾಕಿರಬೇಕೆಂಬುದನ್ನು ಸುಲಭವಾಗಿ ಊಹಿಸಬಹುದು. ಹಾಗೆಯೇ ಇವನು ಸುಳ್ಳು ಲೆಕ್ಕದ ಮೂಲಕ ವರಮಾನ ತೆರಿಗೆಯಿಂದ ತಪ್ಪಿಸಿಕೊಂಡಿದ್ದನೆಂದೂ ಹೇಳಬಹುದು. ಇದಕ್ಕೆ ಸರಿಯಾಗಿ ಇವನು ಬ್ಯಾಂಕಿನಲ್ಲಿ ಕಳ್ಳಹಣವನ್ನು ಇಟ್ಟಿರಲಿಲ್ಲವೆಂದೂ ತಿಳಿದೇ ತಿಳಿಯುತ್ತದೆ. ಅಲ್ಲದೆ ಇವನಿಗೆ ದಿನದಿನವೂ ಏರಿ ತಗ್ಗುವ ಚಿನ್ನ ಬೆಳ್ಳಿಗಳನ್ನು ಗುಡ್ಡೆ ಹಾಕಿಕೊಳ್ಳುವ ಧೈರ್ಯವಿರಲಿಲ್ಲವೆಂದರ ಇವನ ಗಳಿಕೆ ಎಲ್ಲವೂ ಅವನು ಹಾಗೂ ಹೀಗೂ ನಂಬಿಕೊಂಡಿದ್ದ ಸರಕಾರದ ಹಣದ ರೂಪದಲ್ಲೇ ಇವನ ಬಳಿ ಇದ್ದಿತೆಂದು ಹೇಳಬೇಕಾಗಿಲ್ಲ. ಇನ್ನು ಸ್ಪಷ್ಟವಾಗಿ ಹೇಳುವುದಾದರೆ ಅವನು ಕೂಡಿಟ್ಟುಕೊಂಡಿದ್ದುದು ಸಾವಿರ ರೂಪಾಯಿ ಮೌಲ್ಯದ ಇಪ್ಪತ್ತೈದು ನೋಟುಗಳನ್ನು

ಹೀಗಿದ್ದು ಜನವರಿ ಹನ್ನೆರಡನೆಯ ತಾರೀಕಿನ ದಿನದ ಬೆಳಗ್ಗೆ ಪಿಲಾಸಿಯು ಮೆಲ್ಲಗೆ ಗುಜರಾತಿ ಪತ್ರಿಕೆಯನ್ನು ತೆಗೆದಾಗ 'Demonitsation' ಶಾಸನದ ಬರಸಿಡಿಲು ಕಳ್ಳವ್ಯಾಪಾರಿ ಲಂಚಕೋರರಿಗೆಲ್ಲರಿಗೂ ಎಡಿದಂತೆ ಅವನಿಗೂ ಒಮ್ಮೆಲೇ ಬಡಿಯಿತು 'ಐನೂರು ರೂಪಾಯಿ ಯಿಂದ ಮೇಲಿನ ಮೌಲ್ಯದ ನೋಟುಗಳೆಲ್ಲ ರದ್ದು' ಎಂದಿದ್ದ ದೊಡ್ಡ ಅಕ್ಷರದ ತಲೆಬರಹವು ಕಣ್ಣಿಗೆ ಬಿದ್ದೊಡನೆ ಪಿಲಾಸಿಗೆ ತಲೆತಿರುಗಿ ಕಣ್ಣು ಕತ್ತಲೆ ಇಟ್ಟಿತು. ಎದೆ ದಸಕ್ಕೆಂದಿತು. ಉಸಿರು ಮೇಲೆ ಬಂದಿತು. ಕೈನಡುಗಿ ಪತ್ರಿಕೆಯು ಬಿದ್ದುಹೋಯಿತು ಹಣೆಯ ಮೇಲೆ ಬೆವರು ಹನಿಗಟ್ಟಿತು. "ಅಯ್ಯೋ ಕೆಟ್ಟೆ! ಕೆಟ್ಟೆ!" ಅಂದುಕೊಂಡ ಬಡ ಪಿಲಾಸಿ. ತಲೆಯನ್ನು ನಡಗುವ ಎರಡು ಕೈಗಳಿಂದಲೂ ಚಚ್ಚಿಕೊಂಡ. 'ಮರುಗಿದನು ಕಲ್ಮರಂ ಕರಗುವಂತೆ.' ಮತ್ತೆ ಪತ್ರಿಕೆಯನ್ನು ತೆಗೆದು

ಕೊಂಡು ಬುದ್ಧಿಯನ್ನು ಸ್ಥಿಮಿತಕ್ಕೆ ತಂದುಕೊಂಡು ಓದುವುದಕ್ಕೆ ಕೊಂಚ ಕಾಲವೇ ಹಿಡಿಯಿತು. ಆದರೆ ವಿಷಯದ ವಿವರಗಳನ್ನು ಪೂರ್ತಿಯಾಗಿ ಓದಿದಾಗ ಅವನ ಉಸಿರು ಕಟ್ಟಿದ್ದುದು ಸ್ವಲ್ಪ ಬಿಟ್ಟಿತು. ಹುಂ, ಹಣೆಯ ಬರಹ ತೀರ ಅಷ್ಟು ಕೆಟ್ಟುಹೋಗಿರಲಿಲ್ಲ. ನೋಟುಗಳನ್ನು ಬದಲಾಯಿ ಸಲು ಕೊಂಚ ಕಾಲ ಕೊಟ್ಟಿದ್ದರು. ಆದರೆ . . ಆದರೆ ಈ ಬದಲಾವಣೆ ಯಾಗಬೇಕಾದರೆ ಸಂಪಾದನೆಗೆ ಸಕಾರಣ ಕೊಡಬೇಕು! ಪ್ರಶ್ನೆಗಳಿಗೆ ಉತ್ತರ ಕೊಡಬೇಕು! ಓ, ಇದಕ್ಕೆ ಏನು ಗತಿ? ತಾನು ಏನನ್ನು ತಾನೇ ಹೇಳಬಲ್ಲ? ಇನ್ನು ತೆರಿಗೆ ವಿಚಾರ ಬೇರೆ—ಶಿವ! ಶಿವ! ಇವಕ್ಕೆಲ್ಲಾ ಏನು ಉಪಾಯ? ಕಡೆಗೂ ದುಡ್ಡು ಹೋದಂತೆಯೋ? ಇಲ್ಲ, ಇದನ್ನು ಉಳಿಸಿಕೊಳ್ಳಲು ಹೋಗಿ ಬಂದಿಖಾನೆಗೆ ಹೋಗುವುದೋ? ಈ ಕಷ್ಟ ದಿಂದ ಪಾರಾಗಿ ಹಣವನ್ನು ಉಳಿಸಿಕೊಳ್ಳುವುದು ಹೇಗೆ? ಹೇಗೆ ನಿಜವಾಗಿ?

ಪಿಲಾಸಿಯು ತಲೆಸಿಡಿಯುವಷ್ಟು ಯೋಚಿಸಿದ. ಪ್ರಯೋಜನ ವಾಗಲಿಲ್ಲ. ಆ ದಿನವಂತೂ ರಿಸರ್ವ್ ಬ್ಯಾಂಕಿಗೆ ರಜವಾಗಿ ಕಾರ್ಯದ ಆತುರವಿರಲಿಲ್ಲ. ಪಿಲಾಸಿಯು ಅಂಗಡಿಯನ್ನು ಮುಚ್ಚಿ ಹಾಸಿಗೆಯ ಮೇಲೆ ಮಲಗಿಕೊಂಡು ಬೆಂಕಿಯಲ್ಲಿ ಬಿದ್ದ ಹುಳುವಿನಂತೆ ಒದ್ದಾಡಿದ. ಊಟವು ಒಂದು ತುತ್ತೂ ಒಳಹೋಗಲಿಲ್ಲ. ಮಧ್ಯಾಹ್ನ ರಾತ್ರಿಯಲ್ಲಿ ಜ್ವರ ಬಂದವನಂತೆ ನರಳಿದ. ಪಿಲಾಸಿಯ ಹೆಂಡತಿ ಶಾಂತಾಬಾಯಿ ಇನ್ನಿಲ್ಲದ ಹಾಗೆ ಕಾರಣವನ್ನು ಬೇಡಿದಳು. ಆದರೆ ಪಿಲಾಸಿಯು ಮಾತ್ರ ಏನನ್ನೂ ಹೇಳಲಿಲ್ಲ. ನರಳುವುದನ್ನು ಬಿಟ್ಟು ಸುಮ್ಮನಾಗಲೂ ಇಲ್ಲ. ಮರುದಿನವಂತೂ ಅವನ ಪಾಡು ಹೇಳುವಂತಿರಲಿಲ್ಲ. ಆ ದಿನ ದುಡ್ಡು ಸಿಕ್ಕುವ ಸಂಭವವುಂಟು. ಆದರೆ ಇವನು ಅದನ್ನು ಉಪಯೋಗಿಸಿ ಕೊಳ್ಳುವಂತಿರಲಿಲ್ಲ. ಸುಮ್ಮನೆ ದಿಕ್ಕುತೋಚದೆ ಪಿಲಿಮಿಲಿಗುಟ್ಟಿದ. ಆ ದಿನವೂ ಉಪವಾಸ. ನಿದ್ದೆಯಿಲ್ಲದೆ ಕಣ್ಣುಗಳು ಗುಳಿಗಿಳಿದಿದ್ದುವು. ಪಿಲಾಸಿಯು ಈ ಪರಿಸ್ಥಿತಿಯಲ್ಲಿದ್ದುದನ್ನು ಶಾಂತಾಬಾಯಿಯು ಇಲ್ಲಿಯ ವರೆಗೆ ಎಂದೂ ಕಂಡಿರಲಿಲ್ಲ. ಅವಳಿಗೆ ಗಾಬರಿಯಾಯಿತು. ಮರುದಿನ ರಾತ್ರಿಯ ಹೊತ್ತಿಗೆ ಅವಳು ನಿರ್ಧರಿಸಿ, "ನಿಮಗೆ ಏನೋ ದೊಡ್ಡ

ಜಡ್ಡು ಹಿಡಿದಿದೆ. ವೈದ್ಯರನ್ನು ಬರಮಾಡುತ್ತೇನೆ'' ಎಂದು ಗಂಡನಿಗೆ ತಿಳಿಸಿದಳು. ಅವನು "ಬೇಡ'' ಎಂದ. ಅವಳು ಪಟ್ಟನ್ನು ಬಿಡಲಿಲ್ಲ. ಅವನು ವಿಷಯವನ್ನು ಬಿಡಿಸಲಿಲ್ಲ. ಕೊನೆಗೆ ಅವಳನ್ನು ತಡೆಯುವ ದಾರಿಯನ್ನು ಕಾಣದೆ ಪಿಲಾಸಿಯು "ನನ್ನ ರೋಗಕ್ಕೆ ವೈದ್ಯರ ಹತ್ತಿರ ಮದ್ದಿಲ್ಲ'' ಎಂದು ಕ್ಷೀಣಸ್ವರದಿಂದ ಹೇಳಿದ. ಅವಳು ಸಿಟ್ಟುಗೊಂಡು "ರೋಗವನ್ನು ವೈದ್ಯರಲ್ಲದ ಇನ್ನೇನು ಲಾಯರು ವಾಸಿಮಾಡುತ್ತಾರೆಯೋ?'' ಎಂದು ಕೇಳಿದಳು. ಪಿಲಾಸಿಯು "ಆ ಏನೆಂದೆ? ಲಾಯರೆ?'' ಅಂದ. ಅವನ ಮನಸ್ಸಿನ ಕಾರ್ಮುಗಿಲಿನಲ್ಲಿ ಮಿಂಚೊಂದು ಹೊಳೆಯಿತು. ಹುಂ, ತನ್ನ ವ್ಯಾಪಾರದ ಬುದ್ಧಿಯು ನಿಸ್ಸಹಾಯವಾದ ಕಡೆ ಲಾಯರು ಕೊಂಚ ನೆರವಾಗಬಹುದೇನೊ. ನಿಜ, ಇದು ಪರೀಕ್ಷಿಸತಕ್ಕದ್ದೆ. ಹೀಗೆ ಹೊಳೆದ ಮೇಲೆ ಪಿಲಾಸಿಯು ಕೊಂಚ ಸಮಾಧಾನ ತಂದುಕೊಂಡು, ಶಾಂತಾಬಾಯಿಗೆ "ನೀನು ಹೇಳಿದುದು ಒಳ್ಳೆಯದಾಯಿತು. ನಾಳೆ ಲಾಯರನ್ನು ನೋಡುತ್ತೇನೆ'' ಅಂದ. ಶಾಂತಾಬಾಯಿ "ನಿಮಗೇನು ಹುಚ್ಚು ಹಿಡಿದಿರಬೇಕು. ಲಾಯರು ಏನನ್ನು ಮಾಡಬಲ್ಲರು? ಅವರ ಬಳಿ ಜ್ವರದ ಗುಳಿಗೆ ಇರುತ್ತದೆಯೋ?'' ಅಂದಳು. ಪಿಲಾಸಿಯು "ಹುಂ. ನನ್ನ ಜ್ವರಕ್ಕೆ ಮಾತ್ರ ಸಿಕ್ಕರೆ ಅವರಲ್ಲಿಯೆ'' ಅಂದ. "ಹಾಗಂದರೆ?'' ಎಂದು ಶಾಂತಾಬಾಯಿ ಬಲವಾಗಿ ಗಂಟುಬಿದ್ದಳು. ಪಿಲಾಸಿಯು ಒಂದೇ ಮಾತಿನಲ್ಲಿ "ಲೇ, ಹುಚ್ಚಿ, ಈಗ ನಾನು ದಿವಾಳಿ ಆಗುವ ಗತಿಗೆ ಬಂದು ಬಿಟ್ಟಿದ್ದೇನೆ—ಈ ಹೊಸ ಹಣದ ಶಾಸನದಿಂದ'' ಅಂದ. ಶಾಂತಾಬಾಯಿ "ಹಾಗೇ?'' ಅಂದು ಅವನ ಗುಟ್ಟನ್ನೆಲ್ಲ ಮೆಲ್ಲಗೆ ಹೊರಗೆಳೆದಳು. ಆಗ ಇಬ್ಬರೂ ಸೇರಿ ವಿಷಯವನ್ನು ಕಡೆದರು. ಹೇಗೆ ಹೇಗೆ ಎಷ್ಟು ಎಷ್ಟು ಕಡೆದರೂ ನಿರಾಸೆಯ ಹಾಲಾಹಲವೇ ಹುಟ್ಟುತ್ತಿತ್ತು. ಆ ದಿನ ಗಂಡನೊಂದಿಗೆ ಹೆಂಡತಿಗೂ ನಿದ್ರಾಭಂಗವಾಯಿತು. ಒಟ್ಟಿನಲ್ಲಿ ಲಾಯರ ಬಳಿಗೆ ಹೋಗುವುದೇನೋ ನಿರ್ಧಾರವಾಗಿದ್ದಂತಿದ್ದಿತು. ಈ ಬಗ್ಗೆ ಪಿಲಾಸಿಯ ಪೇಚಾಟವೆಂದರೆ ಲಾಯರು ಬಹಳ ದುಡ್ಡನ್ನು ಎಳೆದು ಬಿಡುವರೆಂಬುದು. ಆದರೆ ಅದಕ್ಕೆ ಉಪಾಯವಿಲ್ಲವೆಂದು ಶಾಂತಾಬಾಯಿಯ ವಾದ. ಅಂತೂ ಕಡೆಗೆ

ಪಿಲಾಸಿಯು ತಮ್ಮ ಊರಿನವರೇ ಆದ ಶ್ರೀ "ಇಚ್ಛಾಪೂರಯ" ಅವರಲ್ಲಿ ಹೋದರೆ ಆದಷ್ಟು ಕಡಿಮೆಯ ಖರ್ಚಿನಲ್ಲಿ ಕೆಲಸವು ಸಾಗಬಹುದೆಂದು ಸಮಾಧಾನ ತಂದುಕೊಂಡು ಬೆಳಗಾಗುವುದನ್ನ ಕಾಯುತ್ತಿದ್ದ.

ಪಿಲಾಸಿಯು ಇಚ್ಛಾಪೂರಯರನ್ನು ಕಂಡಾಗ ಆ ದಪ್ಪ ವಕೀಲರು ತಮ್ಮ ವಿಶಾಲವಾದ ಕೋಣೆಯಲ್ಲಿ ಮೇಜಿನಮೇಲೆ ದಪ್ಪ ದಪ್ಪ ಪುಸ್ತಕಗಳನ್ನು ಮುಂದೆ ಬಿಚ್ಚಿಕೊಂಡು, ದಪ್ಪ ಕನ್ನಡಕವನ್ನು ಹಾಕಿಕೊಂಡು ಓದಿನಲ್ಲಿ ಮಗ್ನರಾಗಿದ್ದರು. ಒಂದೆಯೇ ಇಬ್ಬರಿಗೂ ಪರಿಚಯವಿದ್ದುದರಿಂದ, ವಕೀಲರು ಪಿಲಾಸಿಯನ್ನು ಗಮನಕ್ಕೆ ತಂದುಕೊಂಡು ಕೂಡಲೆ ಹೇಳಿದರು. ಅವರ ಕುಶಲ ಪ್ರಶ್ನೆಗಳಾದ ತರುವಾಯ ಪಿಲಾಸಿಯು "ಎಲ್ಲವೂ ತಮ್ಮ ದಯ" ಎಂದು ಹೇಳಿದ ಮೇಲೆ ವಕೀಲರು ತುಟಿಯನ್ನು ಚೊಕ್ಕಟಮಾಡಿ ನಗುತ್ತ ಪಿಲಾಸಿಯು ಬಂದ ಕಾರಣವನ್ನು ಊಹಿಸಿದಂತೆ "ಹುಂ, ಏನು ತಾವು ಇಲ್ಲಿಗೆ ಬಂದದ್ದು?" ಎಂದು ಕೇಳಿದರು

"ಕೊಂಚ ಕಷ್ಟಕ್ಕೆ ಸಿಕ್ಕಿದ್ದೇನೆ"

"ಓ, ಏನು ಈ ಹಣದ ಶಾಸನದ ಬಗ್ಗೆಯೋ ಹೇಗೆ?" ವಕೀಲರು ಸ್ಪಷ್ಟವಾಗಿಯೇ ನಕ್ಕರು

"ತಮಗೆ ಹೇಗೆ ತಿಳಿಯಿತು?"

"ಅಹಹ! ಹೇಗೆ? ಮೋಡ ಕಟ್ಟಿರುವಾಗ ಮಳೆ ಬರಬಹುದಲ್ಲವೆ?"

"ತಾವು ಸರಿಯಾಗಿ ಊಹಿಸಿದಿರಿ."

"ಹನ್ನೆರಡನೆಯ ತಾರೀಖಿನಿಂದ ಇದು ಆರನೇ ಕೇಸು ನನಗೆ. ತಿಳಿಯಿತೆ? ಎಲ್ಲವೂ ಇದೇ ಸಂದರ್ಭದ್ದೇ. ನಾನು ಪುಸ್ತಕವನ್ನೆಲ್ಲ ತಿರುವಿಹಾಕಿ ಏನಾದರೂ ಸರಿಯಾದ ಉಪಾಯ ಕಂಡುಹಿಡಿಯಬೇಕು ಅಂತ ನೋಡುತಿದ್ದೇನೆ. ಒಬ್ಬರ ಪರವಾಗಿ ಸರಕಾರದ ಮೇಲೆ ಕೇಸನ್ನು ಹೂಡಿಸಿದ್ದೇನೆ. ಅದಕ್ಕಿಂತಲೂ ಸುಲಭವಾದ ದಾರಿ ಬೇರೆ ಒಂದು ಇದ್ದ ಹಾಗೆ ಕಾಣುತ್ತದೆ."

"ತಾವು ಅಷ್ಟು ಉಪಕಾರ ಮಾಡಿದರೆ!"

"ಇದರಲ್ಲಿಲ್ಲ ಉಪಕಾರ ಏನು? ನನ್ನ ಸಲಹೆಯನ್ನೇನು ಬಿಟ್ಟಿ ತಗೆದುಕೊಳ್ಳುತ್ತೀರ?"

"ಹಾಗಲ್ಲ. ನಾನೇನೋ ಬಡವನೆ."

"ಹುಂ. ಯಾರಲ್ಲ—ಈಗ? ಈಗ ಯುದ್ಧಕಾಲದಲ್ಲಿ ಪದಾರ್ಥಗಳ ಬೆಲೆ ಆಕಾಶಕ್ಕೇರಿದಾಗ?"

"ನಿಜ."

"ಸರಿ, ತಮ್ಮದೆಷ್ಟು ದುಡ್ಡು ಸಿಕ್ಕಿಹಾಕಿಕೊಂಡಿದೆ?"

"ಇಪ್ಪತ್ತೈದು ನೋಟುಗಳು"

"ಏನು ಐನೂರರದ್ದೋ?"

"ಇಲ್ಲ. ಸಾವಿರದ್ದು."

"ಹುಂ!"

ವಕೀಲರು ಯೋಚಿಸಿದರು. ಪಿಲಾನಿಯೂ ಒದ್ದಾಡುತ್ತಿದ್ದ. ಎರಡು ನಿಮಿಷಗಳ ತರುವಾಯ ವಕೀಲರು ಪಿಲಾನಿಯನ್ನು ನೋಡಿ.

"ನನ್ನ ಫೀ ಸೇಕಡ ಹತ್ತು" ಅಂದರು.

ಪಿಲಾನಿಯ ಎದೆ ಜಗ್ಗೆಂದಿತು. 'ಅಬ್ಬಬ್ಬ, ಎರಡು ಸಾವಿರದ ಐನೂರು ರೂಪಾಯಿ! ಅಯ್ಯೋ, ಈ ವಕ್ಲಕ್ಕೆ ಹಾಳು ತರಿಗೆಯನ್ನೇ ಕೊಡಬಹುದಾಗಿದ್ದಿತೋ ಏನೋ. ಇವರು ತನ್ನ ಊರಿನವರು ಎಂದು ಬಂದರೆ ಇದೇನು ಹೀಗೆ ಸುಲಿಯುತ್ತಾರೆ? ಬೇರೆ ದಾರಿಯೇ ಇಲ್ಲವೆ?'

ಈ ಬಾರಿ ಪಿಲಾನಿಯು ಚಿಂತಾಸಕ್ತನಾದ, ತನ್ನ ಸರದಿಯಲ್ಲಿ. ಇದನ್ನು ಕಂಡು ವಕೀಲರು ಮತ್ತೆ ಪುಸ್ತಕಗಳ ಕಡೆಗೆ ತಿರುಗಿದರು. ಪಿಲಾನಿಯು ಮನಸ್ಸಿನಲ್ಲೇ ಕಸರತ್ತು ಮಾಡಿ ದಣಿದು, ವಕೀಲರ ಕಡೆಗೆ ದೈನ್ಯದೃಷ್ಟಿಯಿಂದ ನೋಡಿ ಫಲ ಪಡೆಯದೆ,

"ಇದು ನಾನು ಬಹು ಕಷ್ಟಪಟ್ಟು ಸಂಪಾದಿಸಿದ ಆಸ್ತಿ" ಅಂದ.

"ಯಾರು ಇಲ್ಲ ಅಂದರು? ಸರಿ."

"ಅನ್ಯಾಯದ್ದಲ್ಲ."

"ನನಗೆ ಗೊತ್ತಿಲ್ಲವೇ? ನೀವು ಹೇಳಬೇಕೆ?"

"ಏನೋ ಕೂಡಿಡುವ ರೀತಿಯಲ್ಲಿ ಮೋಸ ಹೊಂದಿದೆ ಅಷ್ಟೆ."

"ಹುಂ. ವಾಸ. ಹಾಗೂ ಆಗುತ್ತದೆ."

"ತಾವು ಅಲ್ಪಸ್ವಲ್ಪ ರಿಯಾಯಿತಿ.. "

"ಕ್ಷಮಿಸಬೇಕು. ಅದು ಮಾತ್ರ ಆಗುವುದಿಲ್ಲ. ಕಟ್ಟಳೆಗೆ ವಿರೋಧವಾಗಿ ನಡೆಯುವುದಲ್ಲ ಅದರಲ್ಲೂ ನೀವು ನಮ್ಮ ಊರಿನವರು ಅಂತ ನೇರವಾಗಿ ಕನಿಷ್ಠವಾದದ್ದನ್ನೇ ಹೇಳಿಬಿಟ್ಟೆ."

"ಯೋಗ್ಯವಾದ ಕಡೆ ಕೊಂಚ...."

"ನಿಜವಾಗಿ ಹೇಳುತ್ತೇನೆ. ಹೆಚ್ಚು ಮಾತಾಡಿ ಫಲವಿಲ್ಲ."

ಮತ್ತೆ ಒಂದೆರಡು ನಿಮಿಷ ನಿಶ್ಶಬ್ದ. ಪಿಲಾಸಿಯು ಮತ್ತೆ ಮನಸ್ಸಿನಲ್ಲಿ ಲಾಗಹಾಕಿ ನೋಡಿದ. ವಕೀಲರು 'ಜುಂ. ಜಪ್ಪಯ್ಯ' ಅನ್ನುವ ಹಾಗಿರಲಿಲ್ಲ. ಇವರು ತನ್ನ ಗುಟ್ಟನ್ನು ತಿಳಿದಿರುವರೆಂದೂ, ಆದುದರಿಂದ ಕಪಿ ಮುಷ್ಟಿಯನ್ನು ಬಿಡುವುದಿಲ್ಲವೆಂದೂ, ಎಲ್ಲ ಹಾಳು ವಕೀಲರೂ ಇದೇ ಗೋತ್ರದವರೆಂದೂ ಯೋಚಿಸಿ, ಪಿಲಾಸಿಯು ಕಲ್ಲೆದೆ ಮಾಡಿಕೊಂಡು ಕಣ್ಣನ್ನು ಮುಚ್ಚಿಕೊಂಡು "ಆಗಲಿ" ಅಂದುಬಿಟ್ಟ. ವಕೀಲರು ಹಣವನ್ನು ಕೇಳಿದರು. ಪಿಲಾಸಿಯು ಬೆದರಿ,

"ಏನು ಮುಂಗಡವಾಗಿ?" ಎಂದು ಕೇಳಿದ.

"ಹುಂ. ಅದೇ ನಮ್ಮ ಕಟ್ಟಳೆ."

"ನನ್ನಲ್ಲಿ ಆ ನೋಟುಗಳಲ್ಲದೆ ಮೂರು ಕಾಸೂ ಬೇರೆ ಇಲ್ಲ."

"ಹುಂ?"

"ಖಂಡಿತವಾಗಿ. ಹತ್ತು ಇಪ್ಪತ್ತು ರೂಪಾಯಿ ಚಿಲ್ಲರೆ ಇದ್ದರೆ ಏನು ಆದ ಹಾಗಾಯಿತು?"

ವಕೀಲರು ಬೆರಳುಗಳಿಂದ ಪುಸ್ತಕದ ಮೇಲೆ ತಬಲ ಬಡಿಯುತ್ತಾ ಯೋಚಿಸಿದರು. ಅವರು ಇದು 'ಆರನೆಯ ಕೇಸು' ಎಂದು ಹೇಳಿದ್ದರೂ ಅವರಿಗೆ ಬಂದಿದ್ದುದು ಇದೇ ಮೊದಲನೆಯದು. ಕಕ್ಷಿಯಲ್ಲಿ ಭರವಸೆಯನ್ನು ಹುಟ್ಟಿಸುವುದಕ್ಕಾಗಿ ಹಾಗೆ ಅಂದಿದ್ದರು. ವಕೀಲರಲ್ಲವೆ? ಹೀಗೆ ಸಿಕ್ಕಿದ ಕಕ್ಷಿಯನ್ನು ಬಿಟ್ಟುಕೊಡುವುದಕ್ಕೆ ಅವರಿಗೆ ಮನಸ್ಸು ಬಾರದು. ಅದರಲ್ಲೂ ಪುಷ್ಟಿಯಾದ 'ಫಿ'ಗೇ ಒಪ್ಪಿಸಿದ್ದರು. ಇಷ್ಟನ್ನೂ ಈಗಲೇ ಈತನು ತೆರುವ ಸ್ಥಿತಿಯಲ್ಲಿರಲಿಲ್ಲವೆಂದು ಅವರಿಗೆ ತಿಳಿದಿದ್ದಿತು. ಆದುದರಿಂದ ಅವರು

ಯೋಗಲಿ, ಇದರಲ್ಲಿ ಅರ್ಥವನ್ನಾದರೂ ..." ಎಂದು ಮೊದಲು ಮಾಡುವಾಗಲೇ ಪಿಲಾನಿಯು ವಿಷಯವು ತನಗೆ ಅನುಕೂಲವಾಗುತ್ತಿದ್ದ ಸುಳಿವನ್ನು ತಿಳಿದು "ನನ್ನಲ್ಲಿ ಏನೇನೂ ಇಲ್ಲ ದೇವರಾಣೆಗೆ ಕೈಗೆ ಹಣ ಬಂದೊಡನೆ ತಮಗೆ ಕೊಟ್ಟುಬಿಡುತ್ತೇನೆ, ಖಂಡಿತವಾಗಿ" ಅಂದ.

ವಕೀಲರು ಬಾಯಿತಪ್ಪಿ ಏಕೊ "ಹುಂ" ಅಂದು ಬಿಟ್ಟರು ಅಂದ ಮೇಲೆ ಅವರಿಗೇ ಆಶ್ಚರ್ಯವಾಯಿತು. ಮತ್ತೆ ಮಾತನ್ನು ಹಿಂದಕ್ಕೆ ತಗೆದುಕೊಳ್ಳಲಾರದೆ ಮುಂದಿನ ಮಾತುಕತೆ ನಡಸಿದರು.

"ಹುಂ, ನಿಮಗೆ 'ಫರಾಸು ರೋಡಿ'ನಲ್ಲಿ ಯಾರದ್ದಾದರೂ ಪರಿಚಯ ಉಂಟೆ?" ವಕೀಲರು ನಗುತ್ತ ಕೇಳಿದರು.

ಪಿಲಾನಿಗೆ ಅತ್ಯಾಶ್ಚರ್ಯವಾಯಿತು. ಅವನಿಗೆ 'ಫರಾಸು ರೋಡು' ಮುಂಬಯಿನಲ್ಲಿ ಸೂಳೆಯರಿಗ ಪ್ರಸಿದ್ಧಿ ಎನ್ನುವುದು ಗೊತ್ತಿದ್ದು, ವಕೀಲರ ಪ್ರಶ್ನೆ ಅರ್ಥವಾಯಿತು. ಆದರ ಅವನು ಈ ಗಡಿಬಿಡಿಗೆ ದೂರವಾಗಿ ಬಾಳಿದ ಪ್ರಾಣಿಯಾದುದರಿಂದ ಕೊಂಚ ಗಾಬರಿಯಿಂದ

"ಏ, ಇದೇನು ವಿಚಾರ?" ಎಂದ. ಮಾರುತ್ತರ ಕೊಟ್ಟ.

"ಅಲ್ಲ, ಕೇಳಿದೆ"

"ಅಲ್ಲಿಗೂ ನನಗೂ ಬಲು ದೂರ."

"ಬಲ್ಲೆ. ಆದರೆ ಈಗ ಹತ್ತಿರ ಹೋಗಬೇಕಾಗಬಹುದು."

"ಅದೇನು?"

"ಅದು ನನ್ನ ಗುಟ್ಟು—ಇನ್ನೂ ಇರಲಿ. ಇನ್ನೇನು ನಾನೇ ದಾರಿ ತೋರಿಸಬೇಕಾದ ಸಂದರ್ಭ ಅನ್ನಿ."

"ಹುಂ."

"ಸರಿ, ಹನ್ನೊಂದು ಗಂಟೆಯ ಹೊತ್ತಿಗೆ ಲೋಕಲ್ ನಿಲ್ದಾಣದಲ್ಲಿ ನನಗೆ ಭೇಟಿ ಆಗಬೇಕು. ಹನ್ನೊಂದು ಇಪ್ಪತ್ತಮೂರಕ್ಕೆ ಒಂದು 'ಫಾಸ್ಟು' ಇದೆ. ನಿಮ್ಮ ನೋಟನ್ನೆಲ್ಲ ತೆಗೆದುಕೊಂಡು ಬನ್ನಿ."

"ಆಗಲಿ" ಪಿಲಾನಿಯು ಹೊರಡಲನುವಾದ.

"ಹಾಗೇ ಎರಡು ಸೆಕೆಂಡು ಕ್ಲಾಸಿನ ಟಿಕೀಟನ್ನು ತೆಗೆದು ಕೊಂಡಿರಿ. ಸ್ವಲ್ಪ ದುಡ್ಡೂ ಕೈಯಲ್ಲಿರಲಿ" ಎಂದು ವಕೀಲರು

ಕಡೆಯು ಗೋಲಿಬಾರಿಸಿದರು. ಪಿಲಾಸಿಯು ಪೆಚ್ಚಾಗಿ ಹೊರಗೆ ಕಾಲಿಟ್ಟನು.

ರೈಲು ಗಾಡಿಯಲ್ಲಿ ಈ ಬಗ್ಗೆ ಮಾತುಕತೆಗಳಾಗಲಿಲ್ಲ. ಪಾಶ್ಚಾತ್ಯ ಉಡುಪಿನ ವಕೀಲರು ಸೆಕೆಂಡು ಕ್ಲಾಸಿನ ಮೆತ್ತೆಯ ಮೇಲೆ ಆರಾಮವಾಗಿ ಕುಳಿತು ಎದುರಿನ ಬೆಂಚಿನ ಮೇಲೆ ಎರಡು ಕಾಲನ್ನೂ ಎಸೆದು, ತಮ್ಮ 'ಪೈಪ'ನ್ನು ಹಚ್ಚಿಸಿ 'ಬುಸುಬುಸು' ಸೇದುತ್ತಿದ್ದರು. ಪಿಲಾಸಿಗೆ ಹೆಚ್ಚು ಪೆಚ್ಚದ ಹೊಗೆಯನ್ನೊಪ್ಪಿನ ಅಭ್ಯಾಸವಿರಲಿಲ್ಲ. ಆಗಾಗ್ಗೆ ಮಾತನಾಡಲು ಮೊದಲು ಮಾಡಿ ಪ್ರತ್ಯುತ್ತರಗಳು ಸರಿಯಾಗಿ ಬರದೆ ಇದ್ದುದರಿಂದ ಆಯಾಸ ಹೊಂದಿ ತಾನು ತಂದಿದ್ದ ಪತ್ರಿಕೆಯ ಕಡೆ ನೋಡುವಂತೆ ನಟಿಸುತ್ತ ಕಾಲಹಾಕುತ್ತಿದ್ದ. ರೈಲುಗಾಡಿಯನ್ನು ಬಿಟ್ಟು ಹೊರಗ ಬಂದೊಡನೆ ವಕೀಲರು 'ಟ್ಯಾಕ್ಸಿ'ಯನ್ನು ಗೊತ್ತುಮಾಡಬೇಕೆಂದು ಪಿಲಾಸಿಗೆ ಸೂಚನೆ ಇತ್ತರು. ಕಾಸು ಕಾಸಿಗೆ ಗಂಟು ಹಾಕುತ್ತ 'ಟ್ರಾಂ'ಗೂ ದುಡ್ಡನ್ನು ಕೊಡದೆ ಕಾಲನ್ನು ಸವೆಸುತ್ತಿದ್ದ ಮಾರವಾಡಿಯು ತನ್ನಲ್ಲಿಯೇ ಗೊಣಗಿಕೊಳ್ಳುತ್ತ ವಕೀಲರ ಅಪ್ಪಣೆಯನ್ನು ಪಾಲಿಸಿದ ಒಳಗೆ ಕುಳಿತಾಗ ಡ್ರೈವರನು "ಎಲ್ಲಿಗೆ?" ಎಂದು ಕೇಳಿದ. ವಕೀಲರು ಪಿಲಾಸಿಯನ್ನು ನೋಡಿ 'ಹೇಳಿ' ಅಂದರು ಬಡ ಪಿಲಾಸಿಯು ". . ರೋಡಿಗೆ!" ಅಂದ

ರೋಡಿಗೆ ಬಂದ ಮೇಲೆ ಡ್ರೈವರನು ಹಿಂತಿರುಗಿ ನೋಡಿದನು ವಕೀಲರು "ಇಲ್ಲೆ. ಇನ್ನೇನು ಸಿಕ್ಕಿತು ......ನಿಲ್ಲಿಸು ಅನ್ನಿ" ಎಂದು ಪಿಲಾಸಿಯನ್ನು ತಿವಿದರು. ಪಿಲಾಸಿಯು "ಸಾಕು ನಿಲ್ಲಿಸು" ಅಂದ ಡ್ರೈವರನು ಮುಗುಳುನಗೆ ನಗುತ್ತ ಬ್ರೇಕನ್ನು ಒತ್ತಿದನು. ಒಡನೆಯೇ ಮೋಟಾರು ದೊಡ್ಡ ಮಹಡಿಯ ಮನೆಯೊಂದರ ಮುಂದೆ ನಿಂತಿತು. ಪ್ರಯಾಣಿಕರು ಇಳಿದರು. ಮೋಟಾರಿನ ಮೀಟರು ಮೂರೇ ರೂಪಾಯಿಯನ್ನು ತೋರಿಸುತ್ತಿದ್ದರೂ ಡ್ರೈವರನು ಅದಕ್ಕೆ ತೃಪ್ತಿಪಡದೆ 'ಬಕ್ಷೀಸು' ಕೇಳಿದನು. ಪಿಲಾಸಿಯು ಹೆಚ್ಚೊಂದು ಕಾಸಿಗೂ ಒಪ್ಪಲಿಲ್ಲ. ಡ್ರೈವರನು ಹಲ್ಲು ಕಿರಿಯುವುದನ್ನು ಬಿಡಲಿಲ್ಲ. ವಕೀಲರು ಮಧ್ಯಸ್ತಿಕೆ ಮಾಡಿ ನಾಲ್ಕು ರೂಪಾಯಿಗೆ ತೀರ್ಮಾನ ಮಾಡಿದರು. ಪಿಲಾಸಿಯು ಸಂಕಟಪಡುತ್ತ ತೀಕಿದನು.

ಮನೆಯ ಬಾಗಿಲನ್ನು ವಕೀಲರು ತಮ್ಮ ಕೋಲಿನಿಂದ ತಟ್ಟಿದ ಮೇಲೆ ಬಾಗಿಲು ತೆರೆಯಿತು. ವಕೀಲರು ಸಿಳ್ಳು ಹೊಡೆಯುತ್ತ ಒಳಹೊಕ್ಕರು. ಅನುಯಾಯಿಯೂ ಹಿಂಬಾಲಿಸಿದನು. ಮಾಮೂಲಿನಂತೆ ಆಗಂತುಕರಿಗೆ ಸುಸಜ್ಜಿತವಾದ ಕೋಣೆಯು ತೋರಿಸಲ್ಪಟ್ಟು, ಅಲ್ಲಿ ಅವರು ಸುಖಾಸೀನರಾದೊಡನೆ ಮುದಿ ಹೆಂಗಸು ಒಬ್ಬಳು ಪ್ರವೇಶಿಸಿ ವಕೀಲರನ್ನು ಗುರುತಿಸಿ, "ವಕೀಲರು ದಯಮಾಡಿಸಿ ಬಹಳ ಕಾಲ ವಾಯಿತು" ಅಂದಳು. ವಕೀಲರು "ಹುಂ ಹುಂ" ಅಂದು ನಸುನಕ್ಕರು ಅವಳ ಮತ್ತೆ 'ಈಗಲೇ ಸಂಗೀತಕ್ಕೆ ಏರ್ಪಾಡಾಗುತ್ತದೆ, ತಮಗೆ ... ಎನ್ನುವಲ್ಲೇ ವಕೀಲರು ನಡುವೆ ಬಾಯಿ ಹಾಕಿ,

"ನಮಗೆ ಈಗಲೇ ಸಂಗೀತದ ಅಗತ್ಯವಿಲ್ಲ. ನಿಮ್ಮವರ ಪೈಕಿ ಚುರುಕಾದವಳೊಬ್ಬಳು ನಮ್ಮ ಜತೆ ಸ್ವಲ್ಪ ಹೊತ್ತು ಹೊರಕ್ಕೆ ಬರ ಬೇಕಾಗುತ್ತದೆ. ಸಾಧ್ಯವೆ?" ಎಂದರು.

ಹೆಂಗಸು ಕೊಂಚ ಅನುಮಾನಿಸುತ್ತ "ಸಾಧ್ಯವಲ್ಲದೆ ಏನು? ಆದರೆ. " ಎಂದಳು.

"ನೀವು ಏನೂ ಯೋಚನೆಯನ್ನು ಮಾಡಬೇಡಿ. ಎರಡುಮೂರು ಗಂಟೆಯೊಳಗಾಗಿ ಅವಳನ್ನು ವಾಪಸು ಕರೆತಂದು ಬಿಡುತ್ತೇವೆ" ಅಂದು ವಕೀಲರು ಭರವಸೆಕೊಟ್ಟರು.

"ಸರಿ, ಅದನ್ನು ತಾವು ಹೇಳಬೇಕೆ?"

ವಕೀಲರು ಹಳೆಯ ಗಿರಾಕಿಯಾದುದರಿಂದ ಹೆಂಗಸು ಒಪ್ಪದೆ ಇರುವುದಕ್ಕೆ ಕಾರಣವಿರಲಿಲ್ಲ. ಆದರೆ ಅವಳು ಈ ಸಂದರ್ಭವು ಏನೋ ವಿಶೇಷವಾದುದೆಂದು ಊಹಿಸಿ ತಕ್ಕಮಟ್ಟಿಗೆ ಸುಲಿಗೆಮಾಡುವ ಮನಸ್ಸಿನಿಂದ "ಸರಿಯಾದ ಚಾಲೂಕಾದ ಹುಡುಗಿ ಬೇಕಾದರೆ ಚಾರ್ಜು ಹೆಚ್ಚಾಗುತ್ತದೆ" ಎಂದು ನಕ್ಕಳು.

"ಅಂದರೆ ಎಷ್ಟು?" ವಕೀಲರು ಪ್ರಶ್ನಿಸಿದರು.

"ಮುನ್ನೂರು."

ಪಿಲಾನಿಯ ಮೇಲೆ ಕಪ್ಪೆ ಬಿದ್ದಂತಾಯಿತು. ವಕೀಲರು ಮಾತ್ರ "ಆಗಬಹುದು, ಅದಕ್ಕೇನು? ಈ ನಮ್ಮ ಸ್ನೇಹಿತರು ಕೊಡುತ್ತಾರೆ.

ಬಹಳ ಶ್ರೀಮಂತರು" ಎಂದು ಮುಗಿಸಿದರು. ಈಗಲಂತೂ ಪಿಲಾಸಿಗೆ ಬರೆ ಎಳೆದಂತಾಯಿತು ಆದರೆ ಬೇರೆ ಗತಿಯೇನು? ಯಾತನೆಯನ್ನು ಸುಮ್ಮನೆ ಸಹಿಸಿದನು.

ಹೆಂಗಸು ಪಿಲಾಸಿಯನ್ನು ನೋಡಿ ನಮಿಸಿ, ಮಂದಹಾಸವನ್ನು ಬೀರಿ, ಆಳನ್ನು ಕರೆದು,

"ಹೋಗು ತಾಂಬೂಲ ತೆಗೆದುಕೊಂಡು ಬಾ" ಎಂದು, ಅವನು ಹೋಗುತ್ತಲೆ, "ನಾನು ಈಗಲೇ ಹುಡುಗಿಯನ್ನು ಕಳುಹಿಸುತ್ತೇನೆ" ಅನ್ನುತ್ತ ಹೊರಟುಹೋದಳು.

ತಾಂಬೂಲವು ಬಂದಿತು. ಜೊತೆಗೆ ಮದ್ಯದ ಸೀಸೆಗಳೂ ಬಟ್ಟಲುಗಳೂ ಇದ್ದುವು. ವಕೀಲರು ಸೀಸೆಯೊಂದರ ಬಿರಡೆ ತೆಗೆದು ಎರಡು ಬಟ್ಟಲುಗಳಿಗೆ ಮದ್ಯವನ್ನು ಧಾರಾಳವಾಗಿ ಬಗ್ಗಿಸಿ, ಪಿಲಾಸಿಗೆ ಒಂದನ್ನು ಕೊಡಹೋದರು. ಈಗ ಮಾತ್ರ ಪಿಲಾಸಿಯು ಲಾಯರ ಸಲಹೆಯಂತೆ ನಡೆದುಕೊಳ್ಳಲಿಲ್ಲ ತನಗೆ ಅದು ಸೇರದೆಂದು ತಲೆಯಾಡಿಸಿದನು. ವಕೀಲರು ನಕ್ಕು, "ನೀವೇನೂ ಪ್ರಯೋಜನವಿಲ್ಲ!" ಎಂದು ತಮ್ಮದನ್ನೂ ಪಿಲಾಸಿಯ ಭಾಗವನ್ನೂ ತಾವೇ ಮುಗಿಸಿ, ಮತ್ತೆ ಮತ್ತೆ ಇನ್ನಷ್ಟನ್ನು ಬಗ್ಗಿಸಿ ಕುಡಿದರು. ಅವರ ಮುಖವು ಹೆಚ್ಚು ಹೆಚ್ಚು ಕೆಂಪಾಗುತ್ತ ಬಂದಿತು.

ಸೀಸೆಯು ಬರಿದಾಗುವ ಹೊತ್ತಿಗೆ ಕೈಬಳೆಗಳ ಸದ್ದೂ, ಜರಿಸೀರೆಯ "ಸರಸರ"ವೂ ಕೇಳಬಂದುವು. ಪರಿಮಳದ ಸುವಾಸನೆಯು ಮುಂದುಹಾಯಿತು ಇನ್ನು ಅರೆ ನಿಮಿಷದಲ್ಲಿ ಕೊಠಡಿಯೊಳಕ್ಕೆ ಸುಂದರಿಯೊಬ್ಬಳು ನಸುನಗುತ್ತ ಕಾಲನ್ನಿಟ್ಟಳು ಇವಳ ರೂಪು, ರೀತಿ, ಬಿಂಕ, ಗೆಲವು, ಉಡುಗೆ ತೊಡುಗೆಗಳನ್ನು ನೋಡಿ ಹಳೆಗೈಯಾದ ವಕೀಲರೂ ಬೆರಗಾದರು. ಅವರ ಕಣ್ಣುಗಳು ಅರಳಿದವು, ಹೊಳೆದುವು ಪಿಲಾಸಿಗಂತೂ ಹೃದಯವು ಬಾಯಿಗೆ ಬಂದಂತಾಯಿತು. ಎದೆಯು ಡವಡವನೆ ಬಡಿದುಕೊಳ್ಳಲಾರಂಭಿಸಿತು. ಇನ್ನು ಹುಡುಗಿಯಂತೂ ಬಿನ್ನಾಣದಿಂದ ಮುಂದೆ ಸಾರಿ ಆಗಂತುಕರ ಮಧ್ಯೆ ಬಂದು ಕುಳಿತಾಗ, ಪಿಲಾಸಿಗೆ ಜೀವವೇ ಹಾರಿಹೋದಂತಾಯಿತು. ಅವನು ತನಗೆ ತಿಳಿಯದಂತೆಯೇ

ಕೊಂಚ ದೂರ ಸರಿದುಕೊಂಡನು. ಇದಕ್ಕೆ ಪ್ರತಿಯಾಗಿ ವಕೀಲರು ಹಿಗ್ಗುತ್ತ ಅವಳ ಹತ್ತಿರಕ್ಕೆ ಸರಿದುಕೊಂಡರು ಮತ್ತು ಮತ್ತೊಂದು ಸೀಸೆಯನ್ನು ಒಡೆದು ಮದ್ಯವನ್ನು ಬಗ್ಗಿಸಿದರು. ಈಗ ವಕೀಲರು ತನ್ನ ಕೆಲಸವನ್ನು ಮರೆತಂತೆಯೇ ಪಿಲಾಸಿಗೆ ಭಾಸವಾಯಿತು. ಅವನು ಹೇಗೋ ಧೈರ್ಯಮಾಡಿ, "ವಕೀಲರೆ, ನಮ್ಮ ಕೆಲಸಕ್ಕೆ ಹೊತ್ತಾಗ ಲಿಲ್ಲವೆ?" ಅಂದ ವಕೀಲರು "ಹೌದು, ಆದರೆ ಟ್ಯಾಕ್ಸಿ ತರಬೇಕಲ್ಲ. ಇಲ್ಲಿ ಯಾರಿಗಾದರೂ ಹೇಳೋಣ. ಅಲ್ಲಿಯವರೆಗೆ .." ಅನ್ನುವಾಗ ಈ ಸಂದರ್ಭದಿಂದ ಪಾರಾಗುವ ಬಗೆಯನ್ನೇ ಯೋಚಿಸುತ್ತಿದ್ದ ಪಿಲಾಸಿಯು "ನಾನೇ ನೋಡಿಕೊಂಡು ಬರುತ್ತೇನೆ" ಎನ್ನುತ್ತ ಮೇಲೆದ್ದನು. ಟ್ಯಾಕ್ಸಿಯ ಬಾಡಿಗೆಯನ್ನು ಕಡಿಮೆಮಾಡುವುದೂ ಇದಕ್ಕೆ ಒಂದು ಕಾರಣ. ವಕೀಲರು "ಆಗಬಹುದು ಹಾಗಾದರೆ" ಎಂದು ಬಹಳ ಸಂತೋಷದಿಂದ ಹೇಳಿ "ನೀವು ಬರುವ ಹೊತ್ತಿಗೆ ನಾವೂ ಸಿದ್ಧ ನಾಗಿರುತ್ತೇವೆ" ಎಂದು ಹುಡುಗಿಯನ್ನು ನೋಡುತ್ತ ಮುಗಿಸಿದರು. ಪಿಲಾಸಿಯು ಹೊರಟನು. ಅವನ ಬೆನ್ನು ಕಾಣುತ್ತಲೆ ವಕೀಲರು ಸುಂದರಿಯನ್ನು ಸೆಳೆದು ಮುತ್ತಿಟ್ಟರು. ಅವಳು ಅವರ ಜೋಲು ಕನ್ನೆ ಗಳನ್ನು ಮೃದುವಾಗಿ ಚಿಗುಟಿದಳು.

ಪಿಲಾಸಿಯು ವಾಪಸು ಬರುವ ಹೊತ್ತಿಗೆ ವಕೀಲರು ಹುಡುಗಿ ಯೊಂದಿಗೆ ಆಟಪಾಟಗಳನ್ನು ಮುಗಿಸಿದ್ದರು. ಮೂವರೂ ಟ್ಯಾಕ್ಸಿಯ ಹಿಂದಿನ ಆಸನದಲ್ಲಿ ಕುಳಿತಾಗ ವಕೀಲರು ಪಿಲಾಸಿಯನ್ನು ಕುರಿತು "ರಿಸರ್ವ್ ಬ್ಯಾಂಕಿಗೆ ಅಂತ ಹೇಳಿ" ಅಂದರು ಪಿಲಾಸಿಯು ಕೊಟ್ಟ ಅಪ್ಪಣೆಯಂತೆ ಮೋಟಾರು ಹೊರಟಿತು.

ಆ ದಿನ ರಿಸರ್ವ್ ಬ್ಯಾಂಕಿನ ಭವ್ಯ ಮಂದಿರದಲ್ಲಿ ಮತ್ತು ಸುತ್ತು ಮುತ್ತೂ ಗಲಾಟೆಯು ಹೇಳತೀರದು. ರಸ್ತೆಯ ಅಕ್ಕಪಕ್ಕಗಳಲ್ಲಿ ನೂರಾರು ಮೋಟಾರು ವಾಹನಗಳು ಸಾಲಾಗಿ ನಿಂತಿದ್ದುವು. ಜನರು ಸಾಲಾಗಿ ಒಳಗೆ ಎಲ್ಲಿಂದಲೋ ಮೊದಲಾಗಿ ಹೊರಗೆ ಬೀದಿಗೂ ಹರಿದು ಅಲ್ಲೂ ಸಾಲು ನಿಂತಿದ್ದರು. ಅಲ್ಲದೆ ಈ ಸಾಲಿಗೂ ಇನ್ನೂ ಜನರು ಬಂದು ಬಂದು ಭರ್ತಿಯಾಗುತ್ತಲೇ ಇದ್ದರು. ಎಷ್ಟೋ ಜನರು ಬೆಳಗಿನ

ಜಾವ, ಮಧ್ಯರಾತ್ರಿಯಿಂದಲೂ ಮುಂದಿನ ಜಾಗಕ್ಕಾಗಿ ಕಾದಿದ್ದರು. ಇವರ ಪೈಕಿ ಎಷ್ಟೋ ಜನ ಭಯ್ಯಾಗಳು ದುಡ್ಡಿಲ್ಲದಿದ್ದರೂ ಹಿಂದಿನ ಸಂಜೆಯಿಂದ ಅಲ್ಲೇ ಮಲಗಿದ್ದು ಮುಂದಿನ ಜಾಗವನ್ನು ಗಳಿಸಿದ್ದರು. ಇವರ ಏಜಂಟು ಒಬ್ಬನು ಅಲ್ಲಲ್ಲಿ ಸುಳಿದಾಡಿ ಮುಂದಿನ ಸ್ಥಳ ಸಂಪಾದಿಸಲು ಆತುರರಾಗಿರುವವರಿಂದ ಹತ್ತು ಹತ್ತು ರೂಪಾಯಿ ವಸೂಲುಮಾಡಿ, ಆ ಭಯ್ಯಾಗಳ ಸ್ಥಳಗಳನ್ನು ಕೊಡಿಸುತ್ತಿದ್ದನು. ಈ ಹಣ ಶಾಸನದ ಪರಿಣಾಮವಾಗಿ ಹುಟ್ಟಿದ ಅನೇಕ ಕಳ್ಳ ವ್ಯಾಪಾರಗಳಲ್ಲಿ ಇದೂ ಒಂದು ಸಾಲು ಜನರು ಒಬ್ಬರನ್ನೊಬ್ಬರು ಒತ್ತಿ ನಿಂತಿದ್ದರು. ಅವರ ಮೊಗಗಳಲ್ಲಿ ಭಯ ಆತಂಕ ಆತುರಗಳು ಎದ್ದು ಕಾಣುತ್ತಿದ್ದವು. ಕೆಲವರ ಆತುರದಿಂದ ಒತ್ತಡವು ಜಾಸ್ತಿಯಾಗಿ ಜನರು ಬೀಳುವಂತಾಗುತ್ತಿದ್ದರು. ಆಗ ಮಧ್ಯೆ ಮಧ್ಯೆ ವಾಗ್ವಾದಗಳೂ ಕೇಳಿಬರುತ್ತಿದ್ದುವು. ಕೈ ಕೈಗೆ ಹತ್ತಿಕೊಳ್ಳದಂತೆ, ಸಾಲಿನ ನೀತಿಯು ಹಾಳಾಗದಂತೆ, ಜನರ ನಡವಳಿಕೆಯು ಕೆಡದಂತೆ ನೋಡಿಕೊಳ್ಳಲು ದೊಡ್ಡ ನೀಲಿ ಅಂಗಿ, ಹಳದಿ ರುಮಾಲಿನ ಪೋಲೀಸು ದಳವು ಹಾಜರಿದ್ದಿತು. ಈ 'ಅಧಿಕಾರಿ'ಗಳು ಆಗಾಗ ಚೀರಾಡುತ್ತ ಅಲ್ಲಿ ಇಲ್ಲಿ ಜನರನ್ನು ತಳ್ಳುತ್ತ ಎಳೆಯುತ್ತ ತಮ್ಮ ಕೆಲಸವನ್ನು ಸಾಗಿಸುತ್ತಿದ್ದರು. ಹಾಗೂ ತಮ್ಮ ಮಾತಿಗೆ ಜಗ್ಗದ ಜನರನ್ನು ಎಳೆದೊಯ್ದು ಅಲ್ಲಿಯೇ ಓಡಾಡುತ್ತಿದ್ದ ಬಿಳಿಯ ಸೂಟು ಹ್ಯಾಟಿನ ಆಂಗ್ಲೊ ಇಂಡಿಯನ್ ಅಧಿಕಾರಿಯ ತೀರ್ಮಾನಕ್ಕೆ ಒಳಗುಮಾಡುತ್ತಿದ್ದರು. ಈವರೆಗಾಗಲೇ ಎಷ್ಟೋ ಮೊಕದ್ದಮೆಗಳು ದಾಖಲಾಗಿದ್ದುವು, ಆಗುತ್ತಲೂ ಇದ್ದುವು. ಹಾಗೆಯೇ ಅಷ್ಟು ಇಷ್ಟನ್ನು ಪೋಲೀಸರಿಗೆ ತೆತ್ತಮೇಲೆ ಅಲ್ಲಿಯೇ ಆಗಲೇ ಮೊಕದ್ದಮೆಗಳು ಖುಲಾಸೆಯಾಗುತ್ತಲೂ ಇದ್ದುವು.

ಈ ರಂಗಸ್ಥಳಕ್ಕೆ ನಮ್ಮವರ ಟ್ಯಾಕ್ಸಿಯು ಬಂದು ನಿಂತಿತು. ವಕೀಲರು ಹುಡುಗಿಗೆ ಒಂದು ಕಾಗದವನ್ನು ಕೊಟ್ಟು, ಪಿಲಾನಿಗೆ "ನಿಮ್ಮ ನೋಟಿನ ಪಿಂಡಿಯನ್ನು ಇವಳಿಗೆ ಕೊಟ್ಟುಬಿಡಿ" ಅಂದರು. ಈವರೆಗೆ ವಕೀಲರ ಉಪಾಯವನ್ನು ಪಿಲಾನಿಯು ಊಹಿಸಿದ್ದನಾದರೂ ಇಪ್ಪತ್ತೈದು ಸಾವಿರ ರೂಪಾಯಿನ ಪಿಂಡಿಯನ್ನು ಸೂಳೆಯೊಬ್ಬಳಿಗೆ ಕೊಟ್ಟುಬಿಡಲು ಅವನ ಮನಸ್ಸು ಹಿಂದೆಗೆಯಿತು. ಅವನು ಕೊಂಚ ಅನುಮಾನಿಸಿದನು.

ವಕೀಲರು ಇದನ್ನು ಕಂಡು, "ಏನು ಅನುಮಾನಿಸುತ್ತೀರಿ? ಹಾಗೆ ಮಾಡದೆ ವಿಧಿಯಿಲ್ಲ. ನಿಮ್ಮ ಹಣವು ಉಳಿಯಬೇಕಾದರೆ ಇವಳ ಮೂಲಕವೇ ನಾನೂ ನೀವೂ ಇದರ ಸಂಪಾದನೆಯ ಬಗ್ಗೆ ಏನು ಹೇಳಲು ಸಾಧ್ಯ?" ಎಂದು ಪಿಸುಮಾತಿನಲ್ಲಿ ಹೇಳಿದರು ಪಿಲಾಸಿಯು ನೋಟಿನ ಪಿಂಡಿಯನ್ನು ಹುಡುಗಿಗೆ ಒಪ್ಪಿಸಿದಾಗ ಪ್ರಪಂಚವನ್ನೇ ಕಳೆದು ಕೊಂಡವನಂತೆ ಕಂಡನು. ಆವಳಾದರೋ ಪ್ರಪಂಚದ ಪಟ್ಟವೇ ತನಗಾಯಿತೋ ಎನ್ನುವಂತೆ ಹಿಗ್ಗುತ್ತ ಅದನ್ನು ತೆಗೆದುಕೊಂಡು ತನ್ನ ಚರ್ಮದ ಕೈಚೀಲಕ್ಕೆ ಸೇರಿಸಿದಳು ಅವಳು ಮೋಟಾರಿನಿಂದ ಇಳಿಯು ವಾಗ ವಕೀಲರು "ನಾನು ಹೇಳಿದ್ದೆಲ್ಲ ನೆನಪಿದೆಯೋ—ಹೇಗೆ?" ಎಂದು ಕೇಳಿದರು. ಅದಕ್ಕೆ ಅವಳು "ಓಹೋ. ಎಲ್ಲಾ ಗೊತ್ತಿದೆ. ಜಯಿಸಿ ಕೊಂಡು ಬರುತ್ತೇನೆ. ನೋಡುತ್ತಿರಿ" ಅಂದಳು ವಕೀಲರು ನಗುತ್ತಾ "ನೋಡಿದಿರಾ ಹೇಗಿದೆ?" ಎಂದು ಪಿಲಾಸಿಯನ್ನು ತಿವಿದರು. ಪಿಲಾಸಿಗೆ ಮಾತನಾಡಲು ತ್ರಾಣವಿರದೆ ಕ್ಷೀಣವಾಗಿ ನಸುನಗೆಯನ್ನು ತೋರ್ಪಡಿಸಿದನು

ಹೆಂಗುಸರ ಸಾಲು ಸಣ್ಣದಾಗಿದ್ದು ಹುಡುಗಿಯು ಬ್ಯಾಂಕಿನ ಒಳಗೆ ಹೋದಳು. ವಕೀಲರೂ ಕಕ್ಷಿಗಳೂ ಹಿಂಬಾಲಿಸಿದರು. ಹುಡುಗಿಯ ಸರದಿಯು ಬರುವುದಕ್ಕೆ ಕೊಂಚ ಕಾಲ ಹಿಡಿಯಿತು. ಇಷ್ಟು ಹೊತ್ತೂ ಪಿಲಾಸಿಯು ತಳಮಳಿಸುತ್ತಿದ್ದನು. ಕಡೆಗೆ ಅವಳು ಭರ್ತಿಯಾಗಿದ್ದ ಕಾಗದವನ್ನು ನೌಕರನಿಗೆ ಕೊಟ್ಟಾಗಲಂತು ಪಿಲಾಸಿಯು ಅಂಗುಷ್ಠದ ಮೇಲೆ ನಿಂತು ನೋಡುತ್ತಿದ್ದನು. ಹುಡುಗಿಯು ಕೊಟ್ಟ ಕಾಗದವನ್ನು ನೌಕರನು ಸ್ವಲ್ಪ ಓದಿದವನೆ, ಆಶ್ಚರ್ಯದಿಂದ ಕತ್ತೆತ್ತಿ ಹುಡುಗಿಯ ಕಡೆಗೆ ನೋಡಿ ನಸುನಕ್ಕನು. ಮತ್ತೆ ನಿದಾನವಾಗಿ ಓದಿ, ಏನೋ ತೊಡಕಿಗೆ ಸಿಕ್ಕಿದವನಂತಾಗಿ ಬ್ಯಾಂಕಿನ ಆಳನ್ನು ಕರೆದು ಕಾಗದವನ್ನು ಕೊಟ್ಟು, ಅವನಿಗೆ ಹುಡುಗಿಯನ್ನು ತೋರಿಸಿ, "ಇವರನ್ನು ಸಾಹೇಬರ ಬಳಿಗೆ ಕರೆದುಕೊಂಡು ಹೋಗು" ಎಂದು ಹೇಳಿದನು. ಹುಡುಗಿಯು ಆಳನ್ನು ಹಿಂಬಾಲಿಸಿ ಒಳಗೆ ಸಾಹೇಬರ ಬಳಿಗೆ ಹೋದಳು. 'ಇದನ್ನು ಕಂಡು ಪಿಲಾಸಿಗೆ ಬಾಯಿ ಒಣಗಹತ್ತಿತು.

ಸಾಹೇಬರು ಹುಡುಗಿಯನ್ನು ಕುಳಿತುಕೊಳ್ಳುವಂತೆ ಹೇಳಿ ಕಾಗದವನ್ನು ಪರೀಕ್ಷಿಸಲು ಮೊದಲುಮಾಡಿದರು. ಹುಡುಗಿಯು ದಿಟ್ಟವಾಗಿ ಕುರ್ಚಿಯಲ್ಲಿ ಕುಳಿತು ಪಾಟಿಸವಾಲಿಗೆ ಸಿದ್ಧವಾಗಿದ್ದಳು. ಅಧಿಕಾರಿಯೂ ಕೊಂಚ ಓದಿದನನೆ, ಹುಡುಗಿಯ ಕಡೆಗೆ ಕಣ್ಣನ್ನು ಹೊರಳಿಸಿ ನಸುನಕ್ಕು, ಮುಂದೆ ಓದಿಕೊಂಡನು. ಮುಗಿದ ಮೇಲೆ ಏನನ್ನೋ ಯೋಚಿಸುತ್ತ ನಸುನಗುತ್ತ ತಲೆಯಾಡಿಸುತ್ತ ಮೇಜಿನಮೇಲೆ ಬೆರಳಿನಿಂದ ತಬಲಾ ಬಡಿಯುತ್ತ ಒಂದೆರಡು ನಿಮಿಷವನ್ನು ಕಳೆದನು. ಅನಂತರ ತಲೆಯನ್ನು ಕೆರೆದುಕೊಂಡನು. ಹುಬ್ಬು ಗಂಟಿಕ್ಕಿ ನೋಡಿದನು. ಕಡೆಗೆ ಹುಡುಗಿಯನ್ನು ಪ್ರಶ್ನಿಸಿದನು.

"ನಿಮಗೆ ಇಂಗ್ಲೀಷನ್ನು ಬರೆಯಲು ಬರುವುದಿಲ್ಲ, ಅಲ್ಲವೆ?"

"ಹೌದು."

"ಇದನ್ನು ಯಾರು ಬರೆದವರು?"

"ನಿನ್ನೆ ಬಂದವರೊಬ್ಬರಿಂಧ ಬರೆಯಿಸಿದ್ದೇನೆ."

"ಎಷ್ಟು ವರ್ಷದಿಂದ ಹೀಗೆ ..ಆ...."

"ನಾಲ್ಕು ವರ್ಷದಿಂದ" ಹುಡುಗಿಯು ತಿಳಿದು ಉತ್ತರವನ್ನು ಹೇಳಿದಳು.

"ಸರಾಸರಿ ದಿನಕ್ಕೆ ಎಷ್ಟು ಸಂಪಾದನೆ ಆಗುತ್ತದೆ?"

"ಅದನ್ನುಹೇಗೆ ಹೇಳುವುದು? ಅವೆಲ್ಲ ದಾತೃಗಳು ಇದ್ದಹಾಗೆ. ಬಂದ ಹಾಗೆ. ಹತ್ತರಿಂದ ನಾವಿರಕ್ಕೂ ಮೀರಿ ಹಣ ಕೊಡುವವರಿರುತ್ತಾರೆ. . ."

"ಓ, ಸರಿ. ಸರಿ." ಅಧಿಕಾರಿಯು ಕೊಂಚಹೊತ್ತು ಸುಮ್ಮನಾದನು. ಅನಂತರ ಮತ್ತೆ ಯೋಚಿಸಿ ಕೇಳಿದನು.

"ಹಾಗಾದರ ನಿಮ್ಮ ಹತ್ತಿರ ಈಗ ನೀವು ತಂದಿರುವುದಕ್ಕೂ ಮೀರಿ ಹಣ ಕೂಡಿರಬೇಕಲ್ಲವೆ?"

"ನಮ್ಮ ಬಳಿಗೆ ಹಣ ಬರುವಹಾಗೇ ಕರ್ಚೂ ಆಗುತ್ತದೆ."

"ಆದರೆ ಇದು?"

"ಇಷ್ಟು ಎಷ್ಟೋ ಬಾರಿ ಕೂಡಿ ಕರ್ಚಾಗಿದೆ. ಈಗ ಮಾತ್ರ ಇದನ್ನು ಬದಲಾಯಿಸಬೇಕಾಗಿದೆ."

"ಹೋ, ಹಾಗೋ."

ಮತ್ತಷ್ಟು ಕಾಲ ಮೌನ. ಆಮೇಲೆ ಮತ್ತೊಂದು ಪ್ರಶ್ನೆ.

"ನೀವು ಈ ಆದಾಯಕ್ಕೆಲ್ಲ ಲೆಕ್ಕ      "

"ನಾವೇನು ಹಣಕ್ಕೆ ರಸೀದಿ ಕೊಡುತ್ತೇವೊ? ಕೊಡಬೇಕೊ? ನಮಗೆಲ್ಲಿ ಲೆಕ್ಕವಕ್ಕದ      "

'ಹೂಂ. ಹೂಂ ಸರಿ.'

ಅಧಿಕಾರಿಯು ಮತ್ತೆ ಯೋಚಿಸಿದನು. ಏನೂ ಫಲವಾದಂತೆ ಕಾಣಲಿಲ್ಲ. ಈ ಅಸಹಾಯತೆಯೋ, ದಾಕ್ಷಿಣ್ಯವೋ, 'Chivalry'ಯೋ, ದೌರ್ಬಲ್ಯವೋ ಹೇಗೋ ಅಂತೂ ಕಡೆಗೆ ಒಂದು ಚೀಟಿಯನ್ನು ಗೀಚಿ ಆಳನ್ನು ಕರೆದು ಅದನ್ನು ಕೊಟ್ಟು, ಹುಡುಗಿಯನ್ನು ನೋಡಿ, "ನೀವಿನ್ನು ಹೋಗಿ ಹಣ ಬದಲಾಯಿಸಿಕೊಳ್ಳಬಹುದು" ಎಂದನು.

ಹುಡುಗಿಯು ಸಂಭ್ರಮದಿಂದ ಸಾವಿರದ ನೋಟುಗಳನ್ನು ನೂರರದಕ್ಕೆ ಬದಲಾಯಿಸಿಕೊಳ್ಳುತ್ತಿರುವಾಗ ಪಿಲಾಸಿಗೆ ಉಕ್ಕಿದ ಸಂತೋಷವನ್ನು ಹೇಳತೀರದು. ವಕೀಲರೂ ನಗುತ್ತ, "ನೋಡಿದಿರೊ ಹೇಗಿದೆ ನನ್ನ ಬುದ್ಧಿ!" ಎಂದು ಪಿಸುಮಾತಿನಲ್ಲಿ ಹೇಳಿದರು. ಹುಡುಗಿಯು ನೋಟುಗಳನ್ನು ಜೋಡಿಸಿಕೊಂಡು ಚೀಲಕ್ಕೆ ಸೇರಿಸಿಕೊಂಡು ಹತ್ತಿರಕ್ಕೆ ಬಂದೊಡನೆ ಪಿಲಾಸಿಯು ಆತುರವನ್ನು ತಡೆಯಲಾರದೆ ಅವಳಲ್ಲಿಗೆ ಹಾರಿ ಕೈ ನೀಡಿದನು. ಆ ಸಮಯಕ್ಕೆ ವಿಧಿಯು ಕಾದಿಟ್ಟ ದೊಡ್ಡ ಪೆಟ್ಟು ಈಗ ಅವನಿಗೆ ತಗುಲಿತು. ಹುಡುಗಿಯು ಹಣವನ್ನು ಕೊಡುವುದರ ಬದಲು ಸುಮ್ಮನೆ ಗಂಭೀರವಾಗಿ ಕತ್ತನ್ನೆತ್ತಿ, "ನೀವು ಯಾರು? ನನ್ನಿಂದ ಏನಾಗಬೇಕು" ಎಂದು ಕೇಳಿಬಿಟ್ಟಳು!

ಈ ಮಾತುಗಳು ಕಿವಿಯನ್ನು ಮುಟ್ಟಿದೊಡನೆ ಪಿಲಾಸಿಯ ಎದೆ ಹಾರಿತು. ಅವನು ತತ್ತರಿಸಿದನು. ವಕೀಲರೂ ಬೆರಗಾಗಿ "ಓಹೋ. ಕೈಕೊಟ್ಟಳು!" ಅಂದುಕೊಂಡರು. ಇದಕ್ಕೆ ಉಪಾಯವನ್ನು ಕಂಡು ಹಿಡಿಯಲು ಅವರ ಮಿದುಳಿನಲ್ಲಿ ತಳಮಳವು ಮೊದಲಾಗಿ ಮುಗಿಯುವುದರಲ್ಲೇ ಪಿಲಾಸಿಯು ತಲ್ಲಣದಿಂದ ಚೇತರಿಸಿಕೊಂಡು "ನನ್ನ ಹಣ! ನನ್ನ ಹಣ!" ಎಂದು ಹುಚ್ಚನಂತೆ ಚೀರುತ್ತ ಹುಡುಗಿಯ ಕೈಹಿಡಿದು

ಕೊಂಡನು. ಹುಡುಗಿಯು "ಅಯ್ಯೋ! ಅಯ್ಯೋ!" ಎಂದು ಕೂಗಿಕೊಂಡಳು. ಕೆಲವು ಜನರು ಸುತ್ತುಗಟ್ಟಿದರು. ಪೋಲೀಸಿನವರೂ ಬಂದು "ಬದ್ಮಾಷ್!" ಎನ್ನುತ್ತ ಪಿಲಾಸಿಯ ಹೆಗಲ ಮೇಲೆ ಕೈಹಾಕಿ ಹಿಂದಕ್ಕೆ ಳೆದರು. ಪಿಲಾಸಿಯ ಕೈ ಹುಡುಗಿಯ ಕೈಬಿಟ್ಟಿತು. ಅವಳು ಪೋಲೀಸಿನವನನ್ನು ಕುರಿತು, "ನೋಡಿ ಇವನು ನನ್ನ ದರೋಡೆ ಮಾಡೋಕೆ ಹವಣಿಸಿದ್ದ" ಅಂದಳು ಪಿಲಾಸಿಯು "ಅಲ್ಲ ಅಲ್ಲ. ನನ್ನ ಹಣ!" ಅಂದನು ಅವಳು "ಅಲ್ಲ. ಇದು ನನ್ನದು" ಅಂದಳು ಪಿಲಾಸಿಯು "ಇವಳ ಮಾತನ್ನು ನಂಬಬೇಡಿ ಇವಳು ಸೂಳೆ" ಎಂದನು. ಈ ಗಲಭೆಯಲ್ಲಿ ಹುಡುಗಿಯು ಚಮತ್ಕಾರದಿಂದ ಪೋಲೀಸಿನವನ ಕೈಗೆ ಹಿಂಭಾಗದಿಂದ ಏನನ್ನೋ ಕೊಟ್ಟಳು. ಪೋಲೀಸಿನವನು ಹುಡುಗಿಯನ್ನು ನೋಡಿ ನಗುತ್ತ ಪಿಲಾಸಿಯ ಕಡೆ ತಿರುಗಿ, "ಹಣ ನಿನ್ನದಾಗಿದ್ದಿರಬಹುದು. ಆದರೆ ಅವಳಿಗೇನು ಬಿಟ್ಟಿಕೊಟ್ಟಿಯಾ?" ಅಂದನು ಜನಗಳ ಪೈಕಿ ಒಬ್ಬನು "ಸುಖಪಡಲಿಲ್ಲವೇ" ಅಂದ. ಎಲ್ಲರೂ ಗೊಳ್ಳೆಂದು ನಕ್ಕರು. ಇನ್ನೊಬ್ಬ "ಸೂಳೆಗೆ ಕೊಟ್ಟ ಕಾಸು ಹಾಳಾದಹಾಗೇ. ಅದಕ್ಕೆಲ್ಲಿಯ ಲೆಕ್ಕ?" ಅಂದ. ಜನರು ಮತ್ತೂ ನಕ್ಕರು. ಮತ್ತೊಬ್ಬನು "ಈಗ ಹಣವಂತೂ ದೊಡ್ಡ ನೋಟಾಗಿದ್ದರೆ ಸಿಕ್ಕಿದವರಿಗೇ ಶೀರುಂಡೆ—ಅದೇ ಕಾನೂನು" ಅಂದ

ಪಿಲಾಸಿಯು ಎಚ್ಚೆತ್ತು ಪೆಚ್ಚಾದನು. ಅವನಿಗೂ ಇದೆಲ್ಲವೂ ಗೊತ್ತಿದ್ದಿತು. ಮಾಡುವುದು ಏನೂ ಅವನಿಗೆ ತೋಚಲಿಲ್ಲ. ಪೋಲೀಸಿನವನು ಮೂರನೆಯ ಬಾರಿ "ಹುಂ ನಡಿ ಸಾಹೇಬರ ಬಳಿಗೆ" ಎಂದನು. ಪಿಲಾಸಿಯು ಏನನ್ನೋ ಹೇಳಲು ಹೊರಟನು. ಆದರೆ ಪೋಲೀಸಿನವನು ಕೇಳದೆ, "ಹೇಳುವುದು ಏನಿದ್ದರೂ ಅವರಿಗೆ ಹೇಳು" ಎಂದು ಮೆಲ್ಲಗೆ ಮುಂದಕ್ಕೆ ತಳ್ಳಿದನು. ಪಿಲಾಸಿಯು ಹಿಂದಕ್ಕೆ ನೋಡುತ್ತ 'ಅವಳು.... ಅವಳು' ಎಂದನು ಪೋಲೀಸಿನವನು "ಅವಳೇನು ಮಾಡಿದ್ದಾಳೆ? ಗಲಭೆಗೆ ಕಾರಣ ನೀನು. ಇನ್ನೇಕೆ? ನಾನೇ ನೋಡಿದೆನಲ್ಲ. ನೀನು ಕೈಮಾಡಿದ್ದು" ಅಂದನು ಗುಂಪಿನಲ್ಲಿ ಯಾರೋ "ಸೇಟರೆ, ಆಮೇಲ ಹೋಗುವಿರಂತೆ ಅವಳ ಬಳಿಗೆ. ಹಳೆಯ ಪರಿಚಯ ತಾನೆ.

ಈಗ ಹೋಗಿ ಮೊದಲು ಪೋಲೀಸಿಗೆ ದಾಖಲಾಗಿ'' ಅಂದರು. ಎಲ್ಲರೂ ನಕ್ಕರು. ಪೋಲೀಸಿನವನು ಹಿಂದೆ ಹಿಂದೆ ಉಳಿಯುತ್ತಿದ್ದ ಪಿಲಾಸಿಯನ್ನು ಬಲವಂತದಿಂದ ಕರದೊಯ್ದನು.

ಇಲ್ಲಿಯವರೆಗೆ ಮರ್ಯಾದೆಗೆ ಕಟ್ಟು ಬಿದ್ದು, ಈ ನಾಟಕದಲ್ಲಿ ಭಾಗವಹಿಸಿ ಜನರ ಗಮನಕ್ಕೆ ಬರಲು ಇಷ್ಟವಿಲ್ಲದೆ ಹಿಂದೆಯೇ ನಿಂತಿದ್ದ ವಕೀಲರು ಈಗ ತಮ್ಮ ಅಪಾಯವನ್ನು ತಿಳಿದರು. ಪಿಲಾಸಿಯು ಪೋಲೀಸು ಅಧಿಕಾರಿಗೆ ನಿಜವೆಲ್ಲವನ್ನೂ ಹೇಳಿದರೆ ತಮಗೂ ಏಕಲಾಟ ಬರುವುದೆಂದು ನೆನೆಸಿ ಪಿಲಾಸಿಯ ಕಡೆಗೆ ಸಾಗುತ್ತ ಮೆಲ್ಲಗೆ ಹುಡುಗಿಯ ಕಡೆಗೆ ಹೋಗಿ ಸಮಯೋಚಿತವಾದ ಕಡೆಯ ಉಪಾಯವನ್ನು ಹೂಡಿ ಪಿಸುಮಾತಿನಲ್ಲಿ ''ನನಗೆ ಗೊತ್ತಾಯಿತು, ನೀನು ಯೋಚಿಸಬೇಡ. ನಾನು ಎಲ್ಲವನ್ನೂ ಸರಿಪಡಿಸುತ್ತೇನೆ. ನೀನು ಹೊರಗೇ ಕಾದಿರು. ಇವನನ್ನು ಬಿಡಿಸಿಕೊಂಡು ಈಗಲೇ ಬರುತ್ತೇನೆ'' ಎಂದು ಸಮಾಧಾನ ಹೇಳಿ ಹೆಚ್ಚು ಮುಖ್ಯವಾದ ಕೆಲಸವನ್ನು ಗಮನಿಸಲು ಧಾವಿಸಿ ಹೋದರು.

ವಕೀಲರು ಹಾಗೆ ತಿರುಗುತ್ತಲೇ ಹುಡುಗಿಯು ಹೊರಕ್ಕೆ ಬಂದು ಟ್ಯಾಕ್ಸಿಯೊಂದನ್ನು ಕರೆದು ''ಬೋರಿಬಂದರ್'' ಅಂದಳು. ಗಾಡಿಯು ವಿಕ್ಟೋರಿಯಾ ಟರ್ಮಿನಸ್ಸಿಗೆ ನಡೆಯಿತು. ಅಲ್ಲಿ ಮಧ್ಯಾಹ್ನ ಒಂದೂ ಮುಕ್ಕಾಲಿಗೆ ಹೊರಡುವ ಮದ್ರಾಸು ಮೇಯಿಲು ಗಾಡಿಯು ತಯಾರಾಗಿ ನಿಂತಿದ್ದಿತು. ಇನ್ನು ಹದಿನೈದು ನಿಮಿಷಗಳು ಮಾತ್ರ ಕಾಲವು ಉಳಿದಿದ್ದಿತು. ಹುಡುಗಿಯು ಮೊದಲು ಎರಡನೆಯ ತರಗತಿಯ ಬುಕಿಂಗ್ ಕಚೇರಿಗೆ ಹೋಗಿ, ಬುಕಿಂಗ್ ಗುಮಾಸ್ತನನ್ನು ಕಂಡು ''ನನಗೆ ಮದ್ರಾಸಿಗೆ ಒಂದು ಟಿಕೀಟು ಬೇಕಾಗಿದೆ. ಬಹಳ ತುರ್ತು'' ಅಂದಳು. ಅವನು ಅವಳನ್ನು ಕೆಳಗಿನಿಂದ ಮೇಲಿನವರೆಗೆ ನೋಡಿ ''ಯಾವ ದಿನಕ್ಕೆ?'' ಅಂದ.

''ಈಗಿನ ರೈಲಿಗೆ.''

''ಈ ದಿನಕ್ಕೆ? ಎಲ್ಲಾ ಬುಕ್ ಆಗಿದೆ. ಖಾಲಿಯಿಲ್ಲ, ಹೊತ್ತೂ ಇಲ್ಲ, ಎಂಟು ದಿನ ಮುಂಗಡವಾಗಿ ಬುಕ್ ಮಾಡಬೇಕು'' ಬಹಳ ದರ್ಪದಿಂದ ಹೇಳಿದನು.

"ಇರಬಹುದು. ಆದರೆ ನನ್ನ ಸಂದರ್ಭ ಬಹಳ ಮುಖ್ಯ. ಹೋಗಲೇಬೇಕು. ಹೇಗಾದರೂ ಮಾಡಿ ನನಗೆ ಸ್ಥಳವನ್ನು ದೊರಕಿಸಿ ಕೊಟ್ಟರೆ ನಾನು ನೀವು ಕೇಳುವ ಸಹಾಯವನ್ನು ಮಾಡಬಲ್ಲೆ" ಎಂದು ಪಿಸು ಮಾತಿನಲ್ಲಿ ಹೇಳಿ ಹುಡುಗಿಯು ಕಣ್ಣು ಮಿಟುಕಿಸಿ ನೂರರ ನೋಟು ಒಂದನ್ನು ತೋರಿಸಿದಳು. ಅದನ್ನು ನೋಡಿದೊಡನೆ ಗುಮಾಸ್ತನ ನಡೆವಳಿಕೆಯು ಬದಲಾಯಿಸಿತು ಒಡನೆಯೇ ಅವನು ಹೊಸ ಜೀವ ಪಡೆದವನಂತೆ ಚಟುವಟಿಕೆಯನ್ನು ತೋರಿಸುತ್ತ, "ನೀವು ಇಲ್ಲಿರಿ. ನಾನು ನನ್ನ ಕೈಲಾದುದನ್ನು ಮಾಡುತ್ತೇನೆ" ಅಂದು ಹೊರಗೆ ಹೋಗಿ. ಅವರಿವರೊಡನೆ ಮಾತಾಡಿ ಏರ್ಪಡಿಸಿ, ಮತ್ತೆ ಬಂದು "ನೋಡಿ ಫಸ್ಟ್ ಕ್ಲಾಸಿನಲ್ಲಿ ಮಾತ್ರ ಒಂದು ಬಾಗವನ್ನು ಒದಗಿಸಬಹುದು ಅದೂ ಬಹುಕಷ್ಟದಿಂದ ಸಾಧ್ಯವಾಯಿತು" ಅಂದನು. ಹುಡುಗಿಯು "ಹಾಗೆಯೇ ಆಗಲಿ. ಬಹಳ ಉಪಕಾರವಾಯಿತು" ಎಂದು ದರವನ್ನು ಕೇಳಿ ಜತೆಗೆ ಒಂದು ನೂರರ ನೋಟನ್ನು ನೇರಿಸಿಕೊಟ್ಟಳು. ಟಿಕೀಟು ಸಿಕ್ಕಿತು ನೌಕರನೊಬ್ಬನು ಅವಳನ್ನು ಕರೆದುಕೊಂಡು ಹೋಗಿ ಸ್ಥಳ ವನ್ನು ತೋರಿಸಿದನು. ಆಗಲೇ "ರಿಸರ್ವ್" ಚೀಟಿಯಲ್ಲಿ ಅವಳ ಹೆಸರು ಬರೆಯಲ್ಪಟ್ಟಿತು. ಹುಡುಗಿಯು ಹತ್ತಿದ ಎರಡು ನಿಮಿಷದೊಳಗಾಗಿ ಗಾಡಿಯು ಹೊರಟಿತು. ಅವಳು ಮೆತ್ತೆಯ ಮೇಲೆ ಆರಾಮವಾಗಿ ಮಲಗಿಕೊಂಡು. ತನ್ನಲ್ಲೇ ತಾನು "ಇದು ಶಿವನ ಪ್ರಸಾದವೇ ಸರಿ. ಅವನನ್ನು ಮಾತ್ರ ವಂಚಿಸುವುದಿಲ್ಲ. ಇನ್ನಾದರೂ ಮಾನವಾಗಿ ಬಾಳಲು ಅವನೇ ಸಹಾಯಮಾಡಿದ್ದಾನೆ ಹಾಳು ಸೂಳೆಗಾರಿಕೆ ಸಾಕಾಯಿತು. ಈ ಕೆಟ್ಟ ಜಾಗದಿಂದ ಆದಷ್ಟು ದೂರ ದೂರ ಹೋಗಿ ಬಿಡಬೇಕು" ಅಂದುಕೊಂಡಳು. ಅವಳ ಇಷ್ಟ ಪೂರ್ತಿಗೋ ಎನ್ನುವಂತೆ ರೈಲು ಗಾಡಿಯೂ ದಡಗುಟ್ಟುತ್ತ ವೇಗದಿಂದ ಸಾಗಿತು.

ಇತ್ತ ವಕೀಲರು ಪಿಲಾನಿಯ ಬಾಯಿಕಟ್ಟಿ, ಮುಖ್ಯ ವಿಷಯವನ್ನು ಮುಚ್ಚಿ ಹಾಕಿ, ಪೋಲೀಸು ಅಧಿಕಾರಿಗೆ ದಪ್ಪ ಲಂಚವನ್ನು ಕೊಡಿಸಿ, ಪಿಲಾನಿಯನ್ನು ಬಿಡಿಸಿಕೊಂಡು, ತಮುಗೂ ಒದಗಿದ್ದ ಗಂಡವನ್ನು ತಪ್ಪಿಸಿ ಕೊಂಡು ಸಾಕುಸಾಕಾಗಿ ವಾಪಸು ಬಂದು ನೋಡುವಲ್ಲಿ ಹುಡುಗಿಯು

ಅಲ್ಲಿ ಎಲ್ಲೂ ಇರಲಿಲ್ಲ. ಪಿಲಾಸಿಯು ತಾನು ದಿವಾಳಿಯಾದೆನೆಂದು ಗೋಳಿಟ್ಟನು. ವಕೀಲರು ಸಮಾಧಾನಪಡಿಸುತ್ತ, "ಅವಳೆಲ್ಲಿ ಹೋಗುತ್ತಾಳೆ, ಅವಳ ಮನೆ ಬಿಟ್ಟು? ಬನ್ನಿ ಹೋಗೋಣ" ಅಂದರು. ಅವರು ಟ್ಯಾಕ್ಸಿ ಮಾಡಿಕೊಂಡು ಮತ್ತೆ ಫರಾಸು ರೋಡಿಗೆ ಬಂದರು.

ಅಲ್ಲಿಗೆ ಹುಡುಗಿಯು ಬಂದಿಲ್ಲದ ವಿಷಯವು ತಿಳಿದೊಡನೆ ವಕೀಲರು ಭ್ರಾಂತರಾದರು. ಪಿಲಾಸಿಗೆ ಜೀವವು ಹೋದಂತಾಯಿತು. ಯಜಮಾನಿಗೆ ಈಗ ಹುಡುಗಿಯು ತಪ್ಪಿಸಿಕೊಂಡುದು ಗೊತ್ತಾಗಿ, "ಅಯ್ಯೋ, ಅವಳ ಮೇಲೆ ಎರಡು ಸಾವಿರವನ್ನು ಸುರಿದಿದ್ದೆ" ಎಂದು ಗೋಳಿಟ್ಟು, ವಕೀಲರನ್ನು ಕುರಿತು, "ನಿಮ್ಮ ತಿಳಿಗೇಡಿತನದಿಂದ ಅಷ್ಟೂ ನಷ್ಟವಾಯಿತು ನಿಮ್ಮಿಂದ ನಾನು ಮೋಸಹೋದೆ. ಚಾಲೂಕು ಹುಡುಗಿ ನೋಡಿಕೊಳ್ಳುವುದಕ್ಕೆ ಚುರುಕಾಗಿರಬೇಕು" ಎಂದು ಸಿಟ್ಟಾದಳು. ಪಿಲಾಸಿಯು ವಕೀಲರ ಕಡೆಗೆ ತಿರುಗಿ, "ಅವಳಿಗಾಗಿ ನಾನು ತೆತ್ತದ್ದು ಇಪ್ಪತ್ತೈದು ಸಾವಿರ. ನಿಮ್ಮನ್ನು ನಂಬಿ ದಿವಾಳಿಯಾಗಿ ನಾನೂ ಕೆಟ್ಟೆ" ಅಂದನು. ತಮ್ಮ ಸರದಿಯಲ್ಲಿ ವಕೀಲರೂ ಸಿಟ್ಟಾಗಿ "ನನ್ನದೇನೋ ಒಳ್ಳೆಯ ಉಪಾಯವೆ. ನಿಮ್ಮ ಹುಚ್ಚುತನ, ಕೆಟ್ಟ ಅದೃಷ್ಟಕ್ಕೆ ಯಾರೇನು ಮಾಡಬಲ್ಲರು? ವ್ಯಾಪಾರದ ವ್ಯಭಿಚಾರದಲ್ಲಿ ಸಂಪಾದಿಸಿದುದು ವ್ಯಭಿಚಾರಿಣಿಗೆ ಸೇರಿತು ಅಷ್ಟೆ" ಎಂದು ತಿರಸ್ಕಾರದಿಂದ ಹೇಳಿದರು.

ಪಿಲಾಸಿಯು ತಿರುಗಿಬಿದ್ದು, "ನಿಮ್ಮದೇನು ಹೆಚ್ಚು? ಅದೂ ಬುದ್ಧಿಯ ವ್ಯಭಿಚಾರವೆ. ಅದಕ್ಕೇ ನಿಮಗೂ ಸೊನ್ನೆ ಬಿತ್ತು" ಎಂದು ಆದಷ್ಟು ಸೇಡನ್ನು ತೀರಿಸಿಕೊಂಡನು. ತನ್ನ ಗತಿಗಾಗಿ ಗೋಳಿಟ್ಟನು. ಯಜಮಾನಿಯು "ಸಾಕು ನಿಮ್ಮ ಸಹವಾಸ, ಸದ್ಯ ಈಗಲೇ ಹೊರಟು ಹೋಗಿ" ಎಂದು ಗದರಿಸಿದಳು.

# ದೇವಿಯವರು

ಸನ್ ಸಾವಿರದ ಒಂಬೈನೂರ ನಲವತ್ತನಾಲ್ಕರಲ್ಲಿ ಮಹಾರಾಜ ರಾಜೇಶ್ರೀ ಸಿರಿಯೂರು ನಾರಾಯಣರಾಯರು, ತಮ್ಮ ಧರ್ಮಪತ್ನಿ ಹರಿದ್ರಾ-ಕುಂಕುಮ ಶೋಭಿತರಾದ ಮಾತೃಶ್ರೀ ಅನಸೂಯಾ ದೇವಿಯವರನ್ನೂ ತಮ್ಮಿಬ್ಬರ ಏಕಮಾತ್ರ ಪುತ್ರ ಚಿರಂಜೀವಿ ರಾಜರಾಜೇಶ್ರೀ ವೆಂಕಟೇಶನನ್ನೂ ಹಿಂದೆಬಿಟ್ಟು ಅಕಸ್ಮಾತ್ತಾಗಿ ಪರಂಧಾಮವನ್ನೇರಿದರು. ಆಗ ದೇವಿಯವರಿಗೆ ನಲವತ್ತು ವರ್ಷ ವಯಸ್ಸು, ವೆಂಕಟೇಶನಿಗೆ ಮೂರು. ಈ ದಂಪತಿಗಳು ಬಹಳ ಕಾಲ ಮಕ್ಕಳಿಲ್ಲದೆ ಹರಕೆ ಕಟ್ಟಿ, ಪುಣ್ಯತೀರ್ಥಗಳಿಗೆ ಯಾತ್ರೆಮಾಡಿ, ದಕ್ಷಿಣದಲ್ಲಿ ರಾಮೇಶ್ವರದಿಂದ ಉತ್ತರದಲ್ಲಿ ಬದರೀನಾಥದವರೆಗಿನ ಪ್ರಸಿದ್ಧ ದೇವಾಲಯಗಳಲ್ಲೆಲ್ಲ ನಂದಾದೀಪಕ್ಕೆ ಏರ್ಪಾಡುಗಳನ್ನು ಮಾಡಿ ಅನೇಕ ಸಿದ್ಧರ ಶುಶ್ರೂಷೆ ಮಾಡಿ, ಈ ಪುತ್ರರತ್ನವನ್ನು ವರಪ್ರಸಾದವನ್ನಾಗಿ ಪಡೆದಿದ್ದರು.

ಸ್ವರ್ಗವಾಸಿ ಸಿರಿಯೂರರು ಜೀವನದಲ್ಲಿ ಎಂಜನಿಯರ್ ಮತ್ತು ಕಂಟ್ರಾಕ್ಟರ್ ಇಪ್ಪತ್ತು ವರ್ಷಗಳ ಕೆಳಗೇ ಬೊಂಬಾಯಿಗೆ ಬಂದಿದ್ದು, ತಮ್ಮ ಉದ್ಯೋಗವನ್ನು ಮೊದಲು ಮಾಡಿದ್ದುದರಿಂದ, ಸಾಯುವ ವೇಳೆಗೆ ಇಂಪೀರಿಯಲ್ ಬ್ಯಾಂಕಿನಲ್ಲಿ ಒಂದು ಲಕ್ಷ ರೂಪಾಯಿ ಕೂಡಿಸಿಟ್ಟಿದ್ದಲ್ಲದೆ, ದಾದರಿನಲ್ಲಿ ಮೂರು ಅಂತಸ್ತಿನ ಮನೆಯೊಂದನ್ನೂ ಕಟ್ಟಿದ್ದರು. ಈ ಮನೆಯ ಕಡೆಯ ಅಂತಸ್ತಿನಲ್ಲಿ ಅವರು ವಾಸವಾಗಿದ್ದು, ಬಾಕಿಯದನ್ನು ಬಾಡಿಗೆಗೆ ಕೊಟ್ಟಿದ್ದುದರಿಂದ, ಬಾಡಿಗೆಯ ರೂಪದಲ್ಲಿ ತಿಂಗಳಿಗೆ ಇನ್ನೂರು ಐವತ್ತು ರೂಪಾಯಿ ವರಮಾನವು ಇತ್ತು. ಇದರ ಜತೆಗೆ ರಾಯರು ಕೊಂಡಿದ್ದ ಷೇರುಗಳಿಂದ ಸರಾಸರಿ ತಿಂಗಳಿಗೆ ಇನ್ನೂರು ರೂಪಾಯಿಗಳು ಸಂದಾಯವಾಗುತ್ತಿದ್ದುವು.

ಹೀಗೆಂದ ಮೇಲೆ ರಾಯರು ಇಲ್ಲವಾದರೂ ಅವರ ಸಂಸಾರಕ್ಕೇನು ಕಷ್ಟದಶೆ ಬರಲಿಲ್ಲ. ಸಂಸಾರದ ವೆಚ್ಚವನ್ನು ಕಡಿಮೆ ಮಾಡುವ ಅಗತ್ಯವೂ ಒದಗಲಿಲ್ಲ. ಆಳುಗಳು, ಅಡಿಗೆಯವರು, ಮೋಟಾರುಕಾರು ಎಲ್ಲಾ ಎಂದಿನಂತೆಯೆ ಇದ್ದುವು. ರಾಯರ ತರುವಾಯ ಈ ಮನೆ,

ಹಣಗಳ ಮೇಲ್ವಿಚಾರಣೆ ದೇವಿಯವರ ಮೇಲೆ ಬಿದ್ದಿತು. ಅವರು ಅದನ್ನು ದಕ್ಷತೆಯಿಂದ ನಡೆಯಿಸಿಕೊಂಡು ಹೋಗುತ್ತಿದ್ದರು. ರಾಯರು ಇಲ್ಲವಾಗಲು, ಮನೆಯನ್ನು ಮಾರಿಕೊಂಡು. ಅವರ ಊರು ಮೈಸೂರಿಗೆ ಹೋಗುವ ಯೋಚನೆಯನ್ನು ಮಾಡಬಹುದಾಗಿತ್ತು. ಆದರೆ ಇಷ್ಟು ವರ್ಷ ಬೊಂಬಾಯಿಯಲ್ಲೇ ಇದ್ದು ಕೇವಲ ಸ್ಥಳೀಯರಂತೆಯೇ ಆಗಿಬಿಟ್ಟಿರುವುದರಿಂದ ಇಲ್ಲಿಯೇ ನೆಲಸಲು ಅವರು ಮನಸ್ಸುಮಾಡಿದರು.

ದೇವಿಯವರು ಇಷ್ಟು ವರ್ಷಗಳನ್ನು ಬೊಂಬಾಯಿಯಂತಹ ಮಿಶ್ರ ಪಟ್ಟಣದಲ್ಲಿ ಕಳೆದಿದ್ದರೂ ಅಲ್ಲಿಯ ನವೀನತೆಗೆ ಮನಸೋತಿರಲಿಲ್ಲ. ಅಲ್ಲಿಯ ಜೀವನಸಮುದ್ರದಲ್ಲಿ ಅವರ ಸಂಸಾರವು ಒಂದು ದ್ವೀಪದಂತೆ. ಅವರು ತಮ್ಮ ಹಳೆಯ ಸಂಪ್ರದಾಯಗಳನ್ನು ಅಚ್ಚಳಿಯದೆ ನಡೆಸಿಕೊಂಡು ಬಂದಿದ್ದರು; ಅಲ್ಲದೆ ವರ್ಷ ವರ್ಷ ಕಳೆದಂತೆಲ್ಲ ಅವರ ಆಚಾರ ನಿಯಮಗಳು ಹೆಚ್ಚು ಹೆಚ್ಚು ಬಿಗಿಯಾಗತೊಡಗಿದವು. ಅವರ ಕೃಶವಾದ ಶರೀರ, ನರೆಯುತ್ತಿದ್ದ ಕೂದಲು, ಕಪ್ಪಾದ ಮತ್ತು ಪದೇ ಪದೇ ಬರುವ ವ್ರತಗಳು ದೇಹದ ಮೇಲೆ ಯಾವ ಪರಿಣಾಮವನ್ನು ಉಂಟು ಮಾಡಬಹುದೆಂದು ಸೂಚಿಸುವಂತಿದ್ದುವು ಅವರ ಆಳವಾದ ಕಣ್ಣುಗಳು, ನಿದ್ದೆ ನುಂಗುವ ಜಾಗರಣೆ–ಧನುರ್ಮಾಸಾದಿಗಳ ಬವಣೆಯನ್ನು ತೋರಿಸುತ್ತಿದ್ದವು ಅವರ ಚಿನ್ನದಂಚಿನ ಕನ್ನಡಕವನ್ನು ನೋಡಿದಾಗ, ನಿತ್ಯ ಸಹಸ್ರನಾಮ, ಪುರಾಣ-ಪಾರಾಯಣಾದಿಗಳ ನೆನಪು ಬಾರದಿರುತ್ತಿರಲಿಲ್ಲ ಅವರು ಉಡುತ್ತಿದ್ದ ಕೆಂಪು ಅಂಚಿನ ಮಾಸಲು ಬಣ್ಣದ ರೇಶ್ಮೆ ಸೀರೆಯು, ಅವರ ‘ಮಡಿ’ಗೆ ಕುರುಹಾಗಿದ್ದಿತು

ದೇವಿಯವರ ಮನೆಯಲ್ಲಿ ಬೆಳಿಗ್ಗೆ ಸಂಜೆ ತಪ್ಪದೆ ದೇವರಪೂಜೆ ಮಂಗಳಾರತಿಗಳು ನಡೆಯುತ್ತ ಹಲವು ಹತ್ತು ವರ್ಷಗಳಾಗಿದ್ದುವು. ಸಂಸಾರದ ಮೊದಲಿನಲ್ಲಿ ಹಚ್ಚಿದ ತುಪ್ಪದ ದೀಪವು ಆರದೆ ಇಲ್ಲಿಯವರೆಗೂ ಉರಿಯುತ್ತಿದ್ದಿತು. ಮೈಸೂರಿನ ಪಂಚಾಂಗದಲ್ಲಿಯ ಪ್ರಥಮ ಮತ್ತು ಸಾಮಾನ್ಯ ಏಕಾದಶಿಗಳು–ಕೆಲವು ಸಮಯದಲ್ಲಿ ಜಂಟಿ ಏಕಾದಶಿಗಳು—, ನೃಸಿಂಹ ಜಯಂತಿ, ಶಂಕರ ಜಯಂತಿ, ಮೊದಲಾದ ಜಯಂತಿಗಳು, ವರಸಿದ್ಧಿವಿನಾಯಕ ವ್ರತ, ವರಮಹಾಲಕ್ಷ್ಮೀ ವ್ರತ ಮೊದಲಾದ ವ್ರತ

ಗಳು, ನಂಜನಗೂಡು, ಮೇಲುಕೋಟೆ ಮೊದಲಾದ ರಥಜಾತ್ರೆಗಳು, ಮಠಾಚಾರ್ಯರ ಜನ್ಮ-ಪುಣ್ಯದಿನಗಳು, ನಾಗಪಂಚಮಿ, ಸಿರಿಯಾಳಷಷ್ಠಿ, ರಥಸಪ್ತಮಿ, ಜನ್ಮಾಷ್ಟಮಿ, ಮಹಾನವಮಿ, ವಿಜಯದಶಮಿ ಮೊದಲಾದ ಅನೇಕಾನೇಕ ವರ್ಷಾವಧಿ ಹಬ್ಬಗಳು, ಮಧ್ಯೆ ಮಧ್ಯೆ ಸತ್ಯನಾರಾಯಣನ ಪೂಜೆಗಳು ಇವೆಲ್ಲವು ಅತಿ ವಿಜೃಂಭಣೆಯಿಂದ ಜರುಗುತ್ತಿದ್ದವು. ನವರಾತ್ರಿಯ ಹತ್ತು ದಿನಗಳು ವಿಶೇಷ ಪೂಜೆ, ಸೂರ್ಯ ನಮಸ್ಕಾರ, ರಾಮನವಮಿ ಒಂಬತ್ತು ದಿನ ಭಜನೆ ಮತ್ತು ಕಡೆಯಲ್ಲಿ ಪಟ್ಟಾಭಿಷೇಕ ಮಹೋತ್ಸವ, ಎಂಟು ದಿನ ವಿನಾಯಕನ ಮಂಗಳಾರತಿ, ಮಹಾಶಿವರಾತ್ರಿ ಜಾಗರಣೆ, ಯಾಮಪೂಜೆಗಳು ಇತ್ಯಾದಿ ಸಂದರ್ಭಗಳು ಮಹಾ ವೈಭವದಿಂದ ನಡೆಯುತ್ತಿದ್ದುವು.

ಅವರು ನಾಸಿಕಕ್ಕೆ ಹೋಗಿ ಗೋದಾವರಿ ಸ್ನಾನ ಮಾಡದ ಗ್ರಹಣ-ಸಂಕ್ರಮಣವಿಲ್ಲ. ಇದು ತಪ್ಪಿದ ಒಂದೆರಡು ಸಲ ತ್ರಿವೇಣೀ ಸಂಗಮಕ್ಕೇ ಹೋಗಿ ಬಂದ ಪುಣ್ಯವಂತೆ ಆಕೆ. ಇಂತಹ ಮಹಾದೇವಿಯ ಮತ, ಆಚಾರ-ಶ್ರದ್ಧೆಗಳನ್ನು ಕಂಡು ನೆರೆಹೊರೆಯವರು, ನೆಂಟರಿಷ್ಟರು, ಹೇಳಿ ಕೇಳಿದವರು ಮೆಚ್ಚಿ ಆಶ್ಚರ್ಯಪಡುತ್ತಿದ್ದುದೇನು ಹೆಚ್ಚಲ್ಲ. ದೇವರು ಯಥೇಷ್ಟವಾದ ಅನುಕೂಲಗಳನ್ನು ಕೊಟ್ಟಿರುವಲ್ಲಿ ಅವುಗಳನ್ನು ಹೀಗೆ ಸದ್ವಿನಿಯೋಗಿಸುತ್ತಿದ್ದ ದೇವಿಯವರನ್ನು ಬಹಳ ಜನ ಧನ್ಯೆಯೆಂದು ಸ್ತುತಿಸುತ್ತಿದ್ದರು.

ಇಂತಹ ಕಾಲಗಳಲ್ಲಿ ಅವರು ವೆಚ್ಚಕ್ಕೆ ಹಿಂದು ಮುಂದು ನೋಡುತ್ತಿರಲಿಲ್ಲ. ಅವರ ಪತಿಯ ವೈದಿಕವು ಇಂದಿಗೂ ನಾಳೆಗೂ ಎಲ್ಲರಿಗೂ ಮಾದರಿಯಾಗಿದೆ. ಆಗ ಮೈಸೂರಿನ ಅರಮನೆಯ ಪುರೋಹಿತಗೋಷ್ಠಿಯಿಂದಲೇ ಇಬ್ಬರು ವೇದಮೂರ್ತಿಗಳು ವಸಿಷ್ಠ-ವಾಮದೇವರಂತೆ ದಯಮಾಡಿಸಿದ್ದರು. ಅವರಿಗೆ ಧೋತ್ರಗಳ ದಾನವೇನು, ಸುವರ್ಣದಾನವೇನು, ಹೇಳತೀರದು. ಇದರ ಜೊತೆಗೆ ಗೋದಾನ ಬೇರೆ. ಈ ದಾನವನ್ನು ಸಾಗಿಸಲಾರದೆ ಪುರೋಹಿತರು ವಿಕ್ರಯಿಸಲಾಗಿ, ನಾವೇ ನಾನೂರು ರೂಪಾಯಿಗೆ ಕೊಂಡುಕೊಂಡೆವು. ಭೂದಾನವು ಆಯಿತು. ಕಾವೇರಿಯ ನಾಲೆಯ ಕೆಳಗೆ, ಎರಡೆರಡು ಎಕರೆ ಜಮೀನನ್ನು ಕೊಂಡು ಈ ಅರ

ಮನೆಯ ವಿದ್ವಾಂಸರಿಗೆ ಬರೆದುಕೊಟ್ಟರು. ವೈಕುಂಠ ಸಮಾರಾಧನೆಯ ದಿನದ ವೈಭವವಂತೂ ಮಿತಿಗಾಣದು. ರಾಯರ ಮತ್ತು ದೇವಿಯವರ ಮಿತ್ರಮಂಡಲಿಯ ದೊಡ್ಡ ದೊಡ್ಡ ಮನುಷ್ಯರೆಲ್ಲರೂ—ಒಬ್ಬರನ್ನೂ ಬಿಡದಂತೆ—ಆಹ್ವಾನಿತರಾಗಿದ್ದರು. ಬೆಂಗಳೂರಿನಿಂದ ಉಡುಪಿ ಅಡಿಗೆಯವರೇ ಬಂದು ನಾನಾ ಭಕ್ಷ್ಯ-ಭೋಜ್ಯಗಳನ್ನು ಮಾಡಿ, ಈ ಮಹಾಜನರನ್ನೆಲ್ಲ ತಣಿಸಿದರು. ಊಟದ ಕೊನೆಗೆ ಬ್ರಾಹ್ಮಣ ಮುತ್ತೈದೆಯರೆಲ್ಲರಿಗೂ ಸಾಲ್ಯಾಣ ದಕ್ಷಿಣೆ ಬೇರೆ. ಆಗ "ರಾಯರು ದುಡ್ಡು ಕೂಡಿಹಾಕಿದುದಕ್ಕೂ ಸಾರ್ಥಕವಾಯಿತು, ಸದ್ಗತಿಯಲ್ಲೂ ಅತ್ಯುತ್ತಮವಾದುದನ್ನೇ ಈ ಮೂಲಕ ರಾಯರು ಗಳಿಸಿರುವುದರಲ್ಲಿ ಸಂದೇಹವಿಲ್ಲ" ಎಂದು ಜನರು ಹೇಳಿಕೊಂಡರು.

ದೇವಿಯವರ ಮನೆಯ ಸತ್ಯನಾರಾಯಣನ ಪೂಜೆಯೊಂದರ ಅದೊಂದು ಮಹಾಸಮಾರಂಭ ಇದು ಆಗಾಗ ಆಗುತ್ತಿರಲೇಬೇಕು ಇವರ ಸಂಸಾರದಲ್ಲಿ ಯಾವುದೊಂದು ಸಣ್ಣ ದುಃಖದಿಂದ ಪಾರಾದರೂ, ಆಗಬೇಕಾದರೂ, ಯಾವುದಾದರೊಂದು ಒಳ್ಳೆಯದು ನಡೆದರೂ. ಪರಮಾತ್ಮನಿಗೆ ಈ ಮೂಲಕವಾಗಿಯೇ ಧನ್ಯವಾದಗಳನ್ನರ್ಪಿಸುವ ಪದ್ಧತಿ. ಬೊಂಬಾಯಿನ ಜೋಯಿಸವರ್ಗಕ್ಕೇ ಮುಖಂಡರಾದ ರಾಮಜೋಯಿಸರೇ ದಯಮಾಡಿಸಿ, ಪೂಜೆ-ಕಥೆಗಳನ್ನು ಪೂರ್ತಿಮಾಡಿ, ದೇವಿಯವರ ದಾನ ಉಪಚಾರಗಳನ್ನು ಕೈಕೊಳ್ಳುತ್ತಿದ್ದರು ಈ ಸಂದರ್ಭಗಳ ಸಂಬಂಧವಾಗಿ ಆದ ಮಾರನೆಯ ದಿನದ ಸಂತರ್ಪಣೆಯು ನೆರೆಯಲ್ಲಿದ್ದ ನಮಗೆ ಅಮಾವಾಸ್ಯೆ-ಹುಣ್ಣಿಮೆಗಳಂತಾಗಿದ್ದುವು.

ಇಷ್ಟೇ ಅಲ್ಲದೆ, ದೇವಿಯವರು ಮೈಸೂರಿಗೆ ಆಗಾಗ ಹೋಗಿ ಧರ್ಮಕಾರ್ಯಗಳನ್ನು ಮಾಡುತ್ತಿದ್ದರು. ರಾಯರು ಸತ್ತವರುಷವೆ ಒಟ್ಟಿಗೆ ಆರು ಉಪನಯನ, ಮೂರು ಮದುವೆಗಳನ್ನು ಮಾಡಿಸಿದರು. ಇನ್ನೆರಡು ವರ್ಷ ಕಳೆದು ಮತ್ತೆ ಆರು ಉಪನಯನ, ಮೂರು ಮದುವೆ. ಇವರ ಧರ್ಮಪ್ರವರ್ತನೆಯನ್ನು ನೋಡಿ ಜನರು ಬೆರಗಾಗಿ ಸ್ತೋತ್ರಮಾಡುತ್ತಿದ್ದರು. ಹೀಗೆ ಮೂರು ಬಾರಿಯಾದಮೇಲೆ, ಜನರು ಇವರಿಗೆ 'ಧರ್ಮಪರಾಯಣೆ' ಎಂಬ ಬಿರುದು ದರ್ಬಾರಿನಿಂದ ಬರುವುದು ಕೇವಲ

ದಿನಗಳ ವಿಷಯವೆಂದುಕೊಳ್ಳುತ್ತಿದ್ದರು. 'ಈಗಾಗಲೇ ಬಂದಿಲ್ಲವಲ್ಲ' ಎಂದು ಅನೇಕರಿಗೆ ದರ್ಬಾರಿನಮೇಲೆ ಅಸಹನೆ. ಅನೇಕವೇಳೆ ಬಹಿರಂಗವಾಗಿಯೇ ಆಕ್ಷೇಪಿಸುತ್ತಿದ್ದರು. ಆದರೆ ದೇವಿಯವರು ಮಾತ್ರ ಇದಕ್ಕೆ ಆಶಿಸುತ್ತಿರಲೂ ಇಲ್ಲ, ಅದಕ್ಕೆ ಗಮನಕೊಡುತ್ತಲೂ ಇರಲಿಲ್ಲ. ಅವರ ಧರ್ಮಪ್ರೇರಣೆಯೆಲ್ಲ ಪರದಲ್ಲಿ ಸದ್ಗತಿಯ ಸಾಧನೆಗಾಗಿ ಮಾತ್ರ. ಇಹದಲ್ಲಿ ಅವರಿಗೆ ಇಚ್ಛೆಯಾಗಲಿ ನಂಬಿಕೆಯಾಗಲಿ ಇರಲಿಲ್ಲ.

ಇದನ್ನೆಲ್ಲ ಹೇಳಿದರೆ ದೇವಿಯವರು ಹೇಗೆಂದರೆ ಹಾಗೆ ದುಡ್ಡನ್ನು ಚೆಲ್ಲುತ್ತಿದ್ದರೆಂದು ಯಾರು ಭಾವಿಸಿಕೊಳ್ಳಬಾರದು. ಈಗಾಗಲೆ ಕಂಡಂತೆ ಅವರ ದಾನವು ಪಾತ್ರಪರವಿತ್ತು, ವಿಧಿವತ್ತಾಗಿಯೆ ಸದ್ಗತಿಗೆ ಮೆಟ್ಟಿಲಾಗಿ ಮಾತ್ರ ನಡೆಯುತ್ತಿತ್ತು. ಅವರು ಮಾರ್ಕೆಟ್ಟಿಗೆ ಹೋದರೆ—ಅವರೇ ಹೋಗುತ್ತಿದ್ದರು—ಕೇಳಿದ್ದನ್ನು ಕೊಟ್ಟು ತರುವ ಮುಂಘರಲ್ಲ. ಅವರ ಚೌಕಾಸಿಯಲ್ಲಿ ಅತ್ಯುತ್ತಮವಾದದು ಅತಿ ಅಗ್ಗವಾಗಿಯು ದೊರಕಬೇಕು. ಹೀಗೆ ತರಕಾರಿ, ಹೂ, ಹಣ್ಣಿನವರ ಮೇಲೆ ಒಂದು ಚಿಕ್ಕ ಕಾಸನ್ನೂ ಎಸಯುತ್ತಿರಲಿಲ್ಲ. ಜಾಪೆ, ಹಗ್ಗ ಮಾರುವವರಿಗಂತೂ ಇವರನ್ನು ಕಂಡರೆ ಹೆದರಿಕೆಯು. ಸಾಮಾನನ್ನು ಹೊರುವ ಕೂಲಿಗಳಿಗಂತೂ, ಯಾರಿಂದಲಾದರೂ ಒಂದು ಕಾಸನ್ನು ಹೆಚ್ಚಾಗಿ ತೆಗೆಯಬಹುದು. ಆದರೆ ಇವರಿಂದ ತೆಗೆಯುವುದರಲ್ಲಿ ಅವರ ಯುಕ್ತಿಯೆಲ್ಲವೂ ವ್ಯಥಾ ವೆಚ್ಚವಾಗಿ ಹೋಗುತ್ತಿತ್ತು. ಈ ಕೂಲಿಗಳು ದರೋಡೆಗಾರರೆಂದೂ ಅವರನ್ನು ಕಾನೂನಿಗೊಳಪಡಿಸಬೇಕೆಂದೂ ಹಲವು ಬಾರಿ ಇವರು ಕಂಡವರಿಗೆಲ್ಲ ಹೇಳಿದುದು ಜ್ಞಾಪಕವಿದೆ. ಹಾಗೆಯೇ ತಿರುಕರ ವಿಷಯವಾಗಿಯೂ ಇವರು ಮುಂದುವರಿದ ಅಭಿಪ್ರಾಯದವರಾಗಿದ್ದರು. ಆದರೆ ಪುಣ್ಯಕ್ಷೇತ್ರಗಳಲ್ಲಿರುವವರನ್ನು ಮಾತ್ರ ಈ ನಿಷೇಧಕ್ಕೆ ಒಳಪಡಿಸುತ್ತಿರಲಿಲ್ಲ. ಇವರು ಒಂದೊಂದು ವೇಳೆ ಲೋಕಲು ರೈಲಿನಲ್ಲಿ ಪ್ರಯಾಣ ಮಾಡಬೇಕಾಗಿ ಬಂದಾಗ, ಸೆಕೆಂಡುಕ್ಲಾಸಿನ ಮೇಲೆ ದುಡ್ಡನ್ನೆಸೆಯುವವರಲ್ಲ. ಅವರ ಸರಳತೆಗೆ ಇದು ಸರಿಹೋಗುತ್ತಿರಲಿಲ್ಲ. ನೂರಾಣೆಯನ್ನು ಕೊಡುವ ಕಡೆ ಒಂಬತ್ತಾಣೆ ಕೊಡುವುದು ಅವಿವೇಕವೆಂದು ಅನೇಕ ವೇಳೆ ಅಭಿಪ್ರಾಯಪಟ್ಟಿದ್ದರು. ಅಲ್ಲದೆ ಇನ್ನೂ ಮುಂದೆ ಹೋಗಿ, ಅವರ

ಮಗನಿಗೆ ನಾಲ್ಕುವರ್ಷವಾದ ಮೇಲೂ ಅವನ ಬೆಳವಣಿಗೆ ಸಾಕಾದಷ್ಟಿಲ್ಲ ವೆಂದು ಮನಗಂಡು, ಅವನಿಗೆ ಟಿಕೆಟ್ಟನ್ನು ತೆಗೆದುಕೊಳ್ಳದೆ ಉಳಿತಾಯ ಮಾಡುತ್ತಿದ್ದರು. ಹಾಗೆಯೇ ಪತ್ರಿಕೆಗಳಿಗಾಗಿ ಒಂದು ಬಿಲ್ಲೆಯನ್ನೂ ಅವರು ಕೊಟ್ಟವರಲ್ಲ ಅಲ್ಲಿಯ ಸುಳ್ಳು-ಸಟೆಗಳನ್ನೇಕೆ ಕೊಳ್ಳಬೇಕೆಂದು ಅವರ ವಾದ ಆದುದರಿಂದ ನಮ್ಮ ಮನೆಗೆ ತರಿಸುವ 'ತಾಯಿನಾಡ'ನ್ನೇ ಮಾರನೆಯ ದಿನ ತರಿಸಿಕೊಂಡು ನೋಡಿ ವಾಪಸು ಕಳುಹಿಸಿಬಿಡುತ್ತಿದ್ದರು. ಹೀಗೆ ಅವರು ಪ್ರೋಲುವೆಚ್ಚವೇನನ್ನೂ ಮಾಡುವವರಲ್ಲ. ದೇವರ ಸೇವೆ ಯೆಂದರೆ—ಪೂಜ ಪುನಸ್ಕಾರಗಳಲ್ಲಿ—ಮಾತ್ರ ಅವರ ಧಾರಾಳಕ್ಕೆ ಮಿತಿ ಯಿರಲಿಲ್ಲ.

ದೇವರಲ್ಲಿ ಇಷ್ಟು ಶ್ರದ್ಧಾಭಕ್ತಿ ತೋರಿಸುತ್ತ, ಮತಾಚಾರಗಳನ್ನು ಚಾಚೂ ತಪ್ಪದೆ ನಡೆಯಿಸಿಕೊಂಡು ಬರುತ್ತಿದ್ದ ಇಂತಹ ಸಾತ್ತ್ವಿಕ ಸಂಸಾರಕ್ಕೂ ವಿಧಿಯು ಆಗಾಗ ತೊಂದರೆ ಕೊಡದೆ ಇರುತ್ತಿರಲಿಲ್ಲ. ಮನೆಯಲ್ಲಿ ಎರಡು ಮೂರು ಸಾರಿ ಕಳ್ಳತನವಾಗಿ, ಬಹಳ ಬೆಲೆಯ ಚಿನ್ನದ ವಿಗ್ರಹಗಳು, ಬೆಳ್ಳಿಯ ಪೂಜಾ-ಸಲಕರಣೆಗಳು, ಊಟದ ತಟ್ಟೆ-ಬಟ್ಟಿಗಳು, ಜರತಾರಿಯ ಸೀರೆ, ಅಲ್ಪ ಸ್ವಲ್ಪ ನಗದು ಇವೆಲ್ಲವೂ ಕಳೆದು ಹೋಗಿದ್ದುವು. ಇದರ ಪರಿಣಾಮವಾಗಿ ಪೂಜೆಯ ಆಚಾರ್ಯರಿಂದ ಆಳಿನವರೆಗೆ ಎಲ್ಲ ಬದಲಾಯಿಸಲ್ಪಟ್ಟಿದ್ದರು ಆದರೂ ಈ ಕಳ್ಳತನದ ಸಂದರ್ಭವೇನೂ ಮುಂದೆ ಇರುವುದಿಲ್ಲವೆಂದು ಹೇಳಲಾಗದಂತಿತ್ತು. ಒಂದುಬಾರಿ ದೇವಿಯವರು ತಮ್ಮ ಹಣದ ಚೀಲವನ್ನು ಕೆಳಗಿಟ್ಟು ಬದನೆಯಕಾಯಿಯನ್ನು ಆರಿಸುತ್ತ, ಚೌಕಸಿಯೊಳಗೆ ಮನಸ್ಸನ್ನು ತೊಡಗಿದ್ದಾಗ, ದುರಾತ್ಮರು ಯಾರೋ ಆ ಚೀಲವನ್ನು ಅಪಹರಿಸಿದ್ದರು. ಇದರಿಂದ ಇನ್ನೂರು ರೂಪಾಯಿಗಳ ಮೇಲೆ ನಷ್ಟವಾಗಿತ್ತು. ಇದಲ್ಲದೆ ಒಂದೆರಡು ಕಂಪೆನಿಯ ಷೇರುಗಳು ಬಹಳ ಮಟ್ಟಿಗೆ ಕೆಳಗಿಳಿದು, ಅದರಿಂದ ಬೇರೆ ನಷ್ಟವನ್ನುಂಟುಮಾಡಿದ್ದುವು. 'ಹೀಗೆ ಮುಂದೆಯೂ ಆಗಬಹುದೋ!' ಎಂಬ ಭಯವು ಬೇರೆ. ಆಳು, ಅಡಿಗೆಯವರು, ಆಗಾಗ ತಮ್ಮ ಸಂಬಳ ಸರಿಯಾಗಿ ಸಂದಾಯವಾಗಿಲ್ಲವೆಂದು ಜಗಳವಾಡಿ ಕೆಲಸಬಿಟ್ಟು ಇವರನ್ನು ಕೋಟಲೆಗೆ ಗುರಿಮಾಡುತ್ತಿದ್ದರು. ಇದ್ದ

ಮೋಟಾರು ಕಾರಂತೂ ಮೂರುಹೊತ್ತೂ ಮುರಿದುಬಿದ್ದು ಮನೆಯಲ್ಲಿ
ಇರುತ್ತಿತ್ತು. ಇದರ ಉಪಯೋಗವಿಲ್ಲದಿದ್ದರೂ ಡ್ರೈವರನು ಮಾತ್ರ
ಗಡಿಬಿಡಿಮಾಡಿ ಸಂಬಳವನ್ನು ದೊರಕಿಸಿಕೊಳ್ಳುತ್ತಿದ್ದುದಲ್ಲದೆ, ಆಗಾ
ದೇವಿಯವರಿಗೆ ಆಶೆತೋರಿಸಿ, ಮೋಸಮಾಡಿ, ಬಾಯಿಬಡಿದು ರಿಪೇ
ಗಾಗಿ ಹತ್ತಾರು ರೂಪಾಯಿಗಳನ್ನು ವ್ಯರ್ಥವಾಗಿ ಖರ್ಚುಮಾಡಿ, ಇಲ್ಲಿಯ
ವರೆಗೆ ಎಷ್ಟೋ ಹಣವನ್ನು ನೀರಿಗೆಸೆಯುವಂತೆ ಮಾಡಿದ್ದನು. ತೋ
ಗಾರನು ಹಣ್ಣು-ಹೂಗಳನ್ನು ಕದ್ದು ಸಾಗಿಸಿ ಮಾರಿಕೊಳ್ಳುತ್ತಿದ್ದನು
ಬಾಡಿಗೆಯವರು ಕೆಲವರು ಅನೇಕ ತಿಂಗಳುಗಳಿದ್ದು ಬಾಡಿಗೆ ಕೊಡದೆ
ಜಗಳವಾಡಿ ಬಿಟ್ಟು ನಷ್ಟಮಾಡಿದ್ದರು. ಇದರ ಜೊತೆಗೆ ಲಾಯರು
ಅವರ ಮೇಲೆ ಕೇಸುಮಾಡಿಸಿ ಅದಕ್ಕೆ ಬೇರೆ ತಮಗೆ ಬೇರೆ ಹಣವನ್ನು
ಸೆಳೆಯುತ್ತಿದ್ದರಾದರೂ, ಯಾವುದೂ ಇಲ್ಲಿಯವರೆಗೆ ಇವರ ಕಡೆ
ಇತ್ಯರ್ಥವಾಗಿರಲಿಲ್ಲ. ಇವೂ ಇನ್ನೂ ಹಾಗೆಯೇ ಹಲವು ಸಂಗ
ಸನ್ನಿವೇಶಗಳೂ ನಷ್ಟವನ್ನುಂಟುಮಾಡುತ್ತಿದ್ದುದಲ್ಲದೆ, ದೇವಿಯವ
ಮನಸ್ಸಿಗೆ ಸದಾ ಕಿರಿಕಿರಿಯನ್ನುಂಟುಮಾಡುತ್ತಿದ್ದವು. ಇದೂ ಅಲ್ಲದೆ
ದೇವಿಯವರ ಶರೀರವೂ ಅವರನ್ನು ಬಾಧಿಸುತ್ತಿತ್ತು. ಬೆಳಗ್ಗೆದ್ದರೆ ಪಿತ್ತ
ಸಂಕಟ, ನಿತ್ರಾಣ; ಆಗಾಗ ವಾಯುನೋವು, ಕತ್ತಿನಲ್ಲಿಯೋ
ಮಂಡಿಯಲ್ಲಿಯೋ 'ರೂಮಾಟಿಕ್' ಹಿಂಸೆ. ರಾತ್ರಿ ನಿದ್ದೆಬಾರದು
ವಂಶಗತವಾಗಿ ಬಂದ ಹಲ್ಲುನೋವು. ಈಗಾಗಲೆ ಎಂಟು—ಹತ್ತು
ಹುಳುಕು ಹಲ್ಲನ್ನು ಕೀಳಿಸಿಕೊಂಡಿದ್ದರು. ಇನ್ನೂ ಕೀಳಬೇಕಾದುವು
ಅನೇಕವಿದ್ದುವು. ಇವುಗಳು ಸಾಲದೋ ಎನ್ನುವಂತೆ ಒಟ್ಟೊಟ್ಟಿಗೆ
ಮೂರು ದಿನ ತಲೆಯ ಶೂಲಿ ಬೇರೆ. ಈ ಸಂಕಟಗಳ ಜೊತೆಗೆ ವೈದ್ಯ
ರದು. ಅವರ ಒಂದು ರೋಗವನ್ನು ಹೋಗಲಾಡಿಸುವ ಔಷಧಿ
ಮತ್ತೊಂದು ರೋಗವನ್ನು ಬದಲಾಗಿ ತರುತ್ತಿತ್ತು. ಒಬ್ಬರನ್ನು ಬಿಟ್ಟು
ಒಬ್ಬರಂತೆ ಹಲವು ವೈದ್ಯರಿಗೆ ಅವಕಾಶಕೊಟ್ಟಾಯಿತು, ಫಲವಿಲ್ಲ
ಆದಷ್ಟು ಮಟ್ಟಿಗೆ ದೇವಿಯವರೇ ವೈದ್ಯರಲ್ಲಿಗೆ ಹೋಗಿಬರುತ್ತಿದ್ದರೂ,
ವೈದ್ಯರ ಬಿಲ್ಲುಗಳು ಮಾತ್ರ ನೋಡಿದ ಕಣ್ಣಿಗೆ ನೋವನ್ನು ತರುವು
ವಾಗಿದ್ದುವು

ಇಷ್ಟು ಕಷ್ಟ-ನಷ್ಟ-ನೋವುಗಳನ್ನೂ ಶಪಿಸಿಕೊಂಡಾದರೂ ಸ್ಥೈರಿಸುವ ಪ್ರಾಣಿ—ದೇವಿಯವರು. ಆದರೆ ಇವೆಲ್ಲಕ್ಕೂ ಮೀರಿದ ಒಂದು ಗಂಡಾಂತರವು ಅವರ ಜೀವನವನ್ನು ಕಿತ್ತು ತಿನ್ನುತ್ತಿದ್ದಿತು ಇದು ಚಿರಂಜೀವಿ ರಾಜರಾಜೇಶ್ರೀ ವೆಂಕಟೇಶನ ಕಾಹಿಲೆ. ವೈದ್ಯರು ಇದನ್ನು 'infantile paralysis' ಎಂದು, ಪರೀಕ್ಷಿಸಿ ತೀರ್ಮಾನವನ್ನು ಕೊಟ್ಟು ಬಿಟ್ಟಿದ್ದರು. ಇದರಿಂದ ವೆಂಕಟೇಶನಿಗೆ ಆಗುತ್ತಿದ್ದ ಹಿಂಸೆ ಹೇಳತೀರದು. ಅವನ ತಾಯಿಗೆ ಇದು ನೋಡಲಾರದ ನೋಟ. ಬಹಳ ಹಣವನ್ನು ಖರ್ಚುಮಾಡಿ ಬೊಂಬಾಯಿನ ಪ್ರಸಿದ್ಧ ವೈದ್ಯರಿಗೆ ಮಾತ್ರವಲ್ಲದೆ, ಕಲ್ಕತ್ತೆಯಲ್ಲಿಯೂ ಸಹ ಕೆಲವರಿಗೆ ತೋರಿಸಿದ್ದರು. ವರ್ಷಗಟ್ಟಲೆ ಔಷಧಿಯಾಯಿತು, ಹಣವು ಹುಣಿಸೆಯ ಬಿತ್ತದಂತೆ ಖರ್ಚಾಯಿತು. ಆದರೆ ಮಗುವಿಗೆ ಮಾತ್ರ ಗುಣವಾಗಲಿಲ್ಲ. ದೇವಿಯವರಿಗೆ ದಿಕ್ಕುತೋಚದಾಯಿತು. ಹಲವು ದೇವರಿಗೆ ಹರಕೆ ಹಾಕಿಕೊಂಡರು. ತಿರುಪತಿಯ ವೆಂಕಟೇಶನಿಗೆ ಮುಡುವನ್ನು ತೆಗೆದಿಟ್ಟಾಯಿತು. ಕಾಹಿಲೆ ವಾಸಿಯಾದೊಡನೆ ಯಾತ್ರೆ ನಡೆಯಿಸುವುದಾಗಿ ಹರಕೆ ಹೊತ್ತಾಯಿತು. ಹಲವು ಪೂಜೆ, ಪುರಸ್ಕಾರ, ಮಂತ್ರ–ಯಂತ್ರಗಳನ್ನೆಲ್ಲ ಈ ರೋಗ ನಿವಾರಣೆಗಾಗಿ ಉಪಯೋಗಿಸಿಕೊಂಡಾಯಿತು. ಪ್ರಸಿದ್ಧ ಕ್ಷೇತ್ರಗಳಿಂದ ಗಂಧ, ಕುಂಕುಮ, ವಿಭೂತಿಗಳನ್ನೂ ತರಿಸಿ ಬಳಿದು ನೋಡಾಯಿತು. ಇಷ್ಟಾಗಿ ದೈವ–ಮಾನವ ಶಕ್ತಿಯೆಲ್ಲ ಕೂಡಿದರೂ, ಮಗುವಿನ ಯಾತನೆಯೊಂದನ್ನು ನೀಗಲು ಸಮರ್ಥವಾಗಿರದಂತೆ ತೋರಿತು. ದೇವಿಯವರು ಚಿಂತೆಯಲ್ಲಿ ಮುಳುಗಿಹೋದರು. ದಿನದಿನಕ್ಕೆ ಹೆಚ್ಚು ಪ್ರಾರ್ಥನೆ ನಡೆಯಿಸುತ್ತ, ಮೇಲೆಮೇಲೆ ಮುಡುಪು ಕಟ್ಟುತ್ತ, ವ್ರತಗಳನ್ನು ನಡೆಯಿಸುತ್ತನಾಗಿದರು—ನಿವಾರಣೆಯ ಭಾರವನ್ನು ಎತ್ತುವುದಕ್ಕೆ. ಆದರೆ ಇನ್ನೂ ತಕ್ಕಡಿಯು ಎದ್ದಿರಲಿಲ್ಲ. ಪರಮಾತ್ಮನ ಲೀಲೆ, ನ್ಯಾಯಗಳು ಯಾರಿಗೆ ಸಿಲುಕಬೇಕು ?

ಹೀಗಿರುವಲ್ಲಿ, ಒಂದು ದಿನ ದೇವಿಯವರ ಹೊಸ ಸ್ನೇಹಿತರೊಬ್ಬರು ಇದನ್ನೆಲ್ಲವನ್ನೂ ಕೇಳಿ "ಇಷ್ಟೆಲ್ಲ ನೋಡಿಸಿದ್ದೀರಿ. ಇನ್ನೂ ಒಂದು ಕಡೆ ನೋಡಿಸಿಬಿಡಿ; 'ಖಾರಿ'ನ ರಾಮಕೃಷ್ಣಾಶ್ರಮದ ಧರ್ಮದ ಆಸ್ಪತ್ರೆ

ಯಲ್ಲಿ ಡಾ. ಗುಪ್ತರಿದ್ದಾರಲ್ಲಾ, ಅವರು ಬಹಳ ಬುದ್ಧಿವಂತರೆಂದು ಪ್ರಸಿದ್ಧಿ ಪಡೆಯುತ್ತಿದ್ದಾರೆ. ಸುತ್ತುಮುತ್ತಿನ ಜನವಂತೂ ದಿನೇ ದಿನೇ ಹೆಚ್ಚುತ್ತ ಅಲ್ಲಿಗೇ ಹೋಗುತ್ತಿದ್ದಾರೆ. ಅದೂ ಒಂದು ಪರೀಕ್ಷೆಯಾಗಿ ಬಿಡಲಿ'' ಎಂದು ಹೇಳಿದರು. ಆದರೆ ದೇಪಿಯವರಿಗೆ ನಂಬಿಕೆಯುಂಟಾಗ ಲಿಲ್ಲ. 'ಎಲ್ಲಾ ದೇಶದ ಉದ್ದ ಅಗಲದ ಸುಪ್ರಸಿದ್ಧ ವೈದ್ಯರೆಲ್ಲ ಮಾಡ ದಿದ್ದುದನ್ನು ಗುಪ್ತರು ಮಾಡಿಯಾರೆ? ಇವರ ಹೆಸರನ್ನೇ ಇಲ್ಲಿಯುವರೆಗೆ ಕೇಳಿರಲಿಲ್ಲ ಇವರಷ್ಟು ಬುದ್ಧಿವಂತರಿರಬಹುದು? ಈ ಯತ್ನವೂ ದಂಡ ವಾಗುವುದರಲ್ಲಿ ಸಂದೇಹವಿಲ್ಲ'' ಎಂಬ ತಮ್ಮ ಯೋಚನೆಯನ್ನು ಸ್ನೇಹಿತರಿಗೆ ಸೂಚಿಸಿದರು ಆದರೆ ಅವರು ''ಹಾಗೆ ಹೇಳಬೇಡಿ. ವೈದ್ಯರಲ್ಲಿ ಔಷಧಿಯೊಂದೇ ಸಾಲದು. ಹಸ್ತಗುಣವೂ ಇರಬೇಕು. ಅಲ್ಲದೆ ಯಾವ ಆಳದಲ್ಲಿ ಯಾವ ರತ್ನವೋ ಯಾರಿಗೆ ಗೊತ್ತು? ಅಂತು ತೋರಿಸುವುದರಲ್ಲಿ ಅಡ್ಡಿಯೇನು? ಒಳ್ಳೆಯದಾದರಂತೂ ಸರಿ; ಇಲ್ಲದಿದ್ದರ ಸಾವಿರ ಪ್ರಯತ್ನದ ಜತೆಗೆ ಇದೊಂದು, ಅಷ್ಟೆ'' ಎಂದರು. ಇದು ದೇಪಿಯವರಿಗೆ ಕೊಂಚ ಉತ್ಸಾಹ ಕೊಟ್ಟಿತು. ಹುಂ, ಹಸ್ತಗುಣ ಬೇಡವೆ, ರೋಗವನ್ನು ವಾಸಿಮಾಡುವುದಕ್ಕೆ? ನಿಜ.

* * *

ಮಾರನೆಯ ದಿನವೇ ದೇಪಿಯವರ ಕಾರು ಬಂದು ಖಾರಿ[1]ನ ಆಶ್ರಮದ ಆಸ್ಪತ್ರೆಯ ಮುಂದೆ ನಿಂತಿತು ಆಶ್ರಮದ ಆಸ್ಪತ್ರೆ ಕೇವಲ ಸಣ್ಣದು. ಎರಡೇ ಕೋಣೆ, ಮಧ್ಯೆ ದಾರಿ, ಸುತ್ತು ವರಾಂಡ. ಮೇಲೆ ಮಹಡಿಯೇನೋ ಇತ್ತು, ಆದರೆ ಅದರಲ್ಲಿ ಸ್ವಾಮಿಜಿಯವರು ವಾಸವಾಗಿ ದ್ದರು. ಕಟ್ಟಡವು ಸಣ್ಣದಿದ್ದರೂ ಅದು ಇದ್ದ ತೋಟವು ಸುಂದರವಾಗಿ ದ್ದಿತು. ಕಾರ್ಪಣ್ಯದ ಭಾವವೇನೂ ಅಲ್ಲಿ ಕಂಡುಬರುತ್ತಿರಲಿಲ್ಲ. ಎರಡು ಕೋಣೆಗಳೊಂದರಲ್ಲಿ ವೈದ್ಯರು, ಇನ್ನೊಂದರಲ್ಲಿ 'ಕಾಂಪೌಂಡಿಂಗು'. ಅತ್ತ ಕಡೆಯ ವರಾಂಡದಲ್ಲಿ ಒಂದು ತೆರೆಯನ್ನಿಟ್ಟುಕೊಂಡು ಗಾಯ ಚಿಕಿತ್ಸೆಗೆ ಸ್ಥಳಮಾಡಿಕೊಂಡಿದ್ದರು.

---

1 ಖಾರ್, ಮುಂಬಯಿಯ ಒಂದು ಸಬರ್ಬ್.

ಡಾ. ಗುಪ್ತರ ಕೋಣೆಯೂ ಸಣ್ಣದೆ. ಅದರ ಒಂದು ಕಡೆ ಬಾಗಿಲಿಗಿದಿರಾಗಿ ಒಂದು ಮೇಜು, ಎರಡು ಕುರ್ಚಿಗಳು. ಮೇಜಿನ ಮೇಲೆ ಬರವಣಿಗೆಯ ಸಲಕರಣೆ. ದಾನಕ್ಕಾಗಿ, ಮೇಲುಮುಚ್ಚಳದಲ್ಲಿ ಸಂದು ಇದ್ದ ಒಂದು ಸಣ್ಣ ಕೈಪೆಟ್ಟಿಗೆ. ಗುಪ್ತರ ಕುರ್ಚಿಯ ಹಿಂದುಗಡೆ—ಒಂದು ಗಾಜಿನ ಬೀರು, ಅದರಲ್ಲಿ ಕೆಲವು ವೈದ್ಯಕ ಪುಸ್ತಕಗಳು. ಇವರ ಮೇಜಿಗೆ ಇದಿರಾಗಿ ದೂರದ ಗೋಡೆಯಂಚಿನಲ್ಲಿ, ಕಾಯುವವರಿಗಾಗಿ ನಾಲ್ಕಾರು ಕುರ್ಚಿಗಳು ಇನ್ನು ಇತರ ವಸ್ತುಗಳೆಂದರ ರೋಗಿಗಳೆ. ಕೆಲವರು ಒಳಗೂ ಕೆಲವರು ವರಾಂಡದಲ್ಲೂ ಕಾಯುತ್ತಿದ್ದರು ಇವರ ಪೈಕಿ ಬಡಬಗ್ಗರೇ ಹೆಚ್ಚು ಡಾ ಗುಪ್ತರು ಕಪ್ಪಾದ ದಪ್ಪನಾದ ಆಳು. ಬಿಳಿಯ ಘೋತ್ರ, ಒಂದು ತೆಳುವಂಗಿ ಇಷ್ಟೇ ಅವರ ಉಡುಪು. ಅವರ ಮುಖದಲ್ಲಿ ಶಾಂತಿ—ಗಾಂಭೀರ್ಯಗಳು ಕೂಡಿದ ಮುದ್ರೆ ಈ ಭಾವವನ್ನು ಬದಲಾಯಿಸುವುದೆಂದರ, ಆಗಾಗ ರೋಗಿಗಳನ್ನು ಸಂತೋಷಪಡಿಸಲು ಯತ್ನಿಸುವ ಮಾತುಗಳಿಂದುಂಟಾದ ಮೆಲುನಗೆ ಅವರ ಮಾತೂ ಮೆತ್ತಗೆ. ಇದರಿಂದಲೇ ಅಲ್ಲಿಯ ಆವರಣದಲ್ಲೆಲ್ಲ ನಿಶ್ಶಬ್ದ..ಕೆಮ್ಮುವುದು ನರಳುವುದನ್ನು ಬಿಟ್ಟು ಜನರೆಲ್ಲ ತಾವೇ ಒಂದು ಶಿಸ್ತಿನಿಂದ ಅವರಲ್ಲಿಗೆ ಹೋಗಿ, ತಮ್ಮ ಪರೀಕ್ಷೆಯು ಮುಗಿದಮೇಲೆ ಚೀಟಿ ತೆಗೆದುಕೊಂಡು ಹೊರಕ್ಕೆ ಸಾಗುತ್ತಿದ್ದರು.

ದೇವಿಯವರು ಕಾರನ್ನಿಳಿದು, ಮಗುವನ್ನೆತ್ತಿಸಿಕೊಂಡು, ಆಸ್ಪತ್ರೆಯ ತೋಟವನ್ನು ಹಾಯ್ದು, ವರಾಂಡವನ್ನು ಮುಟ್ಟಿ, ಅಲ್ಲಿಯ ಬಡಜನರಲ್ಲಿ ದಾರಿಬಿಡಿಸಿಕೊಂಡು ನೇರವಾಗಿ ಡಾ ಗುಪ್ತರಲ್ಲಿಗೆ ಬಂದು "ಡಾಕ್ಟರೆ, ಈ ಮಗುವಿಗೆ ." ಎಂದು ಮೊದಲುಮಾಡಿದರು. ಗುಪ್ತರು ಬರೆಯುತ್ತಿದ್ದವರು ತಲೆಯೆತ್ತದೆ ಕಣ್ಣೆತ್ತಿ ನೋಡಿ, ಗಂಭೀರವಾಗಿ ವಿನಯದಿಂದ "ಕ್ಷಮಿಸಿ, ದಯೆಯಿಟ್ಟು ತಮ್ಮ ಸರದಿ ಬಂದಾಗ ಹೇಳಬೇಕಾದುದನ್ನು ಹೇಳಿರಿ. ಮನಸ್ಸಿಗೇನೂ ನೊಂದುಕೊಳ್ಳದಿರಿ. ಇಲ್ಲದಿದ್ದರೆ ಇಲ್ಲಿಯ ಕೆಲಸವು ನಮಗೆ ಕಷ್ಟವಾಗುತ್ತದೆ" ಎಂದು ತಮ್ಮ ಬರವಣಿಗೆಯನ್ನು ಮುಂದುವರಿಸಿದರು. ದೇವಿಯವರ ಮುಖ ಕೆಂಪಾಯಿತು. ಹಿಂದಕ್ಕೇನೋ ಸರಿದರು; ಆದರೆ ಅಲ್ಲಿ ಇನ್ನು ಇರಬೇಕೆ, ಹೊರಟುಹೋಗಬೇಕೆ

ಎಂಬುದು ಅವರನ್ನು ತಳಮಳಗೊಳಿಸುತ್ತಿತ್ತು. ಇಂತಹ ಸಣ್ಣ ಆಸ್ಪತ್ರೆ, ಈ ಬಡಜನ, ಈ ಸುಲಭವೈದ್ಯ ಇವರೆಲ್ಲಿ, ದೊಡ್ಡ ದೊಡ್ಡ ಆಸ್ಪತ್ರೆಗಳನ್ನೆಲ್ಲ ಹೊಕ್ಕು ಮಹಾ ಮಹಾ ವೈದ್ಯರೊಡನ್ನೆಲ್ಲ ಮಾತನಾಡಿದ್ದ ಶ್ರೀಮಂತ ಸತಿ ತಾವೆಲ್ಲಿ? ಹೀಗಿದ್ದರೂ ತಾವು ಈ ಭಿಕ್ಷುಕರೊಂದಿಗೆ ಸರದಿಗಾಗಿ ಕಾಯಬೇಕೆ? ಹೋಗಿಬಿಡುವುದು..ಆದರೆ ವೆಂಕಟೇಶುವಿನ ಕಾಹಿಲೆ? ಹುಂ. ಏನಾದರೂ ಆಗಲಿ; ಈ ಅವಮಾನವನ್ನು ಸಹಿಸಿಯೆ ನೋಡಿ ಬಿಡುವುದು..ಬಹು ಹೊತ್ತು ಚರ್ಚಿಸಿ ಹೀಗೆ ನಿರ್ಧರಿಸಿಕೊಂಡು ತಮ್ಮ ಸರದಿಯನ್ನು ಕಾಯ್ದರು.

ಡಾ. ಗುಪ್ತರು ವೆಂಕಟೇಶನನ್ನು ಬಹು ಹೊತ್ತು, ಬಹಳ ಸೂಕ್ಷ್ಮ ರೀತಿಯಲ್ಲಿ ಪರೀಕ್ಷಿಸಿದರು. ಅಷ್ಟು ಹೊತ್ತೂ ದೇವಿಯವರು ಆ ಕಾಹಿಲೆಯ ರೀತಿ, ಅದನ್ನು ತೋರಿಸಿದ್ದ ವೈದ್ಯರುಗಳು, ತಿರುಗಿದ ಊರುಗಳು ಇತ್ಯಾದಿ ಇತ್ಯಾದಿ ನಿಲ್ಲಿಸದೆ ಹೇಳುತ್ತಿದ್ದರು. ಡಾಕ್ಟರು ಇದನ್ನೆಲ್ಲ ಕೇಳುತ್ತಿದ್ದಂತೆ ತಲೆಯಾಡಿಸುತ್ತಿದ್ದರೂ ತಮ್ಮ ಪರೀಕ್ಷೆಯಲ್ಲೇ ಮಗ್ನರಾಗಿದ್ದರೆಂಬುದು ಸ್ಪಷ್ಟವಾಗಿತ್ತು. ಪರೀಕ್ಷೆಯು ಮುಗಿದೊಡನೆ ಡಾಕ್ಟರು ತಮ್ಮ ಪುಸ್ತಕದಲ್ಲೊಂದನ್ನು ತೆಗೆದು ಹಾಳೆತಿರುವಿಹಾಕಿ, ಅನಂತರ ಚೀಟಿಯೊಂದನ್ನು ಬರೆದು ದೇವಿಯವರಿಗೆ ಕೊಟ್ಟು "ಈ ಎರಡು ತೊಟ್ಟು ಔಷಧವನ್ನು ನೀರಿನಲ್ಲಿ ಕೊಡುತ್ತಾರೆ; ಇಲ್ಲಿಯೆ ಕುಡಿಸಿ ಮತ್ತೊಂದು ವಾರ ಬಿಟ್ಟುಕೊಂಡು ಬನ್ನಿ. ಮತ್ತೆ ನೋಡುತ್ತೇನೆ. ಭಯಪಡಬೇಡಿ, ವಾಸಿಯಾಗುತ್ತದೆ!" ಎಂದು ಬೇರೆಯವರಿಗೆ ಸನ್ನೆ ಮಾಡಿದರು. ದೇವಿಯವರಿಗೆ ಹೆಚ್ಚಿಗೆ ಮಾತನಾಡಲು ಅವಕಾಶ ಸಿಕ್ಕಲಿಲ್ಲ. ಹೊರಗೆ ಬಂದು ಔಷಧವನ್ನೇನೋ ತರಿಸಿ ಕುಡಿಸಿದರು. ಆದರೆ ಇದರಲ್ಲಿ ನಂಬುಗೆ ಹೇಗೆ? ಇಂಜಕ್ಷನ್ ಇಲ್ಲ; ಕಡೆಗೆ ದಿನಕ್ಕೆ ನಾಲ್ಕು ಹೊತ್ತಿನಂತೆ ಒಂದು ವಾರದ ಔಷಧಿಯು ಕೂಡ ಇಲ್ಲ. ಇದರ ಮೇಲೆ ಇನ್ನು ಒಂದು ವಾರ ಬಿಟ್ಟುಕೊಂಡು ಬರಬೇಕು. ಈ ರೀತಿಯಲ್ಲಿ ಈ ಕಾಹಿಲೆಯೇನಾದರೂ ವಾಸಿಯಾದೀತೆ? ಇದೆಲ್ಲ ಬರಿಯ ಭ್ರಮೆ. ಡಾಕ್ಟರೋ ಪುಸ್ತಕವನ್ನು ನೋಡುತ್ತಾರೆ; ಅಷ್ಟು ಹೊಸಬ. ಅಷ್ಟು ಕಮ್ಮಿ ಪರಿಶ್ರಮ. ಈ ಶ್ರಮವೆಲ್ಲ ವ್ಯರ್ಥವಾದಂತೆಯೆ ಸರಿ. ಆದರೂ

'ವಾಸಿಯಾಗುತ್ತದೆ' ಎಂದು ಎಷ್ಟು ಭರವಸೆಯಿಂದ ಹೇಳಿದರು! ಇದರ ಗುಟ್ಟೇನು? ಇನ್ನೂ ಹೋಗಿ ನೋಡುವುದೇ ಸರಿ!

ವಾರ ಕಳೆಯಿತು. ಇನ್ನೊಂದು ವಾರವೂ ಅದೇ ಔಷಧ. ಮತ್ತೆ ಒಂದು ವಾರ ಗಡುವು. ಎರಡು ವಾರ, ಮೂರು, ನಾಲ್ಕು. ಪ್ರಯೋಜನ ವಿಲ್ಲ. ಗುಣದ ಸೂಚನೆಯೇ ಇಲ್ಲ ಔಷಧವನ್ನು ಬಿಟ್ಟುಬಿಡುವುದೇ ಸರಿಯೆಂದು ದೇವಿಯವರಿಗೆ ತೋರಲು ಮೊದಲಾಯಿತು ಆದರೆ ಡಾಕ್ಟರು ಮಾತ್ರ 'ಮಗುವು ವಾಸಿಯಾಗುತ್ತಿದ್ದಾನೆ' ಎನ್ನುತ್ತಿದ್ದರು. ಅವರಿಗೆ ಏನು ಕಾಣಿಸುತ್ತಿತ್ತೋ ಏನೋ! ದೇವಿಯವರು ಐದನೆಯ ವಾರದಲ್ಲಿ ಹೋಗಬಾರದೆಂದು ನಿಶ್ಚಯಿಸಲು ಮನಸ್ಸು ಮಾಡುವಲ್ಲಿ, ಅವರಿಗೆ ಮಗುವಿನಲ್ಲಿ ಕೊಂಚ ಮಾರ್ಪಾಡು ಕಂಡಿತು. ಅವರಿಗೆ ಆಶ್ಚರ್ಯವಾಯಿತು. ತಮ್ಮ ಕಣ್ಣನ್ನೇ ತಾವು ನಂಬದಾದರು. ಗುಣ ವೇನೋ ಬಹು ಕೊಂಚವೆ, ಆದರೆ ಗುಣದ ಸೂಚನೆಯು ನಿಶ್ಚಯ. ದೇವಿಯವರಿಗೆ ಧೈರ್ಯ ಬಂದಿತು. ಉತ್ಸಾಹ ಹುಟ್ಟಿತು. ಅವರು ಬಿಡದೆ ವಾರವಾರವೂ ಆಶ್ರಮದ ಆಸ್ಪತ್ರೆಗೆ ಹೋಗುತ್ತಿದ್ದರು.

ಹೀಗೆ ಎಂಟು ತಿಂಗಳು ಕಳೆಯುವ ಹೊತ್ತಿಗೆ ವೆಂಕಟೇಶನಿಗೆ ಬಹಳ ಮಟ್ಟಿಗೆ ಗುಣವಾಗಿತ್ತು. ಅವನ ತಾಯಿಯ ಸಂತೋಷವು ಉಕ್ಕಿ ಸುರಿದರೂ ಇನ್ನೂ ಅಲ್ಪ ಸ್ವಲ್ಪ ಕಾಹಿಲೆಯಿದ್ದುದರಿಂದ, ಅದರ ಆತಂಕವು ಸಂತೋಷವನ್ನು ಮುಚ್ಚಿತ್ತು ಈ ಮಧ್ಯೆ ಡಾ. ಗುಪ್ತರಿಂದ ತಾವೂ ತಮ್ಮ ರೋಗಗಳಿಗೆ ಔಷಧ ಪಡೆದು ಗುಣಹೊಂದುತ್ತಿದ್ದರು ದೇವಿಯವರು.

ಎಂದಿನಂತೆ ಒಂದು ದಿನ ಪರೀಕ್ಷೆಯಾಯಿತು. ಡಾಕ್ಟರು ಔಷಧಿ ಯನ್ನು ಬರೆದುಕೊಟ್ಟರು. ಆಗ ದೇವಿಯವರು ಕೇಳಿದರು:

"ಡಾಕ್ಟರೆ, ಕಾಹಿಲೆಯೇನೋ ಗುಣವಾಗುತ್ತಿದೆ ಆದರೆ ಬಹಳ ನಿದಾನ. ಸಂಪೂರ್ಣವಾಗಿ ವಾಸಿಯಾಗುವುದು ಎಂದು?"

ಡಾ. ಗುಪ್ತರು ನಸುನಕ್ಕರು. "ದೀರ್ಘವಾದ ಕಾಹಿಲೆ. ಬೇಗ ವಾಸಿಯಾದೀತೆ? ಅದಕ್ಕಿನ್ನೂ ಕಾಲಬೇಕು." ದೇವಿಯವರು "ಅಂದರೆ?" ಎಂದರು.

ಗುಪ್ತರು ಉತ್ತರ ಕೊಡಲಾಗದವರು ತಮಾಷೆಯಾಗಿ, ದಾನದ ಪೆಟ್ಟಿಗೆಯ ಕಡೆಗೆ ಬೆರಳನ್ನು ತೋರಿಸಿ "ತಾವು ಅದನ್ನು ಭರ್ತಿಮಾಡಿದಂದು; ಎಂಟು ತಿಂಗಳಿಂದ ತಾವು ಔಷಧಿಯನ್ನು ತೆಗೆದುಕೊಳ್ಳುತ್ತಿದ್ದರೂ ಈ ಪೆಟ್ಟಿಗೆಯು ತಮ್ಮ ಗಮನಕ್ಕೆ ಬಿದ್ದಂತೆಯೇ ಇಲ್ಲ!" ಎಂದರು.

ದೇವಿಯವರು ಚಕಿಮಿಕಿಯಾದರು. ಅವರು ಆ ಪೆಟ್ಟಿಗೆಯನ್ನು ಪ್ರತಿಯೊಂದು ಸಲವೂ ನೋಡಿದ್ದರು. ಇತರರು ಅದರೊಳಕ್ಕೆ ನಾಲ್ಕಾಣೆ ಎಂಟಾಣೆ, ರೂಪಾಯಿಗಳನ್ನು ಹಾಕುವುದನ್ನೂ ಕಂಡಿದ್ದರು. ಅನೇಕರು ಹಾಕದಿದ್ದುದನ್ನೂ ನೋಡಿದ್ದರು. ಗುಪ್ತರು ಇದನ್ನು ಗಮನಕ್ಕೆ ತಂದುಕೊಳ್ಳದಂತೆಯೆ ಇರುತ್ತಿದ್ದರು ಅವರು ಯಾರನ್ನೂ ಉದ್ದೇಶಿಸಿ ಹೀಗೆ ಹೇಳಿದುದನ್ನು ದೇವಿಯವರು ಕಾಣರು. ಹೀಗಿರುವಲ್ಲಿ ತಮಗೆ ಈ ಮಾತನ್ನು ಏಕೆ ಹೇಳಿದರು? ಇರಲಿ, ಇದರೊಳಕ್ಕೆ ಹಾಕುವುದು ಬಿಡುವುದು ತಮಗೆ ಸೇರಿದುದು. ಇವರದೇನು ಶಿಪಾರಸು? ಇದು ಧರ್ಮದಾಸ್ಪತ್ರೆಯಾಗಿರುವಲ್ಲಿ ಹೀಗೆ ಹೇಳುವುದಕ್ಕೆ ಇವರಿಗೇನು ಅಧಿಕಾರ? ನಾವು ಏತಕ್ಕೆ ಕೊಡಬೇಕು? ಹಣ ಉಳಿಸುವಲ್ಲಿ ಕಳೆಯುವುದೇತಕ್ಕೆ?... .

ಈ ಯೋಚನೆಗಳು ಅವರ ಮನಸ್ಸಿನಲ್ಲಿ ಒಂದು ಸೆಕೆಂಡಿನಲ್ಲಿ ಹಾಯ್ದುಹೋದುವು. 'ಏನು ಡಾಕ್ಟರನ್ನು ಆಕ್ಷೇಪಿಸುವುದೇ? ಇಲ್ಲ. ಅದು ಸರಿಯಲ್ಲ. ತಮಾಷೆಯಾಗಿಯೇ ಕಾರ್ಯ ಸಾಧಿಸಿದರಾಯಿತು' ಎಂದು ನಿರ್ಧರಿಸಿಕೊಂಡು

"ಡಾಕ್ಟರೆ, ಈಗ ಯುದ್ಧದ ಕಾಲ ಎಲ್ಲರಿಗೂ ಹಣಕಾಸಿನ ಮುಗ್ಗಟ್ಟು ಅಲ್ಲವೆ?" ಎಂದು ನಕ್ಕು ತಮ್ಮ ಹಣದ ಚೀಲದ ಬಾಯಿಯನ್ನು ತೆರೆದು ಹಾಗೆಯೆ ಮೆಲ್ಲಗೆ ಮುಚ್ಚಿ, ಡಾಕ್ಟರ ಗಮನವನ್ನು ತಮ್ಮ ಕುತ್ತಿಗೆಯ ನೋವಿನ ಕಡೆಗೆ ಸೆಳೆದರು. ಗುಪ್ತರು ಮತ್ತೆ ನಸುನಕ್ಕರು. ಅವರಿಗೆ ಮತ್ತೇನನ್ನೋ "ಪ್ರಾಯಶಃ ಈ ಮುಗ್ಗಟ್ಟು ಈ ಆಸ್ಪತ್ರೆಗಿಲ್ಲವೆ?" ಎಂದೋ ಏನೋ ಹೇಳಬೇಕೆಂದು ತೋರಿ ತುಟಿಯನ್ನು ಬೇರ್ಪಡಿಸಿದವರು, ವಾದವು ತಮಗೆ ತಕ್ಕದ್ದಲ್ಲವೆಂದು

ನಿಶ್ಚಯಿಸಿ ಸುಮ್ಮನಾಗಿ, ದೇವಿಯವರ ಕುತ್ತಿಗೆಯನ್ನು ಪರೀಕ್ಷಿಸಲು ಮೊದಲುಮಾಡಿ, ಎಂದಿನಂತೆ ನಯವಿನಯಗಳಿಂದ ವಿಚಾರಿಸಿ, ಔಷಧಿಯನ್ನು ಬರೆದುಕೊಟ್ಟು ದೇವಿಯವರನ್ನು ಕಳುಹಿಸಿದರು. ದೇವಿಯವರು ಅನಂತರ ಮೋಟಾರುಕಾರಿನಲ್ಲಿ ತಮ್ಮೊಳಗೇ ಹೇಳಿಕೊಂಡರು· "ಹೆಸರಿಗೆ ಧರ್ಮದ ಆಸ್ಪತ್ರೆ. ಹೋದರೆ ಹಣ ಕೇಳುವುದು ಇದೇ ಇವರ ನೀತಿ!"

ಹತ್ತು ತಿಂಗಳ ತರುವಾಯ ವೆಂಕಟೇಶನಿಗೆ ಸಂಪೂರ್ಣವಾಗಿ ಹುಷಾರಾಯಿತು. ದೇವಿಯವರೂ ತಕ್ಕಮಟ್ಟಿಗೆ ಆರೋಗ್ಯಹೊಂದಿದರು. ಅವರ ಸಂತೋಷಕ್ಕೆ ಎಲ್ಲೆ ಇಲ್ಲದಾಯಿತು. ಈ ಸಂತೋಷಕ್ಕೆ ಕಾರಣನಾದ ಭಗವಂತನಿಗೆ ಧನ್ಯವಾದ ಒಪ್ಪಿಸಲು ದೊಡ್ಡ ಸಂಭ್ರಮದಿಂದ ಬಹಳ ವಿಜೃಂಭಣೆಯಿಂದ ಶ್ರೀ ಸತ್ಯನಾರಾಯಣನ ಪೂಜೆಯನ್ನು ನಡೆಯಿಸಿ, ತಮ್ಮ ಬಂಧು–ಮಿತ್ರರ ಪೈಕಿ ಬ್ರಾಹ್ಮಣ–ಮುತ್ತೈದೆಯರನ್ನೆಲ್ಲರನ್ನೂ ಕರೆದು, ವಿಧವಿಧ ಭಕ್ಷ್ಯ–ಭೋಜ್ಯಗಳಿಂದ ತಣಿಸಿ, ದಕ್ಷಿಣೆ ತಾಂಬೂಲಗಳನ್ನು ಕೊಟ್ಟು, ದೇವರನ್ನು ಮೆಚ್ಚಿಸಿ ಕೃತಕೃತ್ಯರಾದರು. ಹಿಂದೆ ಡಾ. ಗುಪ್ತರ ವಿಷಯವಾಗಿ ಹೇಳಿದ್ದ ಸ್ನೇಹಿತರೂ ಈ ಸಮಾರಂಭಕ್ಕೆ ಬಂದಿದ್ದರು. ಅವರು ದೇವಿಯವರನ್ನು ಕುರಿತು "ಡಾ. ಗುಪ್ತರು ಬಂದಿದ್ದರೆ?" ಎಂದು ಕೇಳಿದರು. ಅದಕ್ಕೆ ಉತ್ತರವಾಗಿ ದೇವಿಯವರು "ಏನೆಂದಿರಿ? ಡಾ. ಗುಪ್ತರೆ? ನಿಮಗೆ ತಿಳಿಯದೆ —ಅವರು ಬಂಗಾಳಿ ಬ್ರಾಹ್ಮಣರೇನೋ ನಿಜ, ಆದರೆ ಅವರು ಮೀನನ್ನು ತಿನ್ನುತ್ತಾರೆ–ಗೊತ್ತೆ? ನಾನು ವಿಚಾರಿಸಿದ್ದೇನೆ ಇಂತಹವರನ್ನು ಕರೆದುಬಿಟ್ಟರೆ, ಈ ಪವಿತ್ರ ಪೂಜೆಯೆಲ್ಲ ನೀರಿನಲ್ಲಿ ಹೋಮಮಾಡಿದಂತಾಗುತ್ತದೆ" ಎಂದರು. ಸ್ನೇಹಿತರು ಬಾಯಿಮುಚ್ಚಿಕೊಂಡರು. ಪೂಜೆಗೆ ಬಂದಿದ್ದವರೆಲ್ಲ ಅವರ ಪೂಜೆಯ ರೀತಿಯನ್ನು ಮೆಚ್ಚಿ ಸ್ತುತಿಸಿ, ಮಗುವಿನ ಆರೋಗ್ಯಕ್ಕಾಗಿ ದೇವಿಯವರನ್ನು ಅಭಿನಂದಿಸಿ ಬೀಳ್ಕೊಂಡರು.

ಈ ಅವಸರದ ದೇವಸೇವೆಯು ಮುಗಿದ ಮೇಲೆ, ಹರಕೆಗಳನ್ನು ಸಲ್ಲಿಸುವ ಕಾಲವೂ ಬಂದಿತು. ಇನ್ನು ತಡಮಾಡಿದರೆ ದೇವರಿಗೆ ಸಿಟ್ಟು ಬಂದು ಅನನುಕೂಲ ತೊಂದರೆಗಳಾಗಬಹುದೆಂಬ ಭಯವಿದ್ದುದರಿಂದ,

ಅವರು ಯಾತ್ರೆಯನ್ನು ತಕ್ಷಣವೇ ಮೊದಲುಮಾಡಿದರು. ಮೊದಲು ಬೃಂದಾವನ, ಆಮೇಲೆ ನಂಜನಗೂಡು, ಅನಂತರ ಮೇಲುಕೋಟೆ. ಕಡೆಯಲ್ಲಿ ತಿರುಪತಿ. ಈ ಯಾತ್ರೆಗಳು ಸಾಂಗವಾಗಿ ನೆರವೇರಿದುವು, ಎಲ್ಲೆಲ್ಲೂ ದೇವಿಯವರ ಸೇವಾವಿಧಿಯನ್ನು ಆಗಮಿಕರಾದಿಯಾಗಿ ಸರ್ವರೂ ಕೊಂಡಾಡಿದರು. ಹೆಜ್ಜೆನಮಸ್ಕಾರ, ಉರುಳುಸೇವೆಗಳಾದ ಮೇಲೆ, ತುಲಾಭಾರ, ಅಭಿಷೇಕ, ಸಹಸ್ರನಾಮ, ಕುಂಕುಮಾರ್ಚನೆ, ಬ್ರಾಹ್ಮಣ ಸಂತರ್ಪಣೆಗಳು ಎಲ್ಲ ಕಡೆಗಳಲ್ಲೂ ಬಹು ವೈಭವದಿಂದ ನಡೆದುವು. ತಿರುಪತಿಯಲ್ಲಿಯೂ ಎಲ್ಲರೂ ಇವರ ಧಾರ್ಮಿಕ ನಿಷ್ಠೆಯನ್ನು ಕಂಡು ಬೆರಗಾದರು. ಅಲ್ಲಿಯ ಮುಖ್ಯ ಆಗಮಿಕರು "ಇಂತಹ ಉದಾರ ಮನಸ್ಸಿನ, ನಿಷ್ಕಲ ದೈವಪ್ರೇಮದ, ಕರ್ತವ್ಯಶ್ರದ್ಧೆಯ ಭಕ್ತರು ಕೇವಲ ಅಪೂರ್ವ" ಎಂದು ಹೇಳಿದರು. ದೇವಿಯವರ ಮುಖವು ಅರಳಿ ಹಿಗ್ಗಿತು. "ತಮ್ಮ ಮೂಲಕ ದೇವರೇ ನುಡಿದಿದ್ದಾನೆ; ನಾನೇ ಧನ್ಯ!" ಎಂದು ಉತ್ತರವಿತ್ತರು. ಮುಡಿಪಾಗಿ ಇಟ್ಟಿದ್ದ ಐದು ಸಾವಿರ ರೂಪಾಯಿಗಳನ್ನು, ಆಗಲೇ ತುಂಬಿ ತುಳುಕುತ್ತಿದ್ದ ತಿರುಪತೀ ಪತಿಯ ಖಜಾನೆಗೆ ಸುರಿದು, ಸೇವೆಯನ್ನು ಸಲ್ಲಿಸಿದ್ದಾಯಿತು

ಇನ್ನು ವಾಪಸು ಹೋಗುವುದೊಂದೇ ಬಾಕಿ. ಅನಂತರ ಎಲ್ಲವೂ ಸುಖಕರ. ಸದಾ ಸಂತೋಷ. ಬಹುಕಾಲದ ಆನಂದ ಜೀವನ. ತಿರುಪತಿಯನ್ನು ಬಿಟ್ಟು ರೈಲಿನಲ್ಲಿ ಕುಳಿತದ್ದಾಯಿತು. ಇನ್ನೆರಡು ದಿನ ಕಳೆದರೆ ಬೊಂಬಾಯಿ. ಅಲ್ಲಿನ್ನು ಯಾತ್ರೆ ಕಳೆದ ಸಂತರ್ಪಣೆಯ ಯೋಚನೆಯು ದೇವಿಯವರನ್ನು ಅವಲಂಬಿಸಿ ರಾತ್ರಿಯಲ್ಲಿ ನಿದ್ದೆ ಕೊಡಲಿಲ್ಲ. ದೇವಿಯವರ ಬಳಿ ವೆಂಕಟೇಶನು ನಿದ್ರಿಸುತ್ತಿದ್ದನು. ಅವರು ಅವನನ್ನು ಕಂಡು ಆನಂದಪಟ್ಟು, ಕೆಳಗೆ ಜಾರಿದ ಹೊದ್ದಿಕೆಯನ್ನು ಅವನಿಗೆ ಹೊದ್ದಿಸಿ, ಪ್ರೇಮದಿಂದ ಹಣೆ ಸವರಿದರು. ಇದೇನು? ಮಗುವಿನ ಮೈ ಇಷ್ಟು ಸುಡುತ್ತಿದೆ? ಜ್ವರವೆ? ಹಾ! ನಿಜ, ಜ್ವರವೆ–ದೇವರೆ!

ಹೌದು. ವೆಂಕಟೇಶನಿಗೆ ನಿಜವಾಗಿ ಜ್ವರವೆ. ಇಷ್ಟೊಂದು ಪ್ರಯಾಣ, ನದಿ–ಕೊಳಗಳ ಸ್ನಾನ, ಹೊತ್ತು ಗೊತ್ತಿಲ್ಲದ ಆಹಾರ, ಇವುಗಳೆಲ್ಲವೂ ಅವನ ಚಿಕ್ಕ ಶರೀರದ ಶಕ್ತಿಗೆ ಮೀರಿ ಜ್ವರಕ್ಕೆ ಗುರಿಮಾಡಿದ್ದುವು. ಇದೇ

ಗಾಡಿಯಲ್ಲಿದ್ದು ಇವರ ಕತೆ ಕೇಳಿದ್ದ ವೈದ್ಯರು ಹೀಗೆ ಅಭಿಪ್ರಾಯಪಟ್ಟರು. ದೇವಿಯವರಿಗೆ ದಿಕ್ಕೇ ತೋಚದಂತಾಯಿತು. ನಿಟ್ಟುಸಿರು ಬಿಟ್ಟರು, ಕಣ್ಣೀರನ್ನು ಸುರಿಸಿದರು. ದೇವರಿಗೆ ಅನನ್ಯ ಪ್ರಾರ್ಥನೆಗಳನ್ನು ಸಲ್ಲಿಸಿದರು. ಬೆಳಗು ಕಳೆಯುವ ಹೊತ್ತಿಗೆ ವೆಂಕಟೇಶನಿಗಾಗಲೆ ಜ್ವರವು ಹೆಚ್ಚಾಗಿ ಸಂದೂ ಆಯಿತು ಅದೇ ವೈದ್ಯರ ಸಲಹೆಯಂತೆ ಮಾರನೆಯ ದಿನ ಗುಂತುಕಲ್ಲಿನಲ್ಲಿಳಿದು, ಅಲ್ಲಿಯ ಆಸ್ಪತ್ರೆಗೆ ಮಗುವನ್ನು ಸಾಗಿಸಿದರು. ಅಲ್ಲಿ ಪರೀಕ್ಷಿಸಿದ್ದರಲ್ಲಿ ಮಗುವಿಗೆ 'ನ್ಯೂಮೋನಿಯಾ' ಕಾಣಿಸಿಕೊಂಡಿರುವುದೆಂದು ತಿಳಿದುಬಂದಿತು. ದೇವಿಯವರ ಕೈಕಾಲು ಕೆಟ್ಟಿತು. ಒಂದು, ಎರಡು ದಿನ ಅಲ್ಲಿಯೇ ಕಳೆದರು. ದಿನ ರಾತ್ರಿ ನಿದ್ದೆಯಿಲ್ಲದೆ, ಆಹಾರ ತೆಗೆದುಕೊಳ್ಳದೆ, ಮಗುವಿನ ಬಳಿ ಕಾದರು. ಮೂರನೆಯ ದಿನ ವೆಂಕಟೇಶನಿಗೆ ಪ್ರಜ್ಞೆಯೂ ತಪ್ಪಿಹೋಯಿತು. ವೈದ್ಯರು ತಮಗೆ ಸಾಧ್ಯವಾದುದನ್ನೆಲ್ಲ ಮಾಡುವುದಾಗಿಯೂ ಆದರೆ ಗುಣವಾಗುವುದು ಖಂಡಿತವಿಲ್ಲವೆಂದೂ ತಿಳಿಸಿಬಿಟ್ಟರು. ದೇವಿಯವರಿಗೆ ಸಿಡಿಲು ಬಡಿದಂತಾಯಿತು. ಏನನ್ನು ಮಾಡಲೂ ತೋಚದು. "ಬೊಂಬಾಯಿಯೊಂದನ್ನು ತಲಪಿದರೆ ಸಾಕು; ಡಾ. ಗುಪ್ತರನ್ನು ಕರೆಯಿಸಿ ತೋರಿಸುತ್ತೇನೆ. ಅವರಾದರೆ ಖಂಡಿತ ವಾಸಿಮಾಡುತ್ತಾರೆ!" ಎಂದುಕೊಂಡು ವೈದ್ಯರನ್ನು ಕುರಿತು ಕೇಳಿದರು

"ಡಾಕ್ಟರೆ, ಹೇಗೊ ಬೊಂಬಾಯಿಯನ್ನು ತಲಪುವುದಕ್ಕಾಗುವುದಿಲ್ಲವೆ?"

ವೈದ್ಯರು ತಲೆಯಾಡಿಸಿ "ಏನು ಹುಚ್ಚು! ಮಗು ಉಳಿಯುವ ಅಲ್ಪ ಸ್ವಲ್ಪ ಸಂಭವವೂ ಕರಗಿಹೋಗುತ್ತದೆ!"

ದೇವಿಯವರು ಸುಮ್ಮಗಾದರು. ಇನ್ನು ಮಾತನ್ನೂ ಸಹ ಆಡದಾದರು. ಇನ್ನು ಆಗುವುದನ್ನು ನಿರೀಕ್ಷಿಸುತ್ತಿದ್ದರು. ಮಾಡಿದುದೆಂದರೆ ದೇವರಿಗೆ ಬಗೆಬಗೆಯ ಪ್ರಾರ್ಥನೆಗಳನ್ನು ಸಲ್ಲಿಸಿದುದು ಮಾತ್ರ.

ಹೀಗೆಯೇ ಪ್ರಜ್ಞೆ ಇಲ್ಲದೆ ಇನ್ನೆರಡು ದಿನ ಕಳೆದು, ವೆಂಕಟೇಶನು ದೇಹತ್ಯಾಗಮಾಡಿದನು.

* * *

ಬೊಂಬಾಯಿಯನ್ನು ಮುಟ್ಟಿದಾಗ ದೇವಿಯವರು 'ಜೀವಶ್ಶವ' ದಂತಾಗಿದ್ದರು ಅವರಿಗೆ ಅಲ್ಲಿರಲು ಮನಸ್ಸಿಲ್ಲದೆ ಹೋಯಿತು. ಹದಿನೈದು ದಿನದಲ್ಲಿ ಮನೆಯನ್ನೂ, ಷೇರುಗಳನ್ನೂ ಸಿಕ್ಕಷ್ಟಕ್ಕೆ ವಿಕ್ರಯಿಸಿ, ಹಣವನ್ನು ಬ್ಯಾಂಕಿಗೆ ಹಾಕಿ, ಮುಂದೆ ತಮಗುಳಿದ ದಿನಗಳನ್ನು ಕಾಶಿಯ ಪವಿತ್ರ ಕ್ಷೇತ್ರದಲ್ಲಿ ಶ್ರೀ ವಿಶ್ವೇಶ್ವರನ ಪಾದಸೇವೆಯಲ್ಲಿ ಕಳೆದು ಮುಕ್ತಿಗೆ ಮಾರ್ಗವನ್ನು ಕಲ್ಪಿಸಿಕೊಳ್ಳಬೇಕೆಂದು ನಿಶ್ಚಯಿಸಿ ಅಲ್ಲಿಗೆ ಪ್ರಯಾಣ ಮಾಡಿದರು.

೯

# ನಾಚಿಕೆಗೇಡು!

ಆ ದಿನ ಮಂಗಳವಾರ  ಹಿಂದಿನ ಶನಿವಾರದಿಂದ ಒಂದೇಸಮನೆ ಮಳೆ ಸುರಿಯುತ್ತಿದ್ದರೂ ಆಕಾಶವು ಇನ್ನೂ ಕಪ್ಪುಗಟ್ಟಿಕೊಂಡೇ ಇದ್ದಿತು. ಸೂರ್ಯನ ದರ್ಶನವಂತೂ ಇಲ್ಲವೇ ಇಲ್ಲ. ಎಲ್ಲಿಲ್ಲೂ ನೀರು ಹರಿದು ಕೊಚ್ಚೆ. ಹೊರಗಿದ್ದವರಲ್ಲ ಹಾಗೂ ಹೀಗೂ ಹೆಚ್ಚು ಕಡಿಮೆ ಒದ್ದೆಯೇ. ಇದ್ದಬದ್ದ ಪರಕು ಮುರುಕು, ಬಣ್ಣ ಸೋರುವ ಯುದ್ಧದ ಪರ್ಜೆ ಕೊಡೆಗಳೂ, ಹಳೇಪಳೇ ಮಳೆಯ ಅಂಗಿಗಳೂ, ಅಪೂರ್ವವಾದ 'ಗಂ ಬೂಟುಗಳೂ', ಕಡೆಗೆ ಬಡವರ ಗೋಣಿ ಚೀಲಗಳೂ ಎಲ್ಲವೂ ಹೊರಗೆ ಬಂದು ರಕ್ಷಣ ಆಯುಧಗಳಾಗಿದ್ದುವು. ಆದರೇನು ಇವು ಯಾವುವೂ ಮಳರಾಯನ ಆರ್ಭಟವನ್ನು ತಡೆಗಟ್ಟಲು ಸಮರ್ಥನಾಗಿರ ಲಿಲ್ಲ. ಹೀಗೆ ಮುಂಬಯಿನ ಮಳೆಯೆಂದರೆ ಗಾದೆಯಂತೆ.

ಅದು ಸಂಜೆಯ ಹೊತ್ತಾದುದರಿಂದ ಜನರು ಸಾಮಾನ್ಯವಾಗಿ ಮನೆಗೆಹೋಗುವ ಆತುರದಿಂದ ಮತ್ತು ವಿಶೇಷವಾಗಿ ಮಳೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನದಿಂದಲೂ ಭರದಿಂದ ಚರ್ಚುಗೇಟಿಗೆ—(ಲೋಕಲ್ ರೈಲ್ವೆಯ ಮುಂಬಯಿ ಕೊನೇ ನಿಲ್ದಾಣ) ಸಾಗುತ್ತಿದ್ದರು. ಫ್ಲೋರಾಫೌನ್ಟನ್ನಿನಿಂದ—(ಇದು ಮುಂಬಯಿಯ ಹೃದಯವೆನ್ನ ಬಹುದು) ನಿಲ್ದಾಣದವರೆಗಿನ ದಾರಿಯ ಅಕ್ಕಪಕ್ಕಗಳೆಲ್ಲವೂ ಕೊಡೆಗಳನ್ನು ಬೆಳೆದ ಗದ್ದೆಗಳಂತೇ ಕಾಣುತ್ತಿದ್ದವು—ವ್ಯತ್ಯಾಸ, ಇದು ಸರುಗುವ ಗದ್ದೆಗಳು. ರಸ್ತೆಯ ಮಧ್ಯದಲ್ಲಿ ನಾಲು ಸಾಲಾಗಿ ನರಪಳಿಯಂತೆ ಹರಿದಾಡುವ ಮೋಟಾರು ಕಾರು, ಲಾರಿಗಳು, ಬಸ್ಸುಗಳು, ವಿಕ್ಟೋರಿಯ ಗಾಡಿಗಳು, ಇವುಗಳ ಮಧ್ಯವೂ ಅನೇಕ ಕೊಡೆಗಳು ಅಲ್ಲಲ್ಲಿ ನುಣುಚಿ ಕೊಂಡು ಮೃತ್ಯುವಿನಿಂದ ಅಂಗುಲಗಳಲ್ಲಿ ಜಾರಿಕೊಂಡು ಪಕ್ಕದ ದಾರಿ ಗಳಿಗೆ ಸೇರಿಕೊಳ್ಳುತ್ತಿದ್ದುವು.

ಇಂತಹ ಗುಂಪಿನಲ್ಲಿ ನೇರಿ 'ಎಲ್ಫಿನ್‌ಸ್ಟನ್' ಕಾಲೇಜಿನ ಪ್ರೊಫೆ ಸರ್ ಮರೆವಾಡರು ಧಾವಿಸುತ್ತಿದ್ದರು. ಆ ಕೊಡೆಗಳ ಛಾವಣಿಯಲ್ಲಿ ಅವರ ಕೊಡೆಯ ಕೆಳಗೆ ನೋಡುವುದು ಸಾಧ್ಯವಿದ್ದರೆ, ಸುಮಾರು

ಐವತ್ತು ವರ್ಷದ ಸುಕ್ಕಿನ ಮುಖ, ಗರುಡಮೂಗು, ಬಿಳಿಕೂದಲಿನ ಗಂಡಸ್ಥಳಗಳು, ದಪ್ಪಗಾಜಿನ ಕಟ್ಟಿಲ್ಲದ ಕನ್ನಡಕಹಾಕಿದ ಬೆರಗು ಕಣ್ಣುಗಳು. ಹಸಿರು ಫೆಲ್ಟುಹ್ಯಾಟು ಕವಿಚಿದ ತಲೆ, ಬಿಳಿ 'ಸ್ಟಿಫ್' ಕಾಲರು ಮತ್ತು ಕೆಂಪು ಟೈ ಕಟ್ಟಿದ ಕೊರಳು, ಗೆರೆಗೆರೆಯ ಕಂದುಬಣ್ಣದ ಉಣ್ಣೆಯ ಅಂಗಿಯನ್ನು ತೊಟ್ಟ ಬೆನ್ನು, ತೋಳುಗಳು, ಅದೇ ಬಣ್ಣದ 'ವೇಸ್ಟುಕೋಟ'ನ್ನು ಸುತ್ತಿಕೊಂಡು ಚಿನ್ನದ ಸರವಳಿಯಿಂದ ಅಲಂಕರಿಸಿಕೊಂಡ ಹೊಟ್ಟೆಯೂ ಕಾಣುತ್ತಿದ್ದುವು ಅಲ್ಲಿ ತೊಡರುತ್ತಿದ್ದ ಸಾವಿರಾರು ಕಾಲುಗಳಲ್ಲಿ ಮರೆವಾಡರ ಕಾಲನ್ನು ಗುರುತಿಸುವುದೂ ಸಾಧ್ಯವಾಗಿದ್ದರೆ ಆದೇ ಕಂದುಬಣ್ಣದ ಉಣ್ಣೆಬಟ್ಟೆಯ ದೊಗಳೆ ಷರಾಯಿಯನ್ನು ತಗಲುಹಾಕಿಕೊಂಡ ಕಾಲುಗಳೂ, ಒದ್ದೆಯಾದ ಕಪ್ಪು 'ಷೂ'ಗಳನ್ನು ಸಿಕ್ಕಿಸಿಕೊಂಡ ಪಾದಗಳೂ ಕಾಣಬಹುದಾಗಿದ್ದುವು. ಹುಂ, ಕೊಳೆಯಾದಾವೆಂಬ ಭಯದಿಂದ ಇದೇ ಷರಾಯಿನ ಕೊನೆಗಳನ್ನು ಮೇಲೆಳೆದು ಬಿಳಿಯ ಕಾಲು ಚೀಲಗಳಲ್ಲಿ ತುರುಕಿದ್ದುದೂ ಹೀಗೇ ಕಾಣುತ್ತಿದ್ದಿರಬಹುದು.

ಅಂತೂ ಮರೆವಾಡರು ಚರ್ಚುಗೇಟನ್ನು ಮುಟ್ಟಿದವರೆ ಕೊಡೆಯನ್ನು ಮುಚ್ಚಿ ಒಳಕ್ಕೆ ನಡೆದರು. ಅಲ್ಲಿ ಜನರು 'ಕ್ಯೂ'ನಲ್ಲಿ ನಿಂತುಕೊಂಡು ಟಿಕೀಟಿಗಾಗಿ ಕಾಯುತ್ತಿದ್ದರು ಮರೆವಾಡರು ಅವರನ್ನು ನೋಡಿ ನಸುನಕ್ಕರು. ಯಾಕೆಂದರೆ ಇವರಿಗೆ 'ಆ ಗತಿ' ಒದಗುವ ಆವಶ್ಯಕತೆಯೇ ಇರಲಿಲ್ಲ. ಇಪ್ಪತ್ತು ವರ್ಷಗಳಿಂದ ಇವರು ಎರಡನೆ ತರಗತಿಯ ಮೂರು ಮೂರು ತಿಂಗಳ ಪಾಸನ್ನೇ ಕೊಂಡು ಪ್ರಯಾಣ ಮಾಡುತ್ತಿದ್ದರು. ಪ್ಲಾಟ್‌ಫಾರಂಗೆ ಹೋದವರೆ ಅಲ್ಲಿಯ ಗಡಿಯಾರದ ಕಡೆಗೆ ನೋಡಿದರು. ಓ, ಇನ್ನು ಒಂದೇ ನಿಮಿಷ ರೈಲು ಹೊರಡುವುದಕ್ಕೆ? ವಿರಾರಿ[1]ಗೆ ಹೋಗುವ 'ಫಾಸ್ಟ್[2] ಲೋಕಲು' ಕಾದಿದ್ದಿತು. ಮರೆವಾಡರು ಆ ಜಾರು ಭೂಮಿಯಲ್ಲಿ ಬೀಳುವುದು ಏಳುವುದನ್ನೂ ಸಹ

1. ವಿರಾರ್—ಮುಂಬಯಿಗೆ ನಲವತ್ತು ಮೈಲಿಯ ದೂರದ ಊರು. ಲೋಕಲ್ ರೈಲಿನ ಹೊರಕೊನೆ

2 ಫಾಸ್ಟ್ ಅಂದರೆ ಮಧ್ಯೆ ಬಹು ಜಾಗದಲ್ಲಿ ನಿಲ್ಲದೆ ಸಾಗುವುದು

ಗಣನೆಗೆ ತಾರದೆ 'ಡಬ್ಬಲ್ ಮಾರ್ಚ್' ಮಾಡಿ ಎರಡನೆಯ ತರಗತಿಯ ಬಳಿಗೆ ಹೋಗಿ ನುಗ್ಗಿದರು. ಗಾಡಿ ಆಗಲೇ ಭರ್ತಿಯಾಗಿ ಜನರು ಬಾಗಿಲಿಂದ ಹೊರಸೂಸುತ್ತಿದ್ದರು ಕೆಲವರು ಕಾಲುಹಲಗೆಯಮೇಲೆ ನಿಂತು ಹೊರ ಹಿಡಿಯನ್ನು ಹಿಡಿದು ಜೋತಾಡುತ್ತಿದ್ದರು. ಆದರೆ ಇದೆಲ್ಲವೂ ಮುಂಬಯಿನ ಬೆಳಗು ಸಂಜೆಯ ಲೋಕಲು ರೈಲುಗಳಲ್ಲಿ ಸಾಮಾನ್ಯ. ಮರೆಮಾಡರು ಯಾರ ಬೆನ್ನನ್ನೋ ಹಿಡಿದುಕೊಂಡು ಮೆಲ್ಲಗೆ ಕಾಲಿಗೆ ದಾರಿಮಾಡಿಕೊಂಡರು. ಅನಂತರ ಮೊಳಕೈಯ ಸೋರು ಕೊಡೆಗಳಿಂದ ಮೆತ್ತಮೆತ್ತಗೆ ಜಾಗಮಾಡಿಕೊಂಡು ಹಾವು ಬಿಲವನ್ನು ಸೇರುವಂತೆ ಹೇಗೋ ಒಳಗೆ ಸರಿದುಕೊಂಡರು. ನಿಜ, ಅತ್ತ ಇತ್ತಿನವರಲ್ಲ ಅವರನ್ನು ಮುರುಗುಟ್ಟಿ ನೋಡಿದರು ಕೆಲವರು ಈ ನಡತಗಾಗಿ ಬೇಸರವನ್ನು ತೋರ್ಪಡಿಸಿದರು ಇನ್ನೂ ಕೆಲವರು ಮೆಲುನುಡಿಯಲ್ಲಿ ಅವರ ಕಿವಿಗೆ ಬೀಳುವಂತೆ ಶಪಿಸಿಕೊಂಡರು. ಆದರೆ ಇದರಿಂದ ಮರೆಮಾಡರಿಗೆ ಏನು ನಷ್ಟ? ಇವೆಲ್ಲ ಸರ್ವಸಾಮಾನ್ಯವಲ್ಲವೆ? ಇದನ್ನೆಲ್ಲ ನೋಡಿಕೊಂಡು ಕಾಲುಕೆರೆಯುವುದಾಗುತ್ತದೆಯೆ ಮುಂಬಯಿ ಲೋಕಲುಗಳಲ್ಲಿ? ಇದಕ್ಕೆಲ್ಲ ಹೊತ್ತೆಲ್ಲಿ ಈ ಮುಂಬಯಿ ವೇಗ ಜೀವನದಲ್ಲಿ? ಮುಖ್ಯವಾಗಿ ಬೇಕಾದುದು ಪ್ರವೇಶ. ಅದು ಸಾಧ್ಯವಾದರೆ ಸರಿ. ಮಿಕ್ಕದ್ದೆಲ್ಲ ಹಾಗಿರಲಿ, ಕೇವಲ ಕೆಲಸ ಸಾಧಿಸುವ ಕಾಲ–ಆಗ ಮತ್ತು ಊರು–ಅದು. ಅಲ್ಲವೆ?

ಅಷ್ಟೇ ಅಲ್ಲ. ಅವರ ಸನ್ನಾಹದಲ್ಲಿ ಇನ್ನೂ ಒಂದು ಗುಟ್ಟು. ಹಾಗೂ ಹೀಗೂ ಏನಾದರೂ ಮಾಡಿಕೊಂಡು ಒಳಹೊಕ್ಕರೆ, ಈ ಹಳಬರನ್ನು ಕಂಡ ಎಷ್ಟೋ ಜನ ಒಳಗೆ ಸಹೋದ್ಯೋಗಿಗಳೋ ಸ್ನೇಹಿತರೋ, ಇವರ ವಿದ್ಯಾರ್ಥಿಗಳೋ ಇವರನ್ನು ಕರೆದು, ಇಲ್ಲದ ಕಡೆಯೂ ಕೊಂಚ ಸ್ಥಳ ಮಾಡಿಕೊಟ್ಟಾರು. ಅಲ್ಲದೆ ಅಪರಿಚಿತರಿಗೆ ಇಲ್ಲವೇ ಇಲ್ಲದ ಸ್ಥಳವು ಪರಿಚಿತರಿಗೆ ತಕ್ಷಣ ಒದಗುತ್ತದೆ—ಈ ಲೋಕಲುಗಳಲ್ಲಿ. ಇದರ ಲಾಭವನ್ನೇಕೆ ಕಳೆದುಕೊಳ್ಳಬೇಕು? ಸಾಂಟಾಕ್ರೂಸಿನವರೆಗೆ ನಲವತ್ತು ನಿಮಿಷ ಹೊರೆಯೊಳಗಿನ ಹುಲ್ಲುಕಡ್ಡಿಯಂತೆ ಜನರ ಮಧ್ಯೆ ನಿಂತು, ರೈಲಿನ ಮರ್ಜಿಗೆ ಸರಿಯಾಗಿ ಅತ್ತಿತ್ತ ತೂಗಾಡುತ್ತ, ಅವರಿವರ ವಾದ

ತುಳಿಯುತ್ತಿರುವುದೇನು ಸಾಮಾನ್ಯದ ಸರಕಸ್ಸೆ? ಅದೇಕೆ? ಆ ಫಜೀತಿ? ಅದೂ ಕಂಡಂತೆ ದಾರಿ ಇರುವಾಗ? ಸರಿ, ಸರಿದರು ಮೆಲ್ಲಮೆಲ್ಲಗೆ ಕೂಡುವ ಕಡೆಗೆ. ಗಾಡಿ ಹೊರಟಿತು.

ಮರೆವಾಡರೇನು ಸಿರೀಕ್ಷೆಯಲ್ಲಿ ತಪ್ಪನ್ನೂ ಮಾಡಿರಲಿಲ್ಲ. ಅಗೋ ಅಲ್ಲೇ ಇದ್ದರು ಇವರ ಪರಿಚಿತರು ಒಬ್ಬರು, ಆ ಹಸಿರು ಮೆತ್ತೆಯ ಬೆಂಚಿನ ಮಧ್ಯದಲ್ಲಿ ಕುಳಿತ ದುಂಡಾದ ಕುಂಬಳಕಾಯಿಯಂತಹ ಗಾತ್ರದವರು. ಒಳಗೆ ಯಾವ ಬಟ್ಟೆಯನ್ನು ಹೇಗೆ ಹಾಕಿದ್ದರೋ ಏನೋ ಅದು ಗೊತ್ತಾಗುವಂತಿರಲಿಲ್ಲ. ದೊಡ್ಡ ಮಳೆಯ ಕೋಟು ಅವರನ್ನು ಮುಚ್ಚಿಕೊಂಡು ಅವರ ಆಕಾರವನ್ನು ಇನ್ನೂ ಉತ್ಪ್ರೇಕ್ಷಿಸುತ್ತಿತ್ತು. ಕೆಳಗೆ ಮಾತ್ರ ಕೊಂಚವೇ ಇಣಿಕಿನೋಡುತ್ತ ಖಾದಿ ಪಂಚೆಯ ಅಂಚು ಕಾಣುತ್ತಿದ್ದಿತು. ಬಿಳಿಯ ಪಾದಗಳ ಕೆಳಗೆ ಎರಡು ಎಕ್ಕಡಗಳು ಬಿದ್ದಿದ್ದುವು. ದುಂಡವಾಗಿ ತುಂಬಿಕೊಂಡ ಮುಖ. ಬಿರಿಯುವ ದಾಳಿಂಬೆಯಂತೆ ಕೆನ್ನೆಗಳು. ಮಾಂಸಖಂಡಗಳಲ್ಲಿ ಕಲಸಿಹೋದ ಸಣ್ಣ ಮೂಗು, ಅವುಗಳಲ್ಲಿ ಮುಳುಗಿಹೋದ ಸಣ್ಣ ಕಣ್ಣುಗಳು, ಸಣ್ಣ ತೂತಿನಂತಿದ್ದ ಬಾಯಿನಲ್ಲಿ ಚರ್ಚಿಲ್ಲನ ಚುಟ್ಟ, 'ಹಂಜಿಕುಕ್ಕೆಯಂತೆ' ಬಿಳಿಗೂದಲಿನ ತಲೆ, ಇಷ್ಟು ಮುಖ್ಯವಾಗಿ ಕಾಣುತ್ತಿದ್ದುವು. ಈ ಆಕಾರವನ್ನು ಸುಲಭವಾಗಿ ಗುರುತಿಸಿದ ಮರೆವಾಡರು ಉತ್ಸಾಹದಿಂದ "ಹಲೋ ಪ್ರೊಫೆಸರ್!" ಅಂದು ಕೂಗಿದರು ಬೇಕೆಂದರೂ ಇದನ್ನು ನಿರ್ಲಕ್ಷಿಸುವುದು ಯಾರಿಗೂ ಸಾಧ್ಯವಾಗಿರಲಿಲ್ಲ. ಎರಡನೆಯ ಪ್ರೊಫೆಸರು ಮರೆವಾಡರ ಕಡೆಗೆ ನೋಡಿ, ಹೊಗೆಯಾಡುತ್ತಿದ್ದ ಚುಟ್ಟವನ್ನು ತೆಗೆದು, ಹೊಗೆಯನ್ನುಗುಳಿ, "ಓಹೋ, ನಮಸ್ಕಾರ! ಬನ್ನಿ, ಬನ್ನಿ, ದಯಮಾಡಿಸಬೇಕು" ಅಂದು ಅಕ್ಕಪಕ್ಕದಲ್ಲಿ ನೋಡಿ ಕೊಂಚ ಅಲುಗಾಡಿದರು. ಸ್ಥಳ ಮಾಡುವ ಈ ಅಲಗುವಿಕೆಯ ಸೂಚನೆಯನ್ನು ಅರಿತ ಮರೆವಾಡರು ಒಳಗೊಳಗೇ ಸಂತೋಷಪಟ್ಟರೂ, ತಮಗೆ ಜಾಗವು ಖಂಡಿತವಾಯಿತೆಂದು ತಿಳಿದರೂ, ಹೊರಗೆ ಮಾತ್ರ ನಾಗರೀಕತೆಯ ಮರ್ಯಾದೆಗೆ ತಕ್ಕಂತೆ "ಇರಲಿ, ಇರಲಿ ಬಿಡಿ; ನಿಂತಿದ್ದರೇ ಆಯಿತು" ಎಂದು ಉಪಚಾರೋಕ್ತಿಯನ್ನು ಹೇಳುತ್ತ

ಮೈತ್ರಿಯ ಕಡೆಗೆ ಸರಿದರು. ಅದಕ್ಕೆ ಅವರ ಸ್ನೇಹಿತರು ಎಂದಿನ ಉದಾರತೆಯಿಂದ "ಛೇ, ಅದು ಏತಕ್ಕೆ? ಇಲ್ಲೇ ಹೇಗಾದರೂ ಕೊಂಚ ಮುದುರಿಕೊಂಡು ಕುಳಿತರಾಯಿತು. ಏಳು ಜನ ಕೂಡುವ ಕಡೆ ಎಂಟು ಸಾಧ್ಯವಾಗುತ್ತದೆ—ಹಾಗೂ ಹೀಗೂ. ಈ ಲೋಕಲಿನಲ್ಲೇ ಹೀಗೆ" ಎಂದು ಅಕ್ಕಪಕ್ಕದವರನ್ನು ಸ್ವಲ್ಪ ಒರಟಾಗಿಯೇ ಒತ್ತರಿಸಿ ಕೊಂಚ ಮೈತ್ರಿಯನ್ನು ಕಾಣಿಸಿದರು. ಮರೆವಾಡರು "ಬಹಳ ವಂದನೆ! ವಂದನೆ!" ಅನ್ನುತ್ತ, ಬೀಸುವ ಕಲ್ಲಿನ ಗೂಟವು ಅಲುಗಾಡಿಸಿಕೊಂಡು ಹೇಗೆ ತೂತಿಗೆ ಬಡಿಯಲ್ಪಡುವುದೋ ಹಾಗೆ, ಆ ಸಣ್ಣ ಜಾಗದಲ್ಲಿ ಬಡಿದುಕೊಂಡರು—ಅನ್ನಿ ಅಕ್ಕಪಕ್ಕದ ಮಹನೀಯರು ಮಾರಿಯಂತೆ ಉರುಗುಟ್ಟುತ್ತ ನೋಡಿದರೂ, ಮುಂಬಯಿನ ಪ್ರಯಾಣಿಕರ ಪರಸ್ಪರ ತಾಳ್ಮೆಯಿಂದಲೋ, 'ಹಾಳಾಗಿ ಹೋಗಲಿ' ಎಂಬ ಔದಾಸೀನ್ಯ ದಿಂದಲೋ, ತಮ್ಮ ತಮ್ಮ ಕೆಲಸದಲ್ಲಿ ಆಗಲೇ ಒದ್ದಾಡಿ ನೋತು ವಾಗ್ವಾದ ಜಗಳಕ್ಕೆ ಶಕ್ತಿ ಇಲ್ಲದಿದ್ದರಿಂದಲೋ, ಅಥವಾ ಸಹಜವಾದ ಸಂಸ್ಕಾರ ಸೌಜನ್ಯದಿಂದಲೋ, ಮರೆವಾಡರ ಮೇಲಿನ ಕನಿಕರದಿಂದಲೋ, ಎರಡನೆಯ ಪ್ರೊಫೆಸರ ಒದ್ದೆ ಕೋಟಿನ ಒತ್ತಡವನ್ನು ತಪ್ಪಿಸಿಕೊಳ್ಳುವ ಇಷ್ಟದಿಂದಲೋ—ಯಾತರಿಂದಲೋ ಅಂತೂ ಸುಮ್ಮನೆ ಒತ್ತಿಸಿಕೊಂಡರು. ಸ್ಥಳದ ಮೇಲೊಂದು ಅವರ ಹಕ್ಕು ಸ್ಥಾಪಿಸಲ್ಪಟ್ಟ ಮೇಲೆ ಮರೆವಾಡರು ಮತ್ತೆ ಕಷ್ಟದಿಂದ ಕಿತ್ತುಕೊಂಡು ಎದ್ದು, ಕಿಟಕಿಯ ಕಡೆಗೆ ಬಾಗಿ, ಯಾರ ಪಾದದಮೇಲೋ ಪಾದವನ್ನಿಟ್ಟು "ಸಾರಿ, ಸಾರಿ, ಕ್ಷಮಿಸಿ, ಕ್ಷಮಿಸಿ" ಎಂದು ಮಂತ್ರವನ್ನು ಜಪಿಸುತ್ತ, ಸೋರುವ ಕೊಡೆಯ ನೀರನ್ನು ಇದಿರುಬದಿರು ಬೆಂಚಿನ ನಾಲ್ಕಾರು ಮಹಾಶಯರ ಮಂಡಿಗಳ ಮೇಲೆ ಸೋರಿಸುತ್ತ, ಮರದ ಕೊಂಬೆಯಂತೆ ಬಗ್ಗಿ, ಕೊಡೆಯ ಹಿಡಿ ಯನ್ನು ಕಿಟಕಿಯ ಅಡ್ಡಕಂಬಿಗೆ ತಗಲುಹಾಕಿದರು. ಮತ್ತೆ ಹಿಂದಿ ನಂತೆಯೇ ಜಪಿಸುತ್ತ ತಮ್ಮ ಧಾಳಿಯನ್ನು ಹಿಂದುವರಿಸಿ, ತಮ್ಮ ಹ್ಯಾಟನ್ನು ತೆಗೆದು ಇದಿರು ಮಾಡಿನ ಮೇಲಿಟ್ಟು, ಮೇಲು ಜೇಬಿನಿಂದ ತೆಗೆದ ಚೊಕ್ಕ ಬಿಳಿಯ ಕೈಚೌಕದಿಂದ, ಬಿಳಿಕೂದಲು ತೋರಣದಂತೆ ಅಂಟಿಕೊಂಡಿದ್ದ ಹಿಂದಲೆಯನ್ನೂ, ತಂಬಿಟ್ಟಿನಂತಿದ್ದ ಮುಂದಲೆಯನ್ನೂ

ಒರೆಸಿಕೊಳ್ಳುತ್ತ, ಮತ್ತೆ ಪ್ರಯಾಸದಿಂದ ತಮ್ಮ ಸ್ಥಳದಲ್ಲಿ ಸಿಕ್ಕಿಕೊಂಡರು ಕೊಡೆಯ ನೀರಿನಿಂದ ಪ್ರೋಕ್ಷಿತರಾದ ಸಹಪ್ರಯಾಣಿಕರು, ಸೆರಗೆಳೆಯಲ್ಪಟ್ಟ ಹೆಂಗಸು ನೋಡಬಹುದಾದಂತೆ ತಮ್ಮನ್ನು ದಿಟ್ಟಿಸಿ ನೋಡಿ ಹುಬ್ಬುಗಂಟಿಕ್ಕಿದುದರ ಕಡೆಗೆ ಪ್ರೊಫೆಸರ ಗಮನವೇ ಹೋಗಲಿಲ್ಲ. ಅವರು ಹೆಚ್ಚೇನನ್ನೂ ಮಾಡಲು ಅಸಮರ್ಥರೆಂದು ಅವರಿಗೆ ಚೆನ್ನಾಗಿ ಗೊತ್ತಿದ್ದಿತು. ಇನ್ನು ಏಕೆ ಅದನ್ನು ಹಚ್ಚಿಕೊಳ್ಳುವುದು?

ಲಕ್ಷಣವಾಗಿ—ತಾವು ಕ್ಷಮಿಸುವುದಾದರೆ—ಇದ್ದುದರಲ್ಲಿ ಅಗಲವಾಗಿಯೇ ಕುಳಿತಮೇಲೆ ಮರೆವಾಡರು "ಇವತ್ತು ನಿಜವಾಗಿ ಆರೂ ಮುವತ್ತೇಳು ತಪ್ಪಿತು ಅಂತಲೇ ಅಂದುಕೊಂಡಿದ್ದೆ. ನಡೆಯುವುದಕ್ಕೇ ಆಗದು—ಬೀದಿಯಲ್ಲಿ, ಅಷ್ಟು ಜನ, ಜಾರಿಕೆ. ಸದ್ಯ ಹೇಗೋ ಸಿಕ್ಕಿತು. ಇಲ್ಲದಿದ್ದರೆ ನೋಡಿ ಮುಂದಿನ 'ಛಾನ್ಸು' ಅಂದರೆ ಆರೂ ಐವತ್ತೆಂಟ. ನಮ್ಮಸ ಇಪ್ಪತ್ತೊಂದು ನಿಮಿಷ ಇಲ್ಲಿ ಕೊಳೆಹಾಕಿದಂತೆ"

"ಎಲ್ಲಾ ಈ ಹಾಳು ಮಳೆಯಿಂದ. ನಮ್ಮ ಕಾಲೇಜೂ ಇಲ್ಲಿಗೆ ಏಳು ನಿಮಿಷವೇ—ಸರಿಯಾಗಿ. ಇವತ್ತು ಸುಮಾರು ಒಂಬತ್ತೇ ಆಯಿತು, ಅಬ್ಬಬ್ಬ! ಏನು ಮಳೆ! ಏನು ಮಳೆ! ಈ ತರಹ ನಾನು ಹುಟ್ಟಿದಾರಭ್ಯ ಕಂಡಿರಲಿಲ್ಲ."

"ನಾವು ಪ್ರತಿವರ್ಷವೂ ಹಾಗೆ ಹೇಳುವುದು ರೂಢಿಯಾಗಿಬಿಟ್ಟಿದೆ" ಅಂದರು ಮರೆವಾಡರು.

"ಹಾಗಲ್ಲ. ಈ ವರ್ಷ ಹಿಂದಿನ ಎಲ್ಲಾ...."

"ಅಯ್ಯೋ, ಸಾವಿರದ ಒಂಭೈನೂರು ಮೂವತ್ತರ...."

"ಹೋ, ಹೋ, ನಿಜ. ಛೇ! ಛೇ! ಅದೆಂತಹಕಾಲ....!"

"ಒಂದು ದಿನ ಕೆಲಸವೆಲ್ಲ ನಿಂತಿರಲಿಲ್ಲವೆ?"

"ಈ 'ಲೋಕಲ್ಲುಗಳು' ಓಡುತ್ತಿದ್ದುವೆ ಆ ದಿನ?"

"ಆದರೂ ಈ ವರ್ಷವೂ ಬಹಳ ಹಿಂಸೆ, ಏನಾದರೂ ಅನ್ನಿ ಕೊಡೆಗಿಡೆ ಎಲ್ಲ ಯಾಕೆ?"

."ಅದಕ್ಕೇ ನಾನು ಅದನ್ನು ನಂಬದೆ ಮಳೆ ಅಂಗಿಯನ್ನೇ ಹಾಕಿಕೊಂಡಿದ್ದೇನೆ."

"ಓ, ಅಂಗಿ ಒದ್ದೆಯಾಗಿಲ್ಲವೆ? ಹಾಕಿಕೊಂಡೇ ಕುಳಿತಿದ್ದೀರಲ್ಲ."

"ಹು, ಸ್ವಲ್ಪ ತಣ್ಣಗಿದೆ ಅಷ್ಟೆ."

"ತೆಗೆದು ಅಲ್ಲಿ ಹಾಕಿವರೋ" ಮರೆವಾಡರು ಜಾಗವಿದ್ದ ಮಾಡೊಂದನ್ನು ತೋರಿಸಿದರು

"ಇಡಬಹುದು. ಆದರೆ ನೋಡಿ ನನಗೆ ಎಲ್ಲಿ ಮರೆತುಬಿಡು ತ್ತೇನೋ ಎಂಬ ಭಯ."

"ಓಹೋ, ಪ್ರೊಫೆಸರ ಬಗ್ಗೆ ನಾಣ್ಣುಡಿಗೆ ತಾವು ಮಾವರಿ ಆದ ಹಾಗಿದೆ." ಮರೆವಾಡರು ನಕ್ಕರು.

"ಸ್ವಲ್ಪಹಾಗೆ ಹಾಗೆಯೇ" ಸ್ನೇಹಿತರೂ ನಕ್ಕರು. ಆಗ ಅಲ್ಪ ಸ್ವಲ್ಪ ಕಾಣುತ್ತಿದ್ದ ಕಣ್ಣೂ ಮಾಯವಾದುವು ಕೆನ್ನೆ ಮಾಂಸದ ಹಿಂದೆ

"ನಾನೂ ಪ್ರೊಫೆಸರ ಗೋತ್ರಕ್ಕೇ ಸೇರಿದ್ದರೂ ನನ್ನ ಪದಾರ್ಥಗಳ ಬಗ್ಗೆ ನನಗೇನು ಮರೆವಿಲ್ಲ ಸ್ವಾಮಿ"

"ನೋಡಿ, ನಿಮ್ಮಷ್ಟು ಧೈರ್ಯವಾಗಿ ನಾನು ಕೊಡೆಯನ್ನು ಅಷ್ಟು ದೂರ ಇಡಲಾರೆ—ಈಗ"

"ಹ್ಹ! ಹ್ಹ! ಅದೆಲ್ಲ ಅಭ್ಯಾಸವಿದ್ದರಾಯಿತು ಅಷ್ಟೆ. ಅಲ್ಲದೆ ಈ ಅಗತ್ಯ ಪದಾರ್ಥಗಳ ವಿಷಯಗಳಲ್ಲಿ ನಾನು ಬಲು ಜಾಗರೂಕನಾಗಿರು ತ್ತೇನೆ ಅತ್ತಿತ್ತ ಹೆಚ್ಚಿಗೆ ಗಮನಕೊಡುವುದಿಲ್ಲ

"ಆದರೂ ..."

"ಸರಿ, ನಾಚಿಕೆಗೇಡು. ಇಂತಹದನ್ನೆಲ್ಲ ಮರೆಯೋಣ ಅಂದ ರೇನು—ಚೆನ್ನಾಯಿತು." ಮರೆವಾಡರು ಹೆಮ್ಮೆಯಿಂದ ಹೇಳಿದರು.

"ಹಾಗೆನ್ನಬೇಡಿ. ಈಗಾಗಲೇ ಈ ವರ್ಷ ನಾನು ಎರಡು ಕೊಡೆ ಗಳನ್ನು—ಹದಿನಾಲ್ಕು ಹದಿನಾಲ್ಕು ರೂಪಾಯಿನವು, ಸಾಮಾನ್ಯವಲ್ಲ— ಕಳೆದುಕೊಂಡೆ. ನಿಮಗೆ ಗೊತ್ತೆ?"

"ನಿಜವಾಗಿ!" ಮರೆವಾಡರು ಅತ್ಯಾಶ್ಚರ್ಯವನ್ನು ಸೂಚಿಸಿದರು.

"ಹುಂ. ಅದಕ್ಕೇ ನೋಡಿ. ಈಗ ಕೊಡೆ ತರುವುದನ್ನೇ ಬಿಟ್ಟು ಬಿಟ್ಟಿದ್ದೇನೆ. ಮಳೆ ಅಂಗಿಯೇ ಸಾಕು. ಅದೂ ಮೈಬಿಡುವಂತಿಲ್ಲ— ರೈಲುಗಾಡಿಯಲ್ಲಿ"

"ಹ್ಹ ! ಹ್ಹ ! ನಾನೇನೋ ಎಚ್ಚರಿಕೆಯಿಂದ ನೋಡಿಕೊಳ್ಳುತ್ತೇನೆ ಬಿಡಿ ನಾಣ್ಣುಡಿಗೆ ಆಕ್ಷೇಪ ಅನ್ನಿ."

"ಇರಬಹುದು. ನನಗೇನೋ ಮರೆವು ಜಾಸ್ತಿ—ನಿಜವಾಗಿ. ಅದೇನು ಪ್ರೊಫೆಸರ್ ಆದುದರಿಂದ ಅಲ್ಲ ಅನ್ನಿ. ಎಲ್ಲರೂ ಆಗಾಗ ಮರವಿಗೆ ಒಳಗಾಗಿಯೇ ಆಗುತ್ತಾರೆ. ನಮ್ಮ ವಿಷಯ ಮಾತ್ರ ಹೆಚ್ಚು ವಿನೋದಕ್ಕೆ ಕಾರಣ, ಅಷ್ಟೆ."

"ಏ ಅದರಲ್ಲೇನು ಅಷ್ಟು ಹುರುಳಿಲ್ಲ ಬಿಡಿ" ಮರೆವಾಡರು ನಿರ್ಧಾರವಾಗಿ ಹೇಳಿದರು

"ಸಣ್ಣ ಪುಟ್ಟ ವಿಷಯಗಳಲ್ಲಿ ಯಾರ ಮನಸ್ಸು ಎಡಹುವುದಿಲ್ಲ— ಹೇಳಿ ನೋಡಿ ನಾನು ಹಲ್ಲುಜ್ಜಿಕೊಳ್ಳುವುದು ಸ್ನಾನವಮಾಡುವುದರ ಜತೆಗ. ನಮಗೆ ಬೇರೆಬೇರೆ ಹೊತ್ತಿಲ್ಲ' ಸ್ನಾನಕ್ಕೆ ಬಟ್ಟೆ ತೆಗೆದೇ ಹಲ್ಲುಜ್ಜಿಕೊಳ್ಳುವುದು. ಒಂದು ದಿನ ಚಳಿಯಾಗಿತ್ತು. ಬನಿಯನ್ನನ್ನು ತೆಗೆಯದೆಯೇ ಹಲ್ಲನ್ನುಜ್ಜಿಕೊಂಡೆ. ಹಾಗೆಯೇ ಮರೆತು ಬಟ್ಟೆಯ ಮೇಲೇ ಸ್ನಾನದ ನೀರನ್ನು. . . ?"

"ಓಹೋ! ಹೋ! ಹೋ!. . . ." ಮರೆವಾಡರು ಮನಸಾರೆ ನಕ್ಕರು.

"ತಕ್ಷಣವೇ ತಿಳಿಯಿತು ಅನ್ನಿ. ಆದರೆ ಹಾಗೆಲ್ಲ ಆಗುತ್ತದೆ. ಸಹಜ. ಇನ್ನೊಂದು ದಿನ ಟೂತ್ ಪೇಸ್ಟಿನ ಕೊಳವಿಯನ್ನೇ 'ಬ್ರಷ್ಷಿ'ಗೆ ಬದಲಾಗಿ ಹಲ್ಲಿನ ಕಡೆಗೆ ಸಾಗಿಸಿದ್ದೆ."

"ಓ, ಹಾಗೇನು . . . ಹುಂ" ನಗುತ್ತಿದ್ದ ಮರೆವಾಡರು ಕೊಂಚ ಗಂಭೀರವಾಗಿ "ನಾನೂ ಒಂದು ದಿನ ಪೇಷ್ಟನ್ನು ಬ್ರಷ್ಷಿನಮೇಲೆ ಹಾಕುವುದಕ್ಕೆ ಬದಲಾಗಿ ಬೋಸಿಯ ನೀರಿನೊಳಕ್ಕೆ ಬಿಡುತ್ತಿದ್ದೆ ಎರಡು ಮೂರು ಅಂಗುಲ ತೇಂಗೋಳಿನ ಬಳ್ಳಿ ಎಣ್ಣೆಗೆ ಬಿದ್ದಂತೆ ಕಂಡಕೂಡಲೇ ಎಚ್ಚೆತ್ತುಕೊಂಡೆ ಅನ್ನಿ." ಈಗ ಸ್ನೇಹಿತರು ನಕ್ಕರು. ಮರೆವಾಡರು ಕೊಂಚ ಗಡಿಬಿಡಿಯಾಗಿ "ಅಂತಹದು ಯಾವಾಗಲೋ ಒಂದು ಸಾರಿ" ಅಂದರು. ಆದರೆ ಸ್ನೇಹಿತರು ಇದನ್ನು ಗಮನಿಸಲಿಲ್ಲ. ಅವರ ಮನಸ್ಸು ಇದೇ ತರಹದ ಸನ್ನಿವೇಶಗಳನ್ನು ನೆನೆದು ನಲಿಯುತ್ತಿದ್ದಿತು. ಆವರು

ವಿನೋದಪ್ರಿಯರಾದುದರಿಂದ ನಾಚಿಕೊಳ್ಳದೆ ಮತ್ತಷ್ಟು ಉದಾಹರಣೆಗಳನ್ನು ನೆನೆಸಿಕೊಂಡರು.

"ನೋಡಿ, ಒಂದು ದಿನ ತಮಾಷೆ. ಅದೇನನ್ನು ಯೋಚಿಸುತ್ತಿದ್ದೆನೋ ಏನೋ. ಸಾರು ಹಾಕುವುದಕ್ಕೆ ಮುಂಚೆಯೇ ಬರಿಯನ್ನವನ್ನೇ ತಿನ್ನುತ್ತಿದ್ದೆನಂತೆ ನಮ್ಮವಳು 'ನಿಮಗೇನು ಬಂದಿದೆ ಬರ, ಬರಿಯನ್ನ ಮುಕ್ಕೋಕೆ?' ಅಂದಮೇಲೆ ನನಗೆ ಪ್ರಜ್ಞೆ ಬಂತು"

"ಹಾಗೇನು? ನಾನೆಲ್ಲೋ ಒಂದೆರಡು ದಿನ ಮಜ್ಜಿಗೆ ಅನ್ನಕ್ಕೆ ಮುಂಚೆ ಎದ್ದ ನೆನಪುಂಟು ಅಷ್ಟೆ"

"ಇನ್ನೊಂದು ದಿನ ಬಟ್ಟೆ ತರುವುದಕ್ಕೆ ಅಂಗಡಿಗೆ ಹೋಗಿ ವ್ಯಾಪಾರ ಮಾಡಿ, ದುಡ್ಡು ಕೊಟ್ಟು, ಬಿಲ್ಲನ್ನು ತೆಗೆದುಕೊಂಡು ಬರಿಯ ಕೈಯಲ್ಲೇ ಮನೆಗೆ ಬರುವುದೆ! ಹೇಳಿ."

"ಹ್ಹ ! ಹ್ಹ !"

"ಪಾಪ! ಆ ಅಂಗಡಿಯವನು ಧರ್ಮಿಷ್ಠ. ಮಾರನೆಯ ದಿನ ಕೊಟ್ಟ."

"ಯಾರೋ ಹೇಳಿದರು ಒಬ್ಬ ಬಾಚಣಿಗೆಯಿಂದ ತಲೆ ಬಾಚಿಕೊಳ್ಳುವ ಬದಲು ಎಣ್ಣೆ ಸೀಸೆಯನ್ನೇ ತಲೆಯಮೇಲೆ ಬಗ್ಗಿಸಿಕೊಳ್ಳುತ್ತಿದ್ದನಂತೆ."

"ಓಹೋ! ಓಹೋ! ಇದೇನೋ ವಿಪರೀತ. ಎಲ್ಲರಿಗೂ ಏನು, ಪ್ರೊಫೆಸರ್ ಅಂದರೆ ಎಲ್ಲವೂ ಸಾಧ್ಯ ಅಂತ. ಕಟ್ಟುಕತೆ...."

"ಒಂದು ದಿನವೇನೋ ನಾನು ಯಾವುದೋ 'ಪ್ರಾಬ್ಲಂ' ಬಹಳ ಯೋಚಿಸುತ್ತಲೇ ಇರಬೇಕು ಇಲ್ಲದಿದ್ದರೆ ಹಾಗಾಗುವುದೇ ಇಲ್ಲ. ಸಂಜೆ ನನ್ನ ಹ್ಯಾಟನ್ನು ಗೂಟಕ್ಕೆ ಹಾಕುವ ಬದಲು ಷೂಗಳನ್ನೇ ಅಲ್ಲಿಗೆ ಎತ್ತಿದ್ದೆ."

"ಹ! ನೋಡಿದಿರಾ? ಇದು ಆಗಾಗ ಆಗುವುದೆ. ಕಕ್ಕಸು ಡಬ್ಬವನ್ನು ನಾನು ಎಷ್ಟು ಬಾರಿ ಒಳಕ್ಕೇ ತಂದಿದ್ದೇನೋ. ಹೊರಗೆ ಬಿಟ್ಟ ಎಕ್ಕಡವನ್ನು ಎಷ್ಟು ಬಾರಿ ಬಿಟ್ಟೇ ಬಂದಿದ್ದೇನೋ, ಇವಕ್ಕಂತೂ ಲೆಕ್ಕವೇ

ಇಲ್ಲ. ಟೋಪಿ ಮರೆಯುವುದಂತು ಈಗಲ್ಲ, ಹುಡುಗತನದಿಂವ ಅಭ್ಯಾಸ ವಾಗಿ ಹೋಗಿದೆ.''

"ಅಷ್ಟು ಅಗತ್ಯವಾದದ್ದನ್ನೆಲ್ಲ ಹೇಗೆ ಮರೆಯುವುದು? ನಾನು ಹಾಗೆಲ್ಲ ಸುಲಭವಾಗಿ ಏನನ್ನೂ ಮರೆಯುವವನಲ್ಲ.''

ಇಷ್ಟುಹೊತ್ತಿಗೆ ಗಾಡಿ ಚರನಿರೋಡಿಗೆ ಬಂದಿತು. ಎಂಟು ಜನದ ಪೈಕಿ ಯಾರೋ ಒಬ್ಬರು ಎದ್ದರು. ಬಾಕಿಯವರು ತಟ್ಟನೆ 'ಹಿಗ್ಗಿ' ಕೊಂಡು ಜಾಗವನ್ನು ಭರ್ತಿಮಾಡಿದರು. ಒಬ್ಬನು ಎದ್ದುದನ್ನೇ ಕಾಯುತ್ತಿದ್ದ ಬೇರೊಬ್ಬ ನಿಂತವನಿಗೆ ಇವರಲ್ಲಿ ಯಾರೂ ಪರಿಚಯುವಿಲ್ಲದಿದ್ದುದರಿಂದ ಆಶಾಭಂಗವಾಯಿತು. ಅವನು ಮಾತ್ರ ದೂರ್ವಾಸನಾಗಿದ್ದರೆ ಈ ಏಳು ಜನರೂ ಆ ಕ್ಷಣದಲ್ಲಿ ಬೂದಿಯಾಗಿಬಿಡುತ್ತಿದ್ದರು. ಹೀಗೆ ಸ್ವಲ್ಪ ಅನುಕೂಲವಾದಮೇಲೆ ಮರೆವಾಡರೂ ಸಿಗರೇಟಿನ ಪ್ಯಾಕೆಟ್ಟನ್ನು ತೆಗೆದು ಒಂದು ಸಿಗರೇಟನ್ನು ಬಾಯಿಗಿಟ್ಟುಕೊಂಡರು. ಅನಂತರ ಕಡ್ಡಿಪೆಟ್ಟಿಗೆಗಾಗಿ ಆ ಜೋಬು ಈ ಜೋಬು ಎಲ್ಲವನ್ನೂ ಪರಿಶೋಧಿಸಿದರು. ಪ್ರಯೋಜನವಾಗಲಿಲ್ಲ.

"ಎಲ್ಲೋ ನನ್ನ ಕಾಲೇಜು ಕೋಣೆಯಲ್ಲೇ ಬಿಟ್ಟಿರಬೇಕು" ಅಂದುಕೊಂಡರು. ಸ್ನೇಹಿತರು "ಏನು ಬೆಂಕಿ ಕಡ್ಡಿಯೆ? ಇಗೊ ತೆಗೆದು ಕೊಳ್ಳಿ, ಇದರಿಂದ ಹತ್ತಿಸಿಕೊಳ್ಳಿ ಎಂದು, ಅವರ ಜ್ಯೋತಿಯಂತೆ ಉರಿಯುತ್ತಿದ್ದ ತಮ್ಮ ಚುಟ್ಟವನ್ನು ದಾನವಮಾಡಿದರು. ಈ ಹಚ್ಚಿಕೊಳ್ಳುವ ಸಂಭ್ರಮದಲ್ಲಿ ಕೆಲವು ಕಿಡಿಗಳು ಸಿಡಿದವು, ವಿಶೇಷವಾಗಿ ಹೊಗೆಯೂ ಹತ್ತಿರವೆಲ್ಲ ಆವರಿಸಿಕೊಂಡಿತು. ಪಕ್ಕದಾತ ತಾನು ಓದುತ್ತಿದ್ದ ಪತ್ರಿಕೆಯಿಂದ ಬೀಸಿಕೊಂಡನು. ಮರೆವಾಡರು "ಸಾರಿ, ಸಾರಿ" ಎಂದು ಕ್ಷಮೆ ಬೇಡಿದರು. ಮರುಕ್ಷಣದಲ್ಲಿ ಇಬ್ಬರು ಸ್ನೇಹಿತರೂ ಎರಡು ಕಾರ್ಖಾನೆಯ 'ಚಿಮನಿ'ಗಳಂತೆ ಸೇದಲು ಉಪಕ್ರಮಿಸಿದರು

ಗಾಡಿ ಗ್ರಾಂಟುರೋಡಿಗೆ ಬಂದಿತು. ಸಂಜೆ ಪತ್ರಿಕೆಯ ಹುಡುಗರು "ಇವಿನಿಂಗ್ ನ್ಯೂಸ್,[1] ಬಾಂಬೆ ಸೆಂಟಿನಲ್[2]" ಎಂದು ಕಿಟಕಿಯಬಳಿ

1–2 ಇವು ಮುಂಬಯಿಯ ಸಂಜೆ ಪತ್ರಿಕೆಗಳು.

ಚೀರಿದರು. ಮರೆವಾಡರು ಏನನ್ನೋ ನೆನಸಿಕೊಂಡಂತೆ ಜೇಬಿಗೆ ಕೈ ಹಾಕಿದರು. ಸ್ನೇಹಿತರು "ಏನು?" ಎಂದು ಕೇಳಿದರು. "ಏನೂ ಇಲ್ಲ. ನನ್ನ 'ಈವ್‌ನಿಂಗ್ ನ್ಯೂಸ್'."

"ಎಲ್ಲಿ? ಅದರಲ್ಲಿ ಏನು ಸಮಾಚಾರ?"

"ಏನೋ ನಾನು ಸರಿಯಾಗಿ ನೋಡಲಿಲ್ಲ, ಕಾಲೇಜಿನಲ್ಲಿ ಬಹಳ ಕೆಲಸದಲ್ಲಿದ್ದೆ, ಪತ್ರಿಕೆಯನ್ನೂ ಅಲ್ಲೇ ಬಿಟ್ಟೆ ಅಂತ ಕಾಣುತ್ತೆ."

"ಹಾಗಾದರ ಇಲ್ಲೇ ಒಂದನ್ನು ತೆಗೆದುಕೊಳ್ಳೋಣ"

ಸ್ನೇಹಿತರು ಒಂದನ್ನು ಕೊಂಡುಕೊಂಡು "ನೋಡಿ, ನಾನು ಪತ್ರಿಕೆಯನ್ನು ಮರೆಯುವಹಾಗೆ ಇಲ್ಲ. ಬರುವಾಗ ಬೆಳಗಿನ 'ಫ್ರೀ ಪ್ರೆಸ್'[1], ಕೊಂಡುಕೊಂಡು ಗಾಡಿಯಲ್ಲಿ ಓದುತ್ತೇನಷ್ಟೆ. ಓದಿದ ತಕ್ಷಣವೇ ಸಾಮಾನ್ಯವಾಗಿ ಜೇಬಿಗೆ ಸೇರಿಸಿಬಿಡುತ್ತೇನೆ. ಇಲ್ಲದೆ ಅಲ್ಲಿ ಇಲ್ಲಿ ಮರೆತು ಮನೆಗೆ ಹೋದರೆ ನನ್ನವಳು ತರಾಟಗೇ ತೆಗೆದುಕೊಳ್ಳು ತ್ತಾಳೆ. ಅವಳಿಗೂ ಅಷ್ಟು ಓದುವುದಕ್ಕೆ ಬರುತ್ತದೆ. ಅವಳಿಗೆ ನನಗೆಷ್ಟು ಮರೆವು ಎನ್ನುವುದರ ಅರಿವಿಲ್ಲ. ಸುಮ್ಮನೆ 'ನನ್ನಮೇಲೆ ನಿಮಗೆ ಅಲಕ್ಷ್ಯ' ಅನ್ನುತ್ತಾಳೆ. ಅದಕ್ಕಾಗಿ ಅಂಥ ದಿನ ಸಂಜೆ ಪತ್ರಿಕೆಯನ್ನಾ ದರೂ ಕೊಳ್ಳಬೇಕು. ಅದೂ ಒಂದೊಂದು ದಿನ ಸಿಕ್ಕುವುದಿಲ್ಲ" ಎಂದು ವಿವರಿಸಿದರು.

"ನಾನು ಮರೆಯುವುದು ಬಹಳ ಅಪೂರ್ವ" ಎಂದು ಮರೆವಾಡರು ಸಮಾಧಾನವನ್ನು ತಂದುಕೊಂಡರು.

ಸ್ನೇಹಿತರು ಪತ್ರಿಕೆಯ ಒಂದು ಭಾಗವನ್ನು ತೆಗೆದುಕೊಂಡು ಎರಡ ನೆಯದನ್ನು ಮರೆವಾಡರಿಗೆ ಕೊಟ್ಟರು. ಗಾಡಿಯಲ್ಲಿ ಈ ಭಾಗದಲ್ಲಿ ಕೊಂಚಮಟ್ಟಿಗೆ ನಿಶ್ಶಬ್ದತೆಯುಂಟಾಯಿತು.

ದಡಗುಟ್ಟಿಕೊಂಡು 'ಆರೂಮುವತ್ತೇಳು' ಎಲ್ಲೂ ನಿಲ್ಲದೆ ದಾದರಿಗೇ ಒಟ್ಟಿಗೆಬಂದು ನಿಂತಿತು. ಅನೇಕರು ಇಳಿದರು, ಅನೇಕರು ಹತ್ತಿದರು. ಆದರೆ ನಮ್ಮ ಸ್ನೇಹಿತರು ಪತ್ರಿಕೆಯಲ್ಲಿ ತಲ್ಲೀನರಾಗಿದ್ದವರು ತಮ್ಮ ಭಾಗಗಳನ್ನು ಬದಲಾಯಿಸಿಕೊಂಡರು ಅಷ್ಟೆ.

1 ಇದೂ ದಿನಪತ್ರಿಕೆಯೆ.

ಮತ್ತೆ ಗಾಡಿ ನಿಂತುದು ಬಾಂದ್ರದಲ್ಲೆ. ಇಳಿಯುವವರಲ್ಲಿ ಇದಿರುಸಾಲಿನ ಒಬ್ಬಾತನು ಇಳಿಯುವ ಸಡಗರದಲ್ಲಿ ತನ್ನ ಪಕ್ಕದಲ್ಲಿಟ್ಟು ಕೊಂಡಿದ್ದ ಸಿಗರೇಟು ಡಬ್ಬಿಯನ್ನು ಮರೆತಿದ್ದನು. ಇದನ್ನು ನೋಡಿದ ಸ್ನೇಹಿತರು. "ಹಲೋ, ಹಲೋ, ನಿಮ್ಮ ಸಿಗರೇಟ್ ಟಿನ್" ಎಂದು ಎಚ್ಚರಿಸಿದರು. ಆತನು ತೆಗೆದುಕೊಂಡು ಸ್ನೇಹಿತರನ್ನು ವಂದಿಸಿದನು. ಅದೇ ಹೊತ್ತಿನಲ್ಲಿ ಹೊರಗಡೆಯಿಂದ ಆತನ ಸಂಗಡಿಗನು ಕಿಟಕಿಗೆ ಬಂದು "ಪ್ರೊಫೆಸರ್ ಮುಖರ್ಜಿ! ಇಲ್ಲೇ ಇಳಿಯುವುದು" ಎಂದನು. ಅಪರಿಚಿತನು ಇಳಿಯಲು ಹೋದನು. ಸ್ನೇಹಿತರಿಬ್ಬರೂ ಒಬ್ಬರ ಮುಖವನ್ನು ಒಬ್ಬರು ನೋಡಿಕೊಂಡರು. ಗಾಡಿ ಹೊರಟಿತು. ಇಷ್ಟುಹೊತ್ತಿಗೆ ಸ್ನೇಹಿತರು ಓದಿ ಮುಗಿಸಿದ್ದರು

"ಛೇ, ನೋಡಿದಿರಾ ನಾಗಸಾಕಿಯಮೇಲೆ ಮತ್ತೆ ಒಂದು ಆಟಂ ಬಾಂಬು ಹಾಕಿದರಂತೆ."

"ಹುಂ. ನೋಡಿ, ನಮ್ಮ ಜ್ಞಾನ, ನಾಗರೀಕತೆ ಎಲ್ಲ ಎಲ್ಲಿಗೆ ಬಂತು? ಎಷ್ಟು ಹಾಸ್ಯಾಸ್ಪದ, ದುರಂತ, ಕನಿಕರ? ಇದೇನು ಮುಂದಿನ ಸರ್ವನಾಶದ ಯಾದವ ಕಲಹದ ಸೂಚನೆಯೋ ಏನೋ?"

"ಅಲ್ಲ, ಆ ಬಾಂಬಿನ ಶಕ್ತಿ ಎಷ್ಟಿರಬೇಕು? ಒಂದೇ ಬಾಂಬು ಊರಿಗೆ ಊರನ್ನೇ ನಾಶಪಡಿಸುತ್ತದಂತಲ್ಲ!"

"ಮುಂಬಯಿನ ಪತನಕ್ಕೆ ಎರಡೇಸಾಕಂತೆ."

"ಅದು ಸಿಡಿದಾಗ ಸೂರ್ಯೋದಯಕ್ಕಿಂತ ಹೆಚ್ಚಿನ ಪ್ರಕಾಶವಂತೆ."

"ಶಾಖಕ್ಕೆ ಸುತ್ತಿನದೆಲ್ಲ ಕರಗೇ ಹೋಗುವುದಂತೆ."

"ನೋಡಿ ವಿಜ್ಞಾನದ ಪ್ರಭಾವ"

"ಏನು ಪ್ರಭಾವವೋ. ಅದರ ಇಂತಹ ಒಂದು ದುರುಪಯೋಗ ಅದರ ಸಹಸ್ರ ಉಪಯೋಗಗಳ ತೂಕಕ್ಕಿಂತ ಭಾರ—ಮಾನವ ಜಾತಿಗೆ"

"ವಿಜ್ಞಾನ ಏನನ್ನು ಮಾಡೀತು. ಅದೇನು ನಾಶಮಾಡೇನೆಂದು ಹೇಳುತ್ತದೆಯೆ? ಎಲ್ಲವೂ ಮನುಷ್ಯನ ಹಾಳು ದುಷ್ಟತನ—ಅಷ್ಟೆ.

ಈ ನಾಶದ ಬುಡದಲ್ಲಿ ಇರುವುದೆಂದರೆ ಅವನ ದುರಾಸೆ, ಅಸೂಯೆ, ಹಗೆತನ.''

''ಹುಂ. ಸರ್ ರಾಮನ್ ಮೊನ್ನೆ ಹೇಳಲಿಲ್ಲವೆ? ಈ ಆಟಮ್ಮಿನ ಶಕ್ತಿಯನ್ನು ಹಿಡಿದು ಮಹೋಪಕಾರ ಪಡೆಯಬಹುದು ಅಂತ?''

''ಅದೇನೋ ಸರಿ. ಆದರೆ ಆತನು ಈ ಬಾಂಬು ಹಾಗಿರಬಹುದು ಹೀಗಿರಬಹುದು ಎಂದು ವಿವರಿಸಿದುದು ಮಾತ್ರ ನನ್ನ ತಲೆಗೇ ಹತ್ತಲಿಲ್ಲ.''

''ನಮ್ಮ ಪ್ರೊಫೆಸರ್ ಟೇಲರೂ ನಮ್ಮನ್ನೆಲ್ಲ ಕೂಡಿಹಾಕಿಕೊಂಡು ಬಣ್ಣ ಬಣ್ಣದ 'ಪಿಂಗ್ ಪಾಂಗ್' ಚೆಂಡುಗಳನ್ನು ತೋರಿಸುತ್ತ 'ಇದು ಎಲೆಕ್ಟ್ರಾನ್, ಅನ್ನುತ್ತ ಈ ಬಾಂಬಿನ ವಿಷಯವಾಗಿ ಎಂದು ಏನೋ ದೊಡ್ಡ ಭೌತಶಾಸ್ತ್ರದ ಉಪನ್ಯಾಸವನ್ನೇ ಕೊಟ್ಟುಬಿಟ್ಟ— ಅರ್ಧ ಮುಕ್ಕಾಲು ಗಂಟೆ. ಅದು ಯಾರಿಗಾದರೂ ಅರ್ಥವಾಯಿತೋ—ಕಡೆಗೆ ಅವನಿಗೆ ಆಯಿತೋ ಇಲ್ಲವೋ—ನಾನು ಹೇಳಲಾರೆ. ನನಗಂತೂ ತಲೆನೋವು ಬಂತು.''

''ಅಯ್ಯೋ ಅದು ಹಾಗೆ ಹೀಗೆ ಎಂದು ಎಲ್ಲರಿಗೂ ತಿಳಿದಿದ್ದರೆ ಅಮೆರಿಕದ ಗುಟ್ಟು ಏಕಾಗಬೇಕು? ಅದರ ಹತ್ತೋಟಿಗೆ ಯತ್ನ ಗಳೇಕೆ?''

''ಅಂತೂ ಅದರಲ್ಲೇನೋ ಯೂರೇನಿಯಮ್ ಇದೆಯಂತೆ.''

''ನೋಡಿದಿರಾ ಯೂರೇನಿಯಮ್ ಸಂಬಂಧದ ಷೇರುಗಳು ಮಲೇರಿಯಾ ಜ್ವರದಂತೆ ಏರುತ್ತಿವೆ.''

''ಸರಿ. ಈ 'ಮರಣ ವ್ಯಾಪಾರಿ'ಗಳಿಗೆ ಈ 'ಬ್ಲ್ಯಾಕ್ ಮಾರ್ಕೆಟ್ಟ'ನ ಜೊತೆಗೆ ಮತ್ತಷ್ಟು ಲಾಭ—ಅಷ್ಟೆ.''

''ಅಂತು ಈ ಯುದ್ಧದಲ್ಲಿ ಇವರೆಲ್ಲ ಎಷ್ಟು ದುಡ್ಡನ್ನು ಮಾಡಿದ್ದಾರೆ.''

''ಇಂತಹ ಮಹನೀಯರಲ್ಲಿ ಮಹಾತ್ಮರ ಅನುಯಾಯಿಗಳೆಂದು ಹೇಳಿಕೊಳ್ಳುವವರೂ ಇದ್ದಾರಲ್ಲ ಎಂದು ನನಗೆ ಸಂಕಟ.''

"ಅದಕ್ಕೂ ಹೆಚ್ಚಾಗಿ ಅಂತಹವರು ಸಮಾಜದ 'ಟ್ರಸ್ಟಿ'ಗಳು ಅಂತ ಅಂತಾನಲ್ಲ—ಆ ಮುದುಕ. ಅವನ ಬಗ್ಗೆ ನನಗೆ ನಿಜವಾದ ಕನಿಕರ."

"ಎಷ್ಟಾದರೂ ಆತನೂ ಮನುಷ್ಯನಲ್ಲವೆ?"

"ಹುಂ. ಅದು ಹೋಗಲಿ. ಇಲ್ಲಿ ಓದಿದರೇನು? ತಿರುವಾಂಕೂರಿನಲ್ಲಿ ಥೇರಿಯಂ ಪತ್ತೆಯಾಗಿದೆಯಂತೆ"

"ಏನು? ಅದರಿಂದ ಇನ್ನೊಂತಹ ಬಾಂಬೋ ಏನೋ."

"ಹಾಗೇನೂ ಇಲ್ಲ. ಅದು, ಯುರೇನಿಯಮ್, ರೇಡಿಯಮ್ ಎಲ್ಲವೂ ಒಂದೇ ಗುಂಪು"

"ಇವುಗಳನ್ನು ಕಂಡುಹಿಡಿದು ಕಡೆಗೆ ಲೋಕಕ್ಕೆ ಹೆಚ್ಚು ಒಳ್ಳೆಯದೋ ಕೆಟ್ಟದೋ ಯಾರು ಬಲ್ಲವರು?"

"ಒಳ್ಳೆಯದೇ ಆಗುತ್ತದೆ ಅಂದುಕೊಂಡಿರೋಣ ಇನ್ನೂ—ನೋಡಿ, ರೇಡಿಯಮ್ಮಿನಿಂದ ಆದ ಲಾಭಗಳು."

"ನಿಜ ರೇಡಿಯಮ್ ಅಂದಾಗ ಜ್ಞಾಪಕಕ್ಕೆ ಬರುತ್ತದೆ, ಅದರ ಪತ್ತೆ ಎಷ್ಟು ಕಷ್ಟವಾಯಿತು."

"ಹುಂ 'ಮ್ಯಾಡಮ್ ಕ್ಯೂರಿ' ಚಿತ್ರ ನೋಡಿದಿರಾ. ಎಂಥ ಸೊಗಸಾದದ್ದು. ಏನು ಅಭಿನಯ ಏನು ಕತೆ—ಅವಳದ್ದು ಅವಳು.... ಅವಳು" ಹೆಸರಿಗಾಗಿ ಮರೆವಾಡರು ತಡವರಿಸಿದರು

"'ಗ್ರೀರ್ ಗ್ಯಾರಿಸನ್' ಅಲ್ಲವೆ?" ಎಂದು ಸ್ನೇಹಿತರು ಕೇಳಿದರು. ಮರೆವಾಡರು "ಹುಂ. ಹುಂ. ನೋಡಿದಿರಾ ಅವಳೆ" ಅಂದರು.

"ನೋಡಿ. ಪಾಪ! ಅವಳ ಗಂಡ ಪ್ರೊಫೆಸರ್ ಕ್ಯೂರಿ ಕಡೆಗೂ ಏನನ್ನೋ ಆಲೋಚಿಸುತ್ತ ಗಾಡಿಗೇಸಿಕ್ಕಿ ಸತ್ತನಲ್ಲ" ಎಂದು ಸ್ನೇಹಿತರು ವಿಷಾದವನ್ನು ಸೂಚಿಸಿದರು.

"ದಿನವೂ ಎಷ್ಟೋ ಜನರು ಹಾಗೆ ಮೋಟಾರು, ಗಾಡಿ, ರೈಲು ಎಲ್ಲಕ್ಕೂ ಸಿಕ್ಕಿ ಸಾಯುತ್ತಾರೆ. ಆತನೂ ಹಾಗೇ ಸತ್ತಿರಬೇಕು. ಅದೇಕೆ ಅದನ್ನು ಪ್ರೊಫೆಸರ ಮನಸ್ಸಿಗೆ ಸಂಬಂಧಿಸಲ್ಪಡಬೇಕು?" ಎಂದು ಮರೆವಾಡರು ಕೇಳಿದರು.

" ನಿಜ. ಅಂತೂ ಅದರಲ್ಲೂ ಆ ಬಣ್ಣವನ್ನೇ ಕೊಟ್ಟಿದ್ದಾರೆ" ಎಂದು ಕೊಂಡರು ಸ್ನೇಹಿತರು.

ಗಾಡಿ ನಿಂತಿತು. ಮರೆವಾಡರು ಚಿಗಿದೆದ್ದು "ಏನು, ಮಾತಿನ ಭರದಲ್ಲಿ ನಾನು ಸಾಂಟಾಕ್ರೂಸ್ ದಾಟಿದೆನೆ?" ಎಂದು ಗಾಬರಿ ಯಾದರು.

" ಇಲ್ಲ. ಇದೇ ಸಾಂಟಾಕ್ರೂಸು ಅಂತಕಾಣುತ್ತೆ. ಜಾರ್ ಹಿಂದಾ ದುದು ನನಗೂ ಗೊತ್ತಾಗಲಿಲ್ಲ" ಎಂದು ಸ್ನೇಹಿತರು ಧೈರ್ಯ ಕೊಟ್ಟರು.

ಮರೆವಾಡರು ಅವಸರದಿಂದ ಎದ್ದು ಯಾರ ಯಾರ ಪಾದ ವನ್ನೋ ತುಳಿದು 'ಸಾರಿ ಸಾರಿ' ಅಂದು ಮುಂದೆ ಹೆಜ್ಜೆಯಿಟ್ಟಿದ್ದವರು ಮತ್ತೆ ಬಂದು ಕಿಟಕಿಗೆ ನೇತುಹಾಕಿದ್ದ ಕೊಡೆಯನ್ನು ತೆಗೆದುಕೊಂಡು ಓಗ್ಗುತ್ತ,

" ಇಲ್ಲಿ ನೋಡಿ. ನಾನು ಪ್ರೊಫೆಸರ್ ಆದರೂ ಮರೆವಿಗೆ ತುತ್ತಾ ದವನಲ್ಲ" ಅಂದರು.

" ಭಲೆ! ನೀವು ಹೇಳಿದಂತೆ ಆ ನಾಣ್ಣುಡಿಗೆ ತಾವು ಆಕ್ಷೇಪವೇ" ಎಂದು ಸ್ನೇಹಿತರು ನಕ್ಕರು.

ಮರೆವಾಡರು ಗಾಡಿಯಿಂದ ನೆಗೆದರು. ಒಡನೆಯೆ ಗಾಡಿಯೂ ಹೊರಟಿತು. ಇಳಿದವರೇ ತಮ್ಮ ನೆನಪಿನ ಬಗ್ಗೆಯ ಹರ್ಷದಿಂದ ಚೈತನ್ಯ ಹೊಂದಿ, ಒಟ್ಟೊಟ್ಟಿಗೆ ಎರಡೆರಡು ಮೆಟ್ಟಲಿನಂತೆ ಮೇಲುದಾರಿಯನ್ನು ಹತ್ತಿ, ಇಳಿದು ನಿಲ್ದಾಣವನ್ನು ಬಿಟ್ಟರು. ಅವರ ಉತ್ಸಾಹದಲ್ಲಿ ತಮ್ಮ 'ಪಾಸ'ನ್ನೂ ಸಹ ಮಾಸ್ತರಿಗೆ ತೋರಿಸಲಿಲ್ಲ. ಆದರೆ ಮಾಸ್ತರಿಗೆ ಅವರ ಗುರುತಿತ್ತು.

ಮಳೆ ಇನ್ನೂ ಹನಿಯುತ್ತಿದ್ದುದರಿಂದ ಮರೆವಾಡರು ಕೊಡೆ ಬಿಚ್ಚಿದರು. ದಾರಿಯಲ್ಲಿ ಗೆಲುವಿನ ಭಾವದಿಂದ "ಹ್ಞ, ಪ್ರೊಫೆಸರ್ ಆದ ಮಾತ್ರಕ್ಕೆ ಮರೆವು ಹೆಚ್ಚಂತೆ. ಒಳ್ಳೆಯ ನಾಣ್ಣುಡಿ, ನಂಬಿಕೆ. ಅವರು ನಾನು ಕೊಡೆಯನ್ನು ಮರೆಯುವೆನೆಂದೇ ತಿಳಿದಿದ್ದರೇನೋ. ನಾನಲ್ಲ ಹಾಗೆಲ್ಲ ಮರೆಯುವವನು" ಅಂದುಕೊಂಡರು ಮೆಲುದನಿಯಲ್ಲಿ.

ಮನೆ ಸೇರಿದವರೇ ಬಾಗಿಲನ್ನು ತಟ್ಟಿದರು. ಹೆಂಡತಿ ಬಾಗಿಲನ್ನು ತೆರೆಯುವಾಗಲೇ, "ಅಲ್ಲ ನೋಡು, ಅವರು ತಿಳಿದುಕೊಂಡಿದ್ದರು, ನಾನು ...." ಎಂದು ಮೊದಲುಮಾಡಿದರು.

ಅಮ್ಮಾವರು ಬಾಗಿಲನ್ನು ತೆಗದವರ "ಯಾರು? ಏನು ಅದು?" ಅಂದು ಪ್ರಶ್ನಿಸುತ್ತ, ಯಜಮಾನರ ಕಡೆಗೆನೋಡಿ "ಅರೆ! ಇದೇನು? ನಿಮ್ಮ ಹ್ಯಾಟೆಲ್ಲಿ? ಮರೆತಿರೇನು? ತೀರ ನಾಚಿಕೆಗೇಡು" ಎಂದರು.

ಮರೆವಾಡರು "ಹ್ಞ!" ಎಂದು ಬೆಚ್ಚಿ ತಟ್ಟನೆ ಎಡಗೈಯನ್ನು ತಲೆಗೆ ನಾಗಿಸಿದರು. ಅಲ್ಲಿ ಸಿಕ್ಕಿದುದು ತೋರಣದಂಥ ಕೂದಲು ಅಂಟಿದ ತಲೆಯ ಹಿಂಭಾಗ, ತಂಬಿಟ್ಟಿನಂಥ ಮುಂಭಾಗ—ಅಷ್ಟೆ. ಹ್ಯಾಟು ರೈಲುಗಾಡಿಯ ಮಾಡದಲ್ಲೇ ನಗುತ್ತಿದ್ದಿರಬೇಕು.

# "ಖುಷಿ ಮಹಮ್ಮದ"

ಇಬ್ಬರನ್ನಾಗಲೇ ಹೂಳಿ ಮೂರನೆಯ ಹೊಸ ಹೆಂಡತಿಯನ್ನು ಕರೆದು ತಂದಿದ್ದನು. ಚಾಕರ ಖುಷಿ ಮಹಮ್ಮದನಿಗೆ ಐವತ್ತು ವರ್ಷ. ಬಡ ಸಂಸಾರ. 'ಬಡತನಕ್ಕೆ ಮಕ್ಕಳು ಹೆಚ್ಚು' ಅನ್ನುವುದಕ್ಕೆ ಸರಿಯಾಗಿ ಇವನಿಗೆ ಈ ಕಾಲದಲ್ಲಿ ಚಿಕ್ಕ ಪುಟ್ಟ ಹತ್ತು ಮಕ್ಕಳು. ಎಲ್ಲವೂ ಗಟ್ಟಿ ಮುಟ್ಟು. ಅವುಗಳಲ್ಲೊಂದು ಕೂಡ ಸತ್ತಿರಲಿಲ್ಲ. ಇಷ್ಟು ಅಲ್ಲದೆ ಮೂರು ಹೊತ್ತೂ ಮನೆಯಲ್ಲಿ ಹೊರಗೆ 'ಜಗಳ ಕದನ' ಕಾಯ್ದುಕೊಂಡು. ಹೊಡೆದಾಡಿ, ಬಡಿದಾಡಿ, ಓಡಾಡಿ, ಹಾರಿ, ನಗೆದು, ಬಿದ್ದು ಎದ್ದು ತಿಂದದ್ದೆಲ್ಲವನ್ನೂ ಅರೆಕ್ಷಣದಲ್ಲಿಯೇ ಕರಗಿಸಿಕೊಂಡು, ಹಾಕಿದ್ದನ್ನೆಲ್ಲವನ್ನೂ ತಿಂದು ತೇಗಿ ಹುಟ್ಟಡಗಿಸಿ, ಮತ್ತಷ್ಟು ಆಹಾರಕ್ಕಾಗಿ ಯಾವಾಗಲೂ 'ಹಾಹಾ' ಅನ್ನುತ್ತಲೇ ಇದ್ದುವು. ಇಂತಹ ಸಂಸಾರಕ್ಕೆ ಅನ್ನ ಬಟ್ಟೆಗಳನ್ನು ತಂದು ಒದಗಿಸುವುದೇನು ಸಾಮಾನ್ಯದ ವಿಷಯವೆ? ಅಲ್ಲ ನಿಜ. ಅದರಲ್ಲಿಯೂ ಇಪ್ಪತ್ತು ರೂಪಾಯಿನ ಜವಾನನ ಚಾಕರಿ ಮಾಡುತ್ತಿದ್ದ ಬಡಪಾಯಿ ಖುಷಿ ಮಹಮ್ಮದನಿಗೆ ಇದು ಇಲಿಯು ಗಣಪತಿಯನ್ನು ಹೊತ್ತ ಹಾಗಲ್ಲವೆ? ಈ ಜೀವನವೆ ಒಂದು ದೊಡ್ಡ ನರಕ ಶಿಕ್ಷೆಯಲ್ಲವೆ? ಹೌದು. ಆದರೇನು ಮಾಡುವುದು? ದೇವರು ಮಕ್ಕಳನ್ನು ದಯಪಾಲಿಸುತ್ತಿದ್ದನು. ಖುಷಿಯು ಬೇಡವೆನ್ನುತ್ತಿರಲಿಲ್ಲ ಅವನು ದೈವೇಚ್ಛೆಯನ್ನು ವಿರೋಧಿಸುತ್ತಿರಲಿಲ್ಲ ಅಗಸನ ಪ್ರಾಣಿಯು ಸಹನೆಯಿಂದ ಬಿದ್ದ ಭಾರವನ್ನೆಲ್ಲ ಗೊಣಗದೆ ಹೊತ್ತುಕೊಳ್ಳುತ್ತಿದ್ದನು. ಹುಂ. ಮತ್ತೊಮ್ಮೆ ಯೋಚಿಸಿದರೆ, ಅವನಿಗೆ ಇದೆಲ್ಲ ಅಷ್ಟು ಫಜೀತಿಯಾಗಿಯೂ ಕಾಣುತ್ತಿರಲಿಲ್ಲ. ಏಕೆಂದರೆ ಅವನು ಮಕ್ಕಳ ವಿಷಯವಾಗಿ ಅಷ್ಟೊಂದು ಚಿಂತಿಸುತ್ತಲಾಗಲೀ, ಒದ್ದಾಡುತ್ತಲಾಗಲೀ ಇರಲೇ ಇಲ್ಲ. 'ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆ' ಎಂಬುದು ಅವನ ಭರವಸೆ. ಅವನು ತನ್ನ ಮಕ್ಕಳಿಗೆ 'ಹುಲ್ಲಿ'ಗಿಂತ ಹೆಚ್ಚಿನ ನಿರೀಕ್ಷಣೆಯನ್ನು ಮಾಡುವನೂ ಅಲ್ಲ. ಅವನ ನಂಬಿಕೆಯಂತೆ ಅದು ಏನನ್ನು ತಿಂದೋ, ಏನನ್ನು ಉಟ್ಟೋ ಆ ಮಕ್ಕಳು ಅರೆಬತ್ತಲೆಯಾಗಿಯೋ,

ಕೊಳೆಯಾಗಿಯೇ ಸದಾ ಹೊಟ್ಟೆಗಾಗಿ ಅಳುತ್ತಲೇ ಬಯ್ಯಿಸಿ ಹೊಡೆಸಿ ಕೊಳ್ಳುತ್ತಲೇ ಪುಷ್ಟಿಯಾಗಿ—ಹಣವಂತರ ಮಕ್ಕಳಿಗೆ ಹೋಲಿಸಿದರೆ—ದಿನದಿನಕ್ಕೂ ಬೆಳೆಯುತ್ತಲೇ ಇದ್ದುವು. ಈ ಪ್ರಾಪಂಚಿಕ ವೈಚಿತ್ರ್ಯವು ನಮಗೆ ಆಶ್ಚರ್ಯವನ್ನುಂಟುಮಾಡಿದರೂ ಋಷಿಗೇನೋ ಅದರಲ್ಲಿ ವಿಶೇಷ ವೇನೂ ಕಂಡು ಬರಲಿಲ್ಲ. ಅವನು ಹಾಯಾಗಿ ಹೇಳಿದಷ್ಟು ಕೆಲಸವನ್ನು ಹೇಗೋ ಬಂದಂತೆ ಮಾಡಿ, ಸಿಡಿಮೊಗಕ್ಕೆ ಕುರುಡನಾಗಿ, ಬೈಗಳಿಕ್ಕೆ ಕಿವುಡನಾಗಿ, ಸಂಬಳಕ್ಕೆ ಮಾತ್ರ ಕೈನೀಡಿ, ಸಿಕ್ಕಿದ್ದನ್ನು ಮನೆಗೆ ತಂದು ಹೆಂಡತಿಯ ಕೈಗೆ ಹಾಕಿ, ತಟ್ಟೆ ಹಾಕಿದಾಗ ಕುಳಿತು, ಬಡಿಸಿದ್ದನ್ನು ತಿಂದು, ಜಾಗವಿದ್ದಲ್ಲಿ ಮಲಗಿ ಹೆಚ್ಚು ಹವ್ಯಾಸವನ್ನೇ ಹಚ್ಚಿಸಿಕೊಳ್ಳದೆ, ಹೆಂಡತಿ, ಮಕ್ಕಳು, ಹಗೆ, ಸ್ನೇಹಿತ, ದಣಿ, ಆಳು ಎಲ್ಲರಿಗೂ ತಲೆದೂಗುತ್ತ ಪಾಲಿಗೆ ಬಂದುದನ್ನೆಲ್ಲ ಹಿಗ್ಗದೆ, ಕುಗ್ಗದೆ ಅನುಭವಿಸುತ್ತ ನಿರಾಯಾಸ ವಾಗಿ ಹೋದಲ್ಲಿಗೆ ಬಾಳನ್ನು ಬಿಟ್ಟುಕೊಂಡು ಕಾಲ ಹಾಕುತ್ತಿದ್ದನು.

ಚಿಕ್ಕ ಹೊಸ ಹೆಂಡತಿಗೆ—ಅವಳ ಹೆಸರು ಮೆಹರ ಉನ್ನೀಸ—ಒಂದು ಮಗುವಾಗುವವರೆಗೂ ಈ ಚಿತ್ರವು ಎಂದಿನಂತೆಯೇ ಇದ್ದಿತು. ಅನಂತರ ಈ ಶಾಂತ ಸಾಗರದಲ್ಲೂ ಬಿರುಗಾಳಿಯು ಬೀಸಲು ಮೊದ ಲಾಯಿತು. ಅಲೆಗಳು ಮೊದಮೊದಲು ಮೆಲ್ಲಮೆಲ್ಲಗೆ ಮೇಲೆದ್ದು, ಕಡೆಕಡೆಗೆ ಬೆಟ್ಟದಷ್ಟಾದುವು. ಕಾರ್ಮುಗಿಲೂ ಕವಿಯಿತು. ಭೋರ್ಗ ರೆದು ಮಳೆಯೂ ಸುರಿಯಿತು. ಸಣ್ಣ ದೋಣಿಯೊಂದರಲ್ಲಿ ಕಾಲನ್ನು ನೀಡಿ ಮಲಗಿಕೊಂಡು, ನಿಶ್ಚಿಂತೆಯಿಂದ, ನಿರ್ಭಯದಿಂದ ಅಲ್ಲಲ್ಲಿ ಹೋದಲ್ಲಿ ತೇಲುತ್ತಿದ್ದ ಋಷಿಯು ಈಗ ತಟ್ಟನೆ ಈ ಪ್ರಕೃತಿಯ ರಭಸಕ್ಕೆ ಸಿಕ್ಕಿದನು. ಮಳೆಯಿಂದ ನೆನೆದು ಚಳಿಯಿಂದ ಎಚ್ಚೆತ್ತನು. ದೋಣಿಯ ಏಳು ಬೀಳು ಅವನಿಗೆ ಆಗ ಭಯವನ್ನುಂಟು ಮಾಡಿತು. ಅರ್ಧಶಃ ಹೊಸ ಬೀಬಿಯು ಸಾಮಾನ್ಯದವಳಲ್ಲ, ಚಿಕ್ಕವಳು. ಯೌವನದ ಹುರುಪು. ಅಂಗಾಂಗಗಳಲ್ಲಿ ಬಿಸಿರಕ್ತದ ತಳಮಳ. ರಾಗ ದ್ವೇಷಗಳ ಕುಣಿತವು ಜಾಸ್ತಿ. ಹೋಲಿಕೆಯಿಂದ ಈಗಿನವಳು ಮುದಿ ಋಷಿಗಿಂತ ಹೆಚ್ಚಿನ ತಿಳಿವಳಿಕೆಯವಳು. ಅವಳಿಗೆ ಈ ಸಂಸಾರದ ಜಡತ್ವ, ಅಲಕ್ಷ್ಯ ಗಳು ಸೇರಲಿಲ್ಲ. ಅವಳು ಜೀವನವನ್ನು ಉದಾಸೀನದಿಂದಲಾಗಲೀ.

ಜಿಹಾಸೆಯಿಂದಲಾಗಲೀ, ಅತಿ ತಾಳ್ಮೆಯಿಂದಾಗಲೀ ನೋಡುವವಳಲ್ಲ ಆಗ ತಾನೆ ಹೊಸ ಬಾಳನ್ನು ಹೊಕ್ಕಿದ್ದುದರಿಂದ ಆ ದಾರಿಯ ಅಚ್ಚರಿಯನ್ನೆಲ್ಲ ಹುಡುಕುವ ಆಸಕ್ತಿ ಅವಳಿಗೆ. ಸುಲಭವಾಗಿ ಸೋಲನ್ನು ಒಪ್ಪಿಕೊಳ್ಳುವವಳಲ್ಲ. ಈ ಬಗೆಯ ಹೆಂಗಸು ಹೇಗೋ ಕಷ್ಟದಿಂದ ಮದುವೆಯಾದ ಒಂಬತ್ತು ತಿಂಗಳನ್ನು ಸುಮ್ಮನೆ ಕಳೆದಳು. ಪ್ರಾಯಶಃ ತನ್ನ ಸುತ್ತುಮುತ್ತನ್ನು ಗೊತ್ತುಮಾಡಿಕೊಳ್ಳುತ್ತಿದ್ದಿರಬಹುದು. ತನ್ನ, ತನ್ನ ಗಂಡನ ದೌರ್ಬಲ್ಯಗಳನ್ನು ಒರೆ ಹಚ್ಚುತ್ತಿದ್ದಿರಬಹುದು ಪಾಪ, ಬಡ ಗಂಡನನ್ನು ಏಕೆ ಗಡಬಡೆ ಮಾಡುವುದು ಎಂದು ಮರುಕ ಪಡುತ್ತಿದ್ದಳೋ ಹೇಗೋ. ಇಲ್ಲವೆ ಇನ್ನೂ ಹೊಸ ಸಂಗ, ಈಗಲೇ ಏನು ಧಾಂದಲೆ, ಎಂದು ಸುಮ್ಮನಿದ್ದಳೋ ಏನೋ. ಹೇಗಾದರೂ ತನಗೊಂದು ಮಗುವಾದ ಮೇಲಂತು ಅವಳು ತನ್ನ ತಾಳ್ಮೆಗೆ ತರ್ಪಣವನ್ನು ಕೊಟ್ಟಳು. ಇತರ ಮಕ್ಕಳು ಎಲ್ಲಾದರೂ ಹೊರಳಲೆಂದರೂ ತನ್ನ ಮಗುವನ್ನು ಕೆಸರಿನಲ್ಲಿ ಅದ್ದಲು ಅವಳು ಒಪ್ಪಿಯಾಳೆ? ಸಂಸಾರದ ಅವ್ಯವಸ್ಥೆಯನ್ನು—ಅವಳಿಗೆ ಕಂಡಂತೆ—ಸಹಿಸಲಾರದೆ ಗೊಣಗುಟ್ಟಿದಳು, ಗುರುಗುಟ್ಟಿದಳು ಕಡೆಗೆ ಗರ್ಜಿಸಿದಳು—ಸಿಂಹಿಣಿಯಂತೆ ದಾರಿ, ಗುರಿಗಳಿಲ್ಲದ ಜರುಗುತ್ತಿದ್ದ ಜೀವನವಿದಕ್ಕೆ ಲಗಾಮನ್ನು ಹಾಕಬೇಕೆಂಬುದು ಅವಳ ಬಯಕೆ, ಯತ್ನವಾಯಿತು.

ಇದರ ಫಲವಾಗಿ ಋಷಿಯ ಜೀವನವು ತುಯ್ಯಾಟಕ್ಕೆ ಸಿಕ್ಕಿತು—ಮರಿನಾಯಿಯ ಬಾಯಿಗೆ ಸಿಕ್ಕಿದ ಚಿಂದಿ ಬಟ್ಟೆಯಂತೆ. ಋಷಿಯು ಮೊದಲಿನ ಗೊಣಗನ್ನು ಗಣನೆಗೆ ತರದಿದ್ದರೂ ಮುಂದಿನ ಗುರುಗುಟ್ಟಿಗೆ ಬೆದರಿದನು. ಗರ್ಜನೆಗಂತೂ ಬೆಚ್ಚೇಬಿದ್ದನು. ಇನ್ನು ಗಂಡಹೆಂಡಿರಲ್ಲಿ ವಾಗ್ಯುದ್ಧವು ದಿನಚರಿಯಾಯಿತು. ಮಾತಿನ ತಿಕ್ಕಾಟದಲ್ಲಿ ಕೋಪತಾಪಗಳು ಉಗಿದು ಹೊರಗೆ ಬಂದವು. ದಿನೇ ದಿನೇ ಅವರಲ್ಲಿದ್ದ ಪ್ರೇಮವು ಉದಾಸೀನತೆಗೂ, ಉದಾಸೀನತೆಯು ಅಸಹನೆಗೂ, ಅಸಹನೆಯು ಕೋಪಕ್ಕೂ, ಕೋಪವು ಜಗಳಕ್ಕೂ ಮಾರ್ಪಾಡಾದುವು. ಒಂದು ದಿನವಂತೂ ಅವರವರಲ್ಲೇ ಬಹಳ ಬಿರುಸು ಮಾತುಗಳು ಆದುವು.

ಅವನು ಹೇಳಿದ "ನನ್ನ ಕೈಲಾಗೋದು ಇಷ್ಟೆ. ಏನು ಬೇಕಾದರೂ ಮಾಡಿಕೊಳ್ಳಿ."

ಅವಳು ಅಂದಳು "ಹಾಗೆ ಅಂದರೆ ಹೇಗಾಗುತ್ತೆ? 'ಮಾಡಿಕೊಳ್ಳಿ' ಅನ್ನೋದಕ್ಕೆ ಈ ಸಂಸಾರ ನಿಮಗೆ ಸೇರಿಲ್ಲವೆ?"

"ನನಗೆ ಸಂಸಾರ ಬೇಸರವಾಗಿದೆ"

"ಅದು ಕೈಲಾಗದವರೆಲ್ಲ ಹೇಳೋ ಮಾತು. ಹೊಸದಲ್ಲ. ಇಷ್ಟು ದೊಡ್ಡ ಸಂಸಾರಕ್ಕೆ ಕಾರಣರಾಗಿ ಈಗ ಅದನ್ನು ಯಾರ ಮೇಲೋ ಉರುಳಿಸೋದು ಹೇಗೆ ಸಾಧ್ಯ? ಹೀಗೆ ಬೇಸರವಾಗೋದಾದರೆ ಮದುವೆಗೆ ಮುಂಚೆಯೇ ಯೋಚಿಸಿ ಎಚ್ಚರದಿಂದ ಇರಬೇಕಾಗಿತ್ತು ಈಗ ಹಾಗಂದು ಫಲವೇನು?"

"ನನ್ನಿಂದ ತಪ್ಪಾಯ್ತು."

"ಅಂದ ಮೇಲೆ ಅನುಭವಿಸಿ. ನಿಮ್ಮ ತಪ್ಪಿಗೆ ನಾನು, ನಿಮ್ಮ ಮಕ್ಕಳು, ಅದರಲ್ಲಿಯೂ ನಮ್ಮದು ಯಾಕೆ ಕಷ್ಟಪಡಬೇಕು? ದುಡಿದು ತಂದು ಹಾಕೋದು ನಿಮ್ಮ ಕೆಲಸ. ಮಾಡಿ ಹಾಕೋದು ನನ್ನ ಕೆಲಸ. ನನ್ನ ಕೆಲಸದಲ್ಲಿ ನಾನಂತೂ ಹಿಂಜರಿಯೋದಿಲ್ಲ. ಬೇಕಾದರೆ ಸತ್ತರೂ ಸರಿಯೆ. ನೀವೂ ನಾಕಾದಷ್ಟು ತರದೆ ಆಗದು. ಈ ಬೇಕಾಬಿಟ್ಟಿ ಸಂಸಾರವನ್ನು ನಾನು ನೋಡಲಾರೆ, ಹಾಗೇ ಬಿಡೋಳೂ ಅಲ್ಲ. ತಿಳಿದು ಕೊಳ್ಳಿ."

"ನಾನೇನು ಮಾಡಲಿ?"

"ಹೋಗಿ ಎಲ್ಲಾದರೂ ಏನಾದರೂ ಮಾಡಿ ಹೆಚ್ಚು ದುಡಿದು ಕೊಂಡು ಬನ್ನಿ. ಈ ಅರಬೆತ್ತಲೆ, ಗಂಜಿ ಎಷ್ಟು ದಿನ ನಡೆಯಬೇಕು?"

"ನನಗೆ ಬುದ್ಧಿಯೇ ತೋರದಾಗಿದೆ. ನಾನೇನು ವಿದ್ಯಾವಂತನೇ, ಕೈತುಂಬ ಸಂಬಳ ತರಲು ಆಸೆಪಡುವುದಕ್ಕೆ? — ಸಿಕ್ಕುವುದಂತೂ ಹಾಗಿರಲಿ. ಆಳಿಗೆ ಇದಕ್ಕಿಂತ ಹೆಚ್ಚು ಎಲ್ಲಿ ದೊರೆಯಬೇಕು? ಈಗಿನ ಕಾಲದ ಸ್ಥಿತಿ ನಿನಗೆ ತಿಳಿದೇ ಇದೆ."

"ಅದನ್ನೆಲ್ಲ ಕೇಳಿಕೊಂಡು ಸುಮ್ಮನಿರೋಳಲ್ಲ, ಎಲ್ಲಿ ದೊರೆಯ ಬೇಕು ಅಂದರೆ? ನನಗೆ 'ಹೆಣ್ಣು ಹೆಂಗಸಿಗೆ' ಹೇಗೆ ಗೊತ್ತಾಗಬೇಕು?

ನೀವೇ ಯೋಚಿಸಿ. ನನಗೆ ಅದೆಲ್ಲ ಗೊತ್ತಿಲ್ಲ. ಯಾರ ಕಾಲಿಗಾದರೂ ಬೀಳಿ. ಈ ಕೆಲಸವನ್ನೇ ಬಿಟ್ಟು...."

"ಇದನ್ನು ಬಿಟ್ಟರೆ ಈಗ ಬರುವುದಕ್ಕೂ ಸೊನ್ನೆಯೇ."

"ಹಾಗಾದರೆ ಈಗಿನ 'ಸೇಟ'ನ ಕಾಲಿಗೇ ಬೀಳಿ. ನಿಮ್ಮ ಗೋಳನ್ನು ಹೇಳಿ."

"ಅದನ್ನು ಅವರೆಲ್ಲಿ ಕೇಳಾರು. ಎಲ್ಲರಿಗೂ ಕೊಡುವಷ್ಟನ್ನು ನನಗೂ ಕೊಟ್ಟೇ ಇದ್ದಾರೆ."

"ಎಲ್ಲರಿಗೂ ಇಷ್ಟು ದೊಡ್ಡ ಸಂಸಾರ ಇದೆಯೆ?"

"ಅದನ್ನು ಕಟ್ಟಿಕೊಂಡು ಅವರಿಗೇನು?"

"ಹಾಗೆಂದರೇನು ದುಡಿಮೆಗೆ ತಕ್ಕ ಕೂಲಿಕೊಟ್ಟರೆ ಸಾಕೆ? ಎಲ್ಲರೂ ಶಕ್ತ್ಯಾನುಸಾರ ಕೆಲಸ ಮಾಡೆ ಮಾಡುತ್ತಾರೆ. ಇಲ್ಲದಿದ್ದರೆ ಮಾಡುವಂತೆ ನೋಡಿಕೊಳ್ಳಲಿ. ಅವರವರಿಗಾಗುವಷ್ಟು ಸಂಬಳವನ್ನೂ ಕೊಡಲಿ. ಇದೇ ನ್ಯಾಯ. ಸೇಟರಿಗೆ ಮಕ್ಕಳಿಲ್ಲ ಮರಿಯಿಲ್ಲ. ಸುಮ್ಮನೆ ಸಂಪಾದಿಸಿ ಕುಡಿಟ್ಟು ಕೂಡಿಟ್ಟು ಹಣದಲ್ಲಿ ಹೊರಳಾಡುತ್ತಾರೆ, ನಾವು ದುಡಿದೂ ಹೊಟ್ಟೆ ಬಟ್ಟೆಗೆ ಗತಿಯಿಲ್ಲದೆ ಹೆಣದಂತಾಗುತ್ತಿದ್ದೇವೆ. ಇದೇ ಲೆಕ್ಕಾಚಾರ?"

"ಅಲ್ಲ. ನಿಜ. ಓಹೋ, ನೀನು ಹೇಳುವ ಹಾಗಾದರೆ ಎಷ್ಟು ಉತ್ತಮ!" ಋಷಿಯು ತಲೆದೂಗಿದನು.

"ಹುಂ. ಕೇಳಿ, ಇಷ್ಟು ಮಕ್ಕಳನ್ನು ಹೇಗೆ ಸಾಕಬೇಕು ಅಂತ."

"ನನ್ನೇ ಮುರ್ರಾಳ ಅಂದರೆ?"

"ಅನ್ನಿಸಿಕೊಳ್ಳಿ. ಅಂದರೆ ಅನ್ನಲಿ. ದುಡ್ಡುಕೊಟ್ಟರೆ ಆಯಿತು. ನಾವೇನು 'ಬೀದಿಗೆ ಇಳಿದಿದೀವಿ' ಅಂತ. ಇನ್ನು ನಾಚಿಕೆ ಗೀಚಿಕೆ ಪಟ್ಟರೆ ಹೊಟ್ಟೆ ತುಂಬೋದು, ಬತ್ತಲೆ ಮುಚ್ಚೋದು ಹೇಗೆ? ನಯ ನಾಜೂಕುಗಳಿಂದ ಸಾಯೋದಕ್ಕಿಂತ ಭಂಡಾಟದಿಂದ ಬದುಕೋದು ಬೇಕು—ಈಗ. ನಿಮ್ಮ ಸೇಟರಿಗೇನು, ಲಕ್ಷಾಂತರಗಟ್ಟಲೆ ಸಂಪಾದಿಸುತ್ತಾರೆ. ನಿಮಗೆ ಮಕ್ಕಳ ಭತ್ಯ ಕೊಡಲಾರರೇ?"

"ಹ! ಮಕ್ಕಳ ಭತ್ಯ! ಆಗಲಿ. ಹೋಗಿ ಕೇಳಿ ನೋಡುತ್ತೇನೆ; ಏನಾದರೂ ಆಗಲಿ."

"'ಇಲ್ಲ' ಅನ್ನಿಸಿಕೊಂಡು ಬರಬೇಡಿ. ಅದು ಮಾತ್ರ ನಡೆಯೋದಿಲ್ಲ."

"ಆಗಲಿ, ಮಾರಾಯಿತಿ. ಸ್ವಲ್ಪ ಸೈರಿಸಿಕೊ."

ಖುಷಿಯು ಅರೆ ಮನಸ್ಸಿನಿಂದ ಹೊರಟ. ಹೆಂಡತಿಯ ಗಡಸುತನವು ಅವನನ್ನೇ ಹೊರಕ್ಕೆ ಅಟ್ಟಿತು. ಅವನು "ಇದೆಲ್ಲಿ ಗ್ರಹಚಾರವನ್ನು ಮದುವೆ ಮಾಡಿಕೊಂಡ ಹಾಗಾಯ್ತು. ಹಿಂದಿನ ಹೆಂಡಿರು ಇದ್ದಾಗ ಅವರನ್ನೇ ಕೆಟ್ಟೋರು ಅನ್ನುತ್ತಿದ್ದೆ. ಅವರಿಬ್ಬರಿಗೆ ಐದು ಐದು ಆದರೂ 'ಗಪ್ ಚುಪ್' ಇದ್ದರು. ಇವಳು ಇನ್ನೂ ಒಂದಕ್ಕಾಗಲೇ 'ಗಡಬಡ' ಮಾಡಿ ಇಷ್ಟೊಂದು ಹಾರಾಡುತ್ತಾಳೆ. ಅವರಿಗೆ ಹೋಲಿಸಿದರೆ ಇವಳು ಮಾರಿಯೇ ಸರಿ. ನನ್ನನ್ನು ನುಂಗುಹಾಕದೆ ಏನು ಸುಮ್ಮನೆ ಇರೋಳಲ್ಲ. ಹುಂ, ಇರಲಿ, ದೇವರಿದ್ದಾನೆ. 'ಸೇಟ'ಗೆ ಅಡ್ಡಬಿದ್ದು ಅಂಗಲಾಚಿ ನೋಡುತ್ತೇನೆ. ಇಂಥೋಳ ಭಾರವನ್ನು ಹೊತ್ತುಕೊಂಡ ಮೇಲೆ ಆಳುದ್ದ ಶರೀರ ಗೇಣುದ್ದವಾಗದೆ ಹೇಗೆ ಇದ್ದೀತು?" ಅಂದುಕೊಂಡನು.

ಆ ದಿನ ಖುಷಿಯು ತನ್ನ ಕೆಲಸವನ್ನು ಮುಗಿಸಿ ಮನೆಗೆ ಹೊರಡುವ ಹೊತ್ತಿನಲ್ಲಿ ಹಾಜಿ ದಾವೂದ ಸೇಟರು ಆಗ ತಾನೆ ಊಟಮಾಡಿ ತಾಂಬೂಲವನ್ನು ಮೆದ್ದು ದಿಂಬನ್ನು ಒರಗಿಕೊಂಡು ಕುಳಿತು ತಮ್ಮ ಹೆಂಡತಿಯೊಂದಿಗೆ ಚಕ್ಕಂದವನ್ನಾಡುತ್ತಿದ್ದರು. ತನ್ನ ಹೊತ್ತಾದರೂ ಇನ್ನೂ ಅಲ್ಲಲ್ಲೇ ಸುಳಿದಾಡುತ್ತಿದ್ದ ಖುಷಿಯನ್ನು ಕಂಡು ಸೇಟರು,

"ಇದೇನು ಖುಷಿ ಇಲ್ಲೇ ಇದ್ದಾನೆ ಅವನ ಓಡಾಟವನ್ನು ನೋಡಿದರೆ ಯಾತಕ್ಕೋ ಹೊಂಚು ಹಾಕುವ ಹಾಗಿದೆ. ಕೊಂಚ ವಿಚಾರಿಸು" ಎಂದು ತಮ್ಮ 'ಬೀಬಿ'ಗೆ ನಗುತ್ತ ಹೇಳಿದರು. 'ಬೀಬಿ'ಯವರು "ಅವನೇನು ಯಾವುದನ್ನೂ ತಲೆಗೆ ಹಚ್ಚಿಕೊಳ್ಳುವ ಆಸಾಮಿಯಲ್ಲ" ಅಂದು "ಖುಷೀ! ಖುಷೀ!" ಎಂದು ಕರೆದರು.

ಖುಷಿಗೆ ಬೇಕಾಗಿದ್ದುದೂ ಇದೇ. ಅದಕ್ಕೇ ಅವನು ಒಂದು ಗಂಟೆಯಿಂದ ಹೊಂಚು ಹಾಕುತ್ತಿದ್ದನು. ಆದುದರಿಂದ ಕರೆಯು ಬಂದೊಡನೆ.

ಅವನು ಲಗುಬಗೆಯಿಂದ ಬಂದು ದೈನ್ಯದಿಂದ ನಿಂದು, ಹಲ್ಲುಕಿರಿದು, ತಲೆಕೆರೆದು ನಿಂತುಕೊಂಡನು. ಸೇಟರು ನಸುನಗುತ್ತ "ಏನು ಋಷಿ, ಏನು ಸಮಾಚಾರ? ಮನೆಯಲ್ಲಿ ಎಲ್ಲ ಸುಖವಷ್ಟೆ?" ಎಂದು ಕೇಳಿದರು. ಋಷಿಯು "ಹುಂ. ಹುಜೂರ್, ತಮ್ಮ ದಯದಿಂದ ಎಲ್ಲ ಸರಿ.... ಆದರೆ,"

"ಆದರೆ?"

"ಮನೆಯಲ್ಲಿ ಕೊಂಚ ತೊಂದರೆ ಇದೆ."

"ಅದನ್ನೇ ನಾನೂ ಕೇಳಿದ್ದು. ನೀನು ಎಲ್ಲಾ ಸರಿ ಅಂದೆ?"

"ಹುಂ. ಹೆಚ್ಚೇನೂ ಇಲ್ಲ. ಬೀಬಿ ಮಾತ್ರ."

"ಹ, ಬೀಬಿಗೆ ಏನಾಗಿದೆ?"

"ಹುಜೂರ್ ಏನೂ ಇಲ್ಲ ಚೆನ್ನಾಗಿದಾಳೆ. ಆದರೆ,"

"ಮತ್ತೆ ನೋಡು! ಆದರೆ ಏನು ಹೇಳು ಧೈರ್ಯವಾಗಿ."

"ಮನೇಲಿ ಜಗಳ...."

"ಓ ಅಷ್ಟೇನೆ? ಅಯ್ಯೊ ಸಂಸಾರ ಕಟ್ಟಿಕೊಂಡ ಮೇಲೆ ಜಗಳ ಕಾಯದೆ ಇರಲಾಗುತ್ತದೆಯೆ? ಕೇಳು ನಮ್ಮ ಬೀಬಿಯನ್ನು" ಅಂದು ನಕ್ಕು ಹೆಂಡತಿಯ ಕಡೆಗೆ ನೋಡಿದರು. ಅವರು "ಸಾಕು ಬಿಡಿ ನಿಮ್ಮ ಕುಚೋದ್ಯ" ಅಂದರು. ಋಷಿಯು ಇದ್ದ ಬಾಯನ್ನೆಲ್ಲ ಬಿಟ್ಟ. ಸೇಟರು ಮತ್ತೆ "ನನಗೆ ಒಂದನೇ ಮದುವೆಯಾಗಿಯೇ ಈ ಫಜೀತಿ, ನಿನಗೆ ಅಂದರೆ....ಎಷ್ಟು? ಮೂರನೇ ಮದುವೆ ಅಂದಮೇಲೆ ಕೇಳಬೇಕೆ?" ಅಂದು "ನೀನೇನು ಬಹಳ ಒದ್ದಾಡುವವನಲ್ಲ ಏನೋ ಭಾರಿ ವಿಶೇಷ ಇರಬೇಕು, ಏನು?" ಎಂದು ಕೇಳಿದರು.

"ಹ, ಹುಜೂರ್. ದಿನವೂ 'ವಟವಟ' ಅಂತ ಜೀವ ಕಿತ್ತು ಕೊಂಡು ತಿನ್ನುತ್ತಾಳೆ."

"ಪಾಪ! ಪಾಪ! ಬಡ ಗಂಡಸರ ಪಾಡೆಲ್ಲ ಹೀಗೆ ಅಂತ ಕಾಣು ತ್ತದೆ. ಹೆಂಗಸೇ ಹಾಗೆ." ಸೇಟರು ಮತ್ತೆ ತಮ್ಮ ಮಡದಿಯನ್ನು ನೋಡಿ ನಸುನಕ್ಕರು. ಅವರು ಹುಸಿ ಮುನಿಸನ್ನು ತೋರಿಸಿ ಕೈಯಾಡಿಸಿ

ದರು. ಮತ್ತೆ ಸೇಟರು ಕೇಳಿದರು "ಅದು ಸರಿ ಈ ಚಿತ್ರಹಿಂಸೆಗೆ ಕಾರಣ ಏನು?"

"ಮೊನ್ನೆ ಆದ ಮಗು, ಹುಜೂರ್."

"ಓಹೋ, ಹಾಗೋ? ಏನು ಅದಕ್ಕೆ ಒಡವೆ, ಗಿಡವೆ ಬೇಕಂತೇನು?"

"ಅಲ್ಲ. ಹಾಕೋಕೆ ಬಟ್ಟೆ ಸರಿಯಾಗಿಲ್ಲ, ಹಾಲುಗೀಲಿಗೆ ದುಡ್ಡು ಸಾಲದು. ಬಾಕಿ ಮಕ್ಕಳಂತೆ ಬೆಳೆಸೋದಕ್ಕೆ ಒಪ್ಪೋದಿಲ್ಲ ಅಂತ ಹೇಳುತ್ತಾಳೆ."

"ಹುಂ!" ಸೇಟರ ಮುಖವು ನಗೆಯನ್ನು ತೊರೆದು ಗಂಭೀರ್ಯ ವನ್ನು ತಾಳಿತು. ಬೀಬಿಜಿಯವರೂ ಚಿಂತಾಮುದ್ರೆಯನ್ನು ಹಾಕಿ ಕೊಂಡರು. ಅವರು ಸುಮ್ಮನಿದ್ದುದನ್ನು ನೋಡಿ ಖುಷಿಯು ಮುಂದು ವರಿಸಿದನು. "ಹೋಗು, ಹೇಗಾದರೂ ಮಾಡಿ ಹೆಚ್ಚಿಗೆ ಸಂಪಾದಿಸಿ ಕೊಂಡು ಬಾ. ಏನಾದರೂ ಮಾಡು. ಸೇಟರ ಕಾಲಿಗಾದರೂ ಬೀಳು" ಅಂದಳ. ನಾನು ಬೇಡೋದಕ್ಕೆ ಬಂದೆ."

"ಹುಂ. ಹುಂ. ಇರಲಿ ಇರಲಿ. ನೋಡೋಣ. ಖುಷಿ, ನಿನಗೆ ಬಹಳ ಮಕ್ಕಳಲ್ಲವೆ?" ಸೇಟರು ಕೇಳಿದರು.

"ಹ, ಹುಜೂರ್ ಈಗಿನದೂ ಸೇರಿ ಹನ್ನೊಂದು."

"ಅಷ್ಟೊಂದೆ?"

"ಹ, ದೇವರು ಕೊಟ್ಟಿದ್ದಾನೆ."

ಬೀಬಿಯವರು ಹೇಳಿದರು "ಪಾಪ, ಇಷ್ಟೊಂದು ಜನದ ಜೀವನಕ್ಕೆ ಇವನೊಬ್ಬ ದುಡಿಯಬೇಕು. ಇವನಿಗೆಷ್ಟು ಸಂಬಳ?"

"ಇಪ್ಪತ್ತು—ಅಲ್ಲವೇನೋ?" ಸೇಟರು ಕೇಳಿದರು.

"ಹೌದು ಹುಜೂರ್."

"ಪಾಪ! ಇಷ್ಟರಲ್ಲಿ ಎಲ್ಲವೂ ಹೇಗೆ ನಡೆದೀತು?" ಬೀಬಿಯವರು ಕೇಳಿದರು.

"ಏನು ಮಾಡುವುದು. ಆಳಿಗೆ ಯಾರು ಹೆಚ್ಚಿಗೆ ಕೊಡುತ್ತಾರೆ? ನಾನೇನು ಅವನಿಗೆ ಅನ್ಯಾಯ ಮಾಡಿಲ್ಲ. ಎಲ್ಲರಂತೆಯೇ ಕೊಟ್ಟಿದ್ದೇನೆ" ಸೇಟರು ಉತ್ತರ ಕೊಟ್ಟರು.

" ಹುಜೂರ್ ತಾವು ಏನಾದರೂ ಮಾಡಬೇಕು" ಖುಷಿಯು ಅಂಗಲಾಚಿದನು.

"ಆಗಲಿ, ಆಗಲಿ ಯೋಚಿಸೋಣ" ಸೇಟರು ಯೋಚಿಸಿದರು.

"ಕಡೆಗೆ ಐದೋ ಹತ್ತೋ ಬಡ್ತಿ ಕೊಡುವುದಕ್ಕಾಗುವುದಿಲ್ಲವೆ? ಏನಾದರೂ ಮಾಡಲೇ ಬೇಕು" ಬೀಬಿಯುವರು ಹೇಳಿದರು. ಒಳಧ್ವನಿಯಲ್ಲಿ ಇಬ್ಬರಿಗೂ ಅಷ್ಟು ಮಾತಿಗೆ ಮೊದಲಾಯಿತು.

"ಆಗುತ್ತದೆ. ಅದೆಲ್ಲ ಕಷ್ಟ. ಇವನಿಗೆ ಕೊಟ್ಟರೆ ಇತರರೂ ಕೇಳುತ್ತಾರೆ. ಅಷ್ಟೆಲ್ಲ...."

" ಅವರಿಗೂ ಇಷ್ಟೇ ಮಕ್ಕಳಿದ್ದರೆ ಅವರಿಗೂ ಕೊಡಬಹುದು."

"ಆ! ಸರಿ. ಒಳ್ಳೆ ಸೂಚನೆ ಅಂದ್ರೆ. ಇವನಿಗೆ ಮಕ್ಕಳಮೇಲೆ ಬಡ್ತಿ ಕೊಟ್ಟು ಬಿಡೋಣ."

" ಅಂದರೆ? ನೀನು ಹೇಳುವುದು ."

"ಹುಟ್ಟಿದ ಮಕ್ಕಳಿಗೆ ಇಷ್ಟು ಅಂತ—ಅವಕ್ಕೆ ಸಂಪಾದಿಸುವ ವಯಸ್ಸು ಬರುವವರೆಗೆ."

"ಸರಿ, ಆಗಬಹುದು. ಎಷ್ಟು? ಐದೇ...."

"ಹುಂ, ಐದು ಅನ್ನು."

" ಅಂದರೆ ಹನ್ನೊಂದು ಐದಲ...."

"ಉಹು. ಉಹು. ಅದೆಲ್ಲ ಆಗುವುದಿಲ್ಲ. ಹಿಂದಿನದು ಹಿಂದಕ್ಕಾಯಿತು. ಮುಂದಕ್ಕೇನಾದರೂ ನೋಡಬಹುದು ಇವನಿಗೂ ವಯಸ್ಸಾಗುತ್ತ ಬಂದಿದೆ. ಇನ್ನೆಷ್ಟು ಆದಾವು?"

" ಈಗಿನ ಕಡೆಯುದಕ್ಕಾದರೂ ಕೊಡಬೇಕು."

"ಆಗಲಿ, ನಿನ್ನ ಇಷ್ಟದಂತೆ. ಖುಷಿ!" ಅಂದರು ಸೇಟರು ಗಟ್ಟಿಯಾಗಿ.

"ಹುಜೂರ್!"

"ಬೀಬಿಜಿಯುವರು ನಿನ್ನ ಕಷ್ಟವನ್ನು ಪರಿಹಾರ ಮಾಡಿದ್ದಾರೆ."

"ಹ, ಹುಜೂರ್ ಅವರ ಮಗ ನಾನು."

"ಓಹೋ, ಓಹೋ" ಅಂದು ಸೇಟರು ನಕ್ಕು ಬೀಬಿಜಿಯುವರನ್ನು ಸಂಬೋಧಿಸುತ್ತ "ನೋಡು ನಿನಗೆ ಮಕ್ಕಳೇ ಇಲ್ಲ ಅನ್ನುತ್ತಿದ್ದೆಯಲ್ಲ. ಮುತ್ತಿನ ಹಾಗೆ ಇದ್ದಾನೆ ಈ ಮಗ. ಇವನನ್ನು ಮರತೇ ಬಿಟ್ಟಿದ್ದೆಯಲ್ಲ" ಎಂದು ಸ್ಫೂರ್ತಿ ಮಾಡಿದರು. ಬೀಬಿಜಿಯುವರೂ ನಕ್ಕರು. ಖುಷಿಯೂ ಹಲ್ಲನ್ನು ಕಿರಿದನು. ತಲೆ ಕೆರೆದುಕೊಂಡನು.

"ದೇವರು ತಮ್ಮ ಹೊಟ್ಟೆಯನ್ನು ತಣ್ಣಗಿಟ್ಟಿರಲಿ" ಅಂದು ಹರಸಿದನು.

"ಇಲ್ಲಿ ಕೇಳೋ. ಈಗ ನಿನಗೆ ಐದು ರೂಪಾಯಿ ಬಡ್ತಿ ಕೊಡುತ್ತೇನೆ. ಮುಂದೆ ಮಕ್ಕಳು ಆದಗೀದರೆ ಮಗುವಿಗೆ ಐದು ರೂಪಾಯಿ ನಂತೆ ಮಾಸಾಶನವನ್ನೂ ಬೀಬಿಜಿಯುವರು ಸೂಚಿಸಿದ್ದಾರೆ."

ಖುಷಿಯ ಕಣ್ಣಿನಲ್ಲಿ ಅಪೂರ್ವವಾದ ಬೆಳಕು ಕಂಡಿತು. ಬಹಳ ವರ್ಷಕ್ಕೆ ಅವನಲ್ಲಿ ಆತುರ, ಚುರುಕುಗಳ ಚಿಹ್ನೆಗಳು ಕಂಡುವು. ಅವನು "ಹುಜೂರ್ ನಾನು ಈಗ ಬದುಕಿಕೊಂಡೆ" ಎಂದು ತೊದಲಿದನು.

"ಏನು ನಿನ್ನ ಹೆಂಡತಿಯಿಂದಲೋ, ಬಡ್ತಿಯಿಂದಲೋ" ಎಂದು ಸೇಟರು ಕೇಳಿದರು.

ಬೀಬಿಜಿಯುವರು ಬಾಯಿ ಹಾಕಿ "ನಿಜವಾಗಿ ಅವಳಿಂದಲೇ. ಅವಳು ಅಟ್ಟದಿದ್ದರೆ ಇವನ ಸಂಸಾರ ಎಂದಿನಂತೆಯೇ ನಾಯಬೇಕಾಗಿದ್ದಿತು."

"ಹೋಗು, ಮನೆಯಲ್ಲಿ ತಿಳಿಸು. ಹಾಯಾಗಿರು" ಅಂದರು ಸೇಟರು.

ಖುಷಿಯು ಬಂದ ಲಗುಬಗೆಯಿಂದಲೇ ಮತ್ತೆ ಹೊರಟನು. ಅವನ ಬೆನ್ನು ತಿರುಗಿದಾಗ ಬೀಬಿಜಿಯುವರು "ಈ ಮಕ್ಕಳ ವಿಷಯವು ವಿಚಿತ್ರ, ಬೇಕು ಅನ್ನುವವರಿಗೆ ಬಡಪೆಟ್ಟಿಗೆ ಆಗುವುದಿಲ್ಲ. ಸಾಕು ಅನ್ನುವವರಿಗೆ ಸಾಲುಸಾಲಾಗಿ ಆಗುತ್ತವೆ" ಎಂದು ನಿಟ್ಟುಸಿರನ್ನು ಬಿಟ್ಟರು.

ಖುಷಿಯು ಮನೆಯನ್ನು ಬೇಗ ಸೇರಿ ಸಮಾಚಾರವನ್ನು ತಿಳಿಸಿದಾಗ ಮೆಹರು ಉನ್ನೀಸಳಿಗೆ ಆದ ಆನಂದಕ್ಕೆ ಪಾರವೇ ಇಲ್ಲ. ಆನಂದದ ಜತೆಗೆ ಹೆಮ್ಮೆಯೂ ಬೆರೆದಿತ್ತು. "ನೋಡಿದಿರ, ನನ್ನ ಮಾತನ್ನು ಕೇಳಿದ್ದು

ಎಷ್ಟು ಒಳ್ಳೆಯದಾಯ್ತು? ಒಂದೇ ಬಾರಿ ಕಾಲುಭಾಗ ಸಂಬಳ ಹೆಚ್ಚಾಯ್ತು. ಅದರಿಂದ ಈ ಮಗೂಗೇ ಅಲ್ಲ ಇತರರಿಗೂ ಕೊಂಚ ವಾಸಿ" ಅಂದಳು.

"ನಾನೊಬ್ಬ ದಡ್ಡ. ಇದನ್ನು ಮೊದಲೇ ಮಾಡೋದು ತಲೆಗೇ ಹತ್ತಲಿಲ್ಲವಲ್ಲ, ನನಗೆ."

"ಇಷ್ಟಾದರೂ ನಿಮಗೆ ಹೆಂಗಸಿನ ಬುದ್ಧಿ ಅಂದರೆ ಅಷ್ಟಕ್ಕೆ ಅಷ್ಟೆ, ಅಲ್ಲವೆ?"

"ಛೆ! ಛೆ!"

ಬಡ್ತಿಯಾದಾರಭ್ಯ ಈ ಬಡ ಸಂಸಾರವು ಹಿಂದಿನ ಹೋಲಿಕೆಯಿಂದ ಕೊಂಚ ಉತ್ತಮಗೊಂಡಿತು.

ಹೀಗೆ ಒಂದು ವರ್ಷ ಕಳೆಯುವ ಹೊತ್ತಿಗೆ ಮೆಹರು ಉನ್ನೀಸಳಿಗೆ ಎರಡನೆಯ ಮಗುವಾಯಿತು. ಋಷಿಯು ಮತ್ತೆ ಸೇಟರ ಬಳಿಗೆ ಹೋಗಿ ತಲೆಕೆರೆದುಕೊಂಡು ಹಲ್ಕಿರಿದ ಸೇಟರು "ಏನು' ಈಗೇನು ಮತ್ತೆ?" ಎಂದು ಕೇಳಿದರು

"ಹುಜೂರ್ ಮನೇಲಿ...." ಎಂದು ನಾಚಿ ಸುಮ್ಮನಾದ.

"ಏನು ಮನೆಯಲ್ಲಿ?" ಮತ್ತೆ ಜಗಳವೋ ಗಂಡಹೆಂಡರಿಗೆ?"

"ಇಲ್ಲ ಹುಜೂರ್. ಬೀಬಿಗೆ ಎರಡನೆ... "

"ಮಗುವೇನೋ?" ಸೇಟರು ಊಹಿಸಿ ನಸುನಕ್ಕರು.

ಋಷಿಯು ಸುಮ್ಮನೆ ತಲೆಯನ್ನು ಮೇಲೆ ಕೆಳಗೆ ಆಡಿಸಿದನು.

"ಆಗಲೇ ಒಂದು ವರ್ಷವಾಯಿತೆ?"

"ಹ, ಹುಜೂರ್ ಹೆಚ್ಚು ಕಮ್ಮಿ."

"ಹುಂ. ಅದಕ್ಕೆ?" ಎಂದು ಸೇಟರು ಒಪ್ಪಂದವನ್ನು ಮರೆತವರಂತೆ ಕೇಳಿದರು.

"ತಾವು ದೊಡ್ಡ ಮನಸ್ಸುಮಾಡಿ ವಾಗ್ದಾನ ಮಾಡಿದ್ದಿರಿ."

"ಓಹೋ, ಅದೋ. ಐದು ರೂಪಾಯಿ ತಾನೆ?"

"ಹ, ಹುಜೂರ್."

"ಆಗಲಿ."

ಮತ್ತೂ ಐದು ರೂಪಾಯಿ ಬಡ್ತಿಯಾಯಿತು. ಸಂಸಾರವು ಇನ್ನೂ ಕೊಂಚ ವಾಸಿಯಾಯಿತು.

ಮತ್ತೊಂದು ವರ್ಷಕ್ಕೆ ಸರಿಯಾಗಿ ಉನ್ನೀಸಳಿಗೆ ಇನ್ನೂ ಒಂದು ಮಗುವಾಯಿತು. ಈ ಬಾರಿ ಖುಷಿಯು ತಲೆಕೆರೆದುಕೊಂಡು ಸೇಟರ ಮುಂದೆ ನಿಂತಾಗ ಅವರು ಹಿಂದಿನಂತೆ ನಗಲಿಲ್ಲ. ಕೊಂಚ ಹುಬ್ಬು ಗಂಟನ್ನಿಕ್ಕಿದರು. "ಏನು ಇನ್ನೊಂದು ಮಗು ತಾನೆ?" ಅಂದರು. ಸ್ವಲ್ಪ ಯೋಚಿಸಿದರು ಅಂತೂ ಬಡ್ತಿಯನ್ನೇನೋ ಮಾತಿನಂತೆ ಕೊಟ್ಟರು. ಬಡಸಂಸಾರದ ಸ್ಥಿತಿಯು ಇನ್ನೂ ಉತ್ತಮಗೊಂಡಿತು.

ಅದೇ ದಿನ ಸೇಟರು ತಮ್ಮ ಬೀಬಿಜಿಯವರೊಂದಿಗೆ ರಾತ್ರಿ ತಾಂಬೂಲದ ಸಮಯದಲ್ಲಿ ಮಾತನಾಡುತ್ತಿದ್ದರು. ದಿನವೆಲ್ಲ ಈ ವಿಷಯವನ್ನು ಅಳೆದು ಸುರಿಯುತ್ತಿದ್ದ ಕಾರಣ ಈ ಮಾತು ತಾನಾಗಿ ಮೇಲೆ ಬಂದಿತು.

"ನೋಡಿದೆಯಾ, ಖುಷಿಗೆ ಮತ್ತೆ ಮೂರನೆಯ ಮಗುವಾಯಿತು"

"ಏನು ? ಹಾಗೇ ? ಇವತ್ತೆ ?"

"ಹುಂ. ಆಗಲೇ ಬಂದು ಹಲ್ಕಿರಿದು, ತಲೆಕೆರೆದು ತನ್ನ ಮಾಸಾಶನವನ್ನು ತೆಗೆದುಕೊಂಡು ಹೋದ."

"ಓ" ಬೀಬಿಜಿಯವರೂ ನಸುನಕ್ಕು ಯೋಚನೆಯನ್ನು ಸೂಚಿಸಿದರು.

"ಯಾವುದೋ ಮನೋದೌರ್ಬಲ್ಯದ ಗಳಿಗೆಯಲ್ಲಿ ನಿನ್ನ ಶಿಫಾರ್ಸಿನ ಮೇಲೆ ಕೊಟ್ಟ ಭಾಷೆ ಯಾಕೋ ತಂಟೆಗಿಟ್ಟುಕೊಂಡಿತು."

"ಏನು ತಂಟೆ ಬಿಡಿ ಅಂದ್ರೆ."

"ಹಾಗೆಂದರೇನು ತಿಂಗಳಿಗೆ ಐದು ರೂಪಾಯಿ ಅಂದರೆ ವರ್ಷಕ್ಕೆ ಅರವತ್ತು, ಹದಿನೈದೋ ಇಪ್ಪತ್ತೋ ವರ್ಷಕ್ಕೆ ಚಕ್ರಬಡ್ಡಿಯಂತೆ ಸಾವಿರಾರು ರೂಪಾಯಿ ಆಗುತ್ತದೆ. ಅದೂ ಒಂದೇ, ಎರಡೇ, ವರ್ಷೇ ವರ್ಷೇ ಮಳೆಗಾಲ ಹೇಗೆ ಬರುತ್ತದೆಯೋ ಹಾಗೆ ಮಕ್ಕಳು ಹುಟ್ಟುತ್ತಿದ್ದರೆ ಎಷ್ಟಕ್ಕೆ ಅಂತ ಕೊಡುವುದು ? ನಾನು ದಿವಾಳಿ...."

"ಸರಿ, ಸರಿ. ಯಾರಾದರೂ ನಕ್ಕಾರು. ಇರಲಿ ಬಿಡಿ. ದೇವರು ನಮಗೆ ಏನು ಕಡಿಮೆ ಮಾಡಿದ್ದಾನೆ?"

"ಅದಿರಲಿ. ನಾನು ಹೇಗಿದ್ದರೂ ವರ್ತಕ. ಲೆಕ್ಕಾಚಾರ ಸರಿಯಾಗಿ ನೋಡಿಕೊಳ್ಳಬೇಕು—ಎಲ್ಲ ವಿಷಯದಲ್ಲೂ. ಇಲ್ಲಿ ಮಾತ್ರ ಜಾರಿದೆ ಅಂತ ಕಾಣುತ್ತದೆ. ಇದಕ್ಕೆ ಏನಾದರೂ ಉಪಾಯಮಾಡಬೇಕು" ಸೇಟರು ನಸುನಕ್ಕರು.

"ಅದಕ್ಕೇನಿದೆ ಉಪಾಯ? ನೀವೂ ಸರಿಯೆ. ದೇವರು ಮಾಡಿಸಿದು ದಕ್ಕೆ" ಎಂದು ಬೀಬಿಜಿಯುವರೂ ನಕ್ಕರು.

"ಇಲ್ಲ. ಎಲ್ಲಕ್ಕೂ ಇದ್ದೇ ಇರುತ್ತದೆ."

"ಇನ್ನೇನು, 'ಇಲ್ಲ' ಅನ್ನಬೇಕು ಅಷ್ಟೆ. ಪಾಪ!"

"ಉಹು. ಹಾಗಲ್ಲ. ಮಾತಿಗೆ ತಪ್ಪಲು ನಾನು ಒಪ್ಪುವುದಿಲ್ಲ. ವ್ಯಾಪಾರಸ್ಥರ ಲಕ್ಷಣ ಮಾತೂ ತಪ್ಪಬಾರದು, ಕರ್ಚೂ ಆಗಬಾರದು, ಹಾಗೆ ನಡೆದುಕೊಳ್ಳುವುದು."

"ಇದೇನೋ ವಿಪರೀತ."

"ತಾಳು, ತಾಳು" ಸೇಟರು ಕೊಂಚ ಯೋಚಿಸಿದರು. ಆಮೇಲೆ ಅರೆಮಲಗಿದ್ದವರು ಎದ್ದು ಕುಳಿತು, ಚಿಟಿಕಿ ಹೊಡೆದು "ಸರಿ ಸರಿ, ಅದೇ ಉಪಾಯ" ಎಂದು ನಕ್ಕರು.

ಬೀಬಿಯುವರು "ಏನು? ಅದೇನು ಹೇಳಿ" ಅಂದರು.

"ಅವನನ್ನು ಒಬ್ಬನನ್ನೇ ನಮ್ಮ ಕಲ್ಕತ್ತೆಯ ಆಫೀಸಿಗೆ ಕಳುಹಿಸಿ ಬಿಡುತ್ತೇನೆ, ಕೆಲವು ವರ್ಷಗಳು."

"ಅವನ ಮನೆಯುವರು?"

"ಇಲ್ಲೇ ಮುಂಬಿಯಿನಲ್ಲಿ."

"ಇದೇನು ನಿಮ್ಮ ಕುಚೋದ್ಯವೋ ಏನು? ಛೇ, ಅದ ನರಿಯಲ್ಲ."

"ನಿಜವಾದ ಮಾತು. ಆದರೆ ಅವರಿಗೆ ನರಿಯಾದುದು ನನಗೆ ಸರಿಯಿಲ್ಲವಲ್ಲ. ಅದೇ ಪಾಡು. ಹೋಗಿ ಅಷ್ಟು ದಿನ ಇದ್ದು ಬರಲಿ."

"ಏ, ಬಿಡಿ ನಿಮಗೆ ಹುಚ್ಚು. ಹೀಗೆಲ್ಲ ಮಾಡುತ್ತಾರೆಯೆ?"

"ಮಾಡಿದರೆ ಏನು ತಪ್ಪು ? ಮೊದಲನೆಯ ಬಾರಿ ನಿನ್ನ ಮಾತನ್ನು ಕೇಳಿ ಮೋಸ ಹೋದೆ. ಎರಡನೆಯ ಬಾರಿ ನನಗೆ ತಿಳಿದಂತೆ ಮಾಡು ತ್ತೇನೆ."

"ಸಾಕು. ನನಗೇನೋ ಒಪ್ಪುವುದಿಲ್ಲ. ನೀವು ಏನನ್ನಾದರೂ ಮಾಡಿ. ಅಲ್ಲಿ ಅವನಿಗೆ ಕರ್ಚನ್ನು ಕೊಡಬೇಡವೆ?"

"ಇರಲಿ. ಒಂದು ವರ್ಷವಾದರೂ ಹೋಗಿಬರಲಿ. ಅದರಿಂದ ಒಂದಕ್ಕೆ ಕೊಡುವುದಾದರೂ ಕಡಿಮೆಯಾಗುತ್ತದೆಯೊ? ಸಾವಿರ ಚಿಲ್ಲರೆ —ಹತ್ತಿರ ಹತ್ತಿರ ಎರಡು ಸಾವಿರ ರೂಪಾಯಿ ಉಳಿಯಬಹುದು. ಅವನಿಗೂ ಏನೂ ನಷ್ಟವಿಲ್ಲ. ವರ್ಷ ಕಳೆದಮೇಲೆ ಮತ್ತೆ ಯೋಚಿಸಿ ನೋಡೋಣ ಅವನ ಕರ್ಚು ಅಲ್ಲಿ ಎಷ್ಟಾದೀತು ಮಹಾ ಐದೋ ಹತ್ತೋ ತಿಂಗಳಿಗೆ. ಒಂದು ವರ್ಷ ಕೊಟ್ಟರಾಯಿತು."

"ನಿಮ್ಮ ಇಷ್ಟ ಇದಕ್ಕೆ ದೇವರು ತಕ್ಕ ಪ್ರತೀಕಾರ ಮಾಡೇ ಮಾಡುತ್ತಾನೆ."

"ನೀನೊಬ್ಬಳು ಹುಚ್ಚಿ. ದುಡ್ಡನ್ನು ಸಂಪಾದಿಸಿ ನೀನು ಅರಿಯೆ. ಬರಿಯ ಕರ್ಚು ಮಾತ್ರ ನಿನಗೆ ಗೊತ್ತು."

ಮಾರನೆಯ ದಿನ ಸೇಟರು ಖುಷಿಗೆ "ಖುಷಿ, ನಮ್ಮ ಕಲ್ಕತ್ತ ಆಫೀಸಿಗೆ ಒಬ್ಬ ಕಾವಲುಗಾರ ಬೇಕಾಗಿದೆ. ನೀನಾದರೆ ನಂಬಿಕಸ್ಥ. ಅಲ್ಲಿಗೆ ಹೋಗಲು ತಯಾರಾಗಿದ್ದೀಯ?" ಎಂದು ಕೇಳಿದರು. ಏನೂ ಅನುಮಾನ ಕಾಣದ ಖುಷಿಯು "ಹುಜೂರ್ ಹಾಗೆಂದರೇನು. ತಾವು ಎಲ್ಲಿ ಕಳಿಸಿದರೆ ಅಲ್ಲಿಗೆ ಹೋಗುತ್ತೇನೆ. ಕೇಳಬೇಕೆ?" ಅಂದು ಉತ್ತರ ಕೊಟ್ಟ. "ಅಲ್ಲಿ ಒಂದು ಫಜೀತಿ. ಅಲ್ಲಿ ಮನೆಗಳು ಸಿಕ್ಕುವುದಿಲ್ಲ. ಆಫೀಸಿನ ಹಿಂಭಾಗದಲ್ಲೇ ಒಬ್ಬನಿಗಾಗುವಷ್ಟು ಸ್ಥಳ ಕೊಡುತ್ತಾರೆ. ಸಂಸಾರಕ್ಕೆ ಜಾಗವಿಲ್ಲ. ಒಬ್ಬನೇ ಹೋಗಬೇಕಾಗುತ್ತದೆ."

ಖುಷಿಯು ಕೊಂಚ ಯೋಚಿಸಿ "ಹುಜೂರ್, ತಾವು ಹೇಳಿದಂತೇ ಾಗಲಿ ಎಷ್ಟು ತಿಂಗಳು ಇರಬೇಕಾಗಬಹುದು?"

"ಮೊದಲಿನಲ್ಲಿ ಒಂದು ವರ್ಷ ಅಂತ ಇಟ್ಟುಕೊ. ಅನಂತರ ನೋಡೋಣ."

"ಮತ್ತೆ ನನ್ನ ಸಂಸಾರ ಇಲ್ಲಿಯೇ ಇದ್ದರೆ ನೋಡಿಕೊಳ್ಳೋರು . ."

"ಏನಾದರೂ ಏರ್ಪಾಡನ್ನು ಮಾಡು ಮತ್ತೆ. ಅದೇ ಇರುವ ಕಷ್ಟ. ನಾನೂ ಇಲ್ಲಿ ಯಾರಿಂದಲಾದರೂ ವಿಚಾರಿಸುತ್ತಿರುತ್ತೇನೆ—ಆಗಾಗ್ಗೆ."

"ಹುಜೂರ್ ಅಷ್ಟು ಮಾಡಿದರೆ ಸಾಕು."

ಮೆಹರು ಉನ್ನೀಸ ಈ ಏರ್ಪಾಡನ್ನು ಅನುಮೋದಿಸಲಿಲ್ಲವಾದರೂ, ಕೆಲಸದ ಸಂದರ್ಭವೆಂದು ಸಹಿಸಿಕೊಂಡು ಸುಮ್ಮನಿದ್ದಳು. ಹೆರಿಗೆಯ ಹತ್ತು ದಿನ ಕಳೆದಕೂಡಲೇ ಋಷಿಯು ಗಂಟುಮೂಟೆಗಳನ್ನು ಕಟ್ಟಿ ಹೆಂಡತಿ ಮಕ್ಕಳನ್ನು ಬೀಳ್ಕೊಂಡು ಪ್ರಯಾಣ ಮಾಡಿದನು.

ಗಂಡನ ಗೈರು ಹಾಜರಿಯಲ್ಲಿ ಉನ್ನೀಸಳು ತಾನೇ ತಿಂಗಳು ತಿಂಗಳು ಬೀಬಿಜಿಯವರಲ್ಲಿಗೆ ಹೋಗಿ ಋಷಿಯ ಸಂಬಳವನ್ನು ತರುತ್ತಿದ್ದಳು. ಅವರು ಮನೆಯ ವಿದ್ಯಮಾನವನ್ನೆಲ್ಲ ಕೇಳಿ ಮೇಲ್ವಿಚಾರಣೆ ನೋಡಿ ಕೊಳ್ಳುತ್ತಿದ್ದರು 'ಪಾಪ, ಗಂಡಸು ಇಲ್ಲದ ಸಂಸಾರ' ಎಂದುಕೊಂಡು ಅವರು ಆಗ ಈಗ ಇತರ ಬಗೆಯ ಸಹಾಯವನ್ನೂ ಮಾಡುತ್ತಿದ್ದರು. ಇಷ್ಟಾದರೂ ಉನ್ನೀಸಳಿಗೆ ಉಲ್ಲಾಸವು ಕಡಿಮೆಯೇ. ಎಷ್ಟಾದರೂ, ಯಾರು ಏನು ಸಹಾಯವನ್ನು ಮಾಡಿದರೂ, ಹೇಗೆ ನೋಡಿಕೊಂಡರೂ, ಅವಳಿಗೆ ಗಂಡನೊಡನೆ ಇದ್ದಂತೆ ಆಗಲಿಲ್ಲ. ಆದುದರಿಂದ ಅವನ ಬರುವಿಕೆ ಯನ್ನು ಆತುರದಿಂದ ನಿರೀಕ್ಷಿಸುತ್ತಿದ್ದಳು. ಒಂದು ವರ್ಷ ಕಳೆದು ಅವಳು ಸಂಬಳ ತರುವುದಕ್ಕೆ ಹೋದಾಗ ಬೀಬಿಜಿಯವರನ್ನು ಕುರಿತು "ಬೀಬಿಜಿ, ಒಂದು ವರ್ಷವಾಯಿತು. ಅವರು ಯಾವಾಗ ಬರುತ್ತಾರೆ?" ಎಂದು ಪ್ರಶ್ನಿಸಿದಳು. ಇದು ಅವರಿಗೂ ನೆನಪುಗೊಟ್ಟಂತಾಯಿತು. ಉನ್ನೀಸಳಲ್ಲಿ ಅವರಿಗೆ ಮರುಕಹುಟ್ಟಿತು. ಹೇಗಾದರೂ ಅವಳ ಗಂಡನನ್ನು ವಾಪಸು ಕರೆಯಿಸಬೇಕೆಂದು ಮನಸ್ಸು ಮಾಡಿ "ಹುಂ ನಿಜ. ಸದ್ಯದಲ್ಲೇ ಬರಬೇಕು. ಸೇಟರಿಗೆ ಹೇಳಿ ನೋಡುತ್ತೇನೆ. ಯೋಚನೆ ಮಾಡಬೇಡ" ಎಂದು ಹೇಳಿ ಸಮಾಧಾನಪಡಿಸಿದರು.

ಆ ದಿನ ರಾತ್ರಿಯೇ ಬೀಬಿಜಿಯವರು ವಿಷಯವನ್ನು ಸೇಟರೊಂದಿಗೆ ಪ್ರಸ್ತಾಪಿಸಿದರು.

"ಅವನು ಹೋಗಿ ಒಂದು ವರ್ಷವಾಯಿತು. ಅವನ ಹೆಂಡತಿಯು 'ಅವನು ಯಾವಾಗ ಬರುತ್ತಾನೆ' ಎಂದು ವಿಚಾರಿಸುತ್ತಲೇ ಇದ್ದಾಳೆ. ನಿಮ್ಮ ಕಟುಕತನವನ್ನು ಸಾಕುಮಾಡಿ. ಅವನನ್ನು ಕರೆಯಿಸಿ, ಪಾಪ!" ಎಂದರು.

"ಇನ್ನೂ ಅಷ್ಟು ದಿನ ಇರಲಿ ಬಿಡು. ಏನು ನಷ್ಟ?" ಸೇಟು ನಸುನಕ್ಕರು.

"ಛೀ, ಗಂಡಹೆಂಡಿರನ್ನು ತೊರಸಿ ನಾವು ಮತ್ತೆ ಯಾವ ಪಾಪಕ್ಕೆ ಹೋಗೋಣ? ಈಗ ಅನುಭವಿಸುತ್ತಿರುವುದೇ ಸಾಕು." ಬೀಬಿಜಿಯವರು ಈ ಮಾತಿನಲ್ಲಿ ತಮಗೆ ಸಂತತಿ ಇಲ್ಲದ ವಿಷಯವನ್ನು ಸೂಚಿಸಿದರು. ಅದು ಸೇಟರನ್ನೂ ಕೊಂಚ ಮುಟ್ಟಿತು. ಆಗ ಅವರು,

"ಹುಂ ಕರೆಸೋಣ. ಒಂದು ವರ್ಷವಾದರೂ ಆಯಿತಲ್ಲ, ಉಳಿದಷ್ಟೇ ಉಳಿಯಿತು" ಎಂದರು.

ಖುಷಿಯು ಕಲ್ಕತ್ತೆಯಿಂದ ಬಂದ ಹತ್ತು ತಿಂಗಳಾದ ಮೇಲೆ ಒಂದು ದಿನ ಸೇಟರು ಮತ್ತು ಬೀಬಿಜಿಯವರ ಮುಂದೆ ದೈನ್ಯದಿಂದ ನಿಂತು ಹಲ್ಕಿರಿದು ತಲೆಕೆರೆಯುತ್ತಿದ್ದನು. ಇದರ ಅರ್ಥವು ಸೇಟರಿಗೆ ಗೊತ್ತಾಗಿ ಹೋಗಿದ್ದಿತು. ಸೇಟರು ಬೀಬಿಜಿಯವರನ್ನು ಕುರಿತು ಮೆಲ್ಲಗೆ,

"ಅವನು ಹೀಗೆ ಬಂದು ನಿಂತು ಹಲ್ಕಿರಿದು ತಲೆಕೆರೆದರೆ ಸಮಾಚಾರವು ಏನೆಂದು ನನಗೆ ಗೊತ್ತು. ನೋಡು ಈಗ" ಎಂದು ಹೇಳಿ, ಖುಷಿಯನ್ನು ಸಂಬೋಧಿಸಿ "ಏನೋ ಖುಷಿ? ಈಗೇನು ಸಮಾಚಾರ? ಎಂದರು.

"ಹುಜೂರ್...." ಖುಷಿಯ ಗಂಟಲಿನಿಂದ ಮಾತು ಮುಂದೆ ಹೊರಡಲಿಲ್ಲ.

"ಇನ್ನೇನು? ನಿನ್ನ ಹೆಂಡತಿ ಹೆತ್ತಿದ್ದಾಳೆ ತಾನೆ?"

ಖುಷಿಯು ತಲೆಯನ್ನು ಮೇಲೆ ಕೆಳಗೆ ಆಡಿಸಿದನು.

"ಸರಿ ಹೋಗು ಐದು ರುಪಾಯಿ ಬಡ್ತಿ ಆಯಿತು" ಅಂದು ಮೆಲ್ಲುಧ್ವನಿಯಲ್ಲಿ ಬೀಬಿಜಿಯವರಿಗೆ "ನೋಡಿದೆಯೋ ಮತ್ತೆ ಮೊದಲಾಯಿತು" ಅಂದರು.

ಸೇಟರು ಬಕ್ಷೀಸು ಕೊಟ್ಟೆನೆಂದಾಗಲೆಲ್ಲ ಒಡನೆಯೇ ಹೊರಟು ಹೋಗುತ್ತಿದ್ದ ಖುಷಿಯು ಈ ಬಾರಿ ಇನ್ನೂ ನಿಂತುಕೊಂಡೇ ಇದ್ದನು. ಸೇಟರಿಗೆ ಅನುಮಾನವಾಯಿತು. ಆದಕ್ಕೆ ಅವರು ಅರೆ ಬೇಸರದಿಂದ ಕೊಂಚ ಗಡುಸಾಗಿ,

" ಮತ್ತೇನು. ಬಕ್ಷೀಸು ಕೊಟ್ಟೆನೆಂದು ಹೇಳಿದೆನಲ್ಲ ?" ಎಂದರು.

" ಹುಜೂರ್. . . ."

" ಏನು ಹುಜೂರಿಗೆ ?"

" . . . ." ಖುಷಿ ತಲೆತಗ್ಗಿಸಿಕೊಂಡು ಸುಮ್ಮನಿದ್ದನು.

" ಏನು ಹೇಳಬಾರದೇನೋ ?"

" ಹುಜೂರ್ ಐದು ರೂಪಾಯಿ ಸಾಕಾಗೋದಿಲ್ಲ."

ಸೇಟರು ಒಮ್ಮೆಯೇ ಸಿಟ್ಟಾದರು.

" ಹ! ಏನು? ಐದು ಸಾಲದೆ? ನನ್ನಿಂದ ಹೆಚ್ಚು ಕೊಡುವುದಕ್ಕಾಗುವುದಿಲ್ಲ. ನಾನು ಭಾಷೆಯನ್ನೇ ಕೊಡಬಾರದಾಗಿದ್ದಿತು. ಆದರೂ ಏನೋ ಕೊಟ್ಟೆ. ಅದಕ್ಕೆ ತಪ್ಪಿ ನಡೆಯುವುದಿಲ್ಲ. ಆದರೆ ಇನ್ನು ಹೆಚ್ಚು ಗಿಚ್ಚು ಕೊಡುವುದಿಲ್ಲ. ಮಗುವಿಗೆ ಐದು ರೂಪಾಯಿ ತಿಂಗಳಿಗೆ ಅಷ್ಟೆ. ತಿಳಿಯಿತೋ ?"

" ನಾನೂ ಹೆಚ್ಚಾಗಿ ಕೇಳುವುದಿಲ್ಲ, ಹುಜೂರ್."

" ಮತ್ತೇನು ನಿನ್ನ 'ಕೊಸಕೊಸ' ?"

" ಇನ್ನೇನೂ ಇಲ್ಲ . ."

" ಮತ್ತೆ ?"

" ಈ ಬಾರಿ . . ."

" ಹುಂ."

" ಎರಡಾಗಿವೆ—ಒಟ್ಟಿಗೆ !" ಖುಷಿ ತಲೆತಗ್ಗಿಸಿದನು.

" ಏನು ! ಏನು ! ಅವಳಿ ಮಕ್ಕಳೇ ?" ಸೇಟರು ಬೆಚ್ಚಿದರು.

ಖುಷಿಯು ಮಾತನಾಡದೆ ತಲೆಯನ್ನು ಮತ್ತೆ ಮೇಲೆ ಕೆಳಗೆ ಅಲ್ಲಾಡಿಸಿದನು. ಸೇಟರು ದಿಂಬಿನಮೇಲೆ ಹಾಗೇ ಕುಸಿದು ಹಿಂದಕ್ಕೆ ಬಿದ್ದುಕೊಂಡರು. ಬೀಬಿಜಿಯವರು ಸೀರೆಯ ಸೆರಗಿನಿಂದ ಬಾಯಿ

ಮುಚ್ಚಿಕೊಂಡು ನಕ್ಕರು. ಋಷಿಯು ಮಾತ್ರ ಇನ್ನೂ ನೆಲವನ್ನೇ ನೋಡುತ್ತ ನಾಚಿ ನಿಂತಿದ್ದನು.

ಅರೆಕ್ಷಣವಾದಮೇಲೆ ಸೇಟರು ಎಚ್ಚೆತ್ತು ಬೀಬಿಜಿಯವರನ್ನು ನೋಡಿ ತಾವೂ ಸ್ವಲ್ಪ ನಗೆಗೂಡಿ "ನೋಡಿದೆಯಾ? ಈಗ ಏನು?" ಎಂದು ಕೇಳಿದರು.

ಅದಕ್ಕೆ ಬೀಬಿಜಿಯವರು "ಏನು? ನೀವು ಮಾತಿಗೆ ತಪ್ಪುವುದಿಲ್ಲ ವೆಂದು ಈಗ ತಾನೆ ಹೇಳಿಕೊಂಡಿರಲ್ಲ. ಹತ್ತು ರೂಪಾಯಿ ಬಡ್ತಿ ಕೊಟ್ಟು ಬಿಡಿ" ಅಂದರು. ಸೇಟರು ಋಷಿಯ ಕಡೆ ನೋಡಿ "ಏನೋ ಋಷಿ, ಹೋದವರ್ಷ ಇಲ್ಲದ್ದಕ್ಕೆ ಈ ವರ್ಷ ಭರ್ತಿಮಾಡಿಬಿಟ್ಟೆ. ಸರಾಸರಿ ಯಾಯಿತು" ಅಂದರು. ಋಷಿಯು ಸುಮ್ಮನಿದ್ದನು. ಸೇಟರು "ಇನ್ನೇನು, ಹಾಗೇ ಆಗಲಿ ಹೇಳಿದಂತೆ ಕೊಡುತ್ತೇನೆ ಹೋಗು" ಎಂದು ನಿಟ್ಟುಸಿರನ್ನು ಬಿಟ್ಟರು. ಋಷಿಯು ನುಸುಳಿಕೊಂಡನು. ಅವನು ಮರೆಯಾದೊಡನೆ ಬೀಬಿಜಿಯವರು ಗೊಳ್ಳೆಂದು ನಕ್ಕರು. ಸೇಟರೂ ಪೆಚ್ಚಾಗಿ ಸಸುನಕ್ಕರು. ಅನಂತರ ಅರ್ಧ ಆತ್ಮಗತವಾಗಿ "ಅಲ್ಲ ಸಾವಿರ ಎರಡು ಸಾವಿರ ಉಳಿತಾಯವಾಗುತ್ತದೆಯೆಂದು ಇವನ ಕಲ್ಕತ್ತೆಯ ಕರ್ಚನ್ನೂ ತೆತ್ತೆನಲ್ಲ!" ಅಂದರು. ಬೀಬಿಜಿಯವರು "ನಿಮಗೆ ಹಾಗೇ ಆಗಬೇಕು. ನಿಮ್ಮ ಕೃಪಣತನಕ್ಕೆ, ಕಟುಕತನಕ್ಕೆ ತಕ್ಕ ಶಿಕ್ಷೆ ಆಯಿತು. ದೇವರೇ ಹಾಗೆ ಮಾಡಿದ್ದಾನೆ. ಋಷಿ ಏನುಮಾಡಬಲ್ಲ ಪಾಪ!" ಅಂದರು.

"ಸಾಕು ನಿನ್ನ 'ಪಾಪ! ಪಾಪ!' ನಿನ್ನ ಮಾತನ್ನು ಕೇಳಿಯೇ ಹೀಗೆಲ್ಲ ಆಯಿತು. ಮೊದಲಿನ ಪಾಗ್ದಾನಕ್ಕೂ ನೀನೇ ಕಾರಣಳು. ಮತ್ತೆ ಅವನನ್ನು ಕರೆತಂದುದೂ ನಿನ್ನ ಒತ್ತಾಯದಿಂದಲೇ."

"ಹಾಗೇ ಆಗಲಿ ಬಿಡಿ."

"ಏನು ಬಿಡುವುದು? ನನ್ನ ಸಂಕಟ ನಿನಗೇನು ಗೊತ್ತು ಒಳ್ಳೇ ಋಷಿ!"

ಮತ್ತೆ ಇಬ್ಬರೂ ಜತೆಯಾಗಿ ನಕ್ಕರು.